₹6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 17.06.2026 ಸಂಪುಟ: 11 ಸಂಚಿಕೆ:152 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತ-ಅಫ್ಘಾನಿಸ್ತಾನ ಇಂದು 2ನೇ ಏಕದಿನ

ಭಾರತ-ಅಫ್ಘಾನಿಸ್ತಾನದ ಮಧ್ಯೆ 2ನೇ ಏಕದಿನ ಪಂದ್ಯ ಬುಧವಾರ ಲಖನೌದಲ್ಲಿ ನಡೆಯಲಿದೆ. 3 ಪಂದ್ಯಗಳ ಸರಣಿಯಲ್ಲಿ ಈಗಾಗಲೇ ಮೊದಲ ಪಂದ್ಯವನ್ನು ಗೆದ್ದಿರುವ ಭಾರತ ಈ ಪಂದ್ಯವನ್ನೂ ಗೆದ್ದರೆ ಸರಣಿ ವಶಪಡಿಸಿದಂತಾಗುತ್ತದೆ.

ಸಿಎಲ್‌ಪಿ ಸಭೆಯಲ್ಲಿ ಚುನಾವಣೆ, ಸಂಪುಟ ವಿಸ್ತರಣೆ ಬಗ್ಗೆ ಚರ್ಚೆ
ಏಳನೇ ಅಭ್ಯರ್ಥಿಯ ಗೆಲುವಿಗೆ ಕೈ-ತೆನೆ ತೆರೆಮರೆ ಲೆಕ್ಕಾಚಾರ

ಮೇಲ್ಮನೆ ಮೇಲಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನ ಪರಿಷತ್ ಚುನಾವಣೆ ಗುರುವಾರ ನಡೆಯಲಿದ್ದು, ಆಡಳಿತಾರೂಢ ಕಾಂಗ್ರೆಸ್ ಪಕ್ಷ ಹಾಗೂ ಜೆಡಿಎಸ್ ಶಾಸಕರು ರೆಸಾರ್ಟ್ ಸೇರಿಕೊಂಡಿದ್ದಾರೆ. ಪರಿಷತ್ ಕಣದಲ್ಲಿ ಏಳನೇ ಅಭ್ಯರ್ಥಿ ಅಖಾಡಕ್ಕಿಳಿಸಿರುವುದು ಮೇಲ್ಮನೆ ಚುನಾವಣೆ ರಂಗೇರಿದೆ.

ಜೂನ್ 18ರಂದು 7 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ 5 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಬಿಜೆಪಿ 2 ಹಾಗೂ ಜೆಡಿಎಸ್ ಓರ್ವ ಅಭ್ಯರ್ಥಿ ಕಣಕ್ಕಿಳಿಸಿದೆ. ಕಾಂಗ್ರೆಸ್‌ನ 4 ಹಾಗೂ ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಸರಾಗವಾಗಿ ಗೆಲುವು ಸಾಧಿಸಲಿದ್ದಾರೆ. ಏಳನೇ ಸ್ಥಾನಕ್ಕೆ ಜಟಾಪಟಿ ಜೋರಾಗಿದೆ. ಕಾಂಗ್ರೆಸ್ ಅಭ್ಯರ್ಥಿ ವಿನಯ್ ಕಾರ್ತಿಕ್ ಹಾಗೂ ಜೆಡಿಎಸ್ ಅಭ್ಯರ್ಥಿ ಗೋವಿಂದ ರಾಜು ನಡುವೆ ಸ್ಪರ್ಧೆ ಏರ್ಪಟ್ಟಿದೆ.

ರೆಸಾರ್ಟ್ ಪಾಲಿಟಿಕ್ಸ್: ಮೇಲ್ಮನೆ ಚುನಾವಣೆ ಸಂಬಂಧ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಜೆಡಿಎಸ್ ರೆಸಾರ್ಟ್ ರಾಜಕೀಯದ ಮೊರೆ ಹೋಗಿವೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನು ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲಿ ಕರೆದಿದೆ. ಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕಾಂಗ ಸಭೆ ಮಂಗಳವಾರ ರಾತ್ರಿ ನಡೆದಿದೆ. ಸಭೆಯಲ್ಲಿ ಕಾಂಗ್ರೆಸ್ ಯಾವ ಅಭ್ಯರ್ಥಿಗೆ ಎಷ್ಟು ಮೊದಲ ಪ್ರಾಶಸ್ತ್ಯ ಮತ ಹಾಕಬೇಕು, ಎರಡನೇ ಪ್ರಾಶಸ್ತ್ಯ ಮತ ಹಾಕಬೇಕು ಎಂಬ ಬಗ್ಗೆ ಶಾಸಕರಿಗೆ ಮಾಹಿತಿ ನೀಡಲಾಗಿದೆ. ಇದರ ಜತೆಗೆ ಕಾಂಗ್ರೆಸ್ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್‌ಗೆ ಎಷ್ಟು ಮತ ಹಾಕಬೇಕು. ಯಾವುದೇ ದೋಷವಿಲ್ಲದೆ, ಅಸಿಂಧುವಾಗದಂತೆ ಹೇಗೆ ಮತ ಹಾಕಬೇಕು ಎಂಬುದನ್ನು ಸಭೆಯಲ್ಲಿ ಶಾಸಕರಿಗೆ ಮನವರಿಕೆ ಮಾಡಿಕೊಡಲಾಗಿದೆ. ಕಾಂಗ್ರೆಸ್ ಶಾಸಕಾಂಗ ಸಭೆ ಬಳಿಕವೂ ಕೈ ಶಾಸಕರು ರೆಸಾರ್ಟ್‌ನಲ್ಲೇ ತಂಗಲಿದ್ದಾರೆ. ಜೂನ್ 18ಕ್ಕೆ ಶಾಸಕರು ರೆಸಾರ್ಟ್‌ನಿಂದ ನೇರವಾಗಿ ಬಸ್ ಮೂಲಕ ವಿಧಾನ ಸೌಧಕ್ಕೆ ಆಗಮಿಸಿ ಮತ ಚಲಾವಣೆ ಮಾಡಲಿದ್ದಾರೆ. ಜೆಡಿಎಸ್ ಶಾಸಕರೂ ರೆಸಾರ್ಟ್ ವಾಸ್ತವ್ಯ ಮಾಡಲಿದ್ದಾರೆ. ಜೆಡಿಎಸ್ ಗೋವಿಂದ ರಾಜ್ ಅವರನ್ನು ಕಣಕ್ಕಿಳಿಸಿದೆ. → 4

- ಜೆಡಿಎಸ್ ಬಳಿ ಸಂಖ್ಯಾಬಲ ಇಲ್ಲವಾದ್ದರಿಂದ ಬಿಜೆಪಿಯ ಉಳಿಕೆ ಮತ, ಬಿಜೆಪಿ ಉಚ್ಚಾಟಿತ ಶಾಸಕರ ಮತಗಳ ಮೇಲೆ ಕಣ್ಣು
- ತನ್ನ 18 ಶಾಸಕರನ್ನೂ ಒಟ್ಟಾಗಿ ಹಿಡಿದಿಟ್ಟುಕೊಂಡು ತನ್ನ ಅಭ್ಯರ್ಥಿಗೇ ಮತ ಹಾಕಿಸುವ ಸವಾಲು ಎದುರಿಸುತ್ತಿರುವ ಜೆಡಿಎಸ್
- ಸಚಿವಾಕಾಂಕ್ಷಿಗಳಿಗೆ ಪ್ರಮುಖ ನಿಗಮ ಮಂಡಳಿ ಸೇರಿದಂತೆ ಪರ್ಯಾಯ ಸ್ಥಾನಮಾನಗಳಿಗೆ ಮನವೊಲಿಸುವ ಸಾಧ್ಯತೆ

ಪಕ್ಷಗಳ ಬಲಾಬಲ

ಕಾಂಗ್ರೆಸ್	134
ಬಿಜೆಪಿ:	62
ಬಿಜೆಪಿ ಉಚ್ಚಾಟಿತರು	03
ಜೆಡಿಎಸ್:	18
ಕಲ್ಯಾಣ ರಾಜ್ಯ ಪ್ರಗತಿ ಪಕ್ಷ	01
ಸರ್ವೋದಯ ಕರ್ನಾಟಕ ಪಕ್ಷ	01
ಪಕ್ಷೇತರರು	02
ಖಾಲಿ ಸ್ಥಾನ	02
ಗೆಲುವಿಗೆ ಬೇಕಾಗಿರುವ ನಂಬರ್	28

ಬಿಡದಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಲಾಘವ ಮಾಡಿದ ಸಿಎಂ ಡಿ.ಕೆ.ಶಿವಕುಮಾರ್.

ಸಂಪುಟ ವಿಸ್ತರಣೆ ಚರ್ಚೆ

ವಿಧಾನ ಪರಿಷತ್ ಚುನಾವಣೆಯ ಬಳಿಕ ನಡೆಯಬಹುದಾದ ಸಚಿವ ಸಂಪುಟ ವಿಸ್ತರಣೆ ಕುರಿತಂತೆ ರೆಸಾರ್ಟ್ ವಾಸ್ತವ್ಯದ ವೇಳೆ ಚರ್ಚೆಯಾಗುವ ಸಾಧ್ಯತೆ ಇದೆ. ಕಾಂಗ್ರೆಸ್‌ನ ಎಲ್ಲ ಶಾಸಕರು ಎರಡು ದಿನಗಳ ಕಾಲ ರೆಸಾರ್ಟ್‌ನಲ್ಲೇ ತಂಗಲಿದ್ದು, ಶಾಸಕರ ಜತೆ ಹಿರಿಯ ನಾಯಕರು ಮುಕ್ತ ಮಾತುಕತೆ ನಡೆಸಲಿದ್ದಾರೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಿರಿಯ ನಾಯಕರು ರೆಸಾರ್ಟ್‌ನಲ್ಲಿ ಚರ್ಚೆ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ಕಾಂಗ್ರೆಸ್ ಸರಕಾರದ ಮುಂದಿನ ಎರಡು ವರ್ಷಗಳ ಆಡಳಿತ, ಪಕ್ಷ ಸಂಘಟನೆ ಹಾಗೂ ಅಭಿವೃದ್ಧಿ ಯೋಜನೆಗಳ ಬಗ್ಗೆ ಸುದೀರ್ಘ ಚರ್ಚೆಯಾಗಲಿದೆ. ಸಚಿವ ಸಂಪುಟ ಸೇರಲು ಬಹಳಷ್ಟು ನಾಯಕರು ತೆರೆಮರೆಯ ಕಸರತ್ತು ನಡೆಸುತ್ತಿದ್ದಾರೆ. ಅಂತಹ ಶಾಸಕರ ಜತೆ ಡಿ.ಕೆ.ಶಿವಕುಮಾರ್ ಹಾಗೂ ಹಿರಿಯ ನಾಯಕರು ಸಭೆ ನಡೆಸಿ ಸಂಪುಟ ಸೇರುವ ಅವಕಾಶಗಳ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಯುದ್ಧ ಅಂತ್ಯವಾದರೂ ಅಮೆರಿಕ ವಿರುದ್ಧ ಇರಾನ್ ಕೆಂಡ
ಹೊರ್ಮುಜ್‌ನಲ್ಲಿ ಸುಂಕದ ಬದಲು ಶುಲ್ಕ ವಸೂಲಿ

ಇರಾನ್-ಅಮೆರಿಕ ಶಾಂತಿ ಒಪ್ಪಂದಕ್ಕೆ ಮತ್ತೆ ಕಂಟಕ?

ಟೆಹರಾನ್: ಮಧ್ಯಪ್ರಾಚ್ಯ ಸಂಘರ್ಷಕ್ಕೆ ಬ್ರೇಕ್ ಹಾಕುವ ನಿಟ್ಟಿನಲ್ಲಿ ಮಹತ್ವದ ಶಾಂತಿ ಸಂಧಾನ ಒಪ್ಪಂದವಾದರೂ ಅಮೆರಿಕ ವಿರುದ್ಧದ ಇರಾನ್ ಕೋಪ ತಣ್ಣಗಾಗುವಂತೆ ಕಾಣುತ್ತಿಲ್ಲ. ಯುದ್ಧ ಅಂತ್ಯವಾಗಿದ್ದರೂ ಇರಾನ್ ಮಾತ್ರ ಅಮೆರಿಕದ ವಿರುದ್ಧ ಕೆಂಡಕಾರುತ್ತಲೇ ಇದೆ.

ಅಮೆರಿಕ ಮತ್ತು ಇರಾನ್ ಮಧ್ಯ ಪ್ರಾಚ್ಯದ ಯುದ್ಧವನ್ನು ಅಂತ್ಯಗೊಳಿಸಿ, ಹೊರ್ಮುಜ್ ಜಲಸಂಧಿಯನ್ನು ಪುನಃ ಎಲ್ಲ ನೌಕೆ ಗಳಿಗೆ ತೆರೆಯುವ ಒಪ್ಪಂದವನ್ನು ಸೋಮವಾರ ಘೋಷಿಸಿವೆ. ಆ ಮೂಲಕ ಹಲವು ತಿಂಗಳುಗಳಿಂದ ನಡೆದಿದ್ದ ಪ್ರಾಣಹಾನಿಕರ ಹಿಂಸಾಚಾರ ಮತ್ತು ಜಾಗತಿಕ ಆರ್ಥಿಕ ಅಸ್ಥಿರತೆಯ ಬಳಿಕ ಈ ಘೋಷಣೆ ಜಾಗತಿಕ ಮಟ್ಟದಲ್ಲಿ ನೆಮ್ಮದಿಯ ಭಾವನೆ ಮೂಡಿಸಿದೆ. ಆದರೆ, ಇರಾನ್ ವಿದೇಶಾಂಗ ಸಚಿವಾಲಯವು 'ಯುದ್ಧ ಅಂತ್ಯಗೊಳಿಸುವ ರೂಪರೇಷೆ ಒಪ್ಪಂದವಾಗಿದ್ದರೂ ಅಮೆರಿಕದ ಮೇಲಿನ ಆಳವಾದ ಅವಿಶ್ವಾಸ ಇನ್ನೂ ಉಳಿದಿದೆ' ಎಂದು ಹೇಳಿಕೆ ನೀಡುವ ಮೂಲಕ ಶಾಕ್ ನೀಡಿದೆ.

ಈ ಕುರಿತು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಮಂಗಳವಾರ ಮಾತನಾಡಿದ್ದು, ಒಪ್ಪಂದದ ಬದ್ಧತೆಗಳು ಮುರಿದುಬಿದ್ದ ಇತಿಹಾಸ ನಮ್ಮ ಮುಂದಿದೆ. ಕರಡುಗಳನ್ನು ಹರಿದುಹಾಕಿದ ನಿದರ್ಶನಗಳೂ ಇವೆ. ಇವೆಲ್ಲವೂ ನಮ್ಮ ಮನಸ್ಸಿನಲ್ಲಿವೆ ಎನ್ನುವ ಮೂಲಕ ಅಮೆರಿಕದೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಕುರಿತು ಎಚ್ಚರಿಕೆಯಿಂದ ಇರುವುದಾಗಿ ಹೇಳಿದ್ದಾರೆ. ಅಮೆರಿಕದೊಂದಿಗೆ ಮಾಡಿ ಕೊಂಡಿರುವ ಒಪ್ಪಂದವು ಸದ್ಯಕ್ಕೆ ಯುದ್ಧವನ್ನು ಕೊನೆಗೊಳಿಸಿದೆ.

ಎರಡು ತಿಂಗಳೊಳಗೆ ಅಂತಿಮ ಒಪ್ಪಂದ ಏರ್ಪಡಲಿದೆ ಎಂದು ವಿದೇಶಾಂಗ ಇಲಾಖೆಯ ಉಪ ಸಚಿವ ಕಝೆಮ್ ಘರಿಬ ಬಾದಿ ಹೇಳಿದ್ದಾರೆ. ಒಪ್ಪಂದವನ್ನು ವಿಜಯ ವೆಂದೇ ಪರಿಗಣಿಸಿರುವ ಇರಾನ್ ಸೇನೆ, ಇದು ಅಮೆರಿಕ ಮತ್ತು ಇಸ್ರೇಲ್‌ಗೆ ಮುಖಭಂಗವನ್ನುಂಟು ಮಾಡಿದೆ ಎಂದು ಹೇಳಿದ್ದಾರೆ. → 4

ಹಣಕಾಸು ನೆರವಿಗೆ ಒಪ್ಪಿಲ್ಲ

ಅಮೆರಿಕ-ಇರಾನ್ ನಡುವಿನ ಒಪ್ಪಂದದಲ್ಲಿ ಟೆಹರಾನ್‌ನ ಪರಮಾಣು ಕಾರ್ಯಕ್ರಮದ ಭವಿಷ್ಯದ ಬಗ್ಗೆ ವಿವರಗಳು ಅಸ್ಪಷ್ಟವಾಗಿರುವ ಬೆನ್ನಲ್ಲೇ, ಇರಾನ್ ಎಂದಿಗೂ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವುದಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ಇಸ್ಲಾಮಿಕ್ ಗಣರಾಜ್ಯವು ತನ್ನ ಬಾಧ್ಯತೆಗಳನ್ನು ಎತ್ತಿಹಿಡಿದರೆ ಶಾಂತಿ ಒಪ್ಪಂದದ ಭಾಗವಾಗಿ ಇರಾನ್‌ಗೆ 300 ಬಿಲಿಯನ್ ಡಾಲರ್ ಪುನರ್‌ನಿರ್ಮಾಣ ನಿಧಿ ಸಿಗುವುದರ ಬಗ್ಗೆಯೂ ಅಮೆರಿಕ ನಾಯಕ ಅನುಮಾನ ವ್ಯಕ್ತಪಡಿಸಿದ್ದಾರೆ. 'ಎಂದಿಗೂ ಪರಮಾಣು ಶಸ್ತ್ರಾಸ್ತ್ರ ಹೊಂದುವುದಿಲ್ಲ ಎಂದು ಇರಾನ್ ಒಪ್ಪಿಕೊಂಡಿದೆ. ಅಲ್ಲದೆ, ಅಮೆರಿಕ ಇರಾನ್‌ಗೆ 300 ಮಿಲಿಯನ್ ಡಾಲರ್ ಪಾವತಿಸುತ್ತಿದೆ ಎಂಬ ಸುದ್ದಿಯು ಡುಮೋಕ್ರಾಟ್‌ಗಳು ಪ್ರಕಟಿಸಿದ ನಕಲಿ ಸುದ್ದಿಯಾಗಿದೆ' ಎಂದು ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್ ಪ್ಲಾಟ್‌ಫಾರ್ಮ್‌ನಲ್ಲಿನ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಸೊಂಪಾದ ಪುಟಗಳು

ಒಂದು ವೋಟಿನ ಕರಾಮತ್ತು ಹೇಗಿದೆ ನೋಡಿ..!
ಜನಪಥ
ರಾಘವಶರ್ಮ ನಿಡ್ಲೆ 6

ಮನೆಯೇ ಮೊದಲ ಕ್ರೌರ್ಯದ ತಾಣ ಆಗದಿರಲಿ !
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಸವಾಲುಗಳು ಹೆಚ್ಚಾದಷ್ಟೂ ನಿಮ್ಮ ವ್ಯಕ್ತಿತ್ವ ಹೆಚ್ಚು ಗಟ್ಟಿಯಾಗುತ್ತದೆ. ನಿಮ್ಮ ಸಾಮರ್ಥ್ಯದ ಮೇಲೆ ನಿಮಗಿರುವ ನಂಬಿಕೆಯೇ ಜಗತ್ತನ್ನು ಗೆಲ್ಲುವ ಮೊದಲ ಆಯುಧ. ಸತತ ಪ್ರಯತ್ನವೊಂದಿದ್ದರೆ ಅಸಾಧ್ಯವಾದುದು ಯಾವುದೂ ಇಲ್ಲ. ಇಂದು ನೀವು ಪಡುವ ಶ್ರಮವೇ ನಾಳೆಯ ನಿಮ್ಮ ಯಶಸ್ಸಿನ ಕಥೆಯಾಗುತ್ತದೆ.

ವಕ್ರತುಂಡೋಕ್ತಿ

ನೆಮ್ಮದಿಯಾಗಿ ಇರಬೇಕೆಂದರೆ ಪಕ್ಕದ ಮನೆಯವರ ಜತೆ ಜಗಳ ಮಾಡಬಾರದು, ಅವರ ಇನ್ಸ್ಟಾಗ್ರಾಮ್ ಸ್ಟೋರಿ ನೋಡುವುದನ್ನು ಬಿಟ್ಟರೆ ಸಾಕು.

ಚೀಟಿ ಇಲ್ಲದೇ ಔಷಧ ಮಾರಾಟ ನಿಷೇಧ

ದೆಹಲಿ: ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಬಗೆಯ ಸಿರಪ್‌ಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ತಿದ್ದುಪಡಿ ಮಾಡಿದೆ. ಔಷಧಗಳ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಈ ತಿದ್ದುಪಡಿ ಮಾಡಿದ್ದು, ವೈದ್ಯರ ಶಿಫಾರಸು ಇಲ್ಲದೆಯೇ ಸಿರಪ್‌ಗಳ ಮಾರಾಟವನ್ನು ನಿಷೇಧಿಸುವುದು ಸೇರಿ ಹಲವು ಅಂಶಗಳನ್ನು ತಿದ್ದುಪಡಿ ಒಳಗೊಂಡಿದೆ. ಈ ಮೂಲಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದ ನಿಯಮಗಳನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸಚಿವಾಲಯವು ಈ ತಿದ್ದುಪಡಿ ಕುರಿತಂತೆ ಕಳೆದ ಡಿಸೆಂಬರ್‌ನಲ್ಲಿ ಕರಡು ಅಧಿಸೂಚನೆ ಹೊರಡಿಸಿ, ಎಲ್ಲ ಭಾಗೀದಾರರಿಂದ ಆಕ್ಷೇಪಣೆ ಆಹ್ವಾನಿಸಿತ್ತು.



ಚನ್ನೇಗೌಡರ ಪತ್ನಿ ಜಯಮ್ಮ ನಿಧನ

ಬೆಂಗಳೂರು: ನಿರ್ಮಾಪಕ ಎಸ್.ಎ. ಚನ್ನೇಗೌಡ ಅವರ ಪತ್ನಿ, ನಟ ಶ್ರೀಮುರಳಿ ಮತ್ತು ವಿಜಯ್ ರಾಘವೇಂದ್ರ ಅವರ ತಾಯಿ ಜಯಮ್ಮ ಮಂಗಳವಾರ ಬೆಳಗ್ಗೆ ನಿಧನರಾಗಿದ್ದಾರೆ. ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಜಯಮ್ಮ ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಜಯಮ್ಮ ಅವರ ನಿಧನಕ್ಕೆ ಚಿತ್ರರಂಗದ ಗಣ್ಯರು ಕಂಬನಿ ಮಿಡಿದಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

60 ಅಡಿ ಸೇತುವೆ ಬಳಿಕ, 132 ಅಡಿ ಎತ್ತರದ ಮೊಬೈಲ್ ಟವರನ್ನೇ ಕದ್ದ ಕಳ್ಳರು. ಸುದ್ದಿ



ಮಂಗ್ಳೂರಲ್ಲಿ ಸಂಪುಟ ಸಭೆ

ಮಂಗಳೂರು: ಸಿಎಂ ಡಿ.ಕೆ.ಶಿವಕುಮಾರ್ ಸರಕಾರ ಪೂರ್ಣ ಪ್ರಮಾಣದಲ್ಲಿ ಸಂಪುಟ ವಿಸ್ತರಣೆಗೊಂಡ ಬಳಿಕ ಅದರ ಮೊದಲ ಸಚಿವ ಸಂಪುಟ ಸಭೆಯನ್ನು ಮಂಗಳೂರಿನಲ್ಲಿ ನಡೆಸಲು ಉದ್ದೇಶಿಸಲಾಗಿದೆ. ರಾಜ್ಯದ ರಾಜಧಾನಿಯಿಂದ ಹೊರಗೆ ಜಿಲ್ಲಾ ಕೇಂದ್ರ ಮಂಗಳೂರಿನಲ್ಲಿ ಮೊದಲ ಬಾರಿಗೆ ಜುಲೈ ತಿಂಗಳಲ್ಲಿ ಸಚಿವ ಸಂಪುಟ ಸಭೆ ನಡೆಯುವುದು ಬಹುತೇಕ ಖಚಿತವಾಗಿದೆ. ಈ ಬಗ್ಗೆ ವಿಧಾನಸೌಧ ಸಚಿವಾಲಯದ ಅಧಿಕಾರಿಗಳು ಸಿದ್ಧತೆಗೆ ಸೂಚನೆ ನೀಡಿದ್ದಾರೆ. ಮಂಗಳೂರಿನಲ್ಲಿ ಪಡೀಲಿನ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ.

ಎಸ್‌ಐಟಿ ವಾಹನ ಪಲ್ಟಿ

ಬೆಳ್ತಂಗಡಿ: ಧರ್ಮಸ್ಥಳ ಕೊಲೆ ಪ್ರಕರಣಗಳಿಗೆ ಸಂಬಂಧಿಸಿದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು ಇದ್ದ ಇನ್ನೋವಾ ಕಾರು ಬೆಳ್ತಂಗಡಿ ತಾಲೂಕಿನ ಚಾರ್ಮಾಡಿಯಲ್ಲಿ ಪಲ್ಟಿಯಾಗಿದೆ. ಚಾಲಕ, ಎಸ್‌ಐಟಿ ಎಸ್‌ಪಿ ಸಿ.ಎ.ಸೈಮನ್ ಹಾಗೂ ಇನ್ಸ್‌ಪೆಕ್ಟರ್ ಕುಸುಮಾಧರ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಿ.ಎ. ಸೈಮನ್ ಹಾಗೂ ಕುಸುಮಾಧರ್ ಅವರು ಎಸ್‌ಐಟಿ ತಂಡದ ತನಿಖಾಧಿಕಾರಿಯಾಗಿರುವ ಜಿತೇಂದ್ರ ಕುಮಾರ್ ದಯಾಮ ಅವರನ್ನು ಭೇಟಿ ಮಾಡಿ, ಮಾಹಿತಿ ನೀಡಲು ಇನ್ನೋವಾ ಕಾರಿನಲ್ಲಿ ಚಿಕ್ಕಮಗಳೂರಿಗೆ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ.

ಕಾನೂನು ತಜ್ಞರ ಜತೆ ಚರ್ಚಿಸಿ ಸೂಕ್ತ ಕ್ರಮ: ಸೀಮಂತ್ ಕುಮಾರ್ ಸಿಂಗ್

ರೌಡಿ ಪಟ್ಟಿಯಿಂದ ಹಲವರು ಹೊರಕ್ಕೆ: ಮೇಲ್ಮನವಿಗೆ ಸಿದ್ಧತೆ

ಬೆಂಗಳೂರು: ಸೈಲೆಂಟ್ ಸುನೀಲ್, ಒಂಟೆ ರೋಹಿತ್ ಸೇರಿದಂತೆ ಒಟ್ಟು ರಾಜ್ಯದಲ್ಲಿ 66 ಮಂದಿಯನ್ನು ರೌಡಿಪಟ್ಟಿಯಿಂದ ಮುಕ್ತಿಗೊಳಿಸಲಾಗಿದ್ದು, ಈ ಪೈಕಿ ಬೆಂಗಳೂರು ನಗರದಲ್ಲಿನ ರೌಡಿಗಳನ್ನು ಪಟ್ಟಿಯಿಂದ ಕೈಬಿಟ್ಟಿರುವ ಸಂಬಂಧ ಕಾನೂನು ಅಭಿಪ್ರಾಯ ಪಡೆದು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. 2022ರಲ್ಲಿ ಹೈಕೋರ್ಟ್ ಹೊರಡಿಸಿದ್ದ ಆದೇಶ ಪಾಲನೆ ಮಾಡದ ಕಾರಣ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ 66 ರೌಡಿಗಳನ್ನು ರೌಡಿಪಟ್ಟಿಯಿಂದ ತೆಗೆ ಯುವಂತೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಶಿಫಾರಸು ಮಾಡಿತ್ತು. ಬೆಂಗಳೂರು ನಗರದಲ್ಲಿ ಸೈಲೆಂಟ್ ಸುನೀಲ್, ಒಂಟೆ ರೋಹಿತ್ ಸೇರಿದಂತೆ ಏಳು ಮಂದಿಯನ್ನು ರೌಡಿ ಪಟ್ಟಿಯಿಂದ ತೆಗೆಯು ವಂತೆ ಶಿಫಾರಸು ಮಾಡಿದ್ದರೆ, 5 ಮಂದಿಗೆ ನೋಟಿಸ್ ನೀಡಲಾಗಿತ್ತು. → 4

ಭ್ರಷ್ಟ ಕುಳಗಳ ಕೋಟ್ಯಂತರ ರು. ಅಕ್ರಮ ಸಂಪತ್ತು ಬಯಲು

40 ಕಡೆ ಲೋಕಾ ದಾಳಿ

ಬೆಂಗಳೂರು: ಆದಾಯ ಮೀರಿದ ಆಸ್ತಿ ಗಳಿಕೆಗೆ ಸಂಬಂಧಿಸಿದಂತೆ ಐವರು ಅಧಿಕಾರಿಗಳಿಗೆ ಸೇರಿದ 12 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದ್ದಾರೆ.ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖ್ಯ ತಾಂತ್ರಿಕ ಅಧಿಕಾರಿ ಸಿದ್ದೇಶ್ವರ ಎನ್.ಹೆಬ್ಬಾಳ ಅವರ ಮನೆಯಲ್ಲಿ 40 ಲಕ್ಷ ರು. ನಗದು ಸಿಕ್ಕಿದೆ. ಬಯಲುಸೀಮೆ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ಕೃಷ್ಣ ನಾಯ್ಕ, ಬೆಳಗಾವಿಯ ಕೆಆರ್‌ಐಡಿಎಲ್ ಅಧೀಕ್ಷಕ ಎಂಜಿನಿಯರ್ ಸಣ್ಣ ಕೆಂಚಪ್ಪ, ಕಲಬುರಗಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾ ಯತ್ ರಾಜ್‌ನ ನಿವೃತ್ತ ಸೂಪರಿಂಟೆಂಡೆಂಟ್ ಎಂಜಿನಿ ಯರ್ ಮಾಣಿಕ್ ಕನಕಟ್ಟೆ, ಚಿಕ್ಕಮಗಳೂರಿನ ಎಸಿಎಫ್ ಮೋಹನ್ ಕೂಡ ಅಪಾರ ಪ್ರಮಾಣದ ಆಸ್ತಿ ಗಳಿಸಿದ್ದು ದೃಢಪಟ್ಟಿದೆ.

ದಾವಣಗೆರೆಯ ಆಂಜನೇಯ ಬಡಾವಣೆಯಲ್ಲಿರುವ ಸಿದ್ದೇಶ್ವರ ಅವರಿಗೆ ಸೇರಿದ ಮನೆ, ಹುಬ್ಬಳ್ಳಿಯ ಕಚೇರಿ ಸೇರಿ ಮೂರು ಕಡೆ ದಾಳಿ ನಡೆಸಲಾಗಿದೆ. ಮನೆಯಲ್ಲಿ ಪತ್ತೆಯಾದ ಹಣದಲ್ಲಿ 37 ಲಕ್ಷ ಹಣವನ್ನು ಲೋಕಾಯುಕ್ತ ಪೊಲೀಸರು ಜಪ್ತಿ ಮಾಡಿದ್ದಾರೆ. 1.23 ಕೋಟಿ ರು. ಮೌಲ್ಯದ ಚಿನ್ನಾಭರಣ, 30 ಲಕ್ಷ ರು. ಮೌಲ್ಯದ ಕಾರು ಹಾಗೂ ಒಂದು ನಿವೇಶನ, ಎರಡು ಮನೆ ಇರುವುದು ಗೊತ್ತಾಗಿದೆ. ಶೇ.124ರಷ್ಟು ಹೆಚ್ಚುವರಿ ಆಸ್ತಿ ಗಳಿಸಿದ್ದು ಖಚಿತವಾಗಿದೆ.

ಕೆಆರ್‌ಐಡಿಎಲ್ ಅಧೀಕ್ಷಕ ಎಂಜಿನಿಯರ್ ಸಣ್ಣ ಕೆಂಚಪ್ಪ ಅವರ ಮನೆ ಸೇರಿದಂತೆ 5 ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, 1.38 ಕೋಟಿ ರು. ಮೌಲ್ಯದ ಮೂರು ಮನೆ, 62 ಲಕ್ಷ ರು. ಮೌಲ್ಯದ ಕೃಷಿ ಭೂಮಿ, 53 ಲಕ್ಷದ ಆಭರಣ ಪತ್ತೆಯಾಗಿವೆ. ಶೇ.150ರಷ್ಟು ಹೆಚ್ಚುವರಿ ಆಸ್ತಿ ಹೊಂದಿದ್ದು ಗೊತ್ತಾಗಿದೆ.

ಬಯಲುಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಕೃಷ್ಣ ನಾಯ್ಕ ಮನೆ ಸೇರಿದಂತೆ ನಾಲ್ಕು ಸ್ಥಳಗಳ ಮೇಲೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದು, 3 ಮನೆ, 1 ನಿವೇಶನ, 6 ಲಕ್ಷ ನಗದು, 43 ಲಕ್ಷ ಮೌಲ್ಯದ ಆಭರಣ ಹಾಗೂ 33 ಲಕ್ಷ ಮೌಲ್ಯದ ವಾಹನಗಳು ಪತ್ತೆಯಾಗಿವೆ. → 4

ಸಿದ್ದೇಶ್ವರ ಮನೆಯಲ್ಲಿ ಪತ್ತೆಯಾದ ನಗದು ಮತ್ತು ಚಿನ್ನಾಭರಣ.

- ಆದಾಯ ಮೀರಿ ಆಸ್ತಿ ಸಂಪಾದನೆ ಮಾಡಿದ ರಾಜ್ಯದ 'ಪಂಚ' ಭ್ರಷ್ಟ ಅಧಿಕಾರಿಗಳಿಗೆ ಲೋಕಾ ಬಿಸಿ
- ಬೆಂಗಳೂರು, ದಾವಣಗೆರೆ, ಕಲಬುರಗಿ, ಚಿಕ್ಕಮಗಳೂರು ಸೇರಿದಂತೆ ಹಲವು ಸ್ಥಳಗಳಲ್ಲಿ ಶೋಧ

ಬೆಂಕಿ ಅವಘಡ: ಡಿಸಿ ಅಮಾನತಿಗೆ ಶಿಫಾರಸು

ಮೈಸೂರು: ಪಬ್‌ನಲ್ಲಿ ಬೆಂಕಿ ಅವಘಡ ಪ್ರಕರಣಕ್ಕೆ ಸಂಬಂಧಿಸಿ ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು ಮಾಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ಪಬ್ ಮಾಲೀಕನ ವಿರುದ್ಧ ದೂರು ದಾಖಲು ಮಾಡಲಾಗಿದೆ. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಲೈಸೆನ್ಸ್ ಇಲ್ಲದೆ ಬಾರ್ ನಡೆಸುತ್ತಿದ್ದರೂ ಅಬಕಾರಿ ಡಿಸಿ ಕಣ್ಮುಚ್ಚಿ ಕುಳಿತಿದ್ದಾರೆ. ಎಲ್ಲ ವ್ಯವಹಾರಿಕ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದಾರಾ ಎಂದು ಪರಿಶೀಲನೆ ನಡೆಸಲು ಹೇಳಿದ್ದೇನೆ ಎಂದು ಹೇಳಿದರು.

ನೀಟ್ ಪರೀಕ್ಷೆ: ಟೆಲಿಗ್ರಾಂಗೆ ಜೂ.22ರವರೆಗೆ ನಿರ್ಬಂಧ

ದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಮನವಿಯ ಮೇರೆಗೆ ಕೇಂದ್ರ ಸರಕಾರವು ಮೆಸೇಜಿಂಗ್ ಅಪ್ಲಿಕೇಶನ್ ಟೆಲಿಗ್ರಾಂ ಮೇಲೆ ಜೂನ್ 22ರವರೆಗೆ ತಾತ್ಕಾಲಿಕ ನಿರ್ಬಂಧ ಹೇರಿದೆ. ವೈದ್ಯಕೀಯ ಪ್ರವೇಶ ಪರೀಕ್ಷೆಯಾದ ನೀಟ್-ಯುಜಿ 2026 ಮರುಪರೀಕ್ಷೆ ಹಿನ್ನೆಲೆಯಲ್ಲಿ ಅಕ್ರಮ ಚಟುವಟಿಕೆಗಳು ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧಿತ ವಂಚನೆಗಳನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ. ವಿವರಪುಟ → 8

ಖಾಸಗಿ ವಿಡಿಯೋ, ಫೋಟೊ ಪ್ರಸಾರ ಪ್ರಕರಣಗಳಲ್ಲಿ ಅನುಸರಿಸಲೇಬೇಕಾದ ಮಾರ್ಗಸೂಚಿಗಳ ಪಾಲನೆಗೆ ಆದೇಶ

ಸಾಮಾಜಿಕ ಜಾಲತಾಣದ ಪೋಸ್ಟ್‌ಗೆ ಮೂಗುದಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅನುಮತಿಯಿಲ್ಲದೇ ಖಾಸಗಿ ವಿಡಿಯೋ ಮತ್ತು ಫೋಟೊ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಲ್ಲಿ ಪೊಲೀಸರು ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ಪಾಲಿಸುವಂತೆ ರಾಜ್ಯ ಪೊಲೀಸ್ ಇಲಾಖೆಯು ಆದೇಶ ಹೊರಡಿಸಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರು ಸೋಶಿಯಲ್ ಮೀಡಿಯಾಗಳಿಗೆ ಹೊಸ ಮಾರ್ಗಸೂಚಿ ಹೊರಡಿಸಿದ್ದಾರೆ. ಯಾವುದೇ ವ್ಯಕ್ತಿಯ ಅನುಮತಿ ಇಲ್ಲದೇ ಅವರ ಫೋಟೋ, ವಿಡಿಯೋ ಚಿತ್ರೀಕರಿಸುವಂತಿಲ್ಲ ಎಂದು ಎಚ್ಚರಿಕೆ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ದೂರುಗಳನ್ನು ದಾಖಲಿಸುವಲ್ಲಿ ವಿಳಂಬ ಅಥವಾ ನಿರಾಕರಣೆ ನಡೆದಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಈ ಆದೇಶದಲ್ಲಿ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದರೆ ಪ್ರಸಾರಕ್ಕೂ ಒಪ್ಪಿಗೆ ನೀಡಿದಂತೆ ಅಲ್ಲ ಎಂಬ ಕಾನೂನು ಸ್ಥಿತಿಯನ್ನು ಸ್ಪಷ್ಟಪಡಿಸಲಾಗಿದೆ. ಅಂದರೆ, ಒಬ್ಬ ವ್ಯಕ್ತಿ ಚಿತ್ರ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ, ಅದನ್ನು ಹಂಚಲು ಅಥವಾ ಪ್ರಸಾರ ಮಾಡಲು ಒಪ್ಪಿಗೆ ನೀಡದಿದ್ದರೆ, ಅದು ಸಂಜ್ಞೆಯ (ಕಾಗ್ನಿಜೆನ್ಸ್) ಅಪರಾಧವಾಗಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. → 4

ಆರ್‌ಎಸ್‌ಎಸ್ ತನ್ನ ನೋಂದಣಿ ಹಾಗೂ ಆರ್ಥಿಕ ಪಾರದರ್ಶಕತೆಯನ್ನು ಬಹಿರಂಗಪಡಿಸಬೇಕು

ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ, ಯಾವುದೇ ಸಂಸ್ಥೆ, ಅದು ಎಷ್ಟೇ ಹಳೆಯದಾಗಿರಲಿ ಅಥವಾ ಪ್ರಭಾವಶಾಲಿಯಾಗಿರಲಿ, ದೇಶದ ಕಾನೂನು ಪಾಲಿಸಬೇಕು. ದುರಹಂಕಾರವನ್ನು ದೂರವಿಡಿ, ಕಾನೂನನ್ನು ಅನುಸರಿಸಿ ಮತ್ತು ನಿಮ್ಮ 'ಪದಾಧಿಕಾರಿಗಳು' ಅಥವಾ 'ಕಾನೂನು ಮುಖ್ಯಸ್ಥರು' ಬಂದು ನನಗೆ ವಿವರಿಸಲಿ.
- ಪ್ರಿಯಾಂಕ್ ಖರ್ಗೆ, ಗೃಹ ಸಚಿವ

- ನಮ್ಮ ದೇಶದಲ್ಲಿ ಶ್ರೀರಾಮನೇ ಲೆಕ್ಕ ಕೊಡಬೇಕು. ಇನ್ನು ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡಿದವರು ಲೆಕ್ಕ ಕೊಡಬಾರದಾ?
- ಆರ್‌ಎಸ್‌ಎಸ್‌ನವರು ದುರಹಂಕಾರ ಬಿಟ್ಟು ಕಾನೂನು ಪಾಲಿಸಲಿ. ಧರ್ಮಕ್ಕೆ ನೋಂದಣಿ ಕೇಳುತ್ತಿಲ್ಲ, ಸಂಘಕ್ಕೆ ನೋಂದಣಿ ಕೇಳುತ್ತಿದ್ದೇನೆ

ದೆಹಲಿಯಲ್ಲೂ ಪ್ರಿಯಾಂಕ್ ಸದ್ದು ಆರೆಸ್ಸೆಸ್ ಲೆಕ್ಕಪತ್ರ ನೀಡಲು ಆಗ್ರಹ

ದೆಹಲಿ: ರಾಷ್ಟ್ರೀಯ ಸ್ವಯಂಸೇವಕ ಸಂಘ ನೋಂದಣಿ ಮಾಡಿಸಬೇಕು ಮತ್ತು ಪಾರದರ್ಶಕವಾಗಿ ಲೆಕ್ಕ ಕೊಡಬೇಕು ಎಂದು ಮತ್ತೆ ಆಗ್ರಹಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ನಮ್ಮ ದೇಶದಲ್ಲಿ ಶ್ರೀರಾಮನೇ ಲೆಕ್ಕ ಕೊಡಬೇಕು. ಇನ್ನು ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡಿದವರು ಲೆಕ್ಕ ಕೊಡಬಾರದಾ? ಎಂದು ಮಂಗಳವಾರ ಪ್ರಶ್ನಿಸಿದ್ದಾರೆ.

ಆರ್‌ಎಸ್‌ಎಸ್ ನೋಂದಣಿ ಮತ್ತು ಹಣಕಾಸು ವಹಿವಾಟುಗಳ ಮಾಹಿತಿ ಕೋರಿ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಸೋಮವಾರ ಪತ್ರ ಬರೆದಿದ್ದ ಪ್ರಿಯಾಂಕ್ ಖರ್ಗೆ ವಿರುದ್ಧ ಪ್ರತಿಪಕ್ಷ ಬಿಜೆಪಿ ತೀವ್ರ ವಾಗ್ದಾಳಿ ನಡೆಸುತ್ತಿದೆ. ಈ ನಡುವೆ ಮಂಗಳವಾರ ದೆಹಲಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಆರ್‌ಎಸ್‌ಎಸ್‌ನವರು ದುರಹಂಕಾರ ಬಿಟ್ಟು ಕಾನೂನು ಪಾಲಿಸಬೇಕು ಎಂದು ಹೇಳಿದ್ದಾರೆ.

ಅಯೋಧ್ಯೆಯಲ್ಲಿ ರಾಮ ಮಂದಿರದ ದೇಣಿಗೆ ವಿಚಾರದಲ್ಲಿ ಹಗರಣ ನಡೆದಿದೆ. ನಮ್ಮ ದೇಶದಲ್ಲಿ ಶ್ರೀರಾಮನೇ ಲೆಕ್ಕ ಕೊಡುವ ಪರಿಸ್ಥಿತಿ ಇದೆ. ಇನ್ನೂ ಶ್ರೀರಾಮನ ಹೆಸರಿನಲ್ಲಿ ರಾಜಕೀಯ ಮಾಡಿದವರು ಯಾಕೆ ಲೆಕ್ಕ ಕೊಡಬಾರದು? ಬಿಜೆಪಿಯವರು ಆರ್‌ಎಸ್‌ಎಸ್‌ನ ಆಳು ಮಕ್ಕಳು, ಅವರು ವಿರೋಧ ಮಾಡೇ ಮಾಡುತ್ತಾರೆ. → 4



ಸಮಾಚಾರ ಸಣ್ಣದಲ್ಲ

ಬಾಲಕಿ ಮೇಲೆ ಬೀದಿ ನಾಯಿಗಳ ದಾಳಿ

ಬೆಂಗಳೂರು: ನಾಲ್ಕು ವರ್ಷದ ಬಾಲಕಿಯ ಮೇಲೆ ಬೀದಿನಾಯಿಗಳ ಗುಂಪು ದಾಳಿ ನಡೆಸಿರುವ ಘಟನೆ ಸಹಕಾರ ನಗರದಲ್ಲಿ ನಡೆದಿದೆ. ಸಹಕಾರ ನಗರದ ಸಿಕ್ಯೂಎಲ್ ಲೇಔಟ್‌ನಲ್ಲಿ ಸಂಗೀತಾ (4) ಎಂಬ ಪುಟ್ಟ ಬಾಲಕಿಯನ್ನು ನಾಯಿಗಳು ಎಳೆದಾಡಿವೆ. ಬಾಲಕಿಯ ಚೀರಾಟ ಕೇಳಿದ ಕೂಡಲೇ ಸ್ಥಳದಲ್ಲಿದ್ದವರು ಧಾವಿಸಿ ಆಕೆಯನ್ನು ರಕ್ಷಿಸಿದ್ದಾರೆ. ಯಾದಗಿರಿ ಜಿಲ್ಲೆಯ ಬಾಲಕಿಯ ಪೋಷಕರು ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸ ಮಾಡಿಕೊಂಡಿದ್ದರು. ಸಿಕ್ಯೂಎಲ್ ಲೇಔಟ್‌ನಲ್ಲಿ ನಿರ್ಮಾಣ ಹಂತದ ಕಟ್ಟಡದ ಸಮೀಪದ ರಸ್ತೆಯಲ್ಲಿ ಬಾಲಕಿ ನಡೆದುಕೊಂಡು ಹೋಗುತ್ತಿದ್ದಳು. ಆ ಸಂದರ್ಭದಲ್ಲಿ ಹಿಂದಿನಿಂದ ಬಂದ ನಾಲ್ಕೈದು ನಾಯಿಗಳು ಆಕೆಯ ಮೇಲೆರಗಿ ಎಳೆದಾಡಿವೆ. ತಪ್ಪಿಸಿಕೊಳ್ಳಲಾಗದೆ ಬಾಲಕಿ ಚೀರಾಡಿದಾಗ ಸ್ಥಳೀಯ ನಿವಾಸಿಗಳು ಧಾವಿಸಿ ನಾಯಿಗಳನ್ನು ಓಡಿಸಿ ಆಕೆಯನ್ನು ರಕ್ಷಿಸಿದ್ದಾರೆ. ನಾಯಿಗಳ ದಾಳಿಯಿಂದ ಬಾಲಕಿಯ ಕೈ, ಕಾಲು ಮತ್ತು ಮುಖಕ್ಕೆ ಗಾಯಗಳಾಗಿವೆ. ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಸಿಎಸ್ ಶಾಲಿನಿ ವಿರುದ್ಧ ಬಿಎಂಟಿಎಫ್‌ಗೆ ದೂರು

ಬೆಂಗಳೂರು: ಮನೆ ಮುಂದೆ ಪಾದಚಾರಿ ಮಾರ್ಗವನ್ನು ಅತಿಕ್ರಮಿಸಿದ ಆರೋಪದಡಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್

ಹಾಗೂ ಅವರ ಪತಿ ರಜನೀಶ್ ಗೋಯಲ್ ವಿರುದ್ಧ ಬಿಎಂಟಿಎಫ್‌ನಲ್ಲಿ ದೂರು ದಾಖಲಾಗಿದೆ. ಸಾಮಾಜಿಕ ಕಾರ್ಯಕರ್ತ ನರಸಿಂಹಮೂರ್ತಿ ಎಂಬುವರು ದೂರು ನೀಡಿದ್ದಾರೆ. ಎಚ್‌ಎಸ್‌ಆರ್ ಲೇಔಟ್‌ನ ಎಂಸಿಎಚ್‌ಎಸ್ ಬಡಾವಣೆಯ ಆರನೇ ಸೆಕ್ಟರ್‌ನಲ್ಲಿ ಶಾಲಿನಿ ರಜನೀಶ್ ದಂಪತಿ ವಾಸವಾಗಿದ್ದಾರೆ. ಬಿಡಿಎ ಮಂಜೂರು ಮಾಡಿರುವ ಮನೆಯ ಮುಂದಿನ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಬಿಡಿಎಯಿಂದ ಶಾಲಿನಿ ರಜನೀಶ್ ಅವರಿಗೆ ಮನೆ ಮಂಜೂರಾಗಿತ್ತು. ಆದರೆ, ಬಿಡಿಎ ನಿಯಮಗಳ ಪ್ರಕಾರ, ಮಂಜೂರಾದ ಮನೆಯನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುವಂತಿಲ್ಲ. ಈ ನಿಯಮ ಉಲ್ಲಂಘಿಸಿ, ಅವರು ಮನೆಯಿಂದ ಮಾಸಿಕ ಬಾಡಿಗೆ ಪಡೆಯುತ್ತಿದ್ದಾರೆ ಎಂಬ ಆರೋಪವೂ ಇದೆ. ಮಂಜೂರಾದ ಖಾತಾ ಗಡಿಯನ್ನೂ ಮೀರಿ ಅತಿಕ್ರಮಣ ಮಾಡಲಾಗಿದ್ದು, ಒತ್ತುವರಿ ಜಾಗದಲ್ಲಿ ಶಾಶ್ವತವಾದ ಸ್ಟೀಲ್-ಫ್ರೇಮ್ ರಚನೆ ನಿರ್ಮಿಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ರಜನೀಶ್ ಗೋಯಲ್ ಹಾಗೂ ಶಾಲಿನಿ ರಜನೀಶ್ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನರಸಿಂಹ ಮೂರ್ತಿ ಅವರು ಬಿಎಂಟಿಎಫ್‌ಗೆ ಮನವಿ ಮಾಡಿದ್ದಾರೆ.

6 ವರ್ಷದ ಬಾಲಕಿ ಕೊಲೆ ಪ್ರಕರಣ | ಬಾಲಕಿಗೆ ಗಂಭೀರವಾಗಿ ಹಲ್ಲೆ | ಎಫ್‌ಎಸ್‌ಎಲ್ ವರದಿಯಲ್ಲಿ ಬೆಳಕಿಗೆ

ವೆನ್ನೆಲಾ ತಾಯಿಗೆ ಸುಳ್ಳು ಪತ್ತೆ ಪರೀಕ್ಷೆ?

ಬೆಂಗಳೂರು: ಆರು ವರ್ಷದ ಬಾಲಕಿ ಕೊಲೆ ಪ್ರಕರಣದ ಅಸಲಿ ತನಿಖೆ ಮತ್ತಷ್ಟು ಚುರುಕುಗೊಂಡಿದ್ದು, ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ರಿಪೋರ್ಟ್ ಪೊಲೀಸರ ಕೈಸೇರಿದ್ದು, ಬೆಚ್ಚಿ ಬೀಳಿಸುವ ಅಂಶಗಳು ಬಯಲಾಗಿದೆ. ಇದರ ಮಧ್ಯೆ, ಬಾಲಕಿಯ ತಾಯಿಗೆ ಸುಳ್ಳು ಪತ್ತೆ ಪರೀಕ್ಷೆ ನಡೆಸಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ.

ಆರು ವರ್ಷದ ಬಾಲಕಿ ವೆನ್ನೆಲಾ ಮಾರ್ಚ್ 24 ರಂದು ಇಂದಿರಾನಗರದಲ್ಲಿ ಮೃತಪಟ್ಟಿದ್ದಳು. ಆರಂಭದಲ್ಲಿ ಪ್ರಕರಣ ಅಸಹಜ ಸಾವು ಎಂದು ಪೊಲೀಸರು ಪ್ರಕರಣದ ದಾಖಲಿಸಿಕೊಂಡಿದ್ದರು. ಬಳಿಕ ಮರಣೋತ್ತರ ಪರೀಕ್ಷೆ ಮತ್ತು ವಿಧಿ ವಿಜ್ಞಾನ ಪ್ರಯೋಗಾಲಯ (ಎಫ್‌ಎಸ್‌ಎಲ್) ವರದಿಗಳ ಆಧಾರದ ಮೇಲೆ ಕೊಲೆ ಪ್ರಕರಣವಾಗಿ ಪರಿವರ್ತಿಸಲಾಯಿತು. ಇನ್ನು ಮರಣೋತ್ತರ ಪರೀಕ್ಷೆಯಲ್ಲಿ ಕೆಲ ಭಯಾನಕ ಅಂಶಗಳು ಬಯಲಾಗಿವೆ. ವೆನ್ನಲಾಳ ಮುಖದ ಮೇಲೆ ಹಲವು ಗಾಯಗಳು ಮತ್ತು ಉಜ್ಜಿದ ಗುರುತುಗಳು ಕಂಡುಬಂದಿವೆ. ಮೂಗು ಮತ್ತು ಬಾಯಿಯಿಂದ ರಕ್ತಮಿಶ್ರಿತ ದ್ರವ ಹೊರಬಂದಿರುವುದು ಪತ್ತೆಯಾಗಿದೆ. ಅಲ್ಲದೇ ಕೈ ಬೆರಳುಗಳ ತುದಿಗಳು ಹಾಗೂ ಉಗುರಿನಲ್ಲಿ ನೀಲಿ ಬಣ್ಣದ ಗಾಯ ಕಂಡುಬಂದಿದೆ.

ಇನ್ನು ಮರಣೋತ್ತರ ಪರೀಕ್ಷೆಯಲ್ಲಿ ಬಾಲಕಿಯ ಹೊಟ್ಟೆಯ ಒಳಭಾಗದಲ್ಲಿ ಸುಮಾರು 400 ಮಿ.ಲೀ. ರಕ್ತ

ಮತ್ತು ರಕ್ತ ಹೆಪ್ಪುಗಟ್ಟಿದ ಗಡ್ಡೆಗಳು ಪತ್ತೆಯಾಗಿವೆ ಎನ್ನಲಾಗಿದೆ. ಇದರಿಂದ ಹೊಟ್ಟೆಗೆ ಗಂಭೀರವಾದ ಆಂತರಿಕ ಗಾಯವಾಗಿರುವುದು ದೃಢಪಟ್ಟಿದೆ. ಆರೋಪಿ ಮೋಹನ್ ಐಸ್ಕ್ರೀಂ ವಿಚಾರವಾಗಿ ಬಾಲಕಿ ಅಳುತ್ತಿದ್ದಾಗ ಮೋಹನ್ ಹೊಟ್ಟೆಗೆ ಮೊಣಕೈಯಿಂದ ಹೊಡೆದಿದ್ದಾನೆ. ನಂತರ ಆಕೆಯ ಮೂಗು ಬಾಯಿ ಮುಚ್ಚಿದ್ದ ಪರಿಣಾಮ ಉಸಿರಾಟದ ತೊಂದರೆಯಿಂದ ಸಾವನಪ್ಪಿದ್ದಾಳೆ. ನಂತರ ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ದಾಗ ವೈದ್ಯರು ಆಕೆಯನ್ನು ಬ್ರೌಟ್‌ಡೆಡ್ ಎಂದು ಘೋಷಿಸಿದ್ದಾರೆ.

ವೈಜ್ಞಾನಿಕ ತನಿಖೆಗೆ ತನಿಖಾ ತಂಡ ಸನ್ನದ್ಧ

ಮತ್ತೊಂದು ವಿಚಾರ ಎಂದರೆ ಪ್ರಕರಣದಲ್ಲಿ ಉನ್ನತ ಮಟ್ಟದ ವೈಜ್ಞಾನಿಕ ತನಿಖೆಗೆ ತನಿಖಾ ತಂಡ ಮುಂದಾಗಿದೆ. ತನಿಖಾ ಭಾಗವಾಗಿ ಆರೋಪಿ ತಾಯಿ ಬ್ರೈನ್ ಮ್ಯಾಪಿಂಗ್ ನಡೆಸಲು ಸಿದ್ದತೆ ಮಾಡಲಾಗಿದೆ. ತನಿಖೆ ವೇಳೆ ತನಗೇನು ಗೊತ್ತಿಲ್ಲ ಎಂದು ಆರೋಪಿತೆ ಹೇಳಿಕೆ ನೀಡಿದ್ದಾಳೆ. ಆದರೆ ತಾಯಿ ವಿರುದ್ಧ ಗಂಭೀರ ಆರೋಪ ಇದ್ದು, ಆಕೆ ಪಾತ್ರ ಪತ್ತೆಗೆ ಈ ಕ್ರಮಕ್ಕೆ ಗೊಳ್ಳಲಾಗಿದೆ. ಸುಳ್ಳು ಪತ್ತೆ ಪರೀಕ್ಷೆಗೆ ನ್ಯಾಯಾಲಯದಿಂದ ಅನುಮತಿ ಕೋರಿದ್ದಾರೆ. ಹೀಗಾಗಿ ಶೀಘ್ರ, ವೇ ಸುಳ್ಳು ಪತ್ತೆ ಪರೀಕ್ಷೆ ನಡೆಸಲು ತನಿಖಾ ತಂಡ ತಯಾರಿ ನಡೆಸಿದೆ. ಅಲ್ಲದೇ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಆರೋಪಿ ಕೂಡ ಸಮ್ಮತಿ ನೀಡಿದ್ದಾಳೆ ಎನ್ನಲಾ ಗಿದೆ. ಮಗಳನ್ನು ನಾನು ಕೊಲೆ ಮಾಡಿಲ್ಲ, ಕೊಲೆಯಲ್ಲಿ ನನ್ನ ಪಾತ್ರವಿಲ್ಲ, ಯಾವುದೇ ತನಿಖೆಗೂ ಸಿದ್ಧ ಎಂದು ಹೇಳಿದ್ದಾಳೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಕಲಿ ದಾಖಲೆಗಳ ಸೃಷ್ಟಿಸಿ ಕದ್ದ ಬೈಕ್‌ಗಳ ಮಾರಾಟ: ಬಂಧನ

- ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ಬೈಕ್ ಗಳನ್ನು ಗುರಿಯಾಗಿಸಿಕೊಂಡು ನಕಲಿ ಕೀ ಬಳಸಿ ಕಳ್ಳತನ
- ಆರೋಪಿಯಿಂದ ಸುಮಾರು 22 ಲಕ್ಷ ರು. ಮೌಲ್ಯದ ಒಟ್ಟು 37 ಬೈಕ್‌ಗಳ ವಶ
- ಆನ್‌ಲೈನ್ ಮಾರ್ಕೆಟ್ ವೇದಿಕೆಗಳ ಮೂಲಕ ಕದ್ದ ಬೈಕ್‌ಗಳ ಮಾರಾಟ ಮಾಡುತ್ತಿದ್ದ ಆರೋಪಿ ಸಲ್ಮಾನ್

ಬೆಂಗಳೂರು: ನಗರದಲ್ಲಿ ಕದ್ದ ಬೈಕ್‌ಗಳ ನಂಬರ್‌ಪ್ಲೇಟ್‌ಗಳನ್ನು ಬದಲಾಯಿಸಿ, ನಕಲಿ ದಾಖಲೆಗಳೊಂದಿಗೆ ಮಾರಾಟ ಮಾಡುತ್ತಿದ್ದ ಖತರ್ನಾಕ್ ಕಳ್ಳನನ್ನು ಪೊಲೀಸರು ಬಂಧಿಸಿದ್ದಾರೆ. ಸಲ್ಮಾನ್‌ಮೆಹಬೂಬ್‌ಬಿಲಾಲ್ ಬಂಧಿತ ಆರೋಪಿ. ಈತ ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದಬೈಕ್‌ಗಳನ್ನುಗುರಿಯಾಗಿಸಿಕೊಂಡು ನಕಲಿ ಕೀ ಬಳಸಿ ಕಳ್ಳತನ ಮಾಡುತ್ತಿದ್ದನೆಂದು ತನಿಖೆಯಲ್ಲಿ ಬಯಲಾಗಿದೆ. ನಂತರ ಕದ್ದ ಬೈಕ್‌ಗಳ ನಂಬರ್ ಪ್ಲೇಟ್‌ಗಳನ್ನು ಬದಲಾಯಿಸಿ, ಸಾಮಾಜಿಕಜಾಲತಾಣಗಳು ಮತ್ತು ಆನ್‌ಲೈನ್ ಮಾರ್ಕೆಟ್ ವೇದಿಕೆಗಳ ಮೂಲಕ ಮಾರಾಟ ಮಾಡುತ್ತಿದ್ದನು.

ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಆರೋಪಿಯಿಂದ ಸುಮಾರು 22 ಲಕ್ಷ ರು. ಮೌಲ್ಯದ ಒಟ್ಟು 37 ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಬೈಕ್‌ಗಳನ್ನು ವಿವಿಧ ಸ್ಥಳಗಳಿಂದ ಕಳ್ಳತನ ಮಾಡಲಾಗಿದ್ದು, ನಂತರ ಮಾರಾಟಕ್ಕೆ ಸಿದ್ಧಪಡಿಸಲಾಗಿತ್ತು. ತನಿಖೆಯವೇಳೆ, ಕಳ್ಳತನಕ್ಕೆ ನಕಲಿಕೀಗಳನ್ನುಬಳಸಲಾಗುತ್ತಿತ್ತುಎಂಬುದೂ ದೃಢಪಟ್ಟಿದೆ. ಪಾರ್ಕಿಂಗ್‌ನಲ್ಲಿ ನಿಲ್ಲಿಸಿದ್ದ ವಾಹನಗಳನ್ನು ಸುಲಭವಾಗಿ ಟಾರ್ಗೆಟ್ ಮಾಡಿ, ಯಾವುದೇ ಸಂಶಯಕ್ಕೆ ಆಸ್ಪದ ಕೊಡದೇ ಕಳ್ಳತನ ನಡೆಸುತ್ತಿದ್ದನು. ಆರೋಪಿಯ ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದ್ದು, ಜಯನಗರ ಪೊಲೀಸರುಮುಂದಿನತನಿಖೆಯನ್ನುಮುಂದುವರಿಸಿದ್ದಾರೆ. ಈಜಾಲದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಸಾಧ್ಯತೆ ಇರುವುದರಿಂದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅನರ್ಹ ವೈದ್ಯರು ಅನಧಿಕೃತವಾಗಿ ಚಿಕಿತ್ಸೆ | ವಿಶೇಷ ತಂಡ ರಚಿಸಿ ತಪಾಸಣೆಗೆ ಸೂಚನೆ

ನಕಲಿ ಸ್ತ್ರೀ ರೋಗ ತಜ್ಞರ ವಿರುದ್ಧ ಕ್ರಮವಹಿಸಿ

ಬೆಂಗಳೂರು: ಜಿಲ್ಲೆಯ ವಿವಿಧ ಭಾಗಗಳಲ್ಲಿ ಸ್ತ್ರೀರೋಗ ತಜ್ಞರೆಂದು ಹೇಳಿಕೊಂಡು ಅನರ್ಹ ವೈದ್ಯರು ಅನಧಿಕೃತವಾಗಿ ಚಿಕಿತ್ಸೆ ನೀಡುತ್ತಿರುವುದು ಕಂಡುಬಂದಿದೆ. ಇಂತಹ ನಕಲಿ ವೈದ್ಯರ ವಿರುದ್ಧ ಆರೋಗ್ಯ ಇಲಾಖೆ ವಿಶೇಷ ತಂಡ ರಚಿಸಿ ತಪಾಸಣೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್. ಆರ್ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಆಶಾ ಮೇಲ್ವಿಚಾರಣಾ ಹಾಗೂ ಕುಂದುಕೊರತೆ ನಿವಾರಣಾ ಸಮಿತಿ ಮತ್ತು ಎನ್‌ಪಿಪಿಸಿಎಫ್ ಕಾರ್ಯಕ್ರಮದ ಜಿಲ್ಲಾ ಮಟ್ಟದ ಮೊದಲ ತ್ರೈಮಾಸಿಕ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಗರ್ಭಿಣಿಯರು ಮತ್ತು ಬಾಣಂತಿಯರಲ್ಲಿ ಪೌಷ್ಟಿಕಾಂಶಯುಕ್ತ ಆಹಾರದ ಕೊರತೆಯಿಂದ ಶಿಶುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಆಶಾ ಕಾರ್ಯಕರ್ತರು ಮನೆಮನೆಗೆ ಭೇಟಿ ನೀಡಿ ಗರ್ಭಿಣಿಯರು ಹಾಗೂ ಬಾಣಂತಿಯರ ಆಹಾರ ಪದ್ಧತಿಗಳ ದಾಖಲಾತಿ ಮಾಡಿ ಮುಂದಿನ ಮೂರು ತಿಂಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ್ ಮೇಟಿ,

ಸಮನ್ವಯ ಸಮಿತಿ ಸಭೆಯಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯತೀಶ್.ಆರ್ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಪೋಸ್ಟರ್‌ನ್ನು ಬಿಡುಗಡೆಗೊಳಿಸಿದರು. ಈ ವೇಳೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರವೀಂದ್ರನಾಥ್ ಮೇಟಿ, ಆರ್‌ಸಿಎಚ್ ಅಧಿಕಾರಿ ಡಾ. ನದೀಂ ಅಹಮದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

> ಫ್ಲೋರೋಸಿಸ್ ನಿಯಂತ್ರಣಕ್ಕಾಗಿ ಕುಡಿಯುವ ನೀರಿನ ವಿಚಾರದಲ್ಲಿ ಅಂತರ್ಜಲದ ಮೇಲಿನ ಅವಲಂಬನೆ ಕಡಿಮೆ ಮಾಡುವ ಯೋಜನೆ ರೂಪಿಸುವ ಅಗತ್ಯವಿದೆ. ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಡೆಂಗಿ, ಮಲೇರಿಯಾ ಹಾಗೂ ಚಿಕನ್‌ಗುನ್ಯಾ ಸೇರಿದಂತೆ ಸೊಳ್ಳೆಗಳಿಂದ ಹರಡುವ ರೋಗಗಳ ಕುರಿತು ಸಾರ್ವಜನಿಕರಲ್ಲಿ ವ್ಯಾಪಕ ಜಾಗೃತಿ ಮೂಡಿಸಲು ಆದ್ಯತೆ ನೀಡಿ.
>
> **-ಯತೀಶ್.ಆರ್**, ಬೆಂಗಳೂರು ನಗರ ಜಿಪಂ ಸಿಇಒ

ರೋಗ ಹರಡುವಿಕೆ ಮೂಲದಲ್ಲೇ ತಡೆಯಲು ಪ್ರತಿ ವಾರ ಲಾರ್ವಾ ಸಮೀಕ್ಷೆ ನಡೆಸಲಾಗುತ್ತಿದೆ. ಜೂನ್ 28ರಿಂದ ಜುಲೈ 1ರವರೆಗೆ ನಡೆಯಲಿರುವ ನಾಲ್ಕು ದಿನಗಳ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನ ಯಶಸ್ವಿಗೊಳಿಸಲು ಶಾಲಾ ಶಿಕ್ಷಕರು, ಮುಖ್ಯಸ್ಥರು ಹಾಗೂ ಪೋಷಕರಲ್ಲಿ ಜಾಗೃತಿ ಮೂಡಿಸುವಂತೆ ನಿರ್ದೇಶನ ನೀಡಲಾಗಿದೆ. ಕಳೆದ ವರ್ಷಕ್ಕಿಂತ ಹೆಚ್ಚಿನ ಮಕ್ಕಳಿಗೆ ಲಸಿಕೆ ತಲುಪುವಂತೆ ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು. ಸಭೆಯಲ್ಲಿ ಆರ್‌ಸಿಎಚ್ ಅಧಿಕಾರಿ ಡಾ. ನದೀಂ ಅಹಮದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂವಿಧಾನಬಾಹಿರ ಎಂದು ಘೋಷಣೆಗೆ ಅರ್ಜಿ | 50 ಸಾವಿರ ದಂಡ

ಸಿಎಂ ಶಿವಕುಮಾರ್, ಮಂತ್ರಿ ಮಂಡಲ ರಚನೆ ಪ್ರಶ್ನಿಸಿದ್ದ ಪಿಐಎಲ್ ವಜಾ, ದಂಡ

ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಅವರ ನೇತೃತ್ವದ 14 ಮಂದಿ ಸಚಿವರ ಪ್ರಮಾಣ ವಚನ ಸ್ವೀಕಾರ ಹಾಗೂ ಮಂತ್ರಿಮಂಡಲದ ರಚನೆ ಸಂವಿಧಾನಬಾಹಿರ ಎಂದು



ಘೋಷಿಸುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದ ವ್ಯಕ್ತಿಗೆ ಹೈಕೋರ್ಟ್ ಬರೋಬ್ಬರಿ 50 ಸಾವಿರ ರು. ದಂಡ ವಿಧಿಸಿದೆ.

ಈ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ 13 ಮಂದಿ ನೂತನ ಸಚಿವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಹುಬ್ಬಳ್ಳಿಯ ನಿವಾಸಿ ಮಂಗಳಪ್ಪ ಹುಲಿಕೇರಿ ಎಂಬುವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ .ಎಸ್.ಹೇಮಲೇಖಾ ಅವರ ವಿಭಾಗೀಯ ಪೀಠ ವಜಾಗೊಳಿಸಿದೆ.

ಮುಖ್ಯಮಂತ್ರಿ ಸೇರಿ 13 ಮಂದಿ ಸಚಿವರು ಜೂನ್ 3ರಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದು, ಆ ಮೂಲಕ 14 ಮಂದಿ ಸಚಿವರ ಮಂತ್ರಿ ಮಂಡಲ ರಚನೆಯಾಗಿದೆ. ಆದರೆ, ಕರ್ನಾಟಕದ ವಿಧಾನಸಭೆಯ ಸಂಖ್ಯಾಬಲ 224 ಆಗಿದ್ದು, ಅದರಂತೆ ಸಂವಿಧಾನದ 1 64 (1ಎ)ನೇ ವಿಧಿಯ ಪ್ರಕಾರ ಕರ್ನಾಟಕದ ಸಚಿವ ಸಂಪುಟದ ಗಾತ್ರ ಶೇ. 12 ರಿಂದ 15 ಅಂದರೆ ಕನಿಷ್ಠ 24 ಅಥವಾ ಗರಿಷ್ಠ 34 ಇರಬೇಕು. ಅಷ್ಟೇ ಸಂಖ್ಯೆ ಸಚಿವರ ಪ್ರಮಾಣ ವಚನ ಸ್ವೀಕರಿಸಿ, ಮಂತ್ರಿ ಮಂಡಲ ರಚನೆಯಾಗಬೇಕು. ಆದರೆ, ಜೂನ್ 3ರಂದು 14 ಮಂದಿಯ ಮಂತ್ರಿಮಂಡಲ ರಚನೆಯಾಗಿದೆ. ಇದು ಸಂವಿಧಾನಬಾಹಿರ. ಹೀಗಾಗಿ, ಮಂತ್ರಿಮಂಡಲವನ್ನು ರದ್ದುಪಡಿಸಬೇಕು. ಅರ್ಜಿ ಇತ್ಯರ್ಥ ಆಗುವ ತನಕ ಮಂತ್ರಿಮಂಡಲದ ಕಾರ್ಯನಿರ್ವಹಿಸದಂತೆ ಮತ್ತು ಯಾವುದೇ ನಿರ್ಣಯಗಳನ್ನು ಕೈಗೊಳ್ಳದಂತೆ ನಿರ್ದೇಶನ ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಪ್ರಚಾರಕ್ಕಾಗಿ ಸಲ್ಲಿಸಿದ ಅರ್ಜಿ: ಪೀಠ ಅಭಿಪ್ರಾಯ

ಕೆಲ ಕಾಲ ವಾದ ಆಲಿಸಿದ ಪೀಠವು ಇದೊಂದು ಊಹೆ ಮತ್ತು ಗ್ರಹಿಕೆಗಳ ಆಧಾರದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸಲ್ಲಿಸಲಾಗಿರುವ ಕ್ಷುಲ್ಲಕ ಅರ್ಜಿಯಾಗಿದೆ. ಇಂತಹ ಅರ್ಜಿ ಸಲ್ಲಿಸುವ ಮೂಲಕ ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ ಎಂದು ಹೇಳಿ ಅರ್ಜಿದಾರರಿಗೆ 50 ಸಾವಿರ ರು. ದಂಡ ವಿಧಿಸಿ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು. ದಂಡದ ಮೊತ್ತವನ್ನು ಎರಡು ವಾರಗಳಲ್ಲಿ ಕಾನೂನು ಸೇವಾ ಪ್ರಾಧಿಕಾರಕ್ಕೆ ಪಾವತಿಸಬೇಕು ಎಂದು ನಿರ್ದೇಶನ ನೀಡಿತು. ಈ ಮಧ್ಯೆ, ಅರ್ಜಿಯನ್ನು ವಾಪಸ್ ಪಡೆದುಕೊಳ್ಳಲಾಗುವುದು ಎಂದು ವಕೀಲರು ಪದೇ ಪದೇ ಮನವಿ ಮಾಡಿಕೊಂಡರು. ಆದರೆ, ಅದನ್ನು ಪೀಠ ತಳ್ಳಿ ಹಾಕಿತು.

ವಕೀಲರ ವಿರುದ್ಧ ಕ್ರಿಮಿನಲ್ ಕೇಸ್: ಹೈ ಕಳವಳ

ಬೆಂಗಳೂರು: ದಾವೆದಾರರನ್ನು ಪ್ರತಿನಿಧಿಸುವ ವಕೀಲರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಯನ್ನು ಕಿರುಕುಳದ ಅಸ್ತ್ರವಾಗಿ ಬಳಸುತ್ತಿರು ವುದು ಹೆಚ್ಚುತ್ತಿದೆ ಎಂದು ಹೈಕೋರ್ಟ್ ಈಚೆಗೆ ಕಳವಳ ವ್ಯಕ್ತಪಡಿಸಿದೆ.

ಬೆಂಗಳೂರಿನ ನಾಗರಬಾವಿ ಗ್ರಾಮದ ಸರ್ವೆ ನಂಬರ್ 25/2ರಲ್ಲಿ 5.20 ಎಕರೆ ಜಮೀನಿನ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಪಕ್ಷಗಾರರನ್ನು ಪ್ರತಿನಿಧಿಸುವ ವಕೀಲ ರಾಜೇಂದ್ರ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದತಿ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಪುರಸ್ಕರಿಸಿದೆ.

ಸುಳ್ಳು ಪ್ರಕರಣ ದಾಖಲು ಪ್ರವೃತ್ತಿಯು ವಕೀಲರ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಬಲ್ಲದು. ಅಗಾಧವಾದ ಅಪರಾಧವನ್ನು ಬಹಿರಂಗಪಡಿಸದ ಹೊರತು ಹಕ್ಕು ಪತ್ರಗಳು, ಕಂದಾಯ ನಮೂದುಗಳು, ವಕೀಲರ ಅಧಿಕಾರ ಅಥವಾ ಮಾರಾಟ ಪತ್ರಗಳಿಗೆ ಸಂಬಂಧಿಸಿದ ವಿವಾದಗಳಿಗೆ ಸಂಬಂಧಿಸಿದ ತನಿಖೆಯಲ್ಲಿ ಪ್ರಾಸಿಕ್ಯೂಷನ್ ಸಂಯಮದಿಂದ ಮುಂದಡಿ ಇರಿಸಬೇಕು. ಪ್ರತಿಯೊಬ್ಬ ವಕೀಲರೂ ಕೇವಲ ದಾವೆದಾರರ ಪರವಾಗಿ ಹಾಜರಾಗುತ್ತಾರೆ. ಅವರ ಮನೋಬಲ ಕುಂದಿಸಲು ಅತೃಪ್ತ ದಾವೆದಾರರು ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಮತ್ತು ದಾಖಲಿಸಿ ತನಿಖಾ ಪ್ರಕ್ರಿಯೆಗೆ ಒಳಪಡಿಸಿದರೆ ಅದು ವೃತ್ತಿಪರ ಜವಾಬ್ದಾರಿಗಳ ನಿರ್ಭೀತ ನಿರ್ವಹಣೆಯ ಮೇಲೆ ಗಾಢವಾದ ಪಾರ್ಶ್ವವಾಯು ಪರಿಣಾಮ ಬೀರುತ್ತದೆ ಎಂದು ಪೀಠ ಹೇಳಿದೆ. ಅಗಾಧವಾದ ಅಪರಾಧವನ್ನು ಬಹಿರಂಗಪಡಿಸದ ಹೊರತು, ಹಕ್ಕು ಪತ್ರಗಳು, ಕಂದಾಯ ನಮೂದುಗಳು, ವಕೀಲರ ಅಧಿಕಾರ ಅಥವಾ ಮಾರಾಟ ಪತ್ರಗಳಿಗೆ ಸಂಬಂಧಿಸಿದ ವಿವಾದಗಳಿಗೆ ಸಂಬಂಧಿಸಿದ ತನಿಖೆಯಲ್ಲಿ ಪ್ರಾಸಿಕ್ಯೂಷನ್ ಸಂಯಮದಿಂದ ಮುಂದಡಿ ಇರಿಸಬೇಕು ಎಂದು ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಿದೆ. ಪ್ರಾಸಿಕ್ಯೂಷನ್ ಪರ ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎನ್ ಜಗದೀಶ್ ವಾದಿಸಿದ್ದರು.

ರಾಜಾಜಿನಗರದಲ್ಲಿ ಕಾಮಗಾರಿಗಳಿಗೆ ವೇಗ ನೀಡಿ

ಬೆಂಗಳೂರು: ರಾಜಾಜಿನಗರ ಕ್ಷೇತ್ರದ ವ್ಯಾಪ್ತಿಯ ವಾರ್ಡ್‌ಗಳಲ್ಲಿ ನಾಗರಿಕ ಸಮಸ್ಯೆಗಳ ಪರಿಹಾರ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆಗಾಗಿ ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ರಾಜೇಂದ್ರ ಕೆ.ವಿ. ಹಾಗೂ ಶಾಸಕ ಎಸ್. ಸುರೇಶ್ ಕುಮಾರ್ ನೇತೃತ್ವದಲ್ಲಿ ಮಂಗಳವಾರ ಸಭೆ ಆಯೋಜಿಸಲಾಗಿತ್ತು.

ಸಭೆಯಲ್ಲಿ ಶಾಸಕ ಎಸ್.ಸುರೇಶ್ ಕುಮಾರ್ ಮಾತನಾಡಿ, ಶ್ರೀರಾಮಪುರದಲ್ಲಿರುವ ಅಂಬೇಡ್ಕರ್ ಡೇ ಕೇರ್ ಸೆಂಟರ್‌ನಲ್ಲಿ ಪ್ರಯೋಗಾಲಯ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ. ಅಲ್ಲದೆ ಪ್ರಕಾಶ ನಗರದ ಮರಿಯಪ್ಪನಪಾಳ್ಯದಲ್ಲಿನ ನೆಫ್ರೋ ಪ್ಲಸ್ ಡಯಾಲಿಸಿಸ್ ಕೇಂದ್ರದ ಬಾಕಿ ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಆರೋಗ್ಯಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು. ಸುರಕ್ಷಿತ ಶಾಲೆಗಳ ಪರಿಕಲ್ಪನೆಗೆ ಅನುಗುಣವಾಗಿ ಶಾಲೆಗಳ ಸುತ್ತಮುತ್ತ ಪಾದಚಾರಿ ಮಾರ್ಗ ಅಭಿವೃದ್ಧಿಪಡಿಸಿ ಮಕ್ಕಳಿಗೆ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸುವ ಸಂಬಂಧ ಶಾಲಾ ಆಡಳಿತ ಮಂಡಳಿಗಳೊಂದಿಗೆ ಸಭೆ ನಡೆಸಬೇಕು. ನಗರದ ಸ್ವಚ್ಛತೆ ಹಾಗೂ ತ್ಯಾಜ್ಯ ನಿರ್ವಹಣೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ವಾರ್ಡ್ ಮಟ್ಟದಲ್ಲಿ ಆರೋಗ್ಯ ಪರಿವೀಕ್ಷಕರು, ಎಂಜಿನಿಯರ್‌ಗಳು ಹಾಗೂ ಮಾರ್ಷಲ್‌ಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಬ್ಲ್ಯಾಕ್ ಸ್ಪಾಟ್‌ಗಳ ನಿವಾರಣೆ ಹಾಗೂ ಪೌರಕಾರ್ಮಿಕರ ಮೇಲ್ವಿಚಾರಣೆ ನಡೆಸಬೇಕು ಎಂದರು.

ಪ್ರಗತಿ ಪರಿಶೀಲನೆ ಸಭೆಯಲ್ಲಿ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ, ಕೆ.ವಿ, ಶಾಸಕ ಎಸ್. ಸುರೇಶ್ ಕುಮಾರ್, ಜಂಟಿ ಆಯುಕ್ತ ಸಂಗಪ್ಪ ಸೇರಿದಂತೆ ಇನ್ನಿತರರು ಇದ್ದರು.

PUBLIC NOTICE

I **Sri.Balaraj** Aged about 30 years, S/o.Lakshmikanth residing at Tumkur Main Road, Nandishwara Layout, Madavara Dasanapaura Hobli, Bangalore North - 562 123 during the transit of the documents from the bank to the house I lost the register cancellation of sale agreement dated 9th Aug 2021 bearing document no DSP-1-03174-2021-22 consisting of 11 pages & stored in CD DSPD820 executed by Gangahanumaiah in favour of Gangamma & Nagrathna Mangalamma & Manjula.
2-Registered sale agreement dated 17th march 2020 bearing document no MDL-1-07048-2019-20 consisting of 10 pages stored in CD MDLD543 excuted by Gangamma Nagarathna mangalamma & Manjula in favour of Gangahanumaiah.

3 ಪ್ರತ್ಯೇಕ ಪ್ರಕರಣಗಳಲ್ಲಿ ಹೈಡ್ರೋ ಗಾಂಜಾ, ಕೊಕೇನ್ ವಶಪಡಿಸಿಕೊಂಡ ಪೊಲೀಸರು

5.67 ಕೋಟಿ ರು. ಮೌಲ್ಯದ ಮಾದಕ ವಸ್ತುಗಳ ಜಪ್ತಿ

ಬೆಂಗಳೂರು: ನಗರದಲ್ಲಿ ಮಾದಕ ದ್ರವ್ಯ ಜಾಲದ ವಿರುದ್ಧ ಪೊಲೀಸರು ಹಾಗೂ ಕಸ್ಟಮ್ಸ್ ಅಧಿಕಾರಿಗಳು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 5.67 ಕೋಟಿ ರು.ಗೂ ಅಧಿಕ ಮೌಲ್ಯದ ಹೈಡ್ರೋ ಗಾಂಜಾ ಮತ್ತು ಕೊಕೇನ್ ಜಪ್ತಿ ಮಾಡಿದ್ದಾರೆ. ಅಂತಾರಾಷ್ಟ್ರೀಯ ಮತ್ತು ಅಂತರರಾಜ್ಯ ಡ್ರಗ್ಸ್ ಡೀಲಿಂಗ್‌ನಲ್ಲಿ ತೊಡಗಿದ್ದ ಉಗಾಂಡಾ ಮೂಲದ ಮಹಿಳಾ ಪೆಡ್ಲರ್ ಸೇರಿದಂತೆ ಮೂವರನ್ನು ಬಂಧಿಸಲಾಗಿದೆ.

ನಗರದ ಹೆಬ್ಬಾಳ ಠಾಣೆ ಪೊಲೀಸರು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ, ಹೈಡ್ರೋ ಗಾಂಜಾ ಡೀಲಿಂಗ್‌ನಲ್ಲಿ ನಿರತನಾಗಿದ್ದ ಹಳೆ ಆರೋಪಿ ಇಮ್ರಾನ್ ಪಾಷಾ ಎಂಬಾತನನ್ನು ಬಂಧಿಸಿದ್ದಾರೆ. ಬಂಧಿತನಿಂದ 2.20 ಕೋಟಿ ರು. ಮೌಲ್ಯದ 3 ಕೆಜಿ 180 ಗ್ರಾಂ ತೂಕದ ಹೈಡ್ರೋ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಆರೋಪಿ ಇಮ್ರಾನ್ ಈ ಮಾದಕ ವಸ್ತುವನ್ನು ಮಹಾರಾಷ್ಟ್ರದ ನಾಸಿಕ್ನಿಂದ ಬೆಂಗಳೂರಿಗೆ ತರುತ್ತಿದ್ದ ಎನ್ನಲಾಗಿದ್ದು, ಈತನ ಮೇಲೆ ಈಗಾಗಲೇ ನಗರದ ಬೇರೆ ಬೇರೆ ಪೊಲೀಸ್ ಸ್ಟೇಷನ್‌ಗಳಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ.

ಉಗಾಂಡಾ ಮೂಲದ ಮಹಿಳಾ ಪೆಡ್ಲರ್

ಮತ್ತೊಂದು ಪ್ರಮುಖ ಕಾರ್ಯಾಚರಣೆಯಲ್ಲಿ ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ಚಿಕ್ಕಬಾಣಾವರದಲ್ಲಿ ದಾಳಿ ನಡೆಸಿ 70.50 ಲಕ್ಷ ರು. ಮೌಲ್ಯದ 130 ಗ್ರಾಂ ಕೊಕೇನ್ ಜಪ್ತಿ ಮಾಡಿದ್ದಾರೆ. ಉಗಾಂಡಾ ಮೂಲದ ಮಹಿಳಾ ಡ್ರಗ್ ಪೆಡ್ಲರ್ ಜನತ್ ಮತ್ತು ಡ್ರಗ್ಸ್ ರಿಸೀವರ್ ವಾಹಬ್ ಎಲ್ವಿಸ್ ಯುನಿಸ್ ಎಂಬಿಬ್ಬರನ್ನು ಬಂಧಿಸಲಾಗಿದೆ. ಆರೋಪಿ ವಾಹಬ್ ಯಶವಂತಪುರ ಮತ್ತು ಗೊರಗುಂಟೆಪಾಳ್ಯ ಸುತ್ತಮುತ್ತ ಡ್ರಗ್ಸ್ ಡೀಲಿಂಗ್ ಮಾಡುತ್ತಿದ್ದ. ಬಂಧಿತ ಮಹಿಳೆ ಜನತ್ ಬಿಸಿನೆಸ್ ವೀಸಾದಲ್ಲಿ ಭಾರತಕ್ಕೆ ಬಂದು ಪೆಡ್ಲಿಂಗ್ ದಂಧೆ ಆರಂಭಿಸಿದ್ದಳು. ಈಕೆ ಈ ಹಿಂದೆ ದೆಹಲಿಯಲ್ಲೂ ಡ್ರಗ್ಸ್ ಪ್ರಕರಣದಲ್ಲಿ ಸಿಕ್ಕಿಬಿದ್ದು 5 ವರ್ಷ ಜೈಲು ಶಿಕ್ಷೆ ಅನುಭವಿಸಿದ್ದಳು ಎಂಬುದು ಬೆಳಕಿಗೆ ಬಂದಿದೆ.

ಎಂಎಸ್‌ಆರ್ ಅಕಾಡೆಮಿಯಿಂದ ಸಂಗೀತ ಶಿಕ್ಷಣ

ಬೆಂಗಳೂರು: ಎಂಎಸ್‌ಆರ್ ಅಕಾಡೆಮಿಯಾ ವತಿಯಿಂದ ಆಯೋಜಿಸಲಾದ ವಿಶೇಷ ಫ್ಯಾಷನ್, ಸಂಗೀತ ಮತ್ತು ನೆಟ್ವರ್ಕಿಂಗ್ ಸಂಜೆಯು ಯಶಸ್ವಿಯಾಗಿ ನಡೆಯಿತು.

ಈ ಕಾರ್ಯಕ್ರಮದಲ್ಲಿ ಉದ್ಯಮದ ನಾಯಕರು, ಸೃಜನಾತ್ಮಕ ವೃತ್ತಿಪರರು, ಫ್ಯಾಷನ್ ಪ್ರೇಮಿಗಳು ಹಾಗೂ ಭವಿಷ್ಯದ ವಿನ್ಯಾಸಕರನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ಸೃಜನಶೀಲತೆ, ಸಮಕಾಲೀನ ಶೈಲಿ ಮತ್ತು ವಿನ್ಯಾಸ ನವೋದ್ಯಮದ ಸಂಗಮವನ್ನು ಸಂಭ್ರಮಿಸಲಾಯಿತು. ಇದೇ ವೇಳೆ ಫ್ಯಾಷನ್ ಮತ್ತು ಡಿಸೈನ್ ಶಿಕ್ಷಣದ ಭವಿಷ್ಯದ ಕುರಿತಾಗಿ ಸಂಸ್ಥೆಯ ಮಹತ್ವಾಕಾಂಕ್ಷಿ ದೃಷ್ಟಿಕೋನವನ್ನು ಅತಿಥಿಗಳಿಗೆ ಪರಿಚಯಿಸಲಾಯಿತು. ಕಾರ್ಯಕ್ರಮದಲ್ಲಿ ಎಂಎಸ್‌ಆರ್ ಅಕಾಡೆಮಿಯಾದ ಸಂಸ್ಥಾಪಕಿ ಲಕ್ಷ್ಮಿ ರಾಮಯ್ಯ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಅರ್ಥಪೂರ್ಣ ಸಂವಾದಗಳು, ಉತ್ಸಾಹ ಭರಿತ ನೆಟ್ವರ್ಕಿಂಗ್ ಅವಕಾಶಗಳು, ಸಂಗೀತದ ಮನರಂಜನೆ ಹಾಗೂ ಫ್ಯಾಷನ್, ಸೃಜನಶೀಲತೆ, ಐಷಾರಾಮಿ ಕೈಗಾರಿಕೆ ಮತ್ತು ವಿನ್ಯಾಸ ನಾಯಕತ್ವ ಕ್ಷೇತ್ರಗಳಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಚರ್ಚೆಗಳು ನಡೆಯಿತು. ಭಾಗವಹಿಸಿದವರು ಹೊಸ ಸಹಭಾಗಿತ್ವದ ಅವಕಾಶಗಳನ್ನು ಅನ್ವೇಷಿಸಿ, ಸೃಜನಾತ್ಮಕ ಪ್ರತಿಭೆಗಳ ಭವಿಷ್ಯ ರೂಪಿಸುವ ಗುರಿಯನ್ನು ಹೊಂದಿರುವ ಸಮಾನ ಮನಸ್ಕರೊಂದಿಗೆ ಸಂಪರ್ಕ ಬೆಳೆಸಿದರು. ಇಟಲಿಯ ಪ್ರಸಿದ್ಧ ಇಸ್ಟಿಟುಟೊ ಡಿ ಮೋಡಾ ಬರ್ಗೋ ಸಂಸ್ಥೆಯೊಂದಿಗೆ ಎಂಎಸ್‌ಆರ್ ಅಕಾಡೆಮಿಯಾದ ಅಂತಾರಾಷ್ಟ್ರೀಯ ಶೈಕ್ಷಣಿಕ ಸಹಭಾಗಿತ್ವ ಪರಿಚಯಿಸಲಾಯಿತು. ಈ ಸಹಭಾಗಿತ್ವದ ಮೂಲಕ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಮಾನ್ಯತೆ ಪಡೆದ ಪಠ್ಯಕ್ರಮ ಮತ್ತು ಯುರೋಪಿಯನ್ ಫ್ಯಾಷನ್ ಶಿಕ್ಷಣ ವಿಧಾನಗಳ ಲಾಭ ಪಡೆಯಲಿದ್ದಾರೆ. ಅಲ್ಲದೆ, ಲಂಡನ್, ಮಿಲಾನ್, ಪ್ಯಾರಿಸ್ ಹಾಗೂ ಬಾರ್ಸಿಲೋನಾ ನಗರಗಳಲ್ಲಿ ನಡೆಯುವ ವಿಶೇಷ ಯುರೋಪಿಯನ್ ಸ್ಟಡಿ ಟೂರ್‌ನಲ್ಲಿ ಭಾಗವಹಿಸುವ ಅವಕಾಶವೂ ವಿದ್ಯಾರ್ಥಿಗಳಿಗೆ ಲಭ್ಯವಿದ್ದು, ವಿಶ್ವಪ್ರಸಿದ್ಧ ಫ್ಯಾಷನ್ ಹೌಸ್‌ಗಳು, ವಸ್ತುಸಂಗ್ರಹಾಲಯಗಳು, ವಿನ್ಯಾಸ ಸಂಸ್ಥೆಗಳು ಹಾಗೂ ಹೌಟ್ ಕೌಟ್ಯೂರ್ ಸ್ಟುಡಿಯೊಗಳಿಗೆ ಭೇಟಿ ನೀಡುವ ಅವಕಾಶವನ್ನು ಒದಗಿಸುತ್ತದೆ.

ಮಾನ್ಯ ಗೌರವಾನ್ವಿತ 1ನೇ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 305 /2026

ಅರ್ಜಿದಾರರು: 1) ಶ್ರೀಮತಿ ಚಂದ್ರಮ್ಮ ಕೋಂ ರಾಮೇಗೌಡ ಬಿನ್ ಲೇಟ್ ನರಸಿಂಗೇಗೌಡ ತಾಯಿ ಲೇಟ್ ಕೆಂಪಮ್ಮ ಮತ್ತು ಇತರರು ವಯಸ್ಸು 51 ವರ್ಷ ½ 18 ಮೇನ್, 19 ಕ್ರಾಸ್, ಎಸ್.ಎಮ್.ಎಸ್ ಲೇಔಟ್ ಜೆ.ಪಿ ನಗರ್, 5 ಪೇಸ್, ಬೆಂಗಳೂರು ದಕ್ಷಿಣ ಜಿಲ್ಲೆ. ಕರ್ನಾಟಕ 560078

ವಿರುದ್ಧ

ಎದುರುದಾರರು: 1) ತಹಶೀಲ್ದಾರ್, ಜನನ ಮತ್ತು ಮರಣ ನೋಂದಣಿ ವಿಭಾಗ, ಕನಕಪುರ, ಕನಕಪುರ ತಾಲ್ಲೂಕು, 2) ಗ್ರಾಮಾ ಲೆಕ್ಕಿಗಾ ಆಲಗಡಕಲು ಗ್ರಾಮ, ಕೊಳಗೊಂಡನಹಳ್ಳಿ ಪೋಸ್ಟ್ ಕೋಡಿಹಳ್ಳಿ ಹೋಬಳಿ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರುಗಳು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರ-ರಿಗೆ ತಾಯಿಯೂ ಆದ ಲೇಟ್ ಕೆಂಪಮ್ಮ ಕೊಂ ಲೇಟ್ ನರಸಿಂಗೇಗೌಡ ರವರು ದಿನಾಂಕ: 15-06-1993 ರಂದು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೊಳಗೊಂಡನಹಳ್ಳಿ ಅಂಚೆ, ಆಲಗಡಕಲು ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ, ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದ್ದಾದರೂ ತಕರಾರು ಇದ್ದು ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿ ಪಡಿಸಿದ ದಿನಾಂಕದಂದು ಅಂದರೆ, 19-8-2026ರ ಬೆಳಿಗ್ಗೆ ಸರಿಯಾಗಿ 11 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರದಾದರು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯಥ-ರ್ಗೊಳಿಸಲಾಗುವುದು.

ದಿನಾಂಕ 09.06.2026 ರಂದು ಸ್ವ-ಅಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಕಿರಿಯ ಸಿವಿಲ್ ನ್ಯಾಯಾಧೀಶರು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ವಿ. ಪಿ. ಗೋಪಾಲ, ವಕೀಲರು
ಸ್ಥಳ : ಕನಕಪುರ**

ಕೆ ಮೋಹನ್ & ಕಂಪನಿ (ಎಕ್ಸ್‌ಪೋರ್ಟ್ಸ್) ಪ್ರೈವೇಟ್ ಲಿಮಿಟೆಡ್
ಸಿಐಎನ್: U18101KA2004PTCO33743
ನೋಂದಾಯಿತ ಕಚೇರಿ: ನಂ. 372, 1ನೇ ಮಹಡಿ, ಕ್ಯಾಬಿನ್ ನಂ. 106, ಡಬ್ಲ್ಯೂಎಸ್ ನಂ.6, 6ನೇ ಕ್ರಾಸ್, ಗೋಲ್ಡನ್ ಸ್ಕ್ವೇರ್, ವಿಲ್ಸನ್ ಗಾರ್ಡನ್, ಬೆಂಗಳೂರು-560027
ದೂ.ಸಂ: 9901788014 | ಇಮೇಲ್: prm@kmohan.com

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠದ ಮುಂದೆ ಪಾವತಿಸಿದ ಈಕ್ವಿಟಿ ಷೇರು ಬಂಡವಾಳ ಕಡಿತದ ಸೂಚನೆ
ಕಂಪನಿ ಅರ್ಜಿ ಸಂಖ್ಯೆ: 77/ಬಿಬಿ/2025
ಕಂಪನೀಸ್ ಆಕ್ಟ್, 2013 ರ ಸೆಕ್ಷನ್ 66 ಮತ್ತು ಅಡಿಯಲ್ಲಿ ರೂಪಿಸಲಾದ ನಿಯಮಗಳ ವಿಷಯದಲ್ಲಿ

ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ('ಎನ್‌ಸಿಎಲ್‌ಟಿ'), ಬೆಂಗಳೂರು ಪೀಠವು ದಿನಾಂಕ ಜೂನ್ 04, 2026 ರ ತನ್ನ ಆದೇಶದ ಮೂಲಕ, ಕೆಳಗೆ ನಿರ್ದಿಷ್ಟಪಡಿಸಿದ ನಡಾವಳಿಗಳನ್ನು ಅನುಮೋದಿಸುವ ಮೂಲಕ ಕಂಪನಿಯ 'ಷೇರು ಬಂಡವಾಳ ಕಡಿತ' ಯೋಜನೆಯನ್ನು ಅನುಮೋದಿಸಿದೆ:
"ಕೆ ಮೋಹನ್ ಅಂಡ್ ಕಂಪನಿ (ಎಕ್ಸ್‌ಪೋರ್ಟ್ಸ್) ಪ್ರೈವೇಟ್ ಲಿಮಿಟೆಡ್‌ನ ಪಾವತಿಸಿದ ಷೇರು ಬಂಡವಾಳವು ಇನ್ನು ಮುಂದೆ ರೂ. 1,00,000/- (ರೂಪಾಯಿ ಒಂದು ಲಕ್ಷ ಮಾತ್ರ) ಆಗಿದ್ದು, ತಲಾ ರೂ.10/- (ರೂಪಾಯಿ ಹತ್ತು ಮಾತ್ರ) ಮೌಲ್ಯದ 10,000/- (ಹತ್ತು ಸಾವಿರ) ಈಕ್ವಿಟಿ ಷೇರುಗಳನ್ನು ಒಳಗೊಂಡಿದ್ದು, ತಲಾ ರೂ.10/- (ರೂಪಾಯಿ ಹತ್ತು ಮಾತ್ರ) ಮೌಲ್ಯದ 2,20,00,000 (ಎರಡು ಕೋಟಿ ಇಪ್ಪತ್ತು ಲಕ್ಷ) ಈಕ್ವಿಟಿ ಷೇರುಗಳನ್ನು ಒಳಗೊಂಡ ರೂ. 22,00,00,000/- (ರೂಪಾಯಿ ಇಪ್ಪತ್ತೆರಡು ಕೋಟಿ ಮಾತ್ರ) ದಿಂದ ಕಡಿತಗೊಳಿಸಲಾಗಿದ್ದು, ಸಂಪೂರ್ಣ ಪಾವತಿಯಾಗಿದೆ".
ಗೌರವಾನ್ವಿತ ಎನ್‌ಸಿಎಲ್‌ಟಿಯ ದಿನಾಂಕ ಜೂನ್ 04, 2026 ರ ಆದೇಶದ ನಿರ್ದೇಶನದಂತೆ ಈ ಜಾಹೀರಾತನ್ನು ಪ್ರಕಟಿಸಲಾಗುತ್ತಿದೆ.
ಮುಂದುವರಿದು, ಹೇಳಲಾದ ಆದೇಶದ ಪ್ರಮಾಣೀಕೃತ ಪ್ರತಿಯನ್ನು ಕಂಪನಿಯು ದಿನಾಂಕ ಜೂನ್ 15, 2026 ರಂದು ಇ-ನಮೂನೆ-28 ಮೂಲಕ ಬೆಂಗಳೂರಿನ ಕಂಪನಿಗಳ ನೋಂದಣಾಧಿಕಾರಿಯ ಬಳಿ ಸಲ್ಲಿಸಲಾಗಿದೆ.

**ಕೆ ಮೋಹನ್ ಅಂಡ್ ಕಂಪನಿ (ಎಕ್ಸ್‌ಪೋರ್ಟ್ಸ್) ಪ್ರೈವೇಟ್ ಲಿಮಿಟೆಡ್ ಪರವಾಗಿ
(ಪೂಜಾ ರಾಜು ಮಹ್ತಾನಿ)
ವ್ಯವಸ್ಥಾಪಕ ನಿರ್ದೇಶಕರು
ಡಿಐಎನ್: 00152968
ದಿನಾಂಕ : ಜೂನ್ 16, 2026
ಸ್ಥಳ : ಬೆಂಗಳೂರು**

ನಸೀರ್ ಅಹ್ಮದ್ ವಿರುದ್ಧ ಕ್ರಮಕ್ಕೆ ಬಿಜೆಪಿ ಆಗ್ರಹ

ಬೆಂಗಳೂರು: ಗ್ಯಾರಂಟಿ ಅನುಷ್ಠಾನ ಸಮಿತಿಗೆ 3 ವರ್ಷದಲ್ಲಿ ಸುಮಾರು 100 ಕೋಟಿ ಸರಕಾರ ಖರ್ಚು ಮಾಡಿದೆ. ಆದರೆ, ಈ ಸಮಿತಿ ಸಮರ್ಪಕವಾಗಿ ಕೆಲಸ ಮಾಡಿಲ್ಲ ಎಂಬುದಕ್ಕೆ ಸರಕಾರವು ಗೃಹಲಕ್ಷ್ಮೀ ಯೋಜನೆಯಡಿ 3ರಿಂದ 4 ಲಕ್ಷ ಅನರ್ಹರು, ಅಪಾತ್ರರ ಹೆಸರನ್ನು ತೆಗೆದುಹಾಕಲು ಮುಂದಾದುದೇ ಇದಕ್ಕೆ ಉದಾಹರಣೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಸ್. ಪ್ರಕಾಶ್ ಟೀಕಿಸಿದ್ದಾರೆ.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅನುಷ್ಠಾನ ಸಮಿತಿಯ ಪದಾಧಿಕಾರಿಗಳಿಗೆ ಸಂಪುಟ ದರ್ಜೆ ಸ್ಥಾನಮಾನ ಕೊಡಲಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ನೇಮಕಾತಿ ಮಾಡಿ ಸಂಬಳ, ಪ್ರವಾಸ ಭತ್ಯೆ ನೀಡಿ ಸಮೃದ್ಧಿಯಾಗಿ ಪೋಷಿಸಲಾಗುತ್ತಿದೆ . ಈ ಸಮಿತಿಗೆ ವಾರ್ಷಿಕವಾಗಿ 35 ಕೋಟಿ ಖರ್ಚಾಗಿದೆ ಎಂದರು.

ವಿಧಾನಪರಿಷತ್ ಸದಸ್ಯ ನಸೀರ್ ಅಹ್ಮದ್ ಅವರು ದಿವಾಳಿ ಎಂದು ಘೋಷಿಸಿಕೊಂಡಿದ್ದಾರೆ. ಈ ದಿವಾಳಿ ಪ್ರಕ್ರಿಯೆ ಇತ್ತೀಚಿಗೆ ಆರಂಭವಾಗಿಲ್ಲ, ಇವರು 21 ಟೆಕ್ಸ್‌ಟೈಲ್ಸ್ ಕಂಪೆನಿ ಹೊಂದಿದ್ದು, ಸಿಬ್ಬಂದಿಗೆ ಸಂಬಳ, ಇಎಸ್‌ಐ, ಪಿಎಫ್ ಹಣ ಪಾವತಿಸಿಲ್ಲ. ಇಂಥ ವ್ಯಕ್ತಿಯನ್ನು ಮುಖ್ಯಮಂತ್ರಿಗಳಿಗೆ ಸಲಹೆಗಾರರಾಗಿ ಇಟ್ಟುಕೊಂಡಿದ್ದರು. ದಿವಾಳಿ ಘೋಷಣೆ ಹೇಗೆ? ಬ್ಯಾಂಕ್‌ಗಳಿಗೆ , ನೌಕರರಿಗೆ ಹೇಗೆ ಟೋಪಿ ಇಡಬೇಕು? ಎಂಬುದಕ್ಕಾಗಿ ಇವರನ್ನು ಸಲಹೆಗಾರರನ್ನಾಗಿ ಇಟ್ಟುಕೊಂಡಿದ್ದರೇ ಎಂದು ಪ್ರಶ್ನಿಸಿದರು. ಅಲ್ಲದೆ ಇವರು ಪಕ್ಷಕ್ಕೂ ಮೋಸ ಮಾಡಿದವರು. ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಕೆಲಸ ಮಾಡಿದ್ದರೆಂದು ಪಕ್ಷದಿಂದ ಉಚ್ಚಾಟಿಸಲಾಗಿದೆ. 1,500 ಕೋಟಿ ಬ್ಯಾಂಕ್ ಹಣ ನುಂಗಿ ನೀರು ಕುಡಿದ ವ್ಯಕ್ತಿ ಬಗ್ಗೆ ಚಕಾರ ಎತ್ತಿಲ್ಲ. ಪಕ್ಷದಿಂದ ಅಮಾನತು ಮಾಡಲು ರಾಹುಲ್ ಗಾಂಧಿಯವರು ಸೂಚಿಸಿಲ್ಲ ಎಂದು ದೂರಿದರು.

ಜೀವಾವಧಿ ಶಿಕ್ಷೆ ಹೊಂದಿದವರನ್ನೂ ಸದಸ್ಯರಾಗಿ ಮುಂದುವರೆಸುತ್ತಾರೆ. ಇದೇ ನಸೀರ್ ಅಹ್ಮದ್ ವಿಧಾನಪರಿಷತ್ತಿನಲ್ಲಿ ಪ್ರಧಾನಿಯವರನ್ನು ವಂಚಕ ಎಂದು ಕರೆದಿದ್ದಾರೆ. ಇವರೇ ವಂಚಕರು. ಮತಬ್ಯಾಂಕ್ ರಾಜಕಾರಣದ ದೃಷ್ಟಿಕೋನದಿಂದ ಕಾಂಗ್ರೆಸ್ ಪಕ್ಷ ಇವರನ್ನು ಉಳಿಸಿಕೊಳ್ಳದೇ ಸಾರ್ವಜನಿಕ ಹಿತದೃಷ್ಟಿಯಿಂದ ಪಕ್ಷದಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ಪಕ್ಷದ ಮೋಹನ್ ವಿಶ್ವ, ಎಸ್.ಹರೀಶ್ ಹಾಜರಿದ್ದರು.

ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ವಕ್ತಾರ ಎಸ್. ಪ್ರಕಾಶ್ ಮಾತನಾಡಿದರು.

ಸಂಚಾರ ದಟ್ಟಣೆಯಲ್ಲಿ ಜನರ ಪರದಾಟ

ಮುಖ್ಯಮಂತ್ರಿತಮ್ಮ ಪಕ್ಷದ ಸಚಿವಾಕಾಂಕ್ಷಿಗಳಿಗೆ ತಮ್ಮ ಬೆಂಬಲಿಗರನ್ನು ನಗರಕ್ಕೆ ಕರೆತಂದು ಪ್ರತಿಭಟನೆ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ಇವರ ಪ್ರತಿಭಟನೆಯಿಂದ ನಾಗರಿಕರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಸಂಚಾರ ದಟ್ಟಣೆಯಲ್ಲಿ ಜನರು ಪರದಾಡುವಂತಾಗಿದೆ. ಇವರ ಅಧಿಕಾರ ಲಾಲಸೆಗೆ ನಗರದ ನಾಗರಿಕರಿಗೆ ತೊಂದರೆ ಕೊಡಬಾರದು. ಸಚಿವರ ನಿರ್ಧಾರ ನಿಮ್ಮ ಕೈಯಲ್ಲಿ ಇಲ್ಲದ ಕಾರಣ ಆಕಾಂಕ್ಷಿತರು ದೆಹಲಿಗೆ ಹೋಗಿ ಪ್ರತಿಭಟನೆ ಮಾಡುವುದು ಸೂಕ್ತ. ನಿಮ್ಮ ನಿಮ್ಮ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸುವಂತೆ ನಿರ್ದೇಶಿಸಿ, ನಗರದ ನಾಗರಿಕರ ಬವಣೆಗೆ ಪರಿಹಾರ ಕೊಡಬೇಕು ಎಂದು ಬಿಜೆಪಿ ರಾಜ್ಯ ವಕ್ತಾರ ಎಸ್. ಪ್ರಕಾಶ್ ಒತ್ತಾಯಿಸಿದರು.

ಸಮಾಚಾರ ಸಣ್ಣದಲ್ಲ

ಸಿಎಂ ವಿಶೇಷ ಅಧಿಕಾರಿಯಾಗಿ ಶ್ರೀಧರ್ ನೇಮಕ

ಬೆಂಗಳೂರು: ಹಿರಿಯ ಅಧಿಕಾರಿ ಬಿಎಸ್ ಶ್ರೀಧರ್ ಅವರನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಜಂಟಿ ಕಾರ್ಯದರ್ಶಿ ಆಗಿ ರಾಜ್ಯಸರಕಾರ ನೇಮಕ ಮಾಡಿದೆ. ಮುಖ್ಯಮಂತ್ರಿಗಳ ಕಚೇರಿಯ ಆಡಳಿತಾತ್ಮಕ ಕಾರ್ಯಗಳು, ವಿವಿಧ ಇಲಾಖೆಗಳ ನಡುವಿನ ಸಮನ್ವಯ, ಸರಕಾರಿ ಯೋಜನೆಗಳ ಅನುಷ್ಠಾನ ಮೇಲ್ವಿಚಾರಣೆ ಹಾಗೂ ಮುಖ್ಯಮಂತ್ರಿಗಳಿಗೆ ನೀತಿ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಹಕಾರ ನೀಡುವ ಜವಾಬ್ದಾರಿಯನ್ನು ಬಿ.ಎಸ್ ಶ್ರೀಧರ್ ಅವರು ನಿರ್ವಹಿಸಲಿದ್ದಾರೆ. ಈ ನೇಮಕಾತಿಯೊಂದಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಚೇರಿಯ ಆಡಳಿತಾತ್ಮಕ ತಂಡ ಮತ್ತಷ್ಟು ಬಲಗೊಂಡಿದ್ದು, ಸರಕಾರದ ಪ್ರಮುಖ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ವೇಗ ಸಿಗುವ ನಿರೀಕ್ಷೆಯಿದೆ. 2000 ರಿಂದ ಎಸ್.ಎಂ ಕೃಷ್ಣ ಅವರ ವಿದೇಶಾಂಗ ಸಚಿವ ಹುದ್ದೆಯ ಅಂತ್ಯದವರೆಗೆ ಶ್ರೀಧರ್ ಅವರು ಅವರ ಒಎಸ್‌ಡಿ ಮತ್ತು ಖಾಸಗಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ನಂತರ ಅವರು ಡಿ.ಕೆ. ಶಿವ ಕುಮಾರ್ ಇಂಧನ ಸಚಿವರಾದಾಗ ಅವರೊಂದಿಗೆ ಸೇರಿಕೊಂಡರು. ಡಿಕೆಶಿ ಉಪಮುಖ್ಯಮಂತ್ರಿ ಯಾಗಿದ್ದ ಅವಧಿಯಲ್ಲಿ ಹೆಚ್ಚುವರಿ ಖಾಸಗಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು.

ಎಸ್.ಎಸ್. ಗಣೇಶ್ ಪ್ರಧಾನ ಕಾರ್ಯದರ್ಶಿ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾ ಸಭೆಯ ಮಹಾಪ್ರಧಾನ ಕಾರ್ಯದರ್ಶಿಯಾಗಿ ಎಸ್. ಎಸ್. ಗಣೇಶ್ ಅವರನ್ನು ನೇಮಕ ಮಾಡಿ ಮಹಾ ಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ್ ಖಂಡ್ರೆ ಆದೇಶ ಹೊರಡಿಸಿದ್ದಾರೆ. ಎಸ್.ಎಸ್. ಗಣೇಶ್ ಅವರು ಹಿರಿಯ ರಾಜಕಾರಣಿ ಹಾಗೂ ಉದ್ಯಮಿ ಶಾಮನೂರು ಶಿವಶಂಕರಪ್ಪ ಅವರ ಪುತ್ರರಾಗಿದ್ದಾರೆ. ಮಹಾಸಭೆಯ ಸಂಘಟನೆ ಬಲವರ್ಧನೆ, ಸಮಾಜದ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಹಾಗೂ ಯುವಕರನ್ನು ಸಂಘಟನೆಯತ್ತ ಸೆಳೆಯುವ ಉದ್ದೇಶದಿಂದ ಈ ನೇಮಕ ಮಾಡಲಾಗಿದೆ.

ಕಲಾ ಸ್ಪಂದನ ಸಂಗೀತ ಕಾರ್ಯಕ್ರಮ ಜೂ.20ಕ್ಕೆ

ಬೆಂಗಳೂರು: ಕಲಾ ಸ್ಪಂದನ ಶಾಸ್ತ್ರೀಯ ಸಂಗೀತ, ನೃತ್ಯ, ತಿಂಗಳ ಕಾರ್ಯಕ್ರಮ ಜೂ.20 ರಂದು ಸಂಜೆ 6ಕ್ಕೆ ಜಯನಗರದ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರ ದಲ್ಲಿ ಆಯೋಜಿಸಲಾಗಿದೆ ಎಂದು ಸತೀಶ್ ಹಂಪಿಹೊಳಿ ಮ್ಯೂಜಿಕ್ ಫೌಂಡೇಶನ್ ಟ್ರಸ್ಟ್ ತಿಳಿಸಿದೆ. ಉಭಯಗಾನ ವಿದುಷಿ ಡಾ.ಟಿ. ಶಾಮಲಾ ಜಿ ಭಾವೆ ಅವರ ಸ್ಮರಣಾರ್ಥವಾಗಿ ಈ ಕಾರ್ಯಕ್ರಮ ಆಯೋಜಿಸಿದೆ. ಈ ವೇಳೆ ಹಿಂದೂಸ್ತಾನಿ ಗಾಯಕ ನಾದೋಪಾಸಕ ಪಂಡಿತ್ ವಾಗೀಶ್ ಭಟ್, ನೃತ್ಯ ಕಲಾವಿದೆ ಸುಗ್ಗನಹಳ್ಳಿ ಷಡಕ್ಷರಿ, ತಬಲಾ ವಾದಕ ಎಂ. ಪ್ರಣವ್ ಪೈ, ಹಿಂದೂಸ್ತಾನಿ ಗಾಯಕ ಸ್ಮೃತಿ ಎಸ್.ಭಟ್, ಹಾರ್ಮೋನಿಯಂ ವಾದಕ ಪ್ರಣವ್ ಪಡಿಯಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

7,719 ಕೋಟಿ ರು. ಸಾಮೂಹಿಕ ವಿತರಣೆ

ಬೆಂಗಳೂರು: ಭಾರತದ ಮೂಲಸೌಕರ್ಯ ಹೂಡಿಕೆ ಟ್ರಸ್ಟ್‌ಗಳು 2026 ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಸುಮಾರು 5.58 ಲಕ್ಷ ಯೂನಿಟ್‌ಹೋಲ್ಡರ್‌ಗಳಿಗೆ ಸಾಮೂಹಿಕವಾಗಿ 7,719 ಕೋಟಿ ರು. ವಿತರಿಸುವ ಮೂಲಕ ಭಾರತೀಯ ಹೂಡಿಕೆ ಕ್ಷೇತ್ರದಲ್ಲಿ ತಮ್ಮ ಸ್ಥಾನವನ್ನು ಬಲಪಡಿಸುವುದನ್ನು ಮುಂದುವರಿಸಿದೆ. ಇದು 2026 ಹಣಕಾಸು ವರ್ಷದ ಮೂರನೇ ತ್ರೈಮಾಸಿಕದಲ್ಲಿ ವಿತರಿಸಲಾದ 5,744 ಕೋಟಿಗಳಿಗಿಂತ ಶೇ.34 ತ್ರೈಮಾಸಿಕ ಹೆಚ್ಚಳವನ್ನು ಪ್ರತಿನಿಧಿಸುತ್ತದೆ, ಇದು ವಲಯದ ನಿರಂತರ ಬೆಳವಣಿಗೆ ಮತ್ತು ಹೂಡಿಕೆದಾರರಿಗೆ ಸ್ಥಿರವಾದ ನಗದು ಹರಿವನ್ನು ತಲುಪಿಸುವ ಹೆಚ್ಚುತ್ತಿರುವ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಈ ವಲಯದಲ್ಲಿ ನಿರ್ವಹಣೆಯಲ್ಲಿರುವ ಆಸ್ತಿಗಳು ಹಣಕಾಸು ವರ್ಷ 2025 ರಲ್ಲಿ 6.3 ಲಕ್ಷ ಕೋಟಿಗಳಿಂದ ಪ್ರಸಕ್ತ ವರ್ಷ 7.1 ಲಕ್ಷ ಕೋಟಿಗಳಿಗೆ ಏರಿದೆ. ಇದು ಸರಿಸುಮಾರು ಶೇ.32 ರಷ್ಟು ವರ್ಷದಿಂದ ವರ್ಷಕ್ಕೆ ಬೆಳವಣಿಗೆಯನ್ನು ಸೂಚಿಸುತ್ತದೆ ಮತ್ತು ಭಾರತದ ಬಂಡವಾಳ ಮಾರುಕಟ್ಟೆಗಳಲ್ಲಿ ಆಸ್ತಿ ವರ್ಗದ ವಿಸ್ತರಿಸುತ್ತಿರುವ ಗಾತ್ರ ಮತ್ತು ಮಹತ್ವವನ್ನು ಪ್ರದರ್ಶಿಸುತ್ತದೆ ಎಂದು ಭಾರತ್ ಇನ್‌ವಿಟ್ಸ್ ಅಸೋಸಿಯೇಷನ್‌ನ ಸಿಇಒ ಎನ್.ಎಸ್.ವೆಂಕಟೇಶ್ ಅವರು ತಿಳಿಸಿದ್ದಾರೆ.

ಗುಂಡಿ ಇಲ್ಲದ ರಸ್ತೆ ನಿರ್ಮಾಣ ರಾಕೆಟ್ ಸೈನ್ಸಾ? ಮೊದಲ ಸಭೆಯಲ್ಲೇ ಜಿಬಿಎ ಅಧಿಕಾರಿಗಳಿಗೆ ಕೃಷ್ಣಬೈರೇಗೌಡ ಕ್ಲಾಸ್

1.5 ಕೋಟಿ ಜನರ ಸೇವೆ ಮೊದಲ ಆದ್ಯತೆಯಾಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೂರ್ಣ ಪ್ರಮಾಣದ ಖಾತೆ ನೀಡಿಲ್ಲವೆಂದು ಅಸಮಾಧಾನಗೊಂಡು ಅಧಿಕಾರ ವಹಿಸಿಕೊಳ್ಳದೆ ದೂರ ಉಳಿದಿದ್ದ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಖಾತೆ ಹಂಚಿಕೆ ಮಾಡಿದ 13 ದಿನದ ನಂತರ ಇಲಾಖೆಯ ಕಾರ್ಯ ಆರಂಭಿಸಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿಯಂತಹ ಪ್ರಮುಖ ಜವಾಬ್ದಾರಿ ಹಂಚಿಕೆಯಾಗಿದ್ದರೂ ಕೃಷ್ಣಬೈರೇಗೌಡ ಕಾರ್ಯ ಆರಂಭ ಮಾಡಿರಲಿಲ್ಲ. ಆದರೆ ಮಂಗಳವಾರ ಗ್ರೇಟರ್ ಬೆಂಗಳೂರು ವ್ಯಾಪ್ತಿಯ 5 ಪಾಲಿಕೆಗಳ ಆಯುಕ್ತರು, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಸೇರಿದಂತೆ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದ್ದಾರೆ.

ಸಭೆಯ ಬಳಿಕ ಮಾತನಾಡಿದ ಸಚಿವ ಕೃಷ್ಣಬೈರೇಗೌಡ, ಬೆಂಗಳೂರು ನಗರದಲ್ಲಿ ವಾಸಿಸುವ 1.5 ಕೋಟಿ ಜನರ ಜೀವನ ಗುಣಮಟ್ಟವನ್ನು ಸುಧಾರಿಸುವುದು ನಮ್ಮ ಮೊದಲ ಆದ್ಯತೆಯಾಗಿದ್ದು, ಆ ನಿಟ್ಟಿನಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಬೆಂಗಳೂರು ಬಹಳಷ್ಟು ಸವಾಲುಗಳನ್ನು ಹೊಂದಿರುವ ನಗರವಾಗಿದೆ. ಸುಮಾರು 1.5 ಕೋಟಿ ಜನರಿಗೆ ಆಶ್ರಯ ತಾಣವಾಗಿರುವ ಈ ನಗರವು ಉದ್ಯೋಗ, ಶಿಕ್ಷಣ ಹಾಗೂ ಉತ್ತಮ ಜೀವನಕ್ಕೆ ಅವಕಾಶ ಕಲ್ಪಿಸುತ್ತಿದೆ. ಬೆಂಗಳೂರು ನಮ್ಮ ರಾಜ್ಯ ಹಾಗೂ ದೇಶದ ಅಮೂಲ್ಯ ಆಸ್ತಿಯಾಗಿದ್ದು, ವಿಶ್ವದ ವಿವಿಧ ಭಾಗಗಳ ಜನರು ಹಾಗೂ ಅನೇಕ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಜಿಬಿಎ ಆಡಳಿತವನ್ನು ಸುಧಾರಣೆ ಮಾಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸಲಾಗುವುದು ಎಂದರು.

ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣಬೈರೇಗೌಡ ಅವರು ಜಿಬಿಎ ಅಧಿಕಾರಿಗಳಿಗೆ ಮೊದಲ ಸಭೆ ನಡೆಸಿದರು.

> ಕಸದ ವಿಚಾರದಲ್ಲಿ ಜನರು ಸಹಕಾರ ಕೊಡಬೇಕು. ವ್ಯವಸ್ಥೆಯಲ್ಲಿಯೂ ಲೋಪ ದೋಷ ಇದೆ. ಆದರೆ ಜನರ ಸಹಕಾರವೂ ಅಗತ್ಯ. ಎಲ್ಲವನ್ನ ಒಂದೇ ದಿನ ಮಾಡ್ತೇನೆಂದು ನಾನು ಹೇಳಿಲ್ಲ. ಕಸದ ಟೆಂಡರ್ ವಿಚಾರವಾಗಿ ಈಗಾಗಲೇ ಸರ್ಕಾರ ಉನ್ನತ ಮಟ್ಟದ ಸಮಿತಿ ರಚಿಸಿದ್ದು, ಆ ಸಮಿತಿ ಎಲ್ಲವನ್ನೂ ಗಮನಿಸುತ್ತೆ. ಸಮಿತಿ ಏನಾದರೂ ಸಲಹೆ ಸೂಚನೆ ಕೊಟ್ಟರೆ ಪಾಲಿಸುತ್ತೇವೆ. ಸಮಿತಿ ಎಲ್ಲವನ್ನು ಪರಿಶೀಲನೆ ಮಾಡುತ್ತದೆ.
>
> -ಕೃಷ್ಣ ಬೈರೇಗೌಡ, ಸಚಿವ

ನಗರದಲ್ಲಿ ರಸ್ತೆ, ಬೀದಿ ದೀಪಗಳ ನಿರ್ವಹಣೆ, ಸಂಚಾರ ದಟ್ಟಣೆ, ಸ್ವಚ್ಛತೆ, ಸೌಂದರ್ಯೀಕರಣ, ಜಲಾವೃತ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ತ್ವರಿತ ಪರಿಹಾರ ಒದಗಿಸುವ ಉದ್ದೇಶದಿಂದ ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಪುನರ್ರಚಿಸಲಾಗಿದೆ. ಜಿಬಿಎ ಅಡಿಯಲ್ಲಿ 5 ನಗರ ಪಾಲಿಕೆಗಳನ್ನು ರಚಿಸಿ, ಆಯುಕ್ತರಿಗೆ ಸಂಪೂರ್ಣ ಜವಾಬ್ದಾರಿ ನೀಡುವ ಮೂಲಕ ಸ್ಥಳೀಯ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಟನಲ್ ರಸ್ತೆ, ಎಲಿವೇಟೆಡ್ ಕಾರಿಡಾರ್ ಹಾಗೂ ಸಂಚಾರಯುಕ್ತ ರಸ್ತೆ ನಿರ್ಮಾಣದಂತಹ ಯೋಜನೆಗಳನ್ನು ರೂಪಿಸಿ ಅನುಷ್ಠಾನದ ಹಂತಕ್ಕೆ ತರಲಾಗಿದೆ. ನಗರದಲ್ಲಿದ್ದ ಅಸ್ಪಷ್ಟ ಖಾತೆ ಸಮಸ್ಯೆಗೆ ಪರಿಹಾರವಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಅತ್ಯುತ್ತಮ ಮಾದರಿಯ ಇ-ಖಾತಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು. ಬೆಂಗಳೂರು ಎಲ್ಲರಿಗೂ ಸೇರಿರುವ ನಗರವಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಅಭಿವೃದ್ಧಿಗೆ ಸ್ಪಷ್ಟವಾದ ದೂರದೃಷ್ಟಿಯ ಯೋಜನೆಗಳನ್ನು ಹೊಂದಿದ್ದಾರೆ. ಅದರಂತೆ ಎಲ್ಲಾ ಅಧಿಕಾರಿಗಳು, ಆಡಳಿತ ವ್ಯವಸ್ಥೆ ಹಾಗೂ ಆಡಳಿತ ಮತ್ತು ವಿರೋಧ ಪಕ್ಷಗಳ ಜನಪ್ರತಿನಿಧಿಗಳ ಸಹಕಾರ ದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ, ಬದ್ಧತೆಯಿಂದ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಮುಖ್ಯ ಆಯುಕ್ತ ಮಹೇಶ್ವರ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುಷಮಾ ಗೋಡಬೋಲೆ, ಡಾ. ಕೆ. ಹರೀಶ್ ಕುಮಾರ್, ವೆಂಕಟ ಚಲಪತಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಸಿಇಒ ಕರೀಗೌಡ ಸೇರಿದಂತೆ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.

ಗುಂಡಿ ಬೀಳದಂತೆ ರಸ್ತೆ ನಿರ್ಮಿಸಿ

ಬೆಂಗಳೂರಿನಲ್ಲಿ ರಸ್ತೆ ಗುಂಡಿ ಮುಚ್ಚುವುದು, ಗುಂಡಿ ಮುಚ್ಚುತ್ತಿದ್ದಂತೆ ಮತ್ತೊಂದು ಕಡೆ ಗುಂಡಿ ಬಾಯ್ತೆರೆಯುವುದು ವಾಡಿಕೆಯಾಗಿಬಿಟ್ಟಿದೆ. ಇದರ ಬದಲು ನಮ್ಮ ಅಧಿಕಾರಿಗಳಿಗೆ ಗುಂಡಿ ಬೀಳದಂತೆ ಗುಣಮಟ್ಟದ ರಸ್ತೆ ನಿರ್ಮಿಸಲು ಇರುವ ಸಮಸ್ಯೆಯಾದರೂ ಏನು? ಗುಣಮಟ್ಟದ ರಸ್ತೆ ನಿರ್ಮಾಣವೇನು ರಾಕೆಟ್ ಸೈನ್ಸ್ ಗಿಂತ ಕ್ಲಿಷ್ಟವೇ? ಎಂದು ಅಸಮಾಧಾನ ವ್ಯಕ್ತಪಡಿಸಿದರು. ದಕ್ಷಿಣ ಭಾರತದ ಮಟ್ಟಿಗೆ ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬೆಂಗಳೂರಿನ ರಸ್ತೆಗಳು ತೀರಾ ಕಳಪೆಯಾಗಿವೆ ಎಂದು ಅಭಿಪ್ರಾಯಪಟ್ಟ ಅವರು, ಇನ್ನುಂದೆ ಹಳೆ ಕಲ್ಲು ಹೊಸ ಬಿಲ್ಲು ಎಂಬಂತೆ ರಸ್ತೆ ಗುಂಡಿ ಮುಚ್ಚುವ ತಾತ್ಕಾಲಿಕ ಪರಿಹಾರದ ಬದಲಾಗಿ ಅಧಿಕಾರಿಗಳು ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕು. ಕೆಟ್ಟ ರಸ್ತೆಗಳ ಕಾರಣಕ್ಕೆ ಉಂಟಾಗುತ್ತಿರುವ ಜನರ ಬವಣೆ ನೀಗಬೇಕು. ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳ ಹಿಂದೆ ನಾನು ಎಂದಿಗೂ ಬೆಂಬಲವಾಗಿ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ಖಾತೆ ಬಗ್ಗೆ ಸ್ಪಷ್ಟನೆ ನೀಡಿದ ಸಚಿವರು

ಇನ್ನು ಖಾತೆ ಬಗ್ಗೆ ಸ್ಪಷ್ಟನೆ ನೀಡಿರುವ ಕೃಷ್ಣಬೈರೇಗೌಡ, ನನ್ನ ಅಭಿಪ್ರಾಯವನ್ನ ನಾನು ಸಿಎಂ ಹಾಗೂ ವರಿಷ್ಠರಿಗೆ ತಿಳಿಸಿದ್ದೇನೆ. ಇಲ್ಲಿ ಸಮರ್ಪಕವಾಗಿ ಕೆಲಸ ಆಡಳಿತ ನಡೆಸಲು ಪೂರ್ಣ ಖಾತೆ ಅವಶ್ಯವಿದೆ ಎಂದು ಸಿಎಂ ಹಾಗೂ ವರಿಷ್ಠರಿಗೆ ಹೇಳಿದ್ದೇನೆ. ಕ್ಲಾರಿಟಿ ಸಿಕ್ಕ ಬಳಿಕವೇ ಅಧಿಕಾರ ಸ್ವೀಕಾರ ಮಾಡಬೇಕು ಅಂದುಕೊಂಡಿದ್ದೆ. ಆದರೆ, ಸಿಎಂ ವಿವೇಚನೆ ಬಳಸಿ ತೀರ್ಮಾನ ಮಾಡಿದ್ದಾರೆ. ನಮ್ಮ ಅರ್ಹತೆಗೆ ತಕ್ಕ ಖಾತೆ ಸಿಗಲಿದೆ ಅಂದುಕೊಳ್ಳುತ್ತೇನೆ. ಎಲ್ಲವೂ ಎಲ್ಲಾ ಸಮಯದಲ್ಲೂ ಸಿಗುವುದಿಲ್ಲ. ಈಗ ವರಿಷ್ಠರ ಸೂಚನೆ ಮೇರೆಗೆ ಇಲಾಖೆಯ ಜವಾಬ್ದಾರಿ ಸ್ವೀಕರಿಸಿದ್ದೇನೆ ಎಂದರು.

ಸಚಿವರ ಸೂಚನೆಗಳೇನು?

- ಬೆಂಗಳೂರು ಜನರ ಜೀವನ ಗುಣಮಟ್ಟ ಸುಧಾರಣೆ ನಮ್ಮ ಮೊದಲ ಆದ್ಯತೆ
- ಜನರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳು ಆದ್ಯತೆ ನೀಡಲು ಕರೆ
- ಸಂಚಾರ ದಟ್ಟಣೆ, ಸ್ವಚ್ಛತೆ ಸೇರಿ ಎಲ್ಲಾ ಸಮಸ್ಯೆಗಳಿಗೆ ತ್ವರಿತ ಪರಿಹಾರ
- ನಗರದ ದೀರ್ಘಾವಧಿಯ ಅಭಿವೃದ್ಧಿಗೆ ಅಗತ್ಯ ಯೋಜನೆಗಳಿಗೆ ರೂಪುರೇಷೆ

ಬಾಲ್ಯಕ್ಯಾನ್ಸರ್: ಸ್ವಯಂಪ್ರೇರಿತ ರಕ್ತದಾನ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವತಿಯಿಂದ ಹರಿವು 2026 ಕಾರ್ಯಕ್ರಮದ ಅಂಗವಾಗಿ ಬಾಲ್ಯ ಕ್ಯಾನ್ಸರ್ ರೋಗಿಗಳಿಗಾಗಿ ಸ್ವಯಂಪ್ರೇರಿತ ರಕ್ತದಾನ ಹಾಗೂ ಸಿಂಗಲ್ ಡೋನರ್ ಪ್ಲೇಟ್ಲೆಟ್ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಕ್ಕಳ ಗಂಥಿ ವಿಭಾಗ ಹಾಗೂ ಕ್ಯಾನ್‌ಕಿಡ್ಸ್ ಕ್ಯಾನ್ ಸಂಸ್ಥೆಯ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು, ಅಧ್ಯಾಪಕರು, ಆರೋಗ್ಯ ವೃತ್ತಿಪರರು, ರಕ್ತದಾನಿಗಳು, ರಕ್ತ ಬ್ಯಾಂಕ್ ಸಿಬ್ಬಂದಿ ಹಾಗೂ ವಿವಿಧ ಸಹಯೋಗಿ ಸಂಸ್ಥೆಗಳ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿದರು. ಬಾಲ್ಯ ಕ್ಯಾನ್ಸರ್ ಚಿಕಿತ್ಸೆಯಲ್ಲಿ ರಕ್ತ ಮತ್ತು ಪ್ಲೇಟ್ಲೆಟ್‌ಗಳ ಮಹತ್ವ ಹಾಗೂ ಸ್ವಯಂಪ್ರೇರಿತ ದಾನಿಗಳ ಪಾತ್ರದ ಬಗ್ಗೆ ಅರಿವು ಮೂಡಿಸಲಾಯಿತು.

ಈ ವರ್ಷದ ಕಾರ್ಯಕ್ರಮಕ್ಕೆ ಹರಿವು 2026 ಎಂಬ ಶೀರ್ಷಿಕೆಯನ್ನು ನೀಡಲಾಗಿತ್ತು. ಹರಿವು ಎಂಬ ಪದವು ದಾನಿಗಳಿಂದ ಬಾಲ್ಯ ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಿರುವ ಮಕ್ಕಳಿಗೆ ಹರಿಯುವ ಜೀವದಾಯಕ ರಕ್ತವನ್ನು ಸಂಕೇತಿಸುತ್ತದೆ. ಇದು ಆಶೆ, ಕರುಣೆ, ಆರೈಕೆ ಮತ್ತು ಜೀವದ ನಿರಂತರ ಪ್ರವಾಹವನ್ನು ಪ್ರತಿಬಿಂಬಿಸುತ್ತದೆ.

ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಟಿ. ನವೀನ್ ಅವರು ಮಾತನಾಡಿ, ಕ್ಯಾನ್ಸರ್ ರೋಗಿಗಳ ಪಾಲಿಗೆ ಸಂಜೀವಿನಿ ಕಿದ್ವಾಯಿ ಆಸ್ಪತ್ರೆ. ಶಸ್ತ್ರ ಚಿಕಿತ್ಸೆಗೆ ಒಳಪಡುವ ರೋಗಿಗಳಿಗೆ ರಕ್ತವು ಅವಶ್ಯಕವಾಗಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸ್ವಯಂಪ್ರೇರಿತ ರಕ್ತ ಮತ್ತು ಪ್ಲೇಟ್ಲೆಟ್ ದಾನಿಗಳಾಗಬೇಕು. ಜನತೆ ರಕ್ತದಾನ ಮಾಡುವ ಮೂಲಕ ರೋಗಿಗಳಿಗೆ ಆಸರೆಯಾಗಬೇಕು ಎಂದು ಹೇಳಿದ ಅವರು, ಯುವ ಸಮೂಹಕ್ಕೆ ಕ್ಯಾನ್ಸರ್ ಜಾಗೃತಿ ಮೂಡಿಸಲು ಅಭಿಯಾನ ಕೈಗೊಳ್ಳಲಾಗುತ್ತಿದೆ. ಶಾಲಾ- ಕಾಲೇಜುಗಳು, ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಅರಿವು ಮೂಡಿಸಲಾಗುತ್ತಿದೆ. ನಮ್ಮ ಸಂಸ್ಥೆಯಲ್ಲಿ ಉತ್ತಮ ಚಿಕಿತ್ಸಾ ಸೌಲಭ್ಯವಿದೆ. ಆಸ್ಪತ್ರೆಗೆ ದಾಖಲಾದ ರೋಗಿಗಳಿಗೆ ಚಿಕಿತ್ಸೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದರು.

ಕಿದ್ವಾಯಿಯಲ್ಲಿ ನಡೆದ ಕ್ಯಾನ್ಸರ್ ರೋಗಿಗಳಿಗಾಗಿ ಸ್ವಯಂಪ್ರೇರಿತ ರಕ್ತದಾನ ಹಾಗೂ ಸಿಂಗಲ್ ಡೋನರ್ ಪ್ಲೇಟ್ಲೆಟ್ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್, ಸಂಸ್ಥೆಯ ಮಕ್ಕಳ ಗಂಥಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅರುಣ್ ಕುಮಾರ್ ಇದ್ದರು.

ಬೆಂಗಳೂರನ್ನು ವಿಶ್ವದರ್ಜೆಗೆ ಬೆಳೆಸಲು ನಮ್ಮ ಸಹಕಾರವಿದೆ: ಕಿರಣ್ ಮಜುಂದಾರ್ ಶಾ

ಸಿಎಂ ಡಿಕೆಶಿ ಇಡೀ ರಾಜ್ಯದ ಅಭಿವೃದ್ಧಿಗೆ ಬದ್ಧ

ಬೆಂಗಳೂರು: ಸಿಎಂ ಡಿ.ಕೆ.ಶಿವಕುಮಾರ್ ಅವರು ಬೆಂಗಳೂರು ಮಾತ್ರವಲ್ಲ ಇಡೀ ರಾಜ್ಯದ ಅಭಿವೃದ್ಧಿಗೆ ಬದ್ಧರಾಗಿದ್ದಾರೆ ಎಂದು ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಶಾ ತಿಳಿಸಿದರು.

ವಿಧಾನಸೌಧದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವೆಲ್ಲರೂ ಬೆಂಗಳೂರನ್ನು ವಿಶ್ವದರ್ಜೆಯ ನಗರವನ್ನಾಗಿ ಮಾಡಲು ತೆಗೆದುಕೊಳ್ಳುವ ಉಪಕ್ರಮ ಬೆಂಬಲಿಸುತ್ತೇವೆ. ಸಿಎಂ ಡಿ.ಕೆ. ಶಿವಕುಮಾರ್ ಅವರೊಂದಿಗೆ ನಮ್ಮ ಭೇಟಿ ತುಂಬಾ ಚೆನ್ನಾಗಿ ನಡೆಯಿತು. ಬೆಂಗಳೂರನ್ನು ವಿಶ್ವದರ್ಜೆಯ ನಗರವಾಗಿ ಅಭಿವೃದ್ಧಿಪಡಿಸಲು ಅಗತ್ಯವಿರುವ ಎಲ್ಲ ಹೊಸ ಉಪಕ್ರಮಗಳಿಗೆ ನಾವೆಲ್ಲರೂ ಅವರಿಗೆ ಬೆಂಬಲ ನೀಡುತ್ತಿದ್ದೇವೆ ಎಂದು ನಾನು ಭಾವಿಸುತ್ತೇನೆ ಎಂದರು.

> ಮುಖ್ಯಮಂತ್ರಿಯವರು ಕೇವಲ ಬೆಂಗಳೂರನ್ನು ಮಾತ್ರವಲ್ಲದೇ ಇಡೀ ಕರ್ನಾಟಕ ಅಭಿವೃದ್ಧಿಪಡಿಸಲು ಮತ್ತು ಬೆಂಗಳೂರನ್ನು ವಿಶ್ವದರ್ಜೆಯ ನಗರ ಹಾಗೂ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವನ್ನಾಗಿ ಮಾಡಲು ಬದ್ಧರಾಗಿದ್ದಾರೆ.
>
> -ಕಿರಣ್ ಮಜುಂದಾರ್ ಶಾ, ಬಯೋಕಾನ್ ಸಂಸ್ಥಾಪಕಿ

ನಾವು ಪ್ರತಿನಿಧಿಸುವ ಪ್ರತಿಯೊಂದು ದೇಶವೂ ಈ ಪ್ರಯತ್ನಕ್ಕೆ ಬೆಂಬಲ ನೀಡಲು ಸಿದ್ಧವಾಗಿದೆ. ಹಾಗಾಗಿ, ಇದೇ ನಮ್ಮ ಸಂಭಾಷಣೆಯ ಮುಖ್ಯ ಸಾರಾಂಶವಾಗಿದೆ. ಸಿಎಂ ಡಿಕೆಶಿ ಅವರು ಈಗಾಗಲೇ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಅವರು ಇನ್ನಷ್ಟು ತ್ವರಿತವಾಗಿ ಕೆಲಸ ಚುರುಕುಗೊಳಿಸಲಿದ್ದಾರೆ. ಇನ್ನೂ ಮಾಡಬೇಕಾದ ಕೆಲಸಗಳು ಸಾಕಷ್ಟಿವೆ. ಬೆಂಗಳೂರಿಗೆ ಉತ್ತಮ ಮೂಲಸೌಕರ್ಯಗಳ ಅಗತ್ಯವಿದೆ. ಇದರಲ್ಲಿ ಸುರಂಗ ರಸ್ತೆ, ಹಲವು ಮೇಲ್ಸೇತುವೆ ಹೆದ್ದಾರಿಗಳು, ಕಾರಿಡಾರ್‌ಗಳು ಮತ್ತು ಪೆರಿಫೆರಲ್ ರಿಂಗ್ ರೋಡ್ ಸೇರಿವೆ. ಹಾಗೆಯೇ ಔಟರ್ ರಿಂಗ್ ರೋಡ್ ಸುಧಾರಣೆಗಾಗಿ ವಿಶೇಷ ಬಜೆಟ್ ಹಂಚಿಕೆ ಸಹ ನೀಡಲಾಗಿದೆ. ಹಾಗಾಗಿ, ಮುಂದೆ ಸಾಕಷ್ಟು ಬದಲಾವಣೆಗಳು ಆಗಲಿವೆ. ಖಂಡಿತವಾಗಿಯೂ ಅವರು ಕಸ ಮತ್ತು ಘನತ್ಯಾಜ್ಯ ನಿರ್ವಹಣೆಯಲ್ಲಿ ಧೈರ್ಯದ ಕ್ರಮ ಕೈಗೊಂಡಿ ದ್ದಾರೆ. ಆದ್ದರಿಂದ ನಾಗರಿಕರಾಗಿ ನಾವೂ ಸಹ ನಮ್ಮ ಜವಾಬ್ದಾರಿ ಅರಿತು ನಾಗರಿಕ ಪ್ರಜ್ಞೆ ಮೆರೆಯಬೇಕು ಎಂದರು.

ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಉದ್ಯಮಿ ಕಿರಣ್ ಮಜುಂದಾರ್ ಶಾ, ಸುರೇಶ್, ಗೀತಾಂಜಲಿ ಕಿರ್ಲೋಸ್ಕರ್, ವಿಕ್ರಂ ವಿಶ್ವನಾಥ್, ಮೋಹನ್ ಸುರೇಶ್, ಶಬೀನಾ ಸುಲ್ತಾನ, ಕಾರ್ತಿಕ್ ತಲ್ಲಮ್, ರಾಘವೇಂದ್ರ ಪೂಜಾರಿ, ರವಿಶಂಕರ್ ಮತ್ತಿತರರನ್ನು ಒಳಗೊಂಡ ನಿಯೋಗವು ವಿಧಾನಸೌಧದ ಸಿಎಂ ಕಚೇರಿಯಲ್ಲಿ ಮಂಗಳವಾರ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು.

ಅನಧಿಕೃತ ಮಳಿಗೆಗಳ ತೆರವಿಗೆ ಸೂಚನೆ

ಬೆಂಗಳೂರು: ಕೆ.ಆರ್.ಮಾರುಕಟ್ಟೆಯಲ್ಲಿ ಸ್ವಚ್ಛತೆ ಕಾಪಾಡುವುದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಹಾಗೂ ಅಗ್ನಿ ಅವಘಡಗಳಂತಹ ತುರ್ತು ಪರಿಸ್ಥಿತಿ ತಡೆಯುವ ಉದ್ದೇಶದಿಂದ ಒತ್ತುವರಿ ಮತ್ತು ಅನಧಿಕೃತ ಮಳಿಗೆಗಳ ತೆರವು ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್.ಜಿ ತಿಳಿಸಿದರು. ಕೆ.ಆರ್.ಮಾರುಕಟ್ಟೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಅಹವಾಲು ಆಲಿಸಿದ ಅವರು, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ಸೂಚನೆಯಂತೆ ಫೈರ್ ಆಡಿಟ್ ನಡೆಸಿ ಅಗತ್ಯ ಸುರಕ್ಷತಾ ಕ್ರಮ ಜಾರಿಗೊಳಿಸಲಾಗುತ್ತಿದೆ. ವ್ಯಾಪಾರಿಗಳು, ರೈತರು ಹಾಗೂ ಸ್ಥಳೀಯ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ಮಾರುಕಟ್ಟೆಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯಲಾಗುವುದು ಎಂದು ಭರವಸೆ ನೀಡಿದರು.

ಜುಲೈ 31ರವರೆಗೆ ಪಾಲಿಕೆ ಶಾಲಾ-ಕಾಲೇಜುಗಳಲ್ಲಿ ದಾಖಲಾತಿ

ಬೆಂಗಳೂರು: ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯ ಶಿಶುವಿಹಾರ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ 2026-27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ದಾಖಲಾತಿ ಪ್ರಕ್ರಿಯೆ ಜುಲೈ 31ರವರೆಗೆ ಮುಂದುವರಿಯಲಿದ್ದು, ಪೋಷಕರು ಈ ಅವಕಾಶ ಬಳಸಿಕೊಳ್ಳುವಂತೆ ದಕ್ಷಿಣ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಪಾಲಿಕೆಯ ಐದು ಶಿಶುವಿಹಾರಗಳು, ಒಂದು ಪ್ರೌಢಶಾಲೆ ಹಾಗೂ ಒಂದು ಪಿಯು ಕಾಲೇಜಿನಲ್ಲಿ ಒಟ್ಟು 519 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಉತ್ತರಹಳ್ಳಿ ಪಿಯು ಕಾಲೇಜಿನಲ್ಲಿ 213, ಭೈರಸಂದ್ರ ಪ್ರೌಢಶಾಲೆಯಲ್ಲಿ 69 ಹಾಗೂ ಐದು ಶಿಶುವಿಹಾರಗಳಲ್ಲಿ 237 ಮಕ್ಕಳು ದಾಖಲಾಗಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿನಿಯರ ದಾಖಲಾತಿಯೇ ಮೇಲುಗೈ ಸಾಧಿಸಿದ್ದು, ಒಟ್ಟು 272 ವಿದ್ಯಾರ್ಥಿನಿಯರು ಹಾಗೂ 247 ವಿದ್ಯಾರ್ಥಿ ಗಳು ವ್ಯಾಸಂಗ ಮಾಡುತ್ತಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ ಉದ್ಯೋಗ ಅರಸಿ ಬೆಂಗಳೂರಿಗೆ ಬರುವ ಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ದಾಖಲಾತಿ ಅವಧಿ ಜುಲೈ ಅಂತ್ಯದವರೆಗೆ ವಿಸ್ತರಿಸಲಾಗಿದೆ ಎಂದರು. ಪಾಲಿಕೆಯ ಶಾಲಾ-ಕಾಲೇಜು ಗಳಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ ಎರಡು ಜತೆ ಸಮವಸ್ತ್ರ, ಶೂ, ಸಾಕ್ಸ್, ಸ್ವೆಟರ್, ಪಠ್ಯ ಹಾಗೂ ನೋಟ್ ಪುಸ್ತಕಗಳು ಮತ್ತು ಮಧ್ಯಾಹ್ನದ ಬಿಸಿ ಊಟ ಉಚಿತವಾಗಿ ನೀಡಲಾಗುತ್ತಿದೆ. ಜತೆಗೆ ಅನುಭವಿ ಹಾಗೂ ಅರ್ಹ ಬೋಧಕ ವರ್ಗದಿಂದ ಗುಣಮಟ್ಟದ ಶಿಕ್ಷಣ ಮತ್ತು ವೈಯಕ್ತಿಕ ಮಾರ್ಗದರ್ಶನ ಒದಗಿಸಲಾಗುತ್ತಿದೆ. ಎಸ್‌ಎಸ್ ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿ ಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ವಿಶೇಷ ನಗದು ಪುರಸ್ಕಾರ ನೀಡಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲಿಕೆಯ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಬೇಕು ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿವಿ 28ನೇ ವಾರ್ಷಿಕಘಟಿಕೋತ್ಸವ | ವಿದ್ಯಾರ್ಥಿಗಳಿಗೆ ರಾಜ್ಯಪಾಲರ ಸಲಹೆ

ವೈದ್ಯರಲ್ಲಿ ಕರುಣೆ, ಸೇವಾ ಮನೋಭಾವ ಅತ್ಯಗತ್ಯ: ಗೆಹ್ಲೋತ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಮಾನವ ಸೇವೆ ಮತ್ತು ಕರುಣೆಯ ಪ್ರತೀಕವಾಗಿದ್ದು, ವೈದ್ಯರು ಸದಾ ನೈತಿಕತೆ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ತಿಳಿಸಿದರು.

ನಗರದ ಜಿಕೆವಿಕೆ ಆವರಣದಲ್ಲಿ ಮಂಗಳವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೈದ್ಯರ ಮಾತುಗಳು ರೋಗಿಗಳಿಗೆ ಭರವಸೆ ನೀಡುತ್ತವೆ. ಅವರ ಸ್ಪರ್ಶ ನಂಬಿಕೆ ಮೂಡಿಸುತ್ತದೆ ಹಾಗೂ ಅವರ ನಿರ್ಧಾರಗಳು ಜೀವ ಉಳಿಸುವ ಸಾಮರ್ಥ್ಯ ಹೊಂದಿರುತ್ತವೆ. ಆದ್ದರಿಂದ ವೈದ್ಯಕೀಯ ವೃತ್ತಿಯಲ್ಲಿ ನಂಬಿಕೆಯೇ ಅತಿದೊಡ್ಡ ಆಸ್ತಿಯಾಗಿದ್ದು, ವೈದ್ಯರು ಪಾರದರ್ಶಕತೆ, ಸೂಕ್ಷ್ಮತೆ ಮತ್ತು ನೈತಿಕ ಮೌಲ್ಯ ತಮ್ಮ ವೃತ್ತಿಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಳ್ಳಬೇಕು. ದೇಶದ ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ, ಟೆಲಿಮೆಡಿಸಿನ್, ಸಂಶೋಧನೆ ಮತ್ತು ಆಧುನಿಕ ತಂತ್ರಜ್ಞಾನಗಳ ಮೂಲಕ ಮಹತ್ವದ ಬದಲಾವಣೆ ನಡೆಯುತ್ತಿದ್ದು, ಯುವ ವೈದ್ಯರು ನಿರಂತರ ಕಲಿಕೆಗೆ ಒತ್ತು ನೀಡಿ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವ ಮೂಲಕ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಬೇಕು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಆರೋಗ್ಯಕರ ಭಾರತ ಮತ್ತು ವಿಕಸಿತ ಭಾರತ-2047 ಪರಿಕಲ್ಪನೆ ಸಾಕಾರಗೊಳಿಸುವಲ್ಲಿ ವೈದ್ಯಕೀಯ ಸಮುದಾಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಗ್ರಾಮೀಣ ಆರೋಗ್ಯ ಸೇವೆ, ತಾಯಿ-ಮಗು ಆರೋಗ್ಯ, ತಡೆಗಟ್ಟುವ ಆರೋಗ್ಯ ಸೇವೆ ಹಾಗೂ ಸಾರ್ವಜನಿಕ ಜಾಗೃತಿ ಕ್ಷೇತ್ರಗಳಲ್ಲಿ ಯುವ ವೈದ್ಯರ ಕೊಡುಗೆ ರಾಷ್ಟ್ರ ನಿರ್ಮಾಣಕ್ಕೆ ನೆರವಾಗಲಿದೆ ಎಂದರು.

ಜನರ ನಂಬಿಕೆ ಉಳಿಸಿಕೊಂಡು ಸೇವೆ ಸಲ್ಲಿಸಿ: ಕಾರ್ಯಕ್ರಮದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ವೈದ್ಯರು ಕಣ್ಣಿಗೆ ಕಾಣುವ ದೇವರಂತಿದ್ದು, ಜನರು ಅಪಾರ ನಂಬಿಕೆ ಹಾಗೂ ವಿಶ್ವಾಸದಿಂದ ವೈದ್ಯರ ಬಳಿ ಬರುತ್ತಾರೆ. ಆದ್ದರಿಂದ ವೈದ್ಯರು ಜನರ ನಂಬಿಕೆ ಉಳಿಸಿಕೊಂಡು ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸಬೇಕು. ವೈದ್ಯಕೀಯ ವೃತ್ತಿ ಸವಾಲುಗಳಿಂದ ಕೂಡಿದ್ದು, ಜಾಗತಿಕ ಮಟ್ಟದಲ್ಲಿ ಭಾರತೀಯ ಹಾಗೂ ಕರ್ನಾಟಕದ ವೈದ್ಯರು ತಮ್ಮ ಪ್ರತಿಭೆ, ಗುಣಮಟ್ಟ ಮತ್ತು ಸೇವಾ ಮನೋಭಾವದಿಂದ ಗುರುತಿಸಿಕೊಂಡಿದ್ದಾರೆ. ವೈದ್ಯರು ನಗರ ಪ್ರದೇಶಗಳಿಗೆ ಮಾತ್ರ ಸೀಮಿತವಾಗದೆ ಗ್ರಾಮೀಣ ಭಾಗಗಳಲ್ಲಿಯೂ ಆರೋಗ್ಯ ಸೇವೆ ಒದಗಿಸಬೇಕು. ಇದರಿಂದ ಗ್ರಾಮೀಣ ಜನರು ಚಿಕಿತ್ಸೆಗಾಗಿ ನಗರಗಳತ್ತ ವಲಸೆ ಬರುವುದನ್ನು ತಡೆಯಬಹುದು. ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನ ಹಾಗೂ ಸಂಶೋಧನೆಗಳು ವೇಗವಾಗಿ ಬೆಳೆಯುತ್ತಿದ್ದು, ಯುವ ವೈದ್ಯರು ಸಮಾಜದ ಎಲ್ಲ ವರ್ಗಗಳ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆ ನೀಡುವತ್ತ ಗಮನ ಹರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ್, ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ.ಜಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್, ಪ್ರೊ.ನೈಲಾಡಿ ಶ್ರೀಧರ್ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ, ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು. ಈ ವೇಳೆ ಸಿಎಂ ಡಿ.ಕೆ. ಶಿವಕುಮಾರ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ್, ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ.ಜಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರ ತಯಾರಿ

ಕರ್ನಾಟಕವು ದೇಶದ ಆರೋಗ್ಯ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು, ರಾಜ್ಯದಲ್ಲಿ 72 ವೈದ್ಯಕೀಯ ಕಾಲೇಜುಗಳಿವೆ. ಪ್ರತಿವರ್ಷ ಸುಮಾರು 13,940 ವೈದ್ಯರು ಹಾಗೂ 72 ಸಾವಿರಕ್ಕೂ ಹೆಚ್ಚು ಆರೋಗ್ಯ ಕ್ಷೇತ್ರದ ಪದವೀಧರರು ಹೊರಬರುತ್ತಿದ್ದಾರೆ. ಇದು ದೇಶದಲ್ಲೇ ಅತ್ಯಧಿಕ ಸಂಖ್ಯೆಯಾಗಿದ್ದು, ಕರ್ನಾಟಕದ ವೈದ್ಯರು ಮತ್ತು ನರ್ಸ್‌ಗಳು ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

> ಸಂಶೋಧನೆ ಮತ್ತು ನಾವೀನ್ಯತೆ ರಾಷ್ಟ್ರದ ಪ್ರಗತಿಯ ಅಡಿಪಾಯವಾಗಿದ್ದು, ಆರೋಗ್ಯ ವಿಜ್ಞಾನ ಕ್ಷೇತ್ರದಲ್ಲಿ ಭಾರತ ಇನ್ನಷ್ಟು ಸ್ವಾವಲಂಬಿಯನ್ನಾಗಿಸಲು ಸಂಶೋಧನೆಗೆ ಹೆಚ್ಚಿನ ಉತ್ತೇಜನ ನೀಡಬೇಕು.
>
> -ಥಾವರ್‌ಚಂದ್ ಗೆಹ್ಲೋತ್, ರಾಜ್ಯಪಾಲ

> ವಿವಿಗಳ ಯಶಸ್ಸು ವಿದ್ಯಾರ್ಥಿಗಳ ಸಂಖ್ಯೆ, ಪದವಿಗಳ ಸಂಖ್ಯೆಯಿಂದಲ್ಲ. ಗುಣ ಮಟ್ಟದ ಶಿಕ್ಷಕರಿಂದ ನಿರ್ಧಾರವಾಗು ತ್ತದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದು, ಸಂಶೋಧನೆ ಮತ್ತು ನವೋದ್ಯಮಕ್ಕೆ ಪ್ರೇರಣೆಯಾಗಬೇಕು.
>
> -ಡಿ.ಕೆ.ಶಿವಕುಮಾರ್, ಸಿಎಂ

103 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

ಪ್ರೊ.ನೈಲಾಡಿ ಶ್ರೀಧರ್ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ, ಡಾ.ಎ.ಸಿ.ಷಣ್ಮುಗಂ ಗೌರವ ಡಾಕ್ಟರೇಟ್ ಪದವಿ ನೀಡಲಾಯಿತು. ಜತೆಗೆ ವಿವಿಧ ವಿಷಯಗಳಲ್ಲಿ 72,741 ಅಭ್ಯರ್ಥಿಗಳು ಪದವಿ ಪಡೆದಿದ್ದಾರೆ. ಈ ಪೈಕಿ ಪಿಎಚ್‌ಡಿ 71, ಸೂಪರ್ ಸ್ಪೆಷಾಲಿಟಿ 211, ಸ್ನಾತಕೋತ್ತರ ಪದವಿ 9,761, ಸ್ನಾತಕೋತ್ತರ ಡಿಪ್ಲೋಮಾ ಪದವಿ 8, ಫೆಲೋಶಿಪ್ ಕೋರ್ಸ್ 256, ಸರ್ಟಿಫಿಕೇಟ್ ಕೋರ್ಸ್ 15 ಹಾಗೂ 62,419 ಸ್ನಾತಕ ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕ ವಿತರಿಸಲಾಯಿತು.

{ ಡಿ.ಕೆ.ಶಿವಕುಮಾರ್ } ಮುಖ್ಯಮಂತ್ರಿ

ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಿ. ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚಾಗುತ್ತಿವೆ. ಈ ಹಿನ್ನೆಲೆ ಕೃಷಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಿ. ರೈತರಿಗೆ ಅಗತ್ಯ ಮಾಹಿತಿ ಪೂರೈಸಿ. ಅತಿವೃಷ್ಟಿ, ಅನಾವೃಷ್ಟಿ ಎದುರಿಸಲು ಸನ್ನದ್ಧರಾಗುವಂತೆ ಸೂಚಿಸಿ.

ಸಮಾಚಾರ ಸಣ್ಣದಲ್ಲ

ಗುಂಡಿಗೆ ಬಿದ್ದು ಕಾರ್ಮಿಕ ದಂಪತಿಯ ಮಗು ಸಾವು

ಗೌರಿಬಿದನೂರು: ನಗರದ ಹಿರೇಬಿದನೂರಿನಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಹಿಂಭಾಗದಲ್ಲಿ ನಿರ್ಮಾಣ ಹಂತದ ಹೊಸ ಸರಕಾರಿ ಕಟ್ಟಡ ಕಾಮಗಾರಿಯಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ಒಂದೂವರೆ ವರ್ಷದ ಮಗು ಸಾವನ್ನಪ್ಪಿರುವ ಘಟನೆ ಸಂಭವಿಸಿದೆ. ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ ಬಂದಿರುವ ಕೂಲಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಅದೇ ಕಾಮಗಾರಿಯಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ರಾಜಪಾಲ್ ಹಾಗೂ ಶ್ವೇತಾ ದಂಪತಿ ಮಗಳಾದ ಪಲ್ಲವಿ (1.5) ದುರಂತವಾಗಿ ಮೃತಪಟ್ಟಿದ್ದಾಳೆ. ಕಾಮಗಾರಿ ಸ್ಥಳದಲ್ಲಿ ಲಿಫ್ಟ್ ನಿರ್ಮಾಣಕ್ಕಾಗಿ ಅಗಲವಾದ ಗುಂಡಿಯನ್ನು ತೋಡಲಾಗಿದ್ದು, ಇತ್ತೀಚಿನ ಮಳೆಯಿಂದಾಗಿ ಅದರಲ್ಲಿ ಸಾಕಷ್ಟು ನೀರು ತುಂಬಿಕೊಂಡಿತ್ತು. ಆದರೆ ಅಪಾಯಕಾರಿಯಾದ ಆ ಗುಂಡಿಯ ಸುತ್ತ ಯಾವುದೇ ಸುರಕ್ಷತಾ ಬೇಲಿ, ಎಚ್ಚರಿಕೆ ಫಲಕ ಅಥವಾ ರಕ್ಷಣಾ ವ್ಯವಸ್ಥೆ ಕಲ್ಪಿಸಿಲ್ಲ ಎಂಬ ಆರೋಪ ಕೇಳಿಬಂದಿದೆ. ಆಟವಾಡುತ್ತಿದ್ದ ವೇಳೆ ಮಗು ಪಲ್ಲವಿ ಆ ನೀರು ತುಂಬಿದ್ದ ಗುಂಡಿಗೆ ಜಾರಿ ಬಿದ್ದ ಪರಿಣಾಮ ಮೃತಪಟ್ಟಿದ್ದಾಳೆ ಎಂದು ತಿಳಿದುಬಂದಿದೆ. ಸರಕಾರದಿಂದ ಸೂಕ್ತ ಪರಿಹಾರ ನೀಡಬೇಕು ಎಂದು ಸ್ಥಳೀಯರು ಆಗ್ರಹಿಸಿದರು. ಅಲ್ಲದೇ ಸುರಕ್ಷತಾ ಕ್ರಮ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ವಹಿಸಿದ ಗುತ್ತಿಗೆದಾರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮದುವೆ ನೆಪದಲ್ಲಿ ಯುವತಿಗೆ ವಂಚಿಸಿದ ಆರೋಪಿ ಪರ ನಿಂತಿದ್ದ ಕಾಂಗ್ರೆಸ್ ನಾಯಕಿ

ಕೊಲೆ ಮಾಡುವುದಾಗಿ ಸಂತ್ರಸ್ತೆಗೆ ಬೆದರಿಕೆ ಕಾಂಗ್ರೆಸ್ ನಾಯಕಿ ವಿರುದ್ಧ ಕೇಸ್ ದಾಖಲು

ಬೆಳಗಾವಿ: ಮದುವೆಯಾಗುವುದಾಗಿ ನಂಬಿಸಿ ಯುವತಿಯನ್ನು ಲೈಂಗಿಕವಾಗಿ ಬಳಸಿಕೊಂಡು ನಂತರ ಕೈಕೊಟ್ಟ ಆರೋಪಿ ಯುವಕನ ಪರ ನಿಂತು, ಸಂತ್ರಸ್ತ ಯುವತಿಗೆ ಜೀವ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಕಾಂಗ್ರೆಸ್ ಮುಖಂಡೆ ಆಯಿಶಾ ಸನದಿ ವಿರುದ್ಧ ಪ್ರಕರಣ ದಾಖಲಾಗಿದೆ. ನಗರದ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ. ಯುವತಿಗೆ ಮೋಸ ಮಾಡಿದ ಆರೋಪದಲ್ಲಿ ಬದ್ರುದ್ದೀನ್ ಕಿಲ್ಲೇದಾರ್ ಹಾಗೂ ಬೆದರಿಕೆ ಹಾಕಿರುವ ಆರೋಪದಲ್ಲಿ ಕಾಂಗ್ರೆಸ್ ಮುಖಂಡೆ ಆಯೇಶಾ ಸನದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ದೂರಿನಲ್ಲಿ ಉಲ್ಲೇಖಿಸಿದಂತೆ ಕಾಂಗ್ರೆಸ್ ಮುಖಂಡೆ ಆಯಿಶಾ ಸನದಿ ಸಂತ್ರಸ್ತ ಯುವತಿಗೆ ಬೆದರಿಕೆ ಹಾಕಿದ್ದು, ಬದ್ರುದ್ದೀನ್ ಕಿಲ್ಲೇದಾರ್ ನನ್ನು ಮದುವೆ ಆಗಬೇಡ. ಇಲ್ಲವಾದರೆ ನಿನ್ನ ಖಾಸಗಿ ವೀಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ, ಹರಿಬಿಟ್ಟು ನಿನ್ನ ಕುರಿತು ಅಪಪ್ರಚಾರ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕಿದ್ದಾರೆ ಎಂದು ಉಲ್ಲೇಖಿಸಲಾಗಿದೆ. ಸಧ್ಯ ಈ ಪ್ರಕರಣದ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸಾವು ಬದುಕಿನ ನಡುವೆ ಯುವತಿ ಹೋರಾಟ

ಕಾಂಗ್ರೆಸ್ ಮುಖಂಡೆ ಆಯಿಶಾ ಸನದಿ ಕಿರುಕುಳದಿಂದ ಬೇಸತ್ತು ಸಂತ್ರಸ್ತ ಯುವತಿ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು ಸಧ್ಯ ಆಸ್ಪತ್ರೆಯಲ್ಲಿ ಸಾವು ಬದುಕಿನ ಮಧ್ಯೆ ಹೋರಾಟ ನಡೆಸಿದ್ದಾಳೆ. ಮಗಳಿಗೆ ಆದ ಅನ್ಯಾಯಕ್ಕೆ ನ್ಯಾಯ ಕೊಡಿಸುವಂತೆ ಯುವತಿಯ ಪೋಷಕರು ಪೊಲೀಸ್ ಠಾಣೆಗೆ ಅಲೆದಾಟ ನಡೆಸಿದ್ದು, ಸೂಕ್ತ ತನಿಖೆಗೆ ಆಗ್ರಹಿಸಿದ್ದಾರೆ.

ಪ್ರಕರಣದ ಮೇಲೆ ಬೆಳಕು ಚೆಲ್ಲಿದ್ದ ವಿಶ್ವವಾಣಿ

ಲೈಂಗಿಕ ಕಿರುಕುಳಕ್ಕೆ ಬೇಸತ್ತು ಯುವತಿ ಆತ್ಮಹತ್ಯೆಗೆ ಯತ್ನಿಸಿದ್ದ ಪ್ರಕರಣವನ್ನು ವಿಶ್ವವಾಣಿ ಕಳೆದ ಎರಡು ದಿನಗಳ ಹಿಂದೆಯೇ ಬೆಳಕಿಗೆ ತಂದಿತ್ತು. ಸದ್ಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಪಕ್ಷದಿಂದ ಉಚ್ಚಾಟನೆಗೆ ಆಗ್ರಹ

ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಪ್ರಮುಖರ ಹೆಸರು ದುರುಪಯೋಗಪಡಿಸಿಕೊಂಡು ಯುವತಿಗೆ ಜೀವ ಬೆದರಿಕೆ ಹಾಕಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡೆ ಆಯಿಶಾ ಸನದಿ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ರಾಜಕೀಯ ನಾಯಕರ ಹೆಸರನ್ನು ಸ್ವಂತ ಲಾಭಕ್ಕಾಗಿ ಬಳಸಿಕೊಂಡು ಅವರ ಗೌರವಕ್ಕೆ ಚ್ಯುತಿ ತರುವವರ ವಿರುದ್ಧ ಕ್ರಮಕ್ಕೆ ಪಕ್ಷದ ವಲಯದಲ್ಲಿ ಆಗ್ರಹ ವ್ಯಕ್ತವಾಗಿದೆ.

ಇರಾನ್-ಅಮೆರಿಕ ಶಾಂತಿ ಒಪ್ಪಂದಕ್ಕೆ ಮತ್ತೆ ಕಂಟಕ?

← ಮೊದಲ ಪುಟದಿಂದ

ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ಪಶ್ಚಿಮ ಏಷ್ಯಾ ಭಾಗದಲ್ಲಿ ಇದೊಂದು ದೊಡ್ಡ ಸಾಧನೆ ಎಂದು ಬಣ್ಣಿಸಿದ್ದಾರೆ.

ಹೊರ್ಮುಜ್ ಜಲಸಂಧಿಯಲ್ಲಿ ಸುಂಕ ಇಲ್ಲ, ಶುಲ್ಕ ವಸೂಲಿ: ಜಾಗತಿಕ ತೈಲ ವ್ಯಾಪಾರದ ಪ್ರಮುಖ ಕೊಂಡಿಯಾಗಿರುವ ಹೊರ್ಮುಜ್ ಜಲಸಂಧಿ ಶಾಶ್ವತವಾಗಿ ಟೋಲ್ ಮುಕ್ತವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದರೂ, ಕೆಲವೊಂದು ಸೇವೆಗಳಿಗೆ ಶುಲ್ಕ ವಿಧಿಸುವ ಸುಳಿವನ್ನು ಇರಾನ್ ನೀಡಿದೆ.

ಸಾರಿಗೆ ಸುಂಕಗಳನ್ನು ವಿಧಿಸಲು ಬಯಸುತ್ತಿಲ್ಲ, ಬದಲಾಗಿ ಒದಗಿಸಡ ಲಾಗುವ ಸೇವೆಗಳಿಗೆ ಪ್ರತಿಯಾಗಿ ಶುಲ್ಕ ವಸೂಲಿ ಮಾಡಲಾಗುವುದು ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯಿ ತಿಳಿಸಿದ್ದಾರೆ.

ಅಲ್ಲಿ ಯಾವ ರೀತಿಯ ಸೇವೆಗಳನ್ನು ಇರಾನ್ ಒದಗಿಸಲಿದೆ ಎನ್ನುವುದು ಗೊತ್ತಾಗಿಲ್ಲ. ಆದರೆ ಪರಿಸರ ಸಂಬಂಧಿತ ಶುಲ್ಕಗಳನ್ನು ವಿಧಿಸಬಹುದು ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ.

ಮೇಲ್ಮನೆ ಮೇಲಾಟ

← ಮೊದಲ ಪುಟದಿಂದ

ಗೋವಿಂದ ರಾಜ್ ಎನ್‌ಡಿಎ ಅಭ್ಯರ್ಥಿಯಾಗಿದ್ದಾರೆ. ಜೆಡಿಎಸ್ ಬಳಿ ಸಂಖ್ಯಾಬಲ ಇಲ್ಲ. ಆದರೆ, ಬಿಜೆಪಿಯ ಉಳಿಕೆ ಮತ ಹಾಗೂ ಬಿಜೆಪಿ ಉಚ್ಚಾಟಿತ ಶಾಸಕರ ಮತಗಳ ಮೇಲೆ ಕಣ್ಣಿಟ್ಟಿದೆ. ಇದರ ಜತೆಗೆ ತನ್ನ 18 ಶಾಸಕರನ್ನೂ ಒಟ್ಟಾಗಿ ಹಿಡಿದಿಟ್ಟುಕೊಂಡು ತನ್ನ ಅಭ್ಯರ್ಥಿಗೇ ಮತ ಹಾಕಿಸುವ ಸವಾಲು ಜೆಡಿಎಸ್ ಮೇಲಿದೆ.

ಅಡ್ಡ ಮತದಾನದ ಭೀತಿ: ಏಳನೇ ಅಭ್ಯರ್ಥಿಗಳ ಹಣಾಹಣಿಯಲ್ಲಿ ಅಡ್ಡ ಮತದಾನ ಆಗುವ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಇತ್ತ ಕೆಲ ಜೆಡಿಎಸ್ ಶಾಸಕರಿಂದ ಕಾಂಗ್ರೆಸ್ ಅಭ್ಯರ್ಥಿ ಪರ ಅಡ್ಡ ಮತದಾನ ನಡೆಯಲಿದೆಯಾ ಎಂಬ ಆತಂಕ ಜೆಡಿಎಸ್ ಪಕ್ಷದಲ್ಲಿ ಎದ್ದು ಕಾಣುತ್ತಿದೆ. ಹೀಗಾಗಿ ಜೆಡಿಎಸ್‌ಗೆ ತನ್ನ 18 ಶಾಸಕರನ್ನೂ ಹಿಡಿದಿಟ್ಟುಕೊಳ್ಳುವ ಸವಾಲು ಎದುರಾಗಿದೆ. 18 ಶಾಸಕರೂ ತಮ್ಮ ಅಭ್ಯರ್ಥಿಗೇ ಮತ ಹಾಕುವುದನ್ನು ಖಚಿತಪಡಿಸುವ ಅಗ್ನಿಪರೀಕ್ಷೆ ಜೆಡಿಎಸ್‌ನದ್ದಾಗಿದೆ. ಒಂದು ವೇಳೆ ಅಡ್ಡ ಮತದಾನ ಅಥವಾ ಮತದಾನದ ವೇಳೆ ಗೈರಾದರೆ ಜೆಡಿಎಸ್‌ಗೆ ಅದು ರಾಜಕೀಯವಾಗಿ ಹಿನ್ನಡೆಯಾಗಲಿದೆ. ತಮ್ಮ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಜೆಡಿಎಸ್ ವಿಫಲವಾಗಿದೆ ಎನ್ನಬಹುದು. ಹೀಗಾಗಿ ಜೆಡಿಎಸ್‌ಗೆ ಮೇಲ್ಮನೆ ಚುನಾವಣೆ ಪ್ರತಿಷ್ಠೆಯ ಪ್ರಶ್ನೆ ಯಾಗಿದೆ. ಅದಕ್ಕಾಗಿ ತಮ್ಮ ಶಾಸಕರನ್ನು ರೆಸಾರ್ಟ್‌ನಲ್ಲಿರಿಸಿದ್ದಾರೆ.

ಸಾಮಾಜಿಕ ಜಾಲತಾಣದ ಪೋಸ್ಟ್‌ಗೆ ಮೂಗುದಾರ

← ಮೊದಲ ಪುಟದಿಂದ

ಈ ಸೆಕ್ಷನ್‌ಗಳ ಅನ್ವಯ ಕ್ರಮಕ್ಕೆ ಸೂಚನೆ: ಭಾರತೀಯ ನ್ಯಾಯ ಸಂಹಿತೆ 2023ರ ಸೆಕ್ಷನ್ 77ರಂತೆ ಗೌಪ್ಯತೆ ಉಲ್ಲಂಘನೆಗೆ ಸಂಬಂಧಿಸಿದ ವಿಧಿಗಳು, ಮಾಹಿತಿ ತಂತ್ರಜ್ಞಾನ ಕಾಯಿದೆ 2000ರ ಸೆಕ್ಷನ್ 66(ಇ), 67 ಮತ್ತು 67(ಎ) ಗಳನ್ನು ಅಳವಡಿಸಬೇಕು ಎಂದು ಸೂಚಿಸಲಾಗಿದೆ. ಮಹಿಳಾ ಸಂತ್ರಸ್ತರಿದ್ದಲ್ಲಿ 77ರ ವಿಧಿಯ ಜತೆಗೆ ಐಟಿ ಕಾಯ್ದೆಯ ಸೆಕ್ಷನ್‌ಗಳನ್ನು ಸೇರಿಸಿ ಎಫ್‌ಐಆರ್ ಕಡ್ಡಾಯವಾಗಿ ನೋಂದಣಿ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ಈ ಪ್ರಕರಣಗಳಲ್ಲಿ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು: ಬ್ಲ್ಯಾಕ್‌ಮೇಲ್ ವೀಡಿಯೊಗಳು ಸೆಕ್ಸ್ಟಾರ್ಷನ್, ರಿವೆಂಜ್ ಪೋರ್ನೋಗ್ರಫಿ ಮುಂತಾದ ಪ್ರಕರಣಗಳಲ್ಲಿ ಕೂಡ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಪೀಡಿತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ದೂರು ನಿರಾಕರಿಸಬಾರದು. ಅಪರಾಧ ಸ್ಥಳೀಯ ವ್ಯಾಪ್ತಿಯ ಹೊರಗೆ ನಡೆದಿದ್ದರೆ ಝೀರೋ ಎಫ್‌ಐಆರ್ ದಾಖಲಿಸಿ ಸಂಬಂಧಿತ ಠಾಣೆಗೆ ವರ್ಗಾಯಿಸಬೇಕು ಎಂದು ತಿಳಿಸಲಾಗಿದೆ. ಅಪರಾಧಕರ ವಿಷಯವನ್ನು ತಕ್ಷಣ ತೆಗೆದುಹಾಕಲು ಐಟಿ ನಿಯಮಗಳ ಪ್ರಕಾರ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ನೀಡಬೇಕು ಮತ್ತು ಎಲ್ಲ ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು. ಪೀಡಿತರ ಗುರುತು ಗೌಪ್ಯವಾಗಿರಬೇಕು, ಮಹಿಳಾ ಸಂತ್ರಸ್ತೆಯ ದೂರುಗಳನ್ನು ಮಹಿಳಾ ಅಧಿಕಾರಿಗಳು ದಾಖಲಿಸುವಂತೆ ಸೂಚಿಸಲಾಗಿದೆ.

ಎಫ್‌ಐಆರ್‌ಗೆ ವಿಳಂಬ ಮಾಡಿದರೆ ಕ್ರಮ: ತನಿಖಾಧಿಕಾರಿಗಳು ಸೈಬರ್ ಕ್ರೈಂ ಘಟಕಗಳೊಂದಿಗೆ ಸಮನ್ವಯತೆ ಸಾಧಿಸಿ ತಾಂತ್ರಿಕ ತನಿಖೆ ಹಾಗೂ ಫೋರೆನ್ಸಿಕ್ ವಿಶ್ಲೇಷಣೆ ನಡೆಸಬೇಕು. ಎಫ್‌ಐಆರ್ ನೋಂದಣಿ ಮಾಡದಿರುವುದು ಅಥವಾ ಪೂರ್ವಾನುಮತಿ ಎಂಬ ತಪ್ಪು ಕಾರಣದಿಂದ ವಿಳಂಬ ಮಾಡಿದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಡಿಜಿ-ಐಜಿಪಿ ಡಾ.ಎಂ.ಎ. ಸಲೀಂ ಆದೇಶದಲ್ಲಿ ಎಚ್ಚರಿಸಿದ್ದಾರೆ.

40 ಕಡೆ ಲೋಕಾ ದಾಳಿ

← ಮೊದಲ ಪುಟದಿಂದ

ಶೇ.121ರಷ್ಟು ಹೆಚ್ಚುವರಿ ಆಸ್ತಿ ಗಳಿಕೆ ಮಾಡಿದ್ದಾರೆ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಕೌಲಾಪೂರೆ ತಿಳಿಸಿದ್ದಾರೆ.ಕಲಬುರಗಿಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ನಿವೃತ್ತ ಸೂಪರಿಡೆಂಟೆಂಟ್ ಎಂಜಿನಿಯರ್ ಮಾಣಿಕ್ ಕನಕಟ್ಟೆ, ಅವರ ಮನೆಗಳು, ಕಾಂಪ್ಲೆಕ್ಸ್‌ಗಳು ಹಾಗೂ ತೋಟದ ಮನೆಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.ಚಿಕ್ಕಮಗಳೂರಿನ ಎಸಿಎಫ್ ಮೋಹನ್ ಅವರ ಮೇಲೂ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಸರಕಾರಿ ಅಧಿಕಾರಿಗಳ ಸ್ಥಿರಚರಾಸ್ತಿ, ಕೋಟ್ಯಂತರ ರು. ನಗದು, ವಿವಿಧ ವಲಯಗಳಲ್ಲಿ ಹೂಡಿಕೆ, ಚಿನ್ನಾಭರಣ ಸೇರಿದಂತೆ ಐಶಾರಾಮಿ ವಸ್ತುಗಳನ್ನು ಕಂಡು ಅಧಿಕಾರಿಗಳೇ ಬೆಚ್ಚಿಬಿದ್ದಿದ್ದಾರೆ.

ಲೋಕಾಯುಕ್ತ ಬಲೆಗೆ ಎಸ್‌ಡಿಎ

ಬಳ್ಳಾರಿ: ಜಮೀನು ಪಹಣಿಯಲ್ಲಿ ಇನಾಮ್ ನಮೂದನ್ನು ರದ್ದುಪಡಿಸಿ ಪಟ್ಟಾ ಎಂದು ದಾಖಲಿಸಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಸಿರುಗುಪ್ಪ ತಹಸೀಲ್ದಾರ್ ಕಚೇರಿಯ ಪ್ರಥಮ ದರ್ಜೆ ಸಹಾಯಕಿ ಸುವರ್ಣ ಹಾಗೂ ಅವರ ಪುತ್ರ ದೀಪಕ್ ಅವರನ್ನು ಲೋಕಾಯುಕ್ತರು ಬಂಧಿಸಿದ್ದಾರೆ. ಸಿರುಗುಪ್ಪ ತಾಲೂಕಿನ ಬೈರಾಪುರ ಗ್ರಾಮದ ಗೋವಿಂದ ಕೆ. ಎಂಬವರು ನೀಡಿದ ದೂರಿನ ಮೇರೆಗೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಅಧಿಕಾರಿಗಳಿಗೆ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಸೂಚನೆ

ನೀರಾವರಿ ಯೋಜನೆ ಶೀಘ್ರವಾಗಿ ಪೂರ್ಣಗೊಳಿಸಿ



ಬೆಂಗಳೂರು: ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿನ ನೀರಾವರಿ ಯೋಜನೆಗಳು, ಕೆರೆ ತುಂಬಿಸುವ ಕಾಮಗಾರಿಗಳು, ಅಣೆಕಟ್ಟು ಸಂರಕ್ಷಣೆ ಹಾಗೂ ಕಾಲುವೆ ಆಧುನೀಕರಣ ಯೋಜನೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ರೈತರು ಮತ್ತು ಫಲಾನುಭವಿಗಳಿಗೆ ತಲುಪಿಸುವಂತೆ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಂಗಳವಾರ ನಡೆದ ಕರ್ನಾಟಕ ನೀರಾವರಿ ನಿಗಮ ನಿಯಮಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕೃಷ್ಣ ಮೇಲ್ದಂಡೆ ಯೋಜನೆ, ಭದ್ರಾ ಮೇಲ್ದಂಡೆ ಯೋಜನೆ ಹಾಗೂ ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ ಸೇರಿದಂತೆ ಪ್ರಮುಖ ಯೋಜನೆಗಳ ಪ್ರಗತಿ ಪರಿಶೀಲಿಸಲಾಗಿದೆ. ಕೆಎನ್‌ಎನ್‌ಎಲ್ ವ್ಯಾಪ್ತಿಯಲ್ಲಿ ನಬಾರ್ಡ್ ಸಹಾಯಧನ, ವಿಶ್ವಬ್ಯಾಂಕ್ ನೆರವಿನ ಡಿಆರ್‌ಐಪಿ ಯೋಜನೆಗಳು ಹಾಗೂ ಕಾಲುವೆಗಳ ಆಧುನೀಕರಣ ಕಾಮಗಾರಿಗಳ ಪ್ರಗತಿ ಪರಿಶೀಲನೆ, ನಬಾರ್ಡ್ ನೆರವಿನ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಜನರಿಗೆ ಅನುಕೂಲ ಕಲ್ಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.ಸಭೆಯಲ್ಲಿ ರಾಜ್ಯ ಜಲ ನೀತಿ-2022 ಹಾಗೂ ಕರ್ನಾಟಕ ನೀರಾವರಿ (ತಿದ್ದುಪಡಿ) ಕಾಯ್ದೆ-2024ರ ಅನುಷ್ಠಾನದ ಕುರಿತು ಚರ್ಚೆ ನಡೆಸಲಾಗಿದೆ. ಈಗಾಗಲೇ ಜಾರಿಯಲ್ಲಿರುವ ಈ ಕಾಯ್ದೆ ಮುಂದಿನ ಮೂರು ತಿಂಗಳೊಳಗೆ ಇಲಾಖೆಯ ಎಲ್ಲ ಹಂತಗಳಲ್ಲಿ ಕಡ್ಡಾಯವಾಗಿ ಅನುಷ್ಠಾನಗೊಳಿಸುವಂತೆ ಸೂಚನೆ ನೀಡಲಾಯಿತು.

ನೀರಾವರಿ ಇಲಾಖೆಯ ಯೋಜನೆಗಳ ಕಾರ್ಯಭಾರ, ಆಯವ್ಯಯ, ಬಾಕಿ ಬಿಲ್ಲು ಹಾಗೂ ಸಿಬ್ಬಂದಿ ಕೊರತೆಯ ವಿಷಯದ ಕುರಿತು ಚರ್ಚೆ ಮಾಡಲಾಗಿದೆ. ಕೆಎನ್‌ಎನ್‌ಎಲ್ ನಲ್ಲಿ ಸುಮಾರು ಶೇ.50ರಷ್ಟು ಹುದ್ದೆಗಳು ಖಾಲಿ ಇವೆ. ವಿಶೇಷವಾಗಿ ಸಹಾಯಕ ಎಂಜಿನಿಯರ್ ಹುದ್ದೆಗಳನ್ನು ಕೆಪಿಎಸ್‌ಸಿ ಮತ್ತು ಕೆಇಎ ಮೂಲಕ ಭರ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ಜತೆಗೆ ಪ್ರತಿ ವರ್ಷ ಮಂಜೂರಾದ ಹುದ್ದೆಗಳ ಪೈಕಿ ಕನಿಷ್ಠ ಶೇ.2ರಷ್ಟು ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಇಲಾಖೆಯ ಕಾರ್ಯಕ್ಷಮತೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದರು.

ಜೂನ್ 25ರಂದು ಟಿಬಿ ಡ್ಯಾಂ ಗೇಟ್‌ಗಳ ಉದ್ಘಾಟನೆ

ಜೂನ್ 25ರಂದು ತುಂಗಭದ್ರ ಅಣೆಕಟ್ಟನಲ್ಲಿ ಹೊಸದಾಗಿ ಅಳವಡಿಸಲಾದ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲು ಯೋಜನೆ ರೂಪಿಸಲಾಗಿದೆ. ಕಾರ್ಯಕ್ರಮದ ಸಿದ್ಧತೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆದಿದ್ದು, ಜೂನ್ 18ರಂದು ಸ್ಥಳಕ್ಕೆ ಭೇಟಿ ನೀಡಿ ಪೂರ್ವಭಾವಿ ಸಿದ್ಧತೆಗಳನ್ನು ಪರಿಶೀಲಿಸಲಾಗುವುದು. ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಜಲಶಕ್ತಿ ಸಚಿವರು, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯ ಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಹೇಳಿದರು

ರೌಡಿ ಪಟ್ಟಿಯಿಂದ ಹಲವರು ಹೊರಕ್ಕೆ: ಮೇಲ್ಮನವಿಗೆ ಸಿದ್ಧತೆ

← ಮೊದಲ ಪುಟದಿಂದ

ಬೆಂಗಳೂರು ನಗರದಲ್ಲಿ ಮಾತ್ರ 7 ಜನರನ್ನು ಈ ಪಟ್ಟಿಯಿಂದ ಕೈಬಿಡಲಾಗಿದೆ. ಇನ್ನು ಐದು ಜನರ ಸಂಬಂಧ ಪೊಲೀಸ್ ದೂರು ಪ್ರಾಧಿಕಾರದಿಂದ ನೋಟಿಸ್ ಬಂದಿದೆ. ನಾವು ಎಲ್ಲ ಮಾಹಿತಿಗಳನ್ನು ಪರಿಶೀಲಿಸುತ್ತಿದ್ದೇವೆ. ಇದುವರೆಗೂ ಯಾವುದೇ ಹೊಸ ಪ್ರಕರಣಗಳು ದಾಖಲಾಗಿಲ್ಲ, ನಾವು ಡಿಜಿ ಮತ್ತು ಐಜಿ ಅವರೊಂದಿಗೆ ಚರ್ಚಿಸಿ ಕಾನೂನುಬದ್ಧವಾಗಿ ಮುಂದಿನ ಹೆಜ್ಜೆ ಇಡುತ್ತೇವೆ. ರೌಡಿ ಪಟ್ಟಿಯಿಂದ ಪ್ರಮುಖ ವ್ಯಕ್ತಿಗಳನ್ನು ಕೈಬಿಟ್ಟಿರುವ ಪ್ರಕರಣ ಅತ್ಯಂತ ಸೂಕ್ಷ್ಮ ವಿಷಯವಾಗಿದ್ದು, ಕಾನೂನು ಸಲಹೆ ಪಡೆದು ಮೇಲ್ಮನವಿ ಸಲ್ಲಿಸಲಾಗುವುದು ಎಂದು ಆಯುಕ್ತರು ಸ್ಪಷ್ಟಪಡಿಸಿದ್ದಾರೆ.ಇದು ನ್ಯಾಯಾಲಯದ ವಿಷಯವಾಗಿರುವುದರಿಂದ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ, ರೌಡಿಗಳನ್ನು ನಿಯಂತ್ರಿಸುವುದು ಹೇಗೆ ಎಂದು ನಮಗೆ ತಿಳಿದಿದೆ. ರೌಡಿ ಪರೇಡ್ ಕೇವಲ ಒಂದು ಹೆಜ್ಜೆ ಮಾತ್ರ. ಅವರನ್ನು ರೌಡಿ ಪಟ್ಟಿಯಿಂದ ಏಕೆ ಕೈಬಿಡಲಾಗಿದೆ ಎಂಬ ಬಗ್ಗೆ ಮಾಹಿತಿ ಪಡೆಯುತ್ತೇವೆ ಮತ್ತು ಮಾರ್ಗಸೂಚಿಗಳ ಪಾಲನೆ ಆಗಿಲ್ಲ ಎಂಬ ಆರೋಪಗಳನ್ನೂ ಪರಿಶೀಲಿಸುತ್ತೇವೆ ಎಂದು ಅವರು ಹೇಳಿದ್ದಾರೆ.

ಪರಿಶೀಲಿಸಲು ಸೂಚನೆ

ಈ ಸಂಬಂಧ ಪ್ರತಿಕ್ರಯಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಈ ವಿಷಯ ಸಂಬಂಧ ಬೆಂಗಳೂರು ಪೊಲೀಸ್ ಕಮಿಷನರ್‌ರೊಂದಿಗೆ ಮಾತನಾಡಿ, ಎಡವಟ್ಟು ಹೇಗೆ ಸಂಭವಿಸಿದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸುವಂತೆ ಸೂಚಿಸಿದ್ದೇನೆ. ಲೋಪವನ್ನು ಸರಿಪಡಿಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದೇನೆ. ಈ 66 ರೌಡಿಶೀಟರ್‌ಗಳ ಪಟ್ಟಿಯಲ್ಲಿ 8 ಜನರು ಬಿಜೆಪಿ ಕಾರ್ಯಕರ್ತರು. ಸೈಲೆಂಟ್ ಸುನೀಲ ಎಂಬ ರೌಡಿಶೀಟರ್‌ನ ಹೆಸರನ್ನು ನಿರ್ದಿಷ್ಟವಾಗಿ ಉಲ್ಲೇಖಿಸಿರುವ ಅವರು, ಪೊಲೀಸ್ ಇಲಾಖೆಯ ಕಾರ್ಯವೈಖರಿಯಲ್ಲಿನ ಈ ಲೋಪ ಸರಿಪಡಿಸಲು ಸರಕಾರ ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಶಿಕ್ಷಕನಿಗೆ ತರಾಟೆ

ಬೆಳಗಾವಿ: ಹತ್ತನೇ ತರಗತಿ ವಿದ್ಯಾರ್ಥಿಗಳನ್ನು ಶೌಚಾಲಯಕ್ಕೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡುತ್ತಿದ್ದ ಸರಕಾರಿ ಶಾಲಾ ಶಿಕ್ಷಕನನ್ನು ಪೋಷಕರು ಥಳಿಸಿದ ಘಟನೆ ಚಿಕ್ಕೋಡಿಯಲ್ಲಿ ಮಂಗಳವಾರ ನಡೆದಿದೆ. ಸರಕಾರಿ ಉರ್ದು ಪ್ರೌಢಶಾಲೆಯ ಕನ್ನಡ ಭಾಷಾ ಶಿಕ್ಷಕ ಶ್ರೀಶೈಲ್ ಕುಂಬಾರ ವಿದ್ಯಾರ್ಥಿಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಕೇಳಿಬಂದಿದೆ. ಕನ್ನಡ ವಿಷಯದಲ್ಲಿ ಉತ್ತೀರ್ಣಗೊಳಿಸುವುದಾಗಿ ವಿದ್ಯಾರ್ಥಿಗಳಿಗೆ ಆಮಿಷವೊಡ್ಡಿ ಶಾಲೆಯ ಕೊಠಡಿ ಹಾಗೂ ಶೌಚಾಲಯಕ್ಕೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡುತ್ತಿದ್ದ ಎನ್ನಲಾಗಿದೆ.

ಐದಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದೇ ರೀತಿಯ ಕಿರುಕುಳ ನೀಡಿರುವ ಆರೋಪದ ಮಾಹಿತಿ ಹೊರಬಿದ್ದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಪೋಷಕರು ಮಂಗಳವಾರ ಶಾಲೆಗೆ ನುಗ್ಗಿ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡು ಥಳಿಸಿದ್ದಾರೆ. ಈ ವೇಳೆ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ದೆಹಲಿಯಲ್ಲೂ ಪ್ರಿಯಾಂಕ್ ಸದ್ದು

← ಮೊದಲ ಪುಟದಿಂದ

ಪಾರದರ್ಶಕತೆ ಕೇಳುವುದು ತಪ್ಪಾ? ಪತ್ರದಲ್ಲಿ ತಪ್ಪೇನಿದೆ ಹೇಳಿ? ನಿತ್ಯ ಸಾವಿರಾರು ಶಾಖಾ ಸಭೆಗಳನ್ನು ನಡೆಸಲಾಗುತ್ತಿದೆ. ಆರ್‌ಎಸ್‌ಎಸ್ ಮಾಹಿತಿ ನೀಡದಂತೆ ಲಕ್ಷಾಂತರ ಜನರನ್ನು ಸೇರಿಸಿ ಪಂಥಸಂಚಲನ ಮಾಡುತ್ತಿದೆ. ಅಖಿಲ ಭಾರತ ಪ್ರತಿನಿಧಿ ಸಭಾ ಈ ಮಾಹಿತಿ ನೀಡಿದೆ. ಹೈಕೋರ್ಟ್ ಆದೇಶ ಉಲ್ಲಂಘಿಸಿ ಪಥಸಂಚಲನ ಮಾಡಿದರೆ ಪ್ರಶ್ನೆ ಮಾಡಬಾರದಾ? ಎಂದು ಕೇಳಿದರು.

ಜವಾಬ್ದಾರಿ ಸ್ಥಾನದಲ್ಲಿ ಕುಳಿತು ನಾನು ಕೇಳುತ್ತಿದ್ದೇನೆ. ಯಾವುದೇ ಧರ್ಮದ ಸಂಘ ಸಂಸ್ಥೆಗಳಾದರೂ ಕಾನೂನು ಅಡಿಯಲ್ಲಿ ಬರಬೇಕು. ಯಾವುದೇ ಕಾರ್ಯಕ್ರಮ ಮಾಡಿದರೂ ಪೊಲೀಸ್ ಅನುಮತಿ ಪಡೆಯಬೇಕು. ಆರ್‌ಎಸ್‌ಎಸ್ ಪಡೆಯುವುದು ತಪ್ಪಾ? ನಿಮ್ಮ ಆಡಳಿತ ಸಿಬ್ಬಂದಿ ಯಾರು ಎಂದು ತಿಳಿದುಕೊಳ್ಳಬಾರದಾ? ದೇಣಿಗೆ ಸಂಗ್ರಹ ಮಾಡುತ್ತಿದ್ದಾರೆ, ಎಷ್ಟು ಬರ್ತಿದೆ? ಇದೆಲ್ಲಾ ಕೇಳಬಾರದಾ? ಆರ್‌ಎಸ್‌ಎಸ್‌ನವರು ಕಾನೂನು ಹೋರಾಟಕ್ಕೆ ಮೂರು ಕೋಟಿ ಖರ್ಚು ಮಾಡಿದ್ದಾರೆ. ಸಂಘದ ನಾಯಕರು ಅಮೆರಿಕ ಪ್ರವಾಸ ಮಾಡುತ್ತಾರೆ. ಅವರಿಗೆ ಹಣ ಎಲ್ಲಿಂದ ಬರ್ತಿದೆ? ಅವರ ಚಟುವಟಿಕೆಗಳು ಏನು? ಅಂತ ಪ್ರಶ್ನೆಗಳ ಮಳೆಸುರಿಸಿದರು.

ಸಫಾಯಿ ಕರ್ಮಚಾರಿಗೂ ನೋಂದಣಿ ಬೇಕು, ಇವರಿಗೆ ನೋಂದಣಿ ಯಾಕೆ ಇಲ್ಲ? ಎಲ್ಲದಕ್ಕೂ ಧರ್ಮ ಅಡ್ಡ ತರ್ತಾರೆ, ನಾನು ಎಲ್ಲಿ ಧರ್ಮ ಉಲ್ಲೇಖಿಸಿದ್ದೇನೆ? ನನ್ನ ಪತ್ರದಲ್ಲಿ ಹಿಂದೂ ಅನ್ನೊ ಪದ ಎಲ್ಲಿದೆ? ಕೆಲವು ಕಡೆ ನನ್ನ ಪತ್ರಕ್ಕೆ ಸರ ಸಂಘ ಸಂಚಾಲಕ ಮೋಹನ್ ಭಾಗವತ್ ಉತ್ತರಿಸಿದ್ದಾರೆ ಎನ್ನಲಾಗುತ್ತಿದೆ.

ವಾಸ್ತವದಲ್ಲಿ ಅವರು ಇನ್ನೂ ಉತ್ತರ ನೀಡಿಲ್ಲ. ಮೋಹನ್ ಭಾಗವತ್ ಅವರು ಜೂನ್ 13ರಂದು ನೀಡಿದ ಹೇಳಿಕೆಯನ್ನು ತಿರುಚಲಾಗುತ್ತಿದೆ. ನಾನು ನಿನ್ನೆ ಪತ್ರ ಬಿಡುಗಡೆ ಮಾಡಿದ್ದೇನೆ. ಅದಕ್ಕೂ ಮುನ್ನ ಹೇಳಿಕೆ ನೀಡಿದ್ದಾರೆ, ಹಾಗಿದ್ದಾಗ ಅದು ಉತ್ತರ ಹೇಗೆ ಆಗಲು ಸಾಧ್ಯ? ನಾನು ಧರ್ಮಕ್ಕೆ ನೋಂದಣಿ ಕೇಳುತ್ತಿಲ್ಲ, ಸಂಘಕ್ಕೆ ನೋಂದಣಿ ಕೇಳುತ್ತಿದ್ದೇನೆ, ಅವರು ಉತ್ತರಿಸಲಿ ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂಖ್ಯೆ: ಬಿಡಿಎ/2026-27/ಎಸ್‌ಇ0110 ದಿನಾಂಕ: 16.06.2026
ಟೆಂಡರ್ ಪ್ರಕಟಣೆ
ಬಿಡಿಎ, **"ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ)ಕ್ಕೆ ಇಂಟರ್‌ಮೀಡಿಯೇಟ್ ಸರ್ವರ್ (Main+DR)ನ ಪೂರೈಕೆ, ಸ್ಥಾಪನೆ, ಸಂರಚನೆ, ಕಾರ್ಯಾಚರಣೆ ಮತ್ತು ಎರಡು ವರ್ಷಗಳ ಏಕಕಾಲೀನ ವಾರ್ಷಿಕ ನಿರ್ವಹಣೆಗಾಗಿ ಸೇವಾ ಪೂರೈಕೆದಾರರ ಆಯ್ಕೆ ಮಾಡಲು"** ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯ ಮತ್ತು ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25.06.2026, ಸಂಜೆ 5.30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **29.06.2026, ಬೆಳಿಗ್ಗೆ 11.30 ಗಂಟೆ.** ಆಸಕ್ತಿಯುಳ್ಳ ಬಿಡ್ಡುದಾರರು ಸಂಕ್ಷಿಪ್ತ ವಿವರಗಳಿಗೆ **https://kppp.karnataka.gov.in** ಅನ್ನು ಪರಿವೀಕ್ಷಿಸಿ ಅಥವಾ ಇಡಿಪಿ ಸೆಲ್, ಬಿಡಿಎ ಕೇಂದ್ರ ಕಚೇರಿ, ಬೆಂಗಳೂರು-560020 ಅನ್ನು ಸಂಪರ್ಕಿಸಿ. ಯಾವುದೇ ತಿದ್ದುಪಡಿ ಅಥವಾ ಅನುಬಂಧಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಆದ್ದರಿಂದ ಬಿಡ್ಡುದಾರರು ಪೋರ್ಟಲ್‌ನ್ನು ನಿಯಮಿತವಾಗಿ ಪರಿಶೀಲಿಸಲು ವಿನಂತಿಸಲಾಗಿದೆ.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok
ಸಹಿ/- ವಿಭಾಗದ ಮುಖ್ಯಸ್ಥರು, ಇಡಿಪಿ ಸೆಲ್, ಬಿಡಿಎ, ಬೆಂಗಳೂರು

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ, ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ, ಬಾಗಲಕೋಟೆ - 587 104.
ಸಂಖ್ಯೆ : ಆ.ಅ./ತೋ.ವಿ.ವಿ.ಬಾ./ಟೆಂ.ಪ್ರ.-259/26-27 ದಿನಾಂಕ : 16-06-2026
ಟೆಂಡರ್ ಪ್ರಕಟಣೆ
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣಕ್ಕೆ ಭದ್ರತೆಗಾಗಿ ಕಾವಲುಗಾರರ ಹಾಗೂ ಇನ್ನಿತರ ಸೇವೆಗಾಗಿ ಅರ್ಹ ಗುತ್ತಿಗೆದಾರರಿಂದ ಷರತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ **https://kppp.karnataka.gov.in.** ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಸಲ್ಲಿಸುವುದು.
ಟೆಂಡರ್‌ನ ಘಟಣಾವಳಿಗಳು (ವೇಳಾಪಟ್ಟಿ)
1) ಟೆಂಡರ್ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ : 23-06-2026 ರ ಸಂಜೆ 4.00 ಘಂಟೆಯವರೆಗೆ, 2) ಪೂರ್ವ ಬಿಡ್ ಸಭೆಯ ದಿನಾಂಕ : 25-06-2026 ರ ಬೆಳಿಗ್ಗೆ 11.00 ಘಂಟೆಗೆ, 3) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 01-07-2026 ರ ಸಂಜೆ 4.00 ಘಂಟೆಯವರೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 03-07-2026 ರ ಸಂಜೆ 4.00 ಘಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : 06-07-2026 ರ ಸಂಜೆ 4.00 ಘಂಟೆಗೆ.
ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಕರ್ನಾಟಕ ಸರಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಖಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in.** ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ / Corrigendum / Addendum ಬಗ್ಗೆ ಮಾಹಿತಿ ಪಡೆಯಬೇಕು. **ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08354-230251 ಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು.**
ಸಹಿ/- ಆಸ್ತಿ ಅಧಿಕಾರಿಗಳು, ತೋ.ವಿ.ವಿ., ಬಾಗಲಕೋಟೆ.
ಡಿಐಪಿಆರ್/ಬಾಗಲಕೋಟೆ/93/ಮಣಿಪಾಲ್/2026-27

ನಗರಸಭಾ ಕಾರ್ಯಾಲಯ
ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.
ಸಂಖ್ಯೆ: ನ.ಸ.ಗೌ/ತಾ.ಶಾ/ಸಿ.ಆರ್/70/2026-27 ದಿನಾಂಕ:10.06.2026
ಟೆಂಡರ್ ಪ್ರಕಟಣೆ
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ. ಚಿಕ್ಕಬಳ್ಳಾಪುರ ರವರ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ (CMIDP) ಅನುದಾನ ಯೋಜನೆಯಡಿಯಲ್ಲಿ ಐಟಂವಾರು ಟೆಂಡರ್‌ಗಳನ್ನು standard bidding documents KW-1 ಟೆಂಡರ್ ದಸ್ತಾವೇಜಿನಲ್ಲಿ **(1)** DMA/2025-26/RD/WORK_INDENT 56381. **(2)** DMA/2025-26/RD/WORK_INDENT 56382. **(3)** DMA/2025-26/RD/WORK_INDENT 56383 (ST Reservation). **(4)** DMA/2025-26/RD/WORK_INDENT 56384. **(5)** DMA/2025-26/RD/WORK_INDENT 56385. **(6)** DMA/2025-26/RD/WORK_INDENT 56387(CAT-IIA Reservation). **(7)** DMA/2025-26/RD/WORK_INDENT 56389(SC Reservation). **(8)** DMA/2025-26/RD/WORK_INDENT 56390(CAT-IIA Reservation). **(9)** DMA/2025-26/RD/WORK_INDENT 56392. **(10)** DMA/2025-26/RD/WORK_INDENT 56393. **(11)** DMA/2025-26/RD/WORK_INDENT 56394. **(12)** DMA/2025-26/RD/WORK_INDENT 56395(SC Reservation). **(13)** DMA/2025-26/RD/WORK_INDENT 56396(SC Reservation). **(14)** DMA/2025-26/RD/WORK_INDENT 56397. **(15)** DMA/2025-26/RD/WORK_INDENT 56398. ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 29.06.2026 ರ ಸಂಜೆ 5.00 ಘಂಟೆ** (2) ಟೆಂಡರ್ ತೆರೆಯುವ **ದಿನಾಂಕ: 30.06.2026 ರ ಸಂಜೆ 5.30 ಘಂಟೆ** (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಪೌರಾಯುಕ್ತರು, ನಗರಸಭೆ, ಗೌರಿಬಿದನೂರು
ಸಹಿ/- ಆಡಳಿತಾಧಿಕಾರಿಗಳು/ಜಿಲ್ಲಾಧಿಕಾರಿಗಳು ನಗರಸಭೆ, ಗೌರಿಬಿದನೂರು
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:102/ಕೆ.ಎಸ್.ಎಂ.ಸಿ.ಎ/2026-27

ಚೆಮ್ ಫೈನಾನ್ಸ್ ಲಿ.
No.19, KCD Complex, 3rd Cross, Mission Road, Bangalore-27. Tel: 22221066, 22221115
ಚಿನ್ನದ ಹರಾಜು ಸೂಚನೆ
ಸಾಲಗಾರರು ಮತ್ತು ಸಾರ್ವಜನಿಕರು, ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟ ಚಿನ್ನಾಭರಣಗಳ ಸಾರ್ವಜನಿಕ ಹರಾಜನು ಈ ಕೆಳಗಿನ ದಿನಾಂಕಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನು ಪಾವತಿಸಲು ವಿಫಲರಾದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನಾಭರಣಗಳ ಹರಾಜು ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖೆಯಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.
01-07-2026 : **ಚಾಮರಾಜನಗರ** - 119100797, 119101196, 119101297, 119101530, 119101627.
01-07-2026 : **ಹುಬ್ಬಳ್ಳಿ** - 125100202, 125100237.
02-07-2026 : **ಬೊಮ್ಮನಹಳ್ಳಿ**- 114100091, 114100096, 114100102
02-07-2026 : **ಮಾರತ್ತ ಹಳ್ಳಿ** - 118100383
02-07.2026 : **ದೊಡ್ಡಬಳ್ಳಾಪುರ, ಕಾಲೇಜ್ ರೋಡ್** -108100197, 108100231
Authorised Officer

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ
ಸಂಖ್ಯೆ:ಸಾಆಹೊ/ಟೆಂಡರು/ಪಥ್ಯಾಹಾರ/50/2026-27 ದಿನಾಂಕ:11-06-2026
ಇ-ಟೆಂಡರ್ ಪ್ರಕಟಣೆ
2026-27 ನೇ ಸಾಲಿಗಾಗಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆಯಲ್ಲಿ ಸಿದ್ದಪಡಿಸಿದ ಪಥ್ಯಹಾರ, ಮತ್ತು ಉತ್ತಮ ದರ್ಜೆಯ ಬ್ರೇಡ್ ಸರಬರಾಜಿಗಾಗಿ ಇ-ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ, ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.
Diet- e-Tender No.: **GHH/TENDER/DIET/50/2026-27.** Supply of Diet and Bread e-Tender No.: **DHFWS/2026-27/SE2286.** Commencement of downloading of e-tender forms from website: **http://eproc.karnataka.gov.in ದಿನಾಂಕ:11-06-2026 ರಿಂದ 30-06-2026 ರಂದು ಸಂಜೆ 4.30 ಗಂಟೆಯುವರೆಗೆ.** Last Date for seeking clarification if any: **ದಿನಾಂಕ: 30-06-2026 ರಂದು ಸಂಜೆ 4.30 ಗಂಟೆಯವರೆಗೆ.** Last date for uploading of Tender in e-procurement platform: **ದಿನಾಂಕ: 01-07-2026 ರಂದು ಸಂಜೆ 4.30 ಗಂಟೆಯವರೆಗೆ.** Date, Time & Venue of Opening of Tenders: **ದಿನಾಂಕ:02-07-2026 ರಂದು ಸಂಜೆ 4.30 ಗಂಟೆಗೆ, ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಹೊಸಪೇಟೆ ಇವರ ಕಛೇರಿಯಲ್ಲಿ ಇ-ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು.** EMD for supply of DIET and Bread: **Rs.2,25,000./-.** ANNUAL TENDER AMOUNT : **Rs.90,00,000/-**
ಇ-ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ **http://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಶಸ್ತ್ರಚಿಕಿತ್ಸಕರು, ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಹೊಸಪೇಟೆ.
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/144

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.
Email: eokvafsu@gmail.com, ಕಛೇರಿ ದೂರವಾಣಿ: 08482-245361
ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.151/ಕಾಮಗಾರಿ/2026-27 ದಿನಾಂಕ:15.06.2026
ಟೆಂಡರ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)
1) ಕಾಮಗಾರಿ ವಿವರ Construction of Concrete roadinfront of main building and providing new name board for main gate at IAH&VB, Hebbal, Bangalore, 2) ಕಾಮಗಾರಿ ಅಂದಾಜು ಮೊತ್ತ **Rs.2643842.00** (Excluding GST), 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2643842.00** (Excluding GST), 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ **ದಿನಾಂಕ 23.06.2026 up to 5.00 PM,** 7) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ **ದಿನಾಂಕ 25.06.2026 at 11.30 AM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ. ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482-245446, 9) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in.
ಸಹಿ/- ಆಸ್ತಿ ಅಧಿಕಾರಿಗಳು ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/61/ಕೆಎಸ್‌ಎಂಸಿ&ಎ/2026-27

ಸಮಾಚಾರ ಸಣ್ಣದಲ್ಲ

ಪ್ರೊ.ಭಗವಾನ್ ವಿರುದ್ಧ ಸುಮೊಟೊ ದಾಖಲಾಗಲಿ

ಮಂಗಳೂರು: ಶ್ರೀ ರಾಮಚಂದ್ರನ ಬಗ್ಗೆ ಅವಹೇಳನಕಾರಿ ಹೇಳಿಕೆ ವಿಚಾರವಾಗಿ ಪ್ರೊ.ಭಗವಾನ್ ವಿರುದ್ಧ ಸುಮೋಟೋ ಕೇಸ್ ದಾಖಲಿಸಬೇಕು ಎಂದು ಪುತ್ತೂರು ಕಾಂಗ್ರೆಸ್ ಶಾಸಕ ಅಶೋಕ್ ರೈ ಒತ್ತಾಯಿಸಿದ್ದಾರೆ. ಈ ಕುರಿತು ಸುದ್ದಿಗಾರರ ಜತೆ ಮಾತನಾಡಿದ ಅವರು, ಭಗವಾನ್ ಯಾವ ಧರ್ಮವನ್ನು ನಂಬುತ್ತಾರೆ ಎಂತ ನಮಗೆ ಗೊತ್ತಿಲ್ಲ. ಭಗವಾನ್ ಅವರು ಹಿಂದೂ ಧರ್ಮದ ಭಾವನೆಯನ್ನು ಕೆಣಕುವಂತ ಕೆಲಸ ಮಾಡುತ್ತಿದ್ದಾರೆ. ಇಂತಹ ಹೇಳಿಕೆಯಿಂದ ಅವರಿಗೆ ಯಾವುದೇ ಪ್ರಯೋಜನವಿಲ್ಲ. ಇಂತಹವರ ವಿರುದ್ಧ ಕೂಡಲೇ ಕೇಸ್ ಹಾಕಿ ಬಂಧಿಸಬೇಕು. ಭಗವಾನ್ ಮೇಲೆ ಕಠಿಣ ಕ್ರಮ ಸರಕಾರ ತೆಗೆದುಕೊಳ್ಳಬೇಕು ಎಂದರು.

ಶಂಕಾಸ್ಪದ ರೀತಿಯಲ್ಲಿ ಹಾಸ್ಯ ಕಲಾವಿದ ಸಾವು

ಬೀದರ್: ಅನುಮಾನಾಸ್ಪದ ರೀತಿಯಲ್ಲಿ ಖಾಸಗಿ ವಾಹಿನಿಯ 'ಮಜಾಭಾರತ ಕಾಮಿಡಿ ರಿಯಾಲಿಟಿ ಶೋ ಕಲಾವಿದ ಸಾವನ್ನಪ್ಪಿದ ಘಟನೆ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಹಣಕುಣಿ ರಸ್ತೆಯ ಪಕ್ಕದ ಅರಣ್ಯ ಪ್ರದೇಶದಲ್ಲಿ ಘಟನೆಯಾಗಿದೆ. ಹುಮ್ನಾಬಾದ್ ನಗರದ ಟೀಚರ್ಸ್ ಕಾಲೋನಿಯಲ್ಲಿ ವಾಸವಿದ್ದ ಸಿದ್ದಾರ್ಥ ಪರಶನೂರ (36) ಜೂನ್ 13 ರಂದು ಸ್ನೇಹಿತರೊಂದಿಗೆ ಮನೆಯಿಂದ ಹೋಗಿದ್ದು, ಶವವಾಗಿ ಪತ್ತೆಯಾಗಿದ್ದಾನೆ. 3 ದಿನವಾದರೂ ಮನೆಗೆ ಬಾರದ ಸಿದ್ದಾರ್ಥ, ಸೋಮವಾರ ಮಧ್ಯಾಹ್ನ ಶವ ಪತ್ತೆಯಾಗಿದೆ. ಸೋಮವಾರ ಬೆಳಗ್ಗೆಯಷ್ಟೇ ಹುಮ್ನಾಬಾದ್ ಪೊಲೀಸ್ ಠಾಣೆಗೆ ಕುಟುಂಬಸ್ಥರು ನಾಪತ್ತೆ ದೂರು ದಾಖಲಿಸಲು ಹೋಗಿದ್ದರು. ತನಿಖೆ ನಡೆಸಿದ ಪೊಲೀಸರು ಮೊಬೈಲ್ ಟವರ್ ಲೋಕೇಷನ್ ಆಧರಿಸಿ ಸ್ಥಳ ಪತ್ತೆ ಮಾಡಿದ್ದಾರೆ. ಈ ವೇಳೆ ಸಿದ್ದಾರ್ಥ್ ಶವವಾಗಿ ಪತ್ತೆ ಆಗಿದ್ದಾರೆ.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಆತಂಕಕಾರಿ



ಉಡುಪಿ: ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಸಲಾಗುತ್ತಿದೆ ಎಂಬ ಆರೋಪ ಕೇಳಿ ಬರುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸಿ ಸತ್ಯಾಂಶ ಬಹಿರಂಗಪಡಿಸಬೇಕು ಎಂದು ಪರ್ಯಾಯ ಪೀಠಾಧಿಪತಿ ಶೀರೂರು ಮಠದ ಶ್ರೀ ವೇದವರ್ಧನತೀರ್ಥ ಶ್ರೀಪಾದರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದಂತಹ ಮಹತ್ವದ ಧಾರ್ಮಿಕ ಕ್ಷೇತ್ರದ ಬಗ್ಗೆ ಷಡ್ಯಂತ್ರ ನಡೆಸಲು ನೂರಾರು ಕೋಟಿ ರುಪಾಯಿಗಳ ಅವ್ಯವಹಾರ ನಡೆದಿದೆ ಎನ್ನುವ ಆರೋಪಗಳು ಕೇಳಿಬರುತ್ತಿರುವುದು ಕಳವಳಕಾರಿ ಸಂಗತಿ ಯಾಗಿದೆ. ಇಂತಹ ಆರೋಪಗಳ ಹಿಂದೆ ಇರುವ ಸತ್ಯಾಸತ್ಯತೆ ಪರಿಶೀಲಿಸಿ, ಧಾರ್ಮಿಕ ಕ್ಷೇತ್ರದ ವಿರುದ್ಧ ಸಂಚು ರೂಪಿಸಿದವರು ಯಾರು ಎಂಬುದನ್ನು ಬಯಲಿಗೆಳೆಯಬೇಕು ಎಂದು ಆಗ್ರಹಿಸಿದರು.

ಸಾರಿಗೆ ಬಸ್, ಕ್ಯಾಂಟರ್ ಡಿಕ್ಕಿ: ಮೂವರು ಸಾವು

ವಿಜಯಪುರ: ಕೆಎಸ್ಆರ್‌ಟಿಸಿ ಬಸ್ ಹಾಗೂ ಕ್ಯಾಂಟರ್ ಮಧ್ಯೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬಸ್ ಚಾಲಕ ಸೇರಿದಂತೆ ಮೂವರು ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಜಿಲ್ಲೆಯ ಚಡಚಣ ತಾಲೂಕಿನ ಲೋಣಿ ಕ್ರಾಸ್ ಬಳಿ ಮಂಗಳವಾರ ಸಂಭವಿಸಿದೆ. ಬಸ್ ಚಾಲಕ ಹಣಮಂತ ಚಲವಾದಿ, ಕ್ಯಾಂಟರ್ ಚಾಲಕ ಅಶೋಕ ಉಟಗಿ (25) ಹಾಗೂ ರಾಧಾ (22) ಮೃತರು. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
17.06.2026
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಪ್ರೊ. ಪ್ರಶಾಂತ ಹೆಗಡೆ ಮೂಡಲಮನೆ
ವಿಷಯ
ಮೂಡಲ ಮನೆಯ 5 ಮುತ್ತುಗಳು

vishwavani.news

ದಿನ ವಿಶೇಷ

17 ಜೂನ್ 2026 ಬುಧವಾರ

- » ಸೂರ್ಯೋದಯ : 5-42
- » ಸೂರ್ಯಾಸ್ತ : 7-13
- » ತಿಥಿ : ತೃತೀಯ
- » ನಕ್ಷತ್ರ : ಪುನರ್ವಸು
- » ಸಂವತ್ಸರ : ಪರಾಭವ
- » ಅಯನ : ಉತ್ತರಾಯನ
- » ಋತು : ಗ್ರೀಷ್ಮ
- » ಮಾಸ : ಜ್ಯೇಷ್ಠ
- » ಪಕ್ಷ : ಶುಕ್ಲಪಕ್ಷ

ಆರ್‌ಎಸ್‌ಎಸ್ ಕಾನೂನುಬದ್ಧತೆ ಬಗ್ಗೆ ಪ್ರಶ್ನಿಸಿ ಪತ್ರ ಬರೆದ ವಿಚಾರ | ಕಾಂಗ್ರೆಸ್‌ಗೆ ನೈತಿಕತೆ ಇಲ್ಲ: ಆರ್.ಅಶೋಕ್

ಸಚಿವ ಪ್ರಿಯಾಂಕ್ ಖರ್ಗೆ ಮೇಲೆ ರಾಜ್ಯ ಬಿಜೆಪಿ ಕೆಂಡ

ಬೆಂಗಳೂರು: ಆರ್‌ಎಸ್‌ಎಸ್ ಕಾನೂನುಬದ್ಧತೆ ಬಗ್ಗೆ ಪ್ರಶ್ನಿಸಿ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ರಾಜ್ಯ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದ್ದಾರೆ.

ದೇಶ ವಿಭಜನೆಗೆ ಕಾರಣವಾದ ಮುಸ್ಲಿಂ ಲೀಗ್‌ನಂತಹ ಅತ್ಯಂತ ವಿಭಜನಕಾರಿ, ದೇಶ ವಿದ್ರೋಹಿ ಸಂಘಟನೆಯೊಂದಿಗೆ ಕೇವಲ ಅಧಿಕಾರದ ಲಾಲಸೆಗಾಗಿ ರಾಜಕೀಯ ಮೈತ್ರಿ ಮಾಡಿಕೊಂಡು ಎರಡೆರಡು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಸಂಘದ ಬಗ್ಗೆ ಮಾತನಾಡುವ ನೈತಿಕತೆ ಎಲ್ಲಿದೆ ಎಂದು ಪ್ರತಿಪಕ್ಷ ನಾಯಕ ನಾಯಕ ಆರ್.ಅಶೋಕ ಪ್ರಶ್ನಿಸಿದ್ದಾರೆ.

ವಿಧಾನಸೌಧದ ಮುಂದೆಯೇ ದೇಶ ವಿರೋಧಿಗಳು ಪಾಕಿಸ್ತಾನ್ ಜಿಂದಾಬಾದ್ ಎಂದು ಅಟ್ಟಹಾಸದಿಂದ ಘೋಷಣೆ ಕೂಗಿದರೂ, ಕಣ್ಣು-ಕಿವಿ ಮುಚ್ಚಿಕುಳಿತು, ಅವರ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಉದ್ಧಟತನದಿಂದ ಸಮರ್ಥನೆ ಮಾಡಿಕೊಂಡ ಸಚ್ಚಾರಿತ್ರ್ಯ ಈ ಪ್ರಿಯಾಂಕ ಖರ್ಗೆ ಅವರದ್ದು ಎಂದು ಕಿಡಿಕಾರಿದರು.

ಹೈಕಮಾಂಡ್ ಓಲೈಕೆಗಾಗಿ ಸೈದ್ಧಾಂತಿಕ ಹಪಾಹಪಿ: ಮುಂದೆ 2028ರ ವಿಧಾನಸಭಾ ಚುನಾವಣೆಯಲ್ಲೂ ನಾನೇ ಕಾಂಗ್ರೆಸ್‌ನ ಸಿಎಂ ಅಭ್ಯರ್ಥಿ ಎಂದು ಹಗಲುಗನಸು ಕಾಣುತ್ತಿರುವ ಡಿಕೆಶಿ ಅವರಿಗೆ ಸದ್ದಿಲ್ಲದಂತೆ ಸೆಡ್ಡು ಹೊಡೆಯಲು ಪ್ರಿಯಾಂಕ್ ಖರ್ಗೆ ಅವರ ಈ ರಾಜಕೀಯ ತಂತ್ರಗಾರಿಕೆ ಚೆನ್ನಾಗಿದೆ. ದೆಹಲಿಯ ನಕಲಿ ಗಾಂಧಿ ಹೈಕಮಾಂಡ್‌ನ ಓಲೈಕೆ ಮಾಡಿ, ಅವರನ್ನು ಮೆಚ್ಚಿಸಿ ಹೇಗಾದರೂ ಮಾಡಿ ತಾನೇ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಆಗಬೇಕೆಂಬ ದುರಾಸೆಯಿಂದ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಅನ್ನು ಬೆದರು ಬೊಂಬೆ ಮಾಡಿಕೊಳ್ಳಲು ಹೊರಟಿದ್ದಾರೆ. ಸದಾ ಸಮಾಜದಲ್ಲಿ ಸೈದ್ಧಾಂತಿಕ ವಿವಾದ ಸೃಷ್ಟಿಸಿ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇವರು ನಡೆಸುತ್ತಿರುವ ಈ ಕುತಂತ್ರ ಮತ್ತು ಒಳಸಂಚು ಪ್ರಜ್ಞಾವಂತ ಕನ್ನಡಿಗರಿಗೆ ಅರ್ಥವಾಗದಷ್ಟು ರಹಸ್ಯವಾಗಿ ಯೇನೂ ಉಳಿದಿಲ್ಲ ಎಂದು ಆರೋಪಿಸಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ರಾಷ್ಟ್ರ ವಿಧ್ವಂಸಕ ಚಟುವಟಿಕೆಯ ಅನೇಕ ಅಲ್ಪ ಸಂಖ್ಯಾತ ಹೆಸರಿನ ಮತೀಯವಾದಿ ಸಂಘಟನೆಗಳು ಈ ದೇಶದಲ್ಲಿ ತಲೆಯೆತ್ತಿರುವುದು, ಅಕ್ರಮ ವಿದೇಶಿ ದೇಣಿಗೆ ಪಡೆದು ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸುತ್ತಿರುವ ಮಾಹಿತಿ ಗೃಹ ಇಲಾಖೆ ನಡೆಸುತ್ತಿರುವ ನಿಮ್ಮ ಬಳಿಯೇ ಇದೆ. ಈ ಬಗ್ಗೆ ಪತ್ರ ಬರೆದು ಆ ಸಂಸ್ಥೆಗಳಿಂದ ವಿವರ ಏಕೆ ನೀವು ಕೇಳುವುದಿಲ್ಲ?. ಕೇವಲ ಮತಾಂಧತೆಯನ್ನು ಬಿತ್ತಿ ರಾಷ್ಟ್ರೀಯತೆಯನ್ನು ವಿರೋಧಿಸಲು ಪ್ರಚೋದನೆ ನೀಡುವ ಸಂಸ್ಥೆಗಳ ಚಟುವಟಿಕೆಗಳು ನಿಮ್ಮ ಕಣ್ಣಿಗೆ ಬೀಳುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ. ಏಕೆಂದರೆ ಅದರ ಮೂಲದಿಂದ ಉತ್ಪತ್ತಿಯಾಗುತಿರುವ ಮತಬ್ಯಾಂಕ್ ಆಧರಿಸಿ ಅಧಿಕಾರ ಅನುಭವಿಸುತ್ತಿರುವ ನಿಮಗೆ ರಾಷ್ಟ್ರ ವಿಧ್ವಂಸಕ ಚಟುವಟಿಕೆಯ ಬಗ್ಗೆ ತಲೆಕೆಡಿಸಿಕೊಳ್ಳುವ ಬದ್ಧತೆ-ನೈತಿಕತೆ ಇರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿ ದ್ದಾರೆ. ರಾಷ್ಟ್ರೀಯ ಸ್ವಯಂ ಸಂಘದ ನೋಂದಣಿ ಕುರಿತು ವಿಪರೀತಿ ತಲೆಕೆಡಿಸಿಕೊಂಡಿರುವ ನಿಮ್ಮಂತವರಿಗೆ ಮೋಹನ್ ಭಾಗವತ್ ಅವರು ಏನು ಉತ್ತರ ಕೊಡಬೇಕೋ ಸರಿಯಾಗಿಯೇ ಕೊಟ್ಟಿದ್ದಾರೆ. ಸದ್ಯ ನಿಮ್ಮ ರಾಜಕೀಯ ಬಂಡವಾಳ ಖಖ ಅನ್ನು ಬಾಲಿಶವಾಗಿ ಟೀಕಿಸುವುದು, ಆ ಮೂಲಕ ನೆಹರು ಕುಟುಂಬದ ಕುಡಿಗಳನ್ನು ಸಂತೃಪ್ತಿ ಪಡಿಸುವುದು. ನಿಮ್ಮ ಪ್ರತಿ ತೆಗಳಿಕೆಯು ಸುದ್ದಿಯಾಗುತ್ತದೆ, ಪ್ರತಿಕ್ರಿಯೆ ಹರಿದು ಬರುತ್ತದೆ ಎಂಬ ಭ್ರಮೆಯ ಪೊರೆ ಅತೀ ಶೀಘ್ರದಲ್ಲಿಯೇ ಕಳಚಿ ಬೀಳಲಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಭ್ರಮೆಯ ಪೊರೆ ಕಳಚಿ ಬೀಳಲಿದೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯಿಸಿ, ಸ್ವಾತಂತ್ರ್ಯ ಯೋಧರು ಉದಾತ್ತ ಉದ್ದೇಶಕ್ಕಾಗಿ ತಮ್ಮ ಬೆವರ ಹನಿಯ ಹಣವನ್ನು ತೊಡಗಿಸಿ ಕಟ್ಟಿದ ಸುಮಾರು 5000 ಕೋಟಿಯ ಆಸ್ತಿ ಹೊಂದಿದ್ದ ಹೆರಾಲ್ಡ್ ಸಂಸ್ಥೆಯನ್ನು ಯಂಗ್ ಇಂಡಿಯನ್ ಹೆಸರಲ್ಲಿ ನುಂಗಿ ನೀರು ಕುಡಿದ ನೆಹರು ಕುಟುಂಬದ ಮಹಾನ್ ಫಲಾನುಭವಿಗಳಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ ಖರ್ಗೆ ಅವರೇ, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪಾರದರ್ಶಕ ನಡೆ-ನುಡಿಯನ್ನು, ರಾಷ್ಟ್ರೀಯ ಬದ್ಧತೆಯನ್ನು ಪಸರಿಸುವಲ್ಲಿ ತೋರಿದ ಸಮರ್ಪಣೆ ಹಾಗೂ ತ್ಯಾಗದ ಪ್ರತೀಕವಾಗಿ ಇಂದು ವಿಶ್ವದ ಅತ್ಯಂತ ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಚಟುವಟಿಕೆಗಳೆಲ್ಲವೂ ನೇರ-ದಿಟ್ಟ-ಪಾರದರ್ಶಕ. ಪ್ರತೀ ಚಟುವಟಿಕೆಗಳೂ ಬಹಿರಂಗದಲ್ಲಿ ಅನಾವರಣ ಎಂದು ಟೀಕಿಸಿದ್ದಾರೆ.

ಫೋಬಿಯಾದಿಂದ ಬಿಡುಗಡೆ ಲಕ್ಷಣ ಕಾಣುತ್ತಿಲ್ಲ

ಈ ವಿಚಾರವಾಗಿ ಮಾತನಾಡಿದ ಶಾಸಕ ಸುನಿಲ್ ಕುಮಾರ್, ಕೊಟ್ಟ ಕುದುರೆಯ ಏರಲರಿಯದ ವೀರ ಪ್ರಿಯಾಂಕ ಖರ್ಗೆಯವರೇ, ನಿಮ್ಮನ್ನು ಆವರಿಸಿದ ಆರ್‌ಎಸ್‌ಎಸ್ ಫೋಬಿಯಾ ಬಿಡುಗಡೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಪರಿಸ್ಥಿತಿ ಬದಲಾದಾಗ ಮನಃಸ್ಥಿತಿ ಬದಲಾಗುತ್ತದೆ ಎಂದು ನಾವೆಲ್ಲ ಭಾವಿಸಿದ್ದೆವು. ಆದರೆ ನಿಮ್ಮ ವಿಚಾರದಲ್ಲಿ ಆ ನಿರೀಕ್ಷೆ ಹುಸಿಯಾಗಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಮೂರು ವರ್ಷ ಕಾಲ ನಿಮ್ಮಿಂದ ಏನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮೂರು ವರ್ಷದಲ್ಲಿ ಎಷ್ಟು ಕಿಮೀ ಗ್ರಾಮೀಣ ರಸ್ತೆ ನಿರ್ಮಾಣ ಮಾಡಿದಿರಿ ಎಂಬ ಪ್ರಶ್ನೆ ರಾಜ್ಯದ ಜನರಿಗೆ ಇನ್ನೂ ನಿಗೂಢವಾಗಿಯೇ ಉಳಿದಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಕಳೆದ ನೂರು ವರ್ಷಗಳಿಂದ ಯಾವುದೇ ಅಪೇಕ್ಷೆಯಿಲ್ಲದೆ, ನಿಸ್ವಾರ್ಥವಾಗಿ ಭಾರತಾಂಬೆಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರಭಕ್ತ ಸಂಘಟನೆ ಆರ್‌ಎಸ್‌ಎಸ್‌ನ ಕಾನೂನು ಬದ್ಧತೆ ಹಾಗೂ ದೇಶನಿಷ್ಠೆಯನ್ನು ಪ್ರಿಯಾಂಕ್ ಖರ್ಗೆ ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ನಾಚಿಕೆಗೇಡಿತನದ ಪರಮಾವಧಿ.

ಆರ್.ಅಶೋಕ್ ವಿಪಕ್ಷ ನಾಯಕ

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಅರವಿಂದ್ ಬೆಲ್ಲದ್ ಕಿಡಿ

ಪ್ರಚಾರಕ್ಕಾಗಿ ಆರ್‌ಎಸ್‌ಎಸ್ ಪ್ರಸ್ತಾಪ

ಧಾರವಾಡ: ಆರ್‌ಎಸ್‌ಎಸ್ ಮಾನ್ಯತೆ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿರುವ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ್ ಅವರು, ಪ್ರಿಯಾಂಕ್ ಖರ್ಗೆ ಅವರು ರಾಷ್ಟ್ರೀಯ ಅಧ್ಯಕ್ಷರ ಮಗ, ಸಣ್ಣ ವಯಸ್ಸಿನಲ್ಲಿ ದೊಡ್ಡ ಹುದ್ದೆಗಳನ್ನು ನಿರ್ವಹಿಸುವ ಅವಕಾಶ ಸಿಕ್ಕಿದೆ. ಕಾಂಗ್ರೆಸ್‌ನಲ್ಲಿ ಪ್ರಮುಖ ಲೀಡರ್ ಆಗಿ ಹೊರಹೊಮ್ಮಿದ್ದಾರೆ. ಅವರು ಸಣ್ಣ ಸ್ಟಂಟ್‌ಗಳಿಗೆ ಹೋಗಬಾರದು ಎಂದು ಕಿವಿ ಮಾತು ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೇಂದ್ರ ಹಾಗೂ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಲು ಈ ರೀತಿ ಮಾಡುತ್ತಿದ್ದಾರೆ. ಅವರಿಗೆ ಆ ಅವಶ್ಯಕತೆ ಇಲ್ಲ, ಇಲಾಖೆಯ ಕೆಲಸಗಳನ್ನು ಮಾಡಿ ಹೆಸರು ತೆಗೆದುಕೊಳ್ಳಲಿ. ಅದನ್ನು ಬಿಟ್ಟು ಒಣ ರಾಜಕಾರಣ ಮಾಡುವುದು ಅವರಿಗೆ ಶೋಭೆ ತರಲ್ಲ, ಅವರ ರಾಜಕೀಯ ಜೀವನಕ್ಕೂ ಇದು ಒಳ್ಳೆಯದಲ್ಲ. ಇಡೀ ರಾಜ್ಯಾದ್ಯಂತ ಗೃಹ ಇಲಾಖೆಯಿಂದ ಒಳ್ಳೆ ಕೆಲಸ ಮಾಡಬಹುದು ಎಂದಿದ್ದಾರೆ. ರಾಜ್ಯದಲ್ಲಿ ಡ್ರಗ್ಸ್ ಹಾವಳಿ ಮಿತಿಮೀರಿದೆ. ಹಳ್ಳಿಗಳಲ್ಲಿ ಕುಡುಕರ ಸಂಖ್ಯೆ ಹೆಚ್ಚಾಗಿದೆ. ದುಡಿದ ಹಣವನ್ನು ಕುಡಿತಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಅಕ್ರಮ ಬೆಟ್ಟಿಂಗ್ ಕೆಲಸ ನಡೆದಿವೆ. ಗನ್ ಇಲ್ಲದವರಿಂದ ಹಣ ತೆಗೆದುಕೊಂಡು ಲೈಸೆನ್ಸ್ ಕೊಡುತ್ತಿದ್ದಾರೆ. ಇವುಗಳನ್ನು ಬಂದ್ ಮಾಡುವ ಕೆಲಸ ಮಾಡಬೇಕಿದೆ ಎಂದರು.

ಬಿಡದಿಯಲ್ಲಿ ಟೌನ್‌ಶಿಪ್ ನಿರ್ಮಾಣದ ವಿಚಾರಕ್ಕೆ ಮಾತನಾಡಿ, ಕಾಂಗ್ರೆಸ್ ನಾಯಕರ ಭೂಮಿಗಳ ಪಕ್ಕದಲ್ಲಿ ನಿರ್ಮಾಣ ಮಾಡುವ ಅವಶ್ಯಕತೆ ಇಲ್ಲ, ಈಗಾಗಲೇ ಬೇಕಾದಷ್ಟು ಹಣವನ್ನು ಕಾಂಗ್ರೆಸ್ ನಾಯಕರು ಮಾಡಿದ್ದಾರೆ. ಮತ್ತಷ್ಟು ಅವಕಾಶಗಳು ಅವರಿಗೆ ಇವೆ. ಫಲವತ್ತಾದ ರೈತರ ಜಮೀನು ತೆಗೆದುಕೊಂಡು ಅಲ್ಲಿ ಟೌನ್ ಶಿಪ್ ಮಾಡುವ ಕೆಲಸ ಮಾಡಬೇಡಿ ಎಂದರು.

ಸಿದ್ದರಾಮಯ್ಯ ಅವರು ಪೂರ್ತಿಯಾಗಿ ದಿವಾಳಿ ಮಾಡಿ ಹೋಗಿದ್ದಾರೆ. ಖಾಲಿ ಕಿಸೆಯ ಸರಕಾರವನ್ನು ಡಿಕೆಗೆ ಕೊಟ್ಟಿದ್ದಾರೆ. ಡಿಕೆ ಅವರು ಸರಕಾರದ ಸ್ಕೀಮ್‌ಗಳನ್ನು ಕಟ್ ಮಾಡಿ ಸರಕಾರ ನಡೆಸಲು ಮುಂದಾಗಿದ್ದಾರೆ.

-ಅರವಿಂದ್ ಬೆಲ್ಲದ
ವಿಪಕ್ಷ ಉಪನಾಯಕ

ಕಾಂಗ್ರೆಸ್‌ನವರು ಗಾಂಪರ ದೊರೆಗಳು

ಬೆಂಗಳೂರು: ಎಐಸಿಸಿ ಅಧ್ಯಕ್ಷರಾಗಿರುವ ನಿಮ್ಮ ತಂದೆಯೇ ಗಾಂಧಿ ಹೇಳಿದಂತೆ ಕಾಂಗ್ರೆಸ್ ಪಕ್ಷ ವಿಸರ್ಜನೆ ಮಾಡಿಲ್ಲವಲ್ಲ ಎಂದು ವಿಧಾನ ಪರಿಷತ್ತಿನ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಚಿವ ಪ್ರಿಯಾಂಕ್ ಖರ್ಗೆಯವರನ್ನು ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, 1948ರಲ್ಲಿ ಗಾಂಧಿಯವರು ಕಾಂಗ್ರೆಸ್ ಪಕ್ಷದ ವಿಸರ್ಜನೆ ಮಾಡಲು ಹೇಳಿದ್ದರು. ಕಾಂಗ್ರೆಸ್ ಹೆಸರು ಬದಲಿಸಿ ಲೋಕಸೇವಕ ಸಂಘ ಎಂಬ ಹೆಸರು ಇಡಲು, ಮಹಿಳೆಯರು, ಹರಿಜನರು, ಗೋವುಗಳ ರಕ್ಷಣೆಗೆ ನಿಲ್ಲಲು ಹೇಳಿದ್ದರಲ್ಲವೇ? ಈಗ ನಿಮ್ಮ ತಂದೆಯವರೇ ಎಐಸಿಸಿ ಅಧ್ಯಕ್ಷರಿದ್ದಾರೆ. ಗಾಂಧಿಯವರ ಆಶಯಕ್ಕೆ ಅನುಗುಣವಾಗಿ ಕಾಂಗ್ರೆಸನ್ನು ವಿಸರ್ಜಿಸುವುದು ಯಾವಾಗ ಎಂದು? ಯಾಕೆ ಇನ್ನೂ ನೀವು ಪತ್ರ ಬರೆದಿಲ್ಲ ಎಂದು ಪ್ರಶ್ನಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ಪ್ರಶ್ನೆಗೆ ಮೋಹನ್ ಭಾಗವತ್ ಅವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಅವರಿಗೆ ಉತ್ತರ ಸಿಕ್ಕಿದೆ ಎಂದುಕೊಳ್ಳುವೆ. ದೇಶದ ಕಾನೂನು ಒಂದೇ ಎನ್ನುವಿರಲ್ಲವೇ? ಹಾಗಿದ್ದರೆ ನೀವು ಕಾನೂನಿನ ಮೊರೆ ಯಾಕೆ ಹೋಗಿಲ್ಲ? ಆರ್‌ಎಸ್‌ಎಸ್ ಕುರಿತು ಪ್ರಶ್ನಿಸಿದ ಗಾಂಪರ ದೊರೆಗಳ ಪಟ್ಟಿಗೆ ಪ್ರಿಯಾಂಕ್ ಖರ್ಗೆ ಸೇರಿಕೊಂಡಿದ್ದಾರೆ ಎಂದರು.

ದಲಿತರಿಗೆ ಅನೇಕ ರೀತಿಯ ಅನ್ಯಾಯವಾಗುತ್ತಿದೆ. ಕಾಂಗ್ರೆಸ್ ಸರಕಾರದಿಂದ, ನಿಮ್ಮಿಂದಲೂ ಅನ್ಯಾಯ ಆಗುತ್ತಿದೆ. ಎಸ್ಇಪಿ, ಟಿಎಸ್‌ಪಿ ಹಣ ಆ ಜನಾಂಗಗಳಿಗೆ ತಲುಪುತ್ತಿಲ್ಲ. ಅದನ್ನು ಗ್ಯಾರಂಟಿಗಳಿಗೆ ಬಳಸಿದ್ದನ್ನು ಸ್ವತಃ ನಿಂತು ಸಮರ್ಥಿಸಿದ್ದಾರೆ. ಅದನ್ನು ಅಭಿವೃದ್ಧಿಗೆ ಕೊಡಿ ಎಂದು ನೀವ್ಯಾಕೆ ಕೇಳಿಲ್ಲ ಎಂದು ಪ್ರಶ್ನಿಸಿದರು. ಅದಕ್ಕೆ ನಿಮಗೆ ತಾಕತ್ತಿಲ್ಲವೇ ಎಂದರು.

ಲೈಸನ್ಸ್ ಇಲ್ಲದ ಪಬ್‌ಗಳ ಪತ್ತೆ, ಅಗ್ನಿ ಸುರಕ್ಷತೆ ಬಗ್ಗೆ ಪರಿಶೀಲಿಸಲು ಸೂಚನೆ

ಅಬಕಾರಿ ಡಿಸಿ ಅಮಾನತಿಗೆ ಶಿಫಾರಸ್ಸು

ಮೈಸೂರು: ಪಬ್‌ನಲ್ಲಿ ಬೆಂಕಿ ಅವಘಡ ಪ್ರಕರಣಕ್ಕೆ ಸಂಬಂಧಿಸಿ ಅಬಕಾರಿ ಡಿಸಿ ಅಮಾನತಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ತಿಳಿಸಿದರು.

ಕೆ.ಆರ್.ಆಸ್ಪತ್ರೆಯ ಶವಾಗಾರಕ್ಕೆ ಮಂಗಳವಾರ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಸಾಂತ್ವಾನ ಹೇಳಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಬ್ ಮಾಲೀಕನ ವಿರುದ್ಧ ದೂರು ದಾಖಲು ಮಾಡಲಾಗಿದೆ. ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಯಾವುದೇ ಲೈಸನ್ಸ್ ಇಲ್ಲದೆ ಪಬ್ ನಡೆಯುತ್ತಿತ್ತು. ನಗರದಲ್ಲಿ ಅನೇಕ ಪಬ್ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಪರವಾನಗಿ ಪಡೆಯದೆ ನಡೆಸುತ್ತಿರುವುದು ಗೊತ್ತಾಗಿದೆ. ಅಕ್ರಮ ಹಾಗೂ ಲೈಸನ್ಸ್ ಇಲ್ಲದೆ ಬಾರ್ ರೆಸ್ಟೋರೆಂಟ್ ನಡೆಸುತ್ತಿರುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ಕೊಟ್ಟಿದ್ದೇನೆ ಎಂದರು. ಲೈಸನ್ಸ್ ಇಲ್ಲದೆ ಬಾರ್ ನಡೆಸುತ್ತಿದ್ದು, ಅಬಕಾರಿ ಡಿಸಿ ಕಣ್ಮುಚ್ಚಿ ಕುಳಿತಿದ್ದಾರೆ. ಅಧಿಕಾರಿಗಳ ಮೇಲೂ ಕ್ರಮಕ್ಕೆ ಒತ್ತಾಯ ಕೇಳಿ ಬಂದಿದೆ. ಅಮಾನತು ಮಾಡುವಂತೆ ಶಿಫಾರಸ್ಸು ಮಾಡುತ್ತೇನೆ. ಎಲ್ಲ ವ್ಯವಹಾರಿಕ ಕಟ್ಟಡಗಳಲ್ಲಿ ಅಗ್ನಿ ಸುರಕ್ಷತೆ ಬಗ್ಗೆ ಮುಂಜಾಗ್ರತೆ ಕ್ರಮ ಪರಿಶೀಲನೆ ನಡೆಸಲು ಪೊಲೀಸರಿಗೆ ಹೇಳಿದ್ದೇನೆ ಎಂದು ಹೇಳಿದರು.

ಹಣದ ಬಗ್ಗೆ ಆರ್‌ಎಸ್‌ಎಸ್ ಲೆಕ್ಕ ಕೊಡಲಿ

ಆರ್.ಎಸ್.ಎಸ್‌ನವರು ಹಿಂದೂಗಳೇ ಅಲ್ಲ. ಅವರು ಕೇವಲ ಹಿಂದುತ್ವವಾದಿಗಳು. ಧರ್ಮದ ಹೆಸರಿನಲ್ಲಿ ಏನು ಬೇಕಾದರೂ ಮಾಡುತ್ತೇವೆ ಎಂದರೆ ನಡೆಯೋದಿಲ್ಲ ಎಂದು ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು. ಆರ್.ಎಸ್.ಎಸ್ ಕೇವಲ ಸಾಂಸ್ಕೃತಿಕ ಸಂಘಟನೆ ಅಲ್ಲ, ಅದು ಬಿಜೆಪಿ ಪರವಾಗಿ ಕೆಲಸ ಮಾಡುತ್ತಿರುವ ಸಂಸ್ಥೆ. ದೇಶದ ಎಲ್ಲ ಕಡೆ ಸಂಘಟನೆಗೆ ಕೋಟ್ಯಂತರ ಮೌಲ್ಯದ ಆಸ್ತಿ ಇದೆ. ಕೋಟ್ಯಂತರ ಹಣವೂ ಬರುತ್ತಿದೆ. ಇದರ ಲೆಕ್ಕವನ್ನು ಅವರು ಕೊಡಬೇಕು ತಾನೆ. ಎಲ್ಲಾ ವ್ಯವಹಾರಗಳ ಬಗ್ಗೆ ಪರಿಶೀಲನೆ ಮಾಡಬೇಕಿದೆ. ಹೀಗಾಗಿ ಅದು ನೋಂದಣಿ ಆಗಬೇಕು ಎಂದರು.

ಪ್ರಶ್ನಿಸಿದ್ದಕ್ಕೆ ಸ್ಥಳೀಯರ ವಿರುದ್ಧ ಅಶ್ಲೀಲ ಪದ ಬಳಸಿ ತುಕಾರಾಂ ನಿಂದನೆ

10 ದಿನದಲ್ಲೇ ಕುಸಿದ 33 ಕೋಟಿ ವೆಚ್ಚದ ರಸ್ತೆ

ಕಾಮಗಾರಿ ಸ್ಥಳಕ್ಕೆ ಸಂಸದ ಇ.ತುಕಾರಂ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳ್ಳಾರಿ: ನಿರ್ಮಾಣಗೊಂಡ ಕೇವಲ ಹತ್ತೇ ದಿನಗಳಲ್ಲಿ ಸರ್ವಿಸ್ ರಸ್ತೆ ಕುಸಿದ ಹಿನ್ನೆಲೆಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಬಳ್ಳಾರಿ ಲೋಕಸಭಾ ಕ್ಷೇತ್ರದ ಸಂಸದ ಇ. ತುಕಾರಾಂ ಅವರು ಸ್ಥಳೀಯ ನಿವಾಸಿಗಳ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿರುವ ಘಟನೆ ಬೆಳಕಿಗೆ ಬಂದಿದ್ದು, ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಡಣಾಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 50ರ ಮೇಲ್ಸೇತುವೆ ಮತ್ತು ಸರ್ವಿಸ್ ರಸ್ತೆ ನಿರ್ಮಾಣದ ಕಾಮಗಾರಿ ನಡೆಯುತ್ತಿದೆ. ಸುಮಾರು 33 ಕೋಟಿ ರು.ವೆಚ್ಚದ ಈ ಕಾಮಗಾರಿಗೆ ಕೇವಲ ಎರಡು ತಿಂಗಳ ಹಿಂದೆಯಷ್ಟೇ ಸಂಸದ ಇ. ತುಕಾರಾಂ ಅವರು ಭೂಮಿ ಪೂಜೆ ನೆರವೇರಿಸಿದ್ದರು. ಆದರೆ, ಸರ್ವಿಸ್ ರಸ್ತೆ ನಿರ್ಮಾಣಗೊಂಡು ಕೇವಲ 10 ದಿನ ಕಳೆಯುವುದರೊಳಗೆ ಸಂಪೂರ್ಣವಾಗಿ ಕುಸಿದಿದ್ದು, ಅದರ ಮೇಲೆ ಬರುತ್ತಿದ್ದ ಭಾರಿ ಟ್ರಕ್ ಪಲ್ಟಿಯಾಗುವ ಹಂತದಲ್ಲಿ ಸಿಲುಕಿಕೊಂಡಿತ್ತು.

ಸ್ಥಳೀಯರ ಆಕ್ರೋಶದ ಹಿನ್ನೆಲೆಯಲ್ಲಿ ಕಾಮಗಾರಿ ಪರಿಶೀಲನೆ ನಡೆಸಲು ಸಂಸದ ಇ. ತುಕಾರಾಂ ಅವರು ಸ್ಥಳಕ್ಕೆ ಭೇಟಿ ನೀಡಿದ್ದರು. ಈ ವೇಳೆ ಕಳಪೆ ಕಾಮಗಾರಿಯ ಕುರಿತು ಪ್ರಶ್ನಿಸಿದ ಮತ್ತು ಅಳಲು ತೋಡಿಕೊಂಡ ಗ್ರಾಮಸ್ಥರನ್ನು ಸಮಾಧಾನಪಡಿಸುವ ಹಾಗೂ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಳ್ಳುವ ಬದಲಾಗಿ, ಸಂಸದರು ಸ್ಥಳೀಯರ ವಿರುದ್ಧವೇ ತಿರುಗಿಬಿದ್ದಿದ್ದಾರೆ. ಸಾರ್ವಜನಿಕರ ಸಮ್ಮುಖದಲ್ಲೇ ಗ್ರಾಮಸ್ಥರ ವಿರುದ್ಧ ಅಶ್ಲೀಲ ಪದಗಳನ್ನು ಬಳಸಿ ನಿಂದಿಸಿದ್ದಾರೆ ಎಂದು ವರದಿಯಾಗಿದೆ.

ಕಳಪೆ ಕಾಮಗಾರಿ ಆರೋಪ

ಗುತ್ತಿಗೆ ಕಂಪನಿಯು ಹಣ ಉಳಿಸುವ ದುರಾಸೆಯಿಂದ ರಸ್ತೆ ನಿರ್ಮಾಣದ ವೇಳೆ ಮಣ್ಣು ಹಾಕುವ ಬದಲಿಗೆ ಕೇವಲ ಫ್ಲೈ ಯಾಷ್ (ಬೂದಿ/ತ್ಯಾಜ್ಯ) ಬಳಸಿ ರಸ್ತೆ ನಿರ್ಮಿಸಿದೆ. ಹೀಗಾಗಿಯೇ ರಸ್ತೆ ಕುಸಿಯುತ್ತಿದೆ ಎಂದು ಸ್ಥಳೀಯರು ಜಿಲ್ಲಾಡಳಿತ, ಸಂಸದರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದರು. ಜನರ ತೆರಿಗೆ ಹಣವನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಗುತ್ತಿಗೆ ಕಂಪನಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ನಿವಾಸಿಗಳು ಪಟ್ಟು ಹಿಡಿದಿದ್ದರು.

ಎಲ್‌ನಿನೋ ಪ್ರಭಾವದಿಂದಾಗಿ ಮುಂಗಾರು ಮಳೆ ಕೊರತೆ: ಖಂಡ್ರೆ

ಕುಡಿಯುವ ನೀರು ವ್ಯತ್ಯಯ ಆಗದಿರಲಿ

- ಖಾಸಗಿ ಜಲಮೂಲಗಳನ್ನು ಗುತ್ತಿಗೆ ಪಡೆಯಿರಿ
- ಯಾವುದೇ ಕಾರಣಕ್ಕೂ ನೀರಿಗೆ ತೊಂದರೆಯಾಗದಿರಲಿ
- ಪಂಚಾಯತ್ ರಾಜ್ ಅಧಿಕಾರಿಗಳಿಗೆ ಖಂಡ್ರೆ ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಮಳೆ ಕೊರತೆಯ ಮುನ್ಸೂಚನೆ ಹಿನ್ನೆಲೆಯಲ್ಲಿ ಪರ್ಯಾಯ ಜಲ ಮೂಲಗಳನ್ನು ಗುರುತಿಸಿ, ನೀರಿನ ಪರೀಕ್ಷೆ ಮಾಡಿ ಸನ್ನದ್ಧ ಸ್ಥಿತಿಯಲ್ಲಿರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ.ಖಂಡ್ರೆ ಸೂಚನೆ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳಿಗೆ ಈ ಸಂಬಂಧ ಲಿಖಿತ ಸೂಚನೆ ನೀಡಿರುವ ಅವರು, ಜೂನ್ ಮಧ್ಯಭಾಗದ ಹೊತ್ತಿಗೆ ರಾಜ್ಯದಲ್ಲಿ ವಾಡಿಕೆಯಂತೆ ಆಗಬೇಕಿದ್ದ ಮಳೆ ಆಗಿಲ್ಲ. ಎಲ್‌ನಿನೋ ಪ್ರಭಾವದಿಂದಾಗಿ ಮುಂಗಾರು ಮಳೆ ಕೊರತೆ ಉಂಟಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ, ಈ ಹಿನ್ನೆಲೆಯಲ್ಲಿ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ.

ಈ ಬಾರಿ ರಾಜ್ಯದಲ್ಲಿ ಮಳೆಯ ಸರಾಸರಿ ಪ್ರಮಾಣ ಮತ್ತು ಸರಾಸರಿ ಮಳೆಯ ಅವಧಿ ಕಡಿಮೆ ಆಗುವ ಭೀತಿ ಎದುರಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಅಪಾಯವೂ ಇದೆ. ಈ ನಿಟ್ಟಿನಲ್ಲಿ ಎಲ್ಲ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಹಾಲಿ ನೀರು ಪೂರೈಕೆ ಮಾಡುತ್ತಿರುವ ಜಲ ಮೂಲಗಳ ಜೊತೆಗೆ ಪರ್ಯಾಯ ಜಲ ಮೂಲಗಳನ್ನು ಗುರುತಿಸಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ಕ್ರಮ ವಹಿಸುವ ಅಗತ್ಯ ಮನಗಾಣಲಾಗಿದೆ. ಈ ಸಂಬಂಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ತೆರೆದ ಬಾವಿ, ಕೊಳವೆ ಬಾವಿಗಳನ್ನು ಗುರುತಿಸಿ, ಆ ಬಾವಿಗಳ ನೀರಿನ ಪ್ರಮಾಣ, ಲಭ್ಯತೆ ಖಚಿತಪಡಿಸಿಕೊಂಡು ನೀರು ಕುಡಿಯಲು ಯೋಗ್ಯವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಪರೀಕ್ಷೆ ನಡೆಸಿ, ಅಂತಹ ಖಾಸಗಿ ಜಲ ಮೂಲಗಳ ಮಾಲೀಕರೊಂದಿಗೆ ಮಾತನಾಡಿ, ಅಗತ್ಯ ಬಿದ್ದಲ್ಲಿ ನೀರು ಬಳಕೆ ಮಾಡುವ ಬಗ್ಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಸನ್ನದ್ಧ ಸ್ಥಿತಿಯಲ್ಲಿರುವಂತೆ ಅವರು ಸೂಚಿಸಿದ್ದಾರೆ.

ಅವಕಾಶ ಸಿಗದಿದ್ದರೆ ಬೇರೆ ರಾಜ್ಯಗಳಲ್ಲಿ ಹೂಡಿಕೆ

ಬಾಗಲಕೋಟೆ: ರಾಜ್ಯದಲ್ಲಿ 5,700 ಕೋಟಿ ವೆಚ್ಚದಲ್ಲಿ ವಿಮಾನ ಇಂಧನ ಉತ್ಪಾದನಾ ಘಟಕ ಮತ್ತು ಬಯೊ ಪ್ಲಾಸ್ಟಿಕ್ ಘಟಕಗಳ ಸ್ಥಾಪನೆಗೆ ಅನುಮತಿ ಕೋರಿ ನಿರಾಣಿ ಗ್ರೂಪ್ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಲಾಗಿದೆ. ಇಲ್ಲಿ ಅವಕಾಶ ನೀಡದಿದ್ದರೆ, ಬೇರೆ ರಾಜ್ಯಗಳಲ್ಲಿ ಹೂಡಿಕೆ ಅನಿವಾರ್ಯ ಆಗುತ್ತದೆ ಎಂದು ಮಾಜಿ ಸಚಿವ ಮುರುಗೇಶ ನಿರಾಣಿ ಹೇಳಿದರು.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಬೇರೆ ದೇಶ, ಬೇರೆ ರಾಜ್ಯದ ಹೂಡಿಕೆದಾರರನ್ನು ಆಹ್ವಾನಿಸಲಾಗುತ್ತದೆ. ರಾಜ್ಯದವರೇ ಆಸಕ್ತಿ ತೋರಿದರೆ, ತಿರಸ್ಕರಿಸಲಾಗುತ್ತದೆ ಎಂದು ತಿಳಿಸಿದರು.

3,200 ಕೋಟಿ ವೆಚ್ಚದಲ್ಲಿ ವಿಮಾನ ಇಂಧನ ಉತ್ಪಾದನಾ ಘಟಕ ಮತ್ತು 2,500 ಕೋಟಿ ವೆಚ್ಚದಲ್ಲಿ ಬಯೊ ಪ್ಲಾಸ್ಟಿಕ್ ಉತ್ಪಾದನಾ ಘಟಕ ಸ್ಥಾಪಿಸುವ ಉದ್ದೇಶವಿದೆ. ಇವುಗಳ ಸ್ಥಾಪನೆಗೆ ಭೂಮಿ, ವಿದ್ಯುತ್ ಕೇಳಿಲ್ಲ. ಸಾವಿರಾರು ಜನರಿಗೆ ಉದ್ಯೋಗ ಸಿಗುತ್ತದೆ. ಅರ್ಜಿ ತಿರಸ್ಕರಿಸಿದ್ದಕ್ಕೆ ಕಾರಣ ತಿಳಿಸಬೇಕು. ಈ ಘಟಕಗಳ ಸ್ಥಾಪನೆಗೆ ಮಹಾರಾಷ್ಟ್ರದ ಸಿಎಂ ಶೇ.50ರಷ್ಟು ಸಬ್ಸಿಡಿ ನೀಡುವುದಾಗಿ ಹೇಳಿದ್ದರೆ, ಆಂಧ್ರ ಪ್ರದೇಶದ ಸಿಎಂ 400 ಎಕರೆ ಭೂಮಿ ರಿಯಾಯಿತಿ ದರದಲ್ಲಿ (ಎಕರೆಗೆ 10 ಲಕ್ಷ) ಕೊಡುವುದಾಗಿ ತಿಳಿಸಿದ್ದಾರೆ. ಜಪಾನಿನ ಸುಮಿಟಮೊ ಕಂಪನಿ ಪಾಲು ದಾರಿಕೆ ಇರಲಿದೆ ಎಂದರು.

ಏಷ್ಯಾದಲ್ಲಿ ನಿರಾಣಿ ಗ್ರೂಪ್ ಅತಿ ಹೆಚ್ಚು ಎಥೆನಾಲ್ ಉತ್ಪಾದನೆ ಮಾಡುತ್ತಿದೆ. ಕೇಂದ್ರ ಸರಕಾರವು ವಾಹನಗಳಿಗೆ ಶೇ.100ರಷ್ಟು ಎಥೆನಾಲ್ ಬಳಕೆಗೆ ಅನುಮತಿ ನೀಡಿರುವುದನ್ನು ಸ್ವಾಗತಿಸುತ್ತೇನೆ. ಇದರಿಂದ ಪೆಟ್ರೋಲ್ ಆಮದಿನ ಹೊರೆ ಕಡಿಮೆಯಾಗಲಿದೆ.

-ಮುರುಗೇಶ್ ನಿರಾಣಿ, ಮಾಜಿ ಸಚಿವ

ಎಸ್‌ಐಟಿ ಅಧಿಕಾರಿಗಳ ಕಾರು ಪಲ್ಟಿ

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಡಲಾಗಿದೆ ಎನ್ನಲಾದ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ತಂಡದ ಎಸ್ಪಿ ಸೈಮನ್ ಮತ್ತು ಇತರ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಇನೋವಾ ಕಾರು ಚಾರ್ಮಾಡಿ ಘಾಟಿಯಲ್ಲಿ ನಿಯಂತ್ರಣ ತಪ್ಪಿ ಪಲ್ಟಿಯಾದ ಘಟನೆ ಜೂ.16ರ ಮಂಗಳವಾರ ನಡೆದಿದೆ.

ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಎಸ್ಪಿ ಸಿ.ಎ.ಸೈಮನ್, ಇನ್‌ಸ್ಪೆಕ್ಟರ್ ಕುಸುಮಾಧರ್, ಪೇದೆ ಮಂಜುನಾಥ್ ಅವರು ಚಿಕ್ಕಮಗಳೂರು ಜಿಲ್ಲಾ ಎಸ್ಪಿ ಹಾಗೂ ಎಸ್‌ಐಟಿ ತನಿಖಾಧಿಕಾರಿಯಾಗಿರುವ ಜಿತೇಂದ್ರ ಕುಮಾರ್ ದಯಾಮ ಅವರನ್ನು ಭೇಟಿ ಮಾಡಲು ಚಿಕ್ಕಮಗಳೂರು ಕಡೆ ತೆರಳುತ್ತಿದ್ದಾಗ ಘಟನೆ ನಡೆದಿದೆ ಎನ್ನಲಾಗಿದೆ. ಕಾರಿನಲ್ಲಿ ಚಾಲಕ ಸೇರಿ ಒಟ್ಟು 4 ಜನ ಪ್ರಯಾಣಿಸುತ್ತಿದ್ದರು. ಘಟನೆಯಲ್ಲಿ ಅಧಿಕಾರಿಗಳು ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರು ದಿಬ್ಬಕ್ಕೆ ಗುದ್ದಿ ಪಲ್ಟಿಯಾದ ರಭಸಕ್ಕೆ ಹಾನಿಯಾಗಿದ್ದು, ಈ ಬಗ್ಗೆ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಡಿಕೆಶಿ ವಿರುದ್ಧ ತನಿಖೆಗೆ ಪ್ರಧಾನಿಗೆ ಪತ್ರ ಬರೆದಿದ್ದ ಎಚ್‌ಡಿಕೆ: ಬಾಲಕೃಷ್ಣ ಆರೋಪ

ಡಿಕೆಶಿ ಸಿಎಂ ಆಗಿರುವುದಕ್ಕೆ ಗೌಡರ ಕುಟುಂಬಕ್ಕೆ ಹೊಟ್ಟೆಕಿಚ್ಚು

ರಾಮನಗರ: ಡಿ.ಕೆ.ಶಿವಕುಮಾರ್ ಅವರು ಒಕ್ಕಲಿಗ ಸಮುದಾಯದ ಮತ್ತೊಬ್ಬ ನಾಯಕನಾಗಿ ಬೆಳೆಯಬಾರದೆಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬ ಕುತಂತ್ರ ಮಾಡಿತು. ಅದಕ್ಕಾಗಿ, ಶಿವಕುಮಾರ್ ವಿರುದ್ಧ ಅಕ್ರಮ ತನಿಖೆಗೆ ಪ್ರಧಾನಿಗೆ ಪತ್ರ ಬರೆದಿದ್ದರು ಎಂದು ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಗಂಭೀರ ಆರೋಪ ಮಾಡಿದರು.

ಬಿಡದಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿ ಅವರು, ಶಿವಕುಮಾರ್ ಅವರನ್ನು ಬಲಿ ಹಾಕಲು ಎಚ್‌ಡಿಕೆ ಯಾರ್‍ಯಾರಿಗೆ ಕರೆ ಮಾಡಿದ್ದಾರೆ ಎಂಬುದನ್ನು ಸಮಯ ಬಂದಾಗ ಹೇಳುತ್ತೇನೆ. ಈಗ ಡಿಕೆಶಿ ಮುಖ್ಯಮಂತ್ರಿಯಾಗಿರುವುದಕ್ಕೆ ಹೊಟ್ಟೆಕಿಚ್ಚುಪಡುತ್ತಿದ್ದಾರೆ. ಅದಕ್ಕಾಗಿ ಅವರೇ ಹುಟ್ಟು ಹಾಕಿದ ಬಿಡದಿ ಟೌನ್‌ಶಿಪ್ ಯೋಜನೆ ಅನುಷ್ಠಾನಕ್ಕೆ ಮುಂದಾಗಿರುವ ಶಿವಕುಮಾರ್ ವಿರುದ್ಧ ಹೋರಾಟಕ್ಕೆ ಮುಂದಾಗಿದ್ದಾರೆ ಎಂದರು.

ಕುಮಾರಸ್ವಾಮಿ ಅವರು ಬಿಜೆಪಿ ಜತೆ ಸೇರಿಕೊಂಡಿರುವುದೇ ಶಿವಕುಮಾರ್ ಅವರಿಗೆ ತೊಂದರೆ ಕೊಡಲು. ತಮ್ಮನ್ನು ಬಿಟ್ಟರೆ ಒಕ್ಕಲಿಗರಲ್ಲಿ ಬೇರೊಬ್ಬರು ಸಿಎಂ ಆಗಬಾರದು ಎಂಬುದು ಎಚ್‌ಡಿಕೆ ಮನಸ್ಸಿನಲ್ಲಿತ್ತು. ಅದಕ್ಕಾಗಿ, ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಿದ್ದಾರೆ. ಅದನ್ನು ಮೀರಿ ಶಿವಕುಮಾರ್ ಮುಖ್ಯಮಂತ್ರಿಯಾದರು. ಒಕ್ಕಲಿಗರಲ್ಲಿ ಈಗ ಎರಡನೇ ನಾಯಕತ್ವ ಪ್ರಬಲವಾಗಿ ಬೆಳೆಯುತ್ತಿದೆ. ಇದನ್ನು ಹೇಗಾದರೂ ಮಾಡಿ ಚಿವುಟಬೇಕು ಎಂದು ಕಸರತ್ತು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೋರಾಟ ಕೈಬಿಡಿ ಎಂದಿದ್ದ ಬಿಎಸ್‌ವೈ: ಹಿಂದೆ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರಕಾರವು ಯೋಜನಾ ಪ್ರದೇಶದ ಒಂದು ಸಾವಿರ ಎಕರೆಯನ್ನು ಕೆಐಡಿಬಿಗೆ ಭೂಸ್ವಾಧೀನ ಮಾಡಿತು. ಅದನ್ನು ವಿರೋಧಿಸಿ ನಾವು ಹೋರಾಟ ಮಾಡಿದಾಗ, ಇದೇ ಬಿಎಸ್‌ವೈ ಅವರು ನನ್ನನ್ನು ಮತ್ತು ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಅವರನ್ನು ತಮ್ಮ ಕಚೇರಿಗೆ ಕರೆದು ಮಾತನಾಡಿದರು. ಈ ಹಂತದಲ್ಲಿ ಭೂ ಸ್ವಾಧೀನ ಕೈ ಬಿಡುವುದಕ್ಕೆ ಸಾಧ್ಯವಿಲ್ಲ. ಈಗಾಗಲೇ ಈ ಪ್ರದೇಶ ಕೆಂಪುವಲಯವಾಗಿದ್ದು, ಇಲ್ಲಿನ ಭೂಮಿಗೆ ಉತ್ತಮ ಪರಿಹಾರ ಕೊಡಿಸುತ್ತೇನೆ. ಹಾಗಾಗಿ, ಹೋರಾಟ ಕೈ ಬಿಡಿ ಎಂದು ಹೇಳಿದ್ದರು. ಆಗ ವಿಜಯೇಂದ್ರ ಮತ್ತು ರುದ್ರೇಶ್ ಸಹ ಜತೆಗಿದ್ದರು. ಅದಕ್ಕೆ ದಾಖಲೆ ಸಹ ಕೊಡುವೆ. ಅಂತಹ ಬಿಜೆಪಿಯವರಿಗೆ ಟೌನ್‌ಶಿಪ್ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಬಿಜೆಪಿ ವಿರುದ್ಧ ಬಾಲಕೃಷ್ಣ ಹರಿಹಾಯ್ದರು.

ಎಚ್‌ಡಿಕೆ ಪತ್ನಿ, ಪುತ್ರನ ಹೆಸರಿನಲ್ಲಿದೆ ಆಸ್ತಿ

ಶಿವಕುಮಾರ್ ಅವರು ಡಿಸಿಎಂ ಆಗಿದ್ದಾಗಲೇ ಯಾಕೆ ಬಿಡದಿ ಟೌನ್‌ಶಿಪ್ ವಿರುದ್ಧ ಜೆಡಿಎಸ್‌ನವರು ಹೋರಾಟ ಮಾಡಲಿಲ್ಲ. ಮುಖ್ಯಮಂತ್ರಿಯಾದ ಬಳಿಕ ಯಾಕೆ ನಿಖಿಲ್ ಎರಡು ಸಲ ಬಿಡದಿಗೆ ಬಂದರು? ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಎಚ್‌ಡಿಕೆ ಪತ್ನಿ ಅನಿತಾ ಕುಮಾರಸ್ವಾಮಿ ಮತ್ತು ಪುತ್ರ ನಿಖಿಲ್ ಕುಮಾರಸ್ವಾಮಿ ಹೆಸರಿನಲ್ಲಿ 60 ಎಕರೆ ಆಸ್ತಿ ಇದೆ. ಅದರ ಬಗ್ಗೆ ಮಾತನಾಡಲಿ. ಎಲ್ಲರೂ ಗಾಜಿನ ಮನೆಯಲ್ಲಿ ಕುಳಿತಿದ್ದೇವೆ. ಸುಮ್ಮನೆ ಕಲ್ಲು ಹೊಡೆಯೋದು ಬೇಡ. ನಾವು ಸತ್ಯ ಹರಿಶ್ಚಂದ್ರರು ಎಂದು ಯಾರೂ ಎದೆ ತಟ್ಟಿಕೊಳ್ಳುವುದು ಬೇಡ ಎಂದು ಎಚ್‌ಡಿಕೆ ವಿರುದ್ಧ ಬಾಲಕೃಷ್ಣ ವಾಗ್ದಾಳಿ ನಡೆಸಿದರು.

ಸಂಪಾದಕೀಯ

ಮಳೆ ಕೊರತೆ ಎದುರಿಸೋಣ

ನೈರುತ್ಯ ಮುಂಗಾರು ಕುಂಠಿತಗೊಂಡಿದೆ. ಭಾರತೀಯ ಹವಾಮಾನ ಇಲಾಖೆ ತಿಳಿಸಿರುವಂತೆ ಶೇ.64ರಷ್ಟು ಮುಂಗಾರು ಮಳೆ ಕೊರತೆಯಾಗಿದೆ. ವಾಡಿಕೆಯಂತೆ ಜೂನ್ 4ರಿಂದ ಜೂನ್ 15ರವರೆಗೆ ದೇಶಾದ್ಯಂತ 53.7 ಮಿ.ಮೀ ಮಳೆಯಾಗಬೇಕಿತ್ತು. ಆದರೆ ಕೇವಲ 19.2 ಮಿ.ಮೀ ಮಾತ್ರ ಮಳೆಯಾಗಿದೆ. ಈ ಮಳೆಯಿಂದಾಗಿಯೇ ಕೃಷಿ ಚಟುವಟಿಕೆಗಳಿಗೆ ನೆಲ ಹದಗೊಳ್ಳುತ್ತಿತ್ತು. ಕೃಷಿಕರು ತಮ್ಮ ಕೃಷಿ ಚಟುವಟಿಕೆ ಆರಂಭಿಸುತ್ತಿದ್ದರು. ಆದರೆ ಈ ಬಾರಿ ಎಲ್ ನಿನೋ ಹಾಗೂ ನೈರುತ್ಯ ಮುಂಗಾರಿನ ಕೊರತೆಯಿಂದ ಕೃಷಿ ಚಟುವಟಿಕೆಗಳು ಆರಂಭವೇ ಆಗಿಲ್ಲ.

ಪರ್ಯಾಯ ದ್ವೀಪ ಭಾರತ ಉಪಖಂಡದ ಮೇಲೆ ಇಷ್ಟು ಹೊತ್ತಿಗೆ ದಟ್ಟವಾಗಿ ಮೋಡಗಳು ಇರಬೇಕಾಗಿದ್ದು, ಉಪಗ್ರಹ ಚಿತ್ರಗಳಲ್ಲಿ ಸ್ವಲ್ಪವೂ ಗೋಚರಿಸಿಲ್ಲ. ಹೀಗಾಗಿ, ಇನ್ನೂ ಹಲವು ದಿನಗಳ ಕಾಲ ಈ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ. ಜೂನ್ ಅಂತ್ಯದವರೆಗೆ ಮಳೆ ಬರದೇ ಹೋದರೆ, ಈ ವರ್ಷ ಬರಗಾಲ ಕಾಲಿಡುವುದು ಖಚಿತ. ಈ ಸಲದ ಮಳೆಯನ್ನು ನೆಚ್ಚುವಂತಿಲ್ಲ ಎಂದು ತಜ್ಞರು ಎಚ್ಚರಿಸಿದ್ದಾರೆ. ಇದರ ಪರಿಣಾಮ, ರಾಜ್ಯದ ಅಣೆಕಟ್ಟುಗಳಲ್ಲಿ ಒಟ್ಟು ಸಾಮರ್ಥ್ಯದ ಶೇ.23ರಷ್ಟು ಮಾತ್ರ ನೀರಿದೆ. ಕಳೆದ ವರ್ಷ ಈ ಹೊತ್ತಿಗೆ 349 ಟಿಎಂಸಿ ನೀರಿತ್ತು. ಈ ವರ್ಷ 206 ಟಿಎಂಸಿ ಮಾತ್ರ ಇದೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವ ಕೆಆರ್‌ಎಸ್ ಡ್ಯಾಮ್‌ನಲ್ಲಿ ಈ ಹೊತ್ತಿಗೆ 30 ಟಿಎಂಸಿ ಇರಬೇಕಾದಲ್ಲಿ, 11 ಟಿಎಂಸಿ ಮಾತ್ರ ಇದೆ. ಮೈಸೂರು ಭಾಗಕ್ಕೆ ನೀರು ಪೂರೈಸುವ ಕಬಿನಿ ಜಲಾಶಯವೂ ಖಾಲಿ ಇದೆ. ಇದು ಗಂಭೀರ ಸಂಗತಿ. ಸರಕಾರ ಈಗಲೇ ಎಚ್ಚೆತ್ತುಕೊಳ್ಳಬೇಕಿದೆ. ಮುಖ್ಯವಾಗಿ, ಕುಡಿಯುವ ನೀರು ಕೊರತೆಯಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು. ಜಲಾಶಯಗಳಲ್ಲಿ ನೀರು ಇಲ್ಲವಾದ್ದರಿಂದ, ಕಡಿಮೆ ನೀರು ಬಳಸುವ ಬೆಳೆಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸಬೇಕಿದೆ. ಬಿದ್ದಷ್ಟು ಮಳೆ ನೀರು ಸಂಗ್ರಹವನ್ನು ಈಗಿನಿಂದಲೇ ಆರಂಭಿಸಲು ನಗರದ ಜನತೆಯನ್ನು ಪ್ರೇರೇಪಿಸಿದರೆ, ಈ ವರ್ಷಕ್ಕಲ್ಲವಾದರೂ ಮುಂದಿನ ವರ್ಷಗಳಲ್ಲಿ ಇಂಥ ಸನ್ನಿವೇಶ ಒದಗಿದರೆ ತಾಳಿಕೊಳ್ಳಬಹುದು. ಜಾನುವಾರುಗಳಿಗೆ ಮೇವಿನ ಸಂಗ್ರಹ ಮಾಡುವುದು, ಆಹಾರ ಬೆಳೆಗಳ ಗೋದಾಮು ವ್ಯವಸ್ಥೆ, ಕೇಂದ್ರದ ನೆರವಿಗೆ ಆಗ್ರಹ, ಬಿತ್ತನೆ ಬೀಜ ಹಾಗೂ ರಸಗೊಬ್ಬರ ಪೂರೈಕೆ, ಬೆಳೆ ನಷ್ಟ ಪರಿಹಾರಕ್ಕೆ ಸಿದ್ಧತೆ ಇವೆಲ್ಲವನ್ನೂ ಮಾಡಬೇಕು. ಮಂತ್ರಿಗಳು, ಜಿಲ್ಲಾಡಳಿತಗಳು ಸಮರೋಪಾದಿಯಲ್ಲಿ ರೈತರ ಬಳಿಗೆ ಧಾವಿಸುವುದು ಈಗ ಅಗತ್ಯವಾಗಿದೆ.

ಸೊಂಪಾದಕೀಯ

ಒಂಟೆ ಮೇಲೆ ಝೂಮ್

ವರ್ಕ್ ಫ್ರಂ ಹೋಮ್ ಮಾಡುವವರಿಗೆ ಒಂದು ಅನುಕೂಲ ಎಂದರೆ, ಬಾಸ್ ಝೂಮ್ ಮೀಟಿಂಗ್ ಮಾಡುವಾಗ ಅಂಗಿ ಮಾತ್ರ ಧರಿಸಿಕೊಂಡಿದ್ದರೆ ಸಾಕು, ಕೆಳಗಡೆ ಚಡ್ಡಿ ಬಿಟ್ಟು ಇನ್ನೇನೂ ಬೇಕಿಲ್ಲ. ಅಡುಗೆ ಮನೆಯಿಂದಲೇ ಮೀಟಿಂಗ್ ಅಟೆಂಡ್ ಮಾಡುವ ಮಹಿಳಾ ಉದ್ಯೋಗಿಗಳೂ ಇರಬಹುದು. ಇಲ್ಲೊಂದು ಕತೆ ಕೇಳಿ. ಇಲ್ಲೊಬ್ಬ ವ್ಯಕ್ತಿ ಸಹರಾ ಮರುಭೂಮಿಯಲ್ಲಿ ಒಂಟೆ ಮೇಲೆ ಕುಳಿತು ಆಫೀಸ್‌ನ ಝೂಮ್ ಮೀಟಿಂಗ್‌ನಲ್ಲಿ ಭಾಗಿಯಾದ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗುತ್ತಿದೆ. ಒಂಟೆ ಚಲಿಸುತ್ತಿದ್ದರೂ ಇವನು ಮೀಟಿಂಗ್‌ನಲ್ಲಿ ಮಗ್ನವಾಗಿದ್ದಾನೆ. ಆ ಮರುಭೂಮಿಯಲ್ಲಿ ನೆಟ್‌ವರ್ಕ್ ಸರಿಯಾಗಿ ಸಿಗುತ್ತಿತ್ತೋ ಇಲ್ಲವೋ. ಬಹುಶಃ ಒಂಟೆಯ ಕತ್ತು ಎತ್ತರವಾಗಿರುವುದರಿಂದ, ಅದಕ್ಕೆ ಮೊಬೈಲ್ ನೆಟ್‌ವರ್ಕ್ ಟವರ್ ಸಿಕ್ಕಿಸಿರುವ ಸಾಧ್ಯತೆ ಇದೆ. ಇದೇನು ಮಹಾ, ನಾವು ಕೊರೊನಾ ಟೈಮ್‌ನಲ್ಲಿ ಮಲೆನಾಡಿನ ನಮ್ಮ ಮನೆಯಿಂದಲೇ ವರ್ಕ್ ಫ್ರಂ ಹೋಂ ಮಾಡಿದ್ದೇವಲ್ಲ. ಆಗೆಲ್ಲ ಮನೆಯೊಳಗೆ ನೆಟ್‌ವರ್ಕ್ ಸಿಗದಿದ್ದರೆ ಪಕ್ಕದ ಮರ ಹತ್ತಿ, ಗುಡ್ಡ ಹತ್ತಿ, ಏಣಿ ಹತ್ತಿ ನಿಂತುಕೊಂಡು ಕೆಲಸ ಮಾಡಿದ್ದೇವಲ್ಲ ಎಂದು ಮಲೆನಾಡು ಮೂಲದ ಉದ್ಯೋಗಿಗಳು ಹೇಳಬಹುದು. ಕೆಲವರು ಇದಕ್ಕಾಗಿಯೇ ಮರ ಹತ್ತುವುದು ಕಲಿತಿದ್ದಾರಂತೆ. ಈ ಕೇಸಿನಲ್ಲಿ ಬಹುಶಃ ಒಂಟೆ ಡಬಲ್ ಡ್ಯೂಟಿ ಮಾಡುತ್ತಿರಬಹುದು. ಒಂದು ಇವನನ್ನು ಹೊತ್ತು ಸಾಗಿಸುವುದು, ಇನ್ನೊಂದು ನೆಟವರ್ಕ್ ಟವರ್ ಕೆಲಸ ಮಾಡುವುದು. ಈತನಿಗೆ ಕೆಲಸವೂ ಆಯ್ತು, ಒಂಟೆ ಸವಾರಿಯ ಮಜವೂ ಸಿಕ್ಕಿತು. ಒಂಟೆ ಹೆಣ್ಣೋ ಗಂಡೋ ಗೊತ್ತಾಗಿಲ್ಲ. ಯಾವುದೇ ಆದರೂ ಅದರದೇ ಸಮಸ್ಯೆಗಳು ಇದ್ದೇ ಇರುತ್ತದೆ ಬಿಡಿ.

ಸಂಪಾದಕರ ಸದ್ಯಶೋಧನೆ

ನಾಯಿಗಳಿಗೆ ಟೈಮ್ ತಿಳಿಯುತ್ತದಾ?

ನಾಯಿಗಳು ಸಮಯವನ್ನು ಗುರುತಿಸಬಲ್ಲವೇ? ಇದು ಪ್ರಾಣಿ ಪ್ರೇಮಿಗಳಲ್ಲಿ ಮತ್ತು ವಿಜ್ಞಾನಿಗಳಲ್ಲಿ ಬಹಳ ದಿನಗಳಿಂದ ಇರುವ ಒಂದು ಕುತೂಹಲಕಾರಿ ಪ್ರಶ್ನೆ. ಮನುಷ್ಯರಂತೆ ನಾಯಿಗಳಿಗೆ ವಾಚ್ ನೋಡಿ 'ಈಗ ಐದು ಗಂಟೆ ಆಯ್ತು' ಎಂದು ಹೇಳಲು ಬಾರದೇ ಇರಬಹುದು, ಆದರೆ ಅವುಗಳಿಗೆ ಸಮಯದ ಪ್ರಜ್ಞೆ ಅದ್ಭುತ. ಮನುಷ್ಯರಂತೆ ನಾಯಿಗಳ ದೇಹದಲ್ಲೂ ಒಂದು ಸ್ವಾಭಾವಿಕ ಜೈವಿಕ ಗಡಿಯಾರ ಇರುತ್ತದೆ. ಬೆಳಕು ಮತ್ತು ಕತ್ತಲೆಯ ಆಧಾರದ ಮೇಲೆ ಅವುಗಳ ದೇಹವು ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಸೂರ್ಯನ ಬೆಳಕು ಬೀಳುತ್ತಿದ್ದಂತೆ ಅವುಗಳಿಗೆ ಎಚ್ಚರವಾಗುತ್ತದೆ ಮತ್ತು ಚಟುವಟಿಕೆಯಿಂದ ಇರಬೇಕೆಂಬ ಪ್ರಜ್ಞೆ ಮೂಡುತ್ತದೆ. ಕತ್ತಲಾಗುತ್ತಿದ್ದಂತೆ ಅವುಗಳ ದೇಹವು ವಿಶ್ರಾಂತಿ ಪಡೆಯಲು ಸಿದ್ಧವಾಗುತ್ತದೆ. ನಾಯಿಗಳ ಮೂಗು ಎಷ್ಟು ಶಕ್ತಿಯುತವಾಗಿದೆ ಎಂದರೆ, ಅವು ಗಾಳಿಯಲ್ಲಿರುವ ವಾಸನೆಯ ಬದಲಾವಣೆಯಿಂದ ಸಮಯವನ್ನು ಲೆಕ್ಕ ಹಾಕುತ್ತವೆ. ನೀವು ಬೆಳಗ್ಗೆ ಕೆಲಸಕ್ಕೆ ಹೋಗುವಾಗ ಮನೆಯಲ್ಲಿ ನಿಮ್ಮ ವಾಸನೆ ತೀವ್ರವಾಗಿರುತ್ತದೆ. ನೀವು ಹೊರಗಡೆ ಇದ್ದಷ್ಟು ಸಮಯ, ಮನೆಯಲ್ಲಿ ನಿಮ್ಮ ವಾಸನೆ ಮೆಲ್ಲಗೆ ಕಡಿಮೆಯಾಗುತ್ತಾ ಬರುತ್ತದೆ. ದಿನಾಲೂ ನೀವು ಸಂಜೆ ಐದು ಗಂಟೆಗೆ ಮನೆಗೆ ಬರುತ್ತೀರಿ ಎಂದಾದರೆ, ಆ ಸಮಯಕ್ಕೆ ಮನೆಯಲ್ಲಿ ನಿಮ್ಮ ವಾಸನೆ ಎಷ್ಟು ಮಟ್ಟಿಗೆ ಕಡಿಮೆಯಾಗಿರಬೇಕು ಎಂದು ನಾಯಿಗೆ ಗೊತ್ತಿರುತ್ತದೆ. ಆ ನಿರ್ದಿಷ್ಟ ವಾಸನೆಯ ಮಟ್ಟವನ್ನು ತಲುಪಿದಾಗ, ನಾಯಿ ನೀವು ಬರುವ ಸಮಯವಾಯಿತೆಂದು ಬಾಗಿಲ ಬಳಿ ಕಾಯಲು ಶುರು ಮಾಡುತ್ತದೆ. ನಾಯಿಗಳು ದಿನನಿತ್ಯದ ಹವ್ಯಾಸಗಳಿಗೆ (Routine) ಬೇಗನೆ ಹೊಂದಿಕೊಳ್ಳುತ್ತವೆ. ನೀವು ದಿನಾಲೂ ಬೆಳಗ್ಗೆ ಎಂಟು ಗಂಟೆಗೆ ಆಹಾರ ನೀಡುತ್ತಿದ್ದರೆ, ನಾಯಿಯ ಹೊಟ್ಟೆಯಲ್ಲಿ ಜೀರ್ಣಕಾರಿ ರಸಗಳು ಅದೇ ಸಮಯಕ್ಕೆ ಬಿಡುಗಡೆಯಾಗಲು ಆರಂಭಿಸುತ್ತವೆ. ಗಡಿಯಾರದ ಮುಳ್ಳು ಎಂಟಕ್ಕೆ ಬರುವ ಮುನ್ನವೇ ನಾಯಿಯ ಹೊಟ್ಟೆ ಅದಕ್ಕೆ ಸಮಯದ ನೆನಪು ಮಾಡಿಕೊಡುತ್ತದೆ. ನಾಯಿಗಳು ನಮ್ಮ ದಿನಚರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತವೆ. ಮನೆಯ ಹೊರಗೆ ಶಾಲಾ ಬಸ್ ಬರುವ ಸದ್ದು, ನಿರ್ದಿಷ್ಟ ಸಮಯದಲ್ಲಿ ಬರುವ ಸೂರ್ಯನ ಬಿಸಿಲಿನ ಕಿರಣಗಳು ಅಥವಾ ದೂರದ ದೇವಸ್ಥಾನದ ಗಂಟೆಯ ಸದ್ದು- ಇವೆಲ್ಲವೂ ಅವುಗಳಿಗೆ ಸಮಯದ ಸೂಚಕಗಳಾಗಿ ಕೆಲಸ ಮಾಡುತ್ತವೆ. ನಾಯಿಗಳಿಗೆ ನಮ್ಮಂತೆ 'ನಿಮಿಷ' ಅಥವಾ 'ಗಂಟೆ' ಎಂಬ ಗಣಿತದ ಲೆಕ್ಕಾಚಾರ ಗೊತ್ತಿಲ್ಲ. ಆದರೆ ಅವು ಪರಿಸರದಲ್ಲಿ ಆಗುವ ಬದಲಾವಣೆಗಳು, ತಮ್ಮ ದೇಹದ ಅಗತ್ಯಗಳು ಮತ್ತು ಮುಖ್ಯವಾಗಿ ವಾಸನೆಯ ಏರಿಳಿತಗಳನ್ನು ಬಳಸಿಕೊಂಡು ಸಮಯವನ್ನು ಅತ್ಯಂತ ನಿಖರವಾಗಿ ಗ್ರಹಿಸುತ್ತವೆ. ನಿಮ್ಮ ನಾಯಿ ನೀವು ಬರುವ ಸಮಯಕ್ಕೆ ಸರಿಯಾಗಿ ಬಾಗಿಲಲ್ಲಿ ನಿಂತಿದ್ದರೆ, ಅದಕ್ಕೆ ನಿಮ್ಮ ಮೇಲಿರುವ ಪ್ರೀತಿ ಮತ್ತು ಅದರ ಅದ್ಭುತ ಮೂಗಿನ ಶಕ್ತಿಯೇ ಕಾರಣ. ನಾಯಿಗಳು ತಮ್ಮ ಯಜಮಾನರ ಪ್ರತಿಯೊಂದು ಸಣ್ಣ ಚಲನವಲನವನ್ನು ಗಮನಿಸುತ್ತಿರುತ್ತವೆ. ನೀವು ಲ್ಯಾಪ್‌ಟಾಪ್ ಮುಚ್ಚುವ ಸದ್ದು, ಕೀಲಿ ಕೈ ಕೈಗೆತ್ತಿಕೊಳ್ಳುವ ಶಬ್ದ ಅಥವಾ ಆಫೀಸ್ ಬಟ್ಟೆ ಬದಲಾಯಿಸುವ ರೀತಿ- ಇವೆಲ್ಲವನ್ನೂ ಅವು ಭವಿಷ್ಯದ ಘಟನೆಗಳೊಂದಿಗೆ ಜೋಡಿಸುತ್ತವೆ. ನೀವು ಒಂದು ಕೆಲಸ ಮಾಡಿದ ನಂತರ ಮುಂದೇನು ನಡೆಯುತ್ತದೆ ಎಂಬ 'ಸಮಯದ ಸರಣಿ' ಅವುಗಳ ತಲೆಯಲ್ಲಿ ಅಚ್ಚೊತ್ತಿರುತ್ತದೆ. ನಾಯಿಗಳಿಗೆ ಕೇವಲ ವರ್ತಮಾನ ಕಾಲ ಮಾತ್ರವಲ್ಲ, ಭೂತಕಾಲದ ಘಟನೆಗಳ ನೆನಪೂ ಇರುತ್ತದೆ. ನೀವು ಐದು ನಿಮಿಷಗಳ ಕಾಲ ಹೊರಗೆ ಹೋಗಿ ಬಂದಾಗ ನಾಯಿ ತೋರಿಸುವ ಉತ್ಸಾಹಕ್ಕೂ, ಐದು ಗಂಟೆಗಳ ಕಾಲ ಹೊರಗೆ ಹೋಗಿ ಬಂದಾಗ ತೋರಿಸುವ ಸಂಭ್ರಮಕ್ಕೂ ವ್ಯತ್ಯಾಸವಿರುತ್ತದೆ. ತಾವು ಎಷ್ಟು ಸಮಯ ಒಂಟಿಯಾಗಿದ್ದೆವು ಎಂಬ ಅಂತರದ ಅರಿವು ಅವುಗಳ ಮಿದುಳಿಗೆ ಸ್ಪಷ್ಟವಾಗಿ ಆಗಿರುತ್ತದೆ. ನಾಯಿಗಳು ತಮ್ಮ ಸುತ್ತಲಿನ ಸಾಮಾಜಿಕ ವಾತಾವರಣಕ್ಕೆ ತಕ್ಕಂತೆ ಸಮಯವನ್ನು ಹೊಂದಿಸಿಕೊಳ್ಳುತ್ತವೆ. ಮನೆಯ ಇತರ ಸದಸ್ಯರು ಎದ್ದೇಳುವ ಸಮಯ, ಟಿವಿ ಆನ್ ಆಗುವ ಸಮಯ ಅಥವಾ ರಾತ್ರಿ ಲೈಟ್ ಆಫ್ ಆಗುವ ಸಮಯವನ್ನು ನೋಡಿ ಅವು ತಮ್ಮ ಮಲಗುವ ಅಥವಾ ವಿಶ್ರಾಂತಿ ಪಡೆಯುವ ಸಮಯವನ್ನು ನಿರ್ಧರಿಸುತ್ತವೆ. ಮನುಷ್ಯರು ಸಮಯವನ್ನು ಅಂಕಿ-ಅಂಶಗಳಲ್ಲಿ ನೋಡಿದರೆ, ನಾಯಿಗಳು ಸಮಯವನ್ನು ಭಾವನೆಗಳು, ಶಬ್ದಗಳು ಮತ್ತು ಮುಖ್ಯವಾಗಿ ಬದಲಾಗುವ ವಾಸನೆಗಳ ಒಂದು ಪ್ರವಾಹವಾಗಿ ಅನುಭವಿಸುತ್ತವೆ. ಅವುಗಳ ಜಗತ್ತಿನಲ್ಲಿ ಗಡಿಯಾರದ ಮುಳ್ಳಿಗಿಂತ ಪ್ರಕೃತಿಯ ಮತ್ತು ಯಜಮಾನನ ಲಯವೇ ಮುಖ್ಯ.

ಒಂದು ವೋಟಿನ ಕರಾಮತ್ತು ಹೇಗಿದೆ ನೋಡಿ...!

ಜನಪಥ

ರಾಘವ ಶರ್ಮಾ ನಿಡ್ಲೆ
vveditoped@gmail.com

2026ರ ಮೇ 4ಕ್ಕೆ ಮುನ್ನ ಟಿಎಂಸಿ ಮುಖಂಡ, ಡೈಮಂಡ್ ಹಾರ್ಬರ್ ಜಿಲ್ಲೆಯ ಲೋಕಲ್ ಗ್ಯಾಂಗ್‌ಸ್ಟರ್ ಜಹಾಂಗೀರ್ ಖಾನ್ ಬರುತ್ತಿದ್ದಾನೆ ಎಂದರೆ ಸ್ಥಳೀಯರು ನಡುಬಗ್ಗಿಸಿ ನಮಸ್ಕಾರ ಮಾಡುವುದು ಅನಿವಾರ್ಯವಾಗಿತ್ತು. ಹಲವು ವರ್ಷಗಳಿಂದ ಇಂಥದ್ದೊಂದು ದೃಶ್ಯ ಡೈಮಂಡ್ ಹಾರ್ಬರ್ ಜಿಲ್ಲೆಯಾದ್ಯಂತ ಸಾಮಾನ್ಯವಾಗಿತ್ತು. ಆದರೆ ಕಾಲಚಕ್ರ ಹೇಗೆ ತಿರುಗುತ್ತದೆ ನೋಡಿ... ಇದೇ ಗ್ಯಾಂಗ್‌ಸ್ಟರ್ ಜಹಾಂಗೀರ್ ಖಾನ್ ನನ್ನಿಂದ ತಪ್ಪಾಯಿತು, ಕ್ಷಮಿಸಿ ಬಿಡಿ ಎಂದು ಜನರ ಮುಂದೆ ಕೈ ಮುಗಿದು ಬೇಡಿಕೊಳ್ಳುವ ಸ್ಥಿತಿಗೆ ತಲುಪಿದ್ದಾನೆ. ಫಾಲ್ತಾ ವಿಧಾನಸಭೆ ಕ್ಷೇತ್ರದ ಟಿಎಂಸಿ ಅಭ್ಯರ್ಥಿಯಾಗಿದ್ದ ಜಹಾಂಗೀರ್ ಖಾನ್, ಕ್ಷೇತ್ರದಾದ್ಯಂತ ಗೂಂಡಾಗಳ ನೆಟ್‌ವರ್ಕ್ ಸೃಷ್ಟಿಸಿಕೊಂಡು, ಭಯದ ವಾತಾವರಣ ಸೃಷ್ಟಿಸಿದ್ದವ. ಕೊಲೆ, ಸುಲಿಗೆ, ಹಿಂಸೆ, ಹಲ್ಲೆಗಳ ಹಿಂದೆ ಜಹಾಂಗೀರ್ ಬೆಂಬಲಿಗ ಪಡೆಯ ಹೆಸರೇ ಕೇಳುತ್ತಿತ್ತು. ಬಡ ಆಟೋ ರಿಕ್ಷಾದವರಿಂದಲೂ ಹಫ್ತಾ ವಸೂಲಿ ಮಾಡುತ್ತಿದ್ದ ಕಿರಾತಕ ಈತ. ಅದಕ್ಕೆ ಪೊಲೀಸರದ್ದೂ ಮೌನ ಸಮ್ಮತಿ. ಆತನನ್ನು ಮತ್ತು ಬೆಂಬಲಿಗರನ್ನು ಪ್ರಶ್ನಿಸುವವರಿರಲಿಲ್ಲ.

ಇಂತಿಪ್ಪ ಜಹಾಂಗೀರ್ ಖಾನ್ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಸಾಧಿಸಿದ ಕೂಡಲೇ ಫಾಲ್ತಾ ವಿಧಾನಸಭೆ ಮರು ಚುನಾವಣೆಯಲ್ಲಿ ನಾನು ಟಿಎಂಸಿಯಿಂದ ಸ್ಪರ್ಧಿಸುತ್ತಿಲ್ಲ ಎಂದು ದೂರ ಸರಿಯುತ್ತಾನೆ. ತಾನು ಬಂಧನಕ್ಕೀಡಾಗುತ್ತೇನೆ ಎಂದು ಗೊತ್ತಾಗಿ ಭಾರತದಿಂದ ವಿದೇಶಕ್ಕೆ ಪಲಾಯನ ಮಾಡಲು ಯತ್ನಿಸುಸುತ್ತಾನೆ. ಅದೃಷ್ಟವಶಾತ್, ನಕ್ಸಲ್ಬಾರಿ ಪ್ರದೇಶದ ಪಾನಿಟಂಕಿ ಎಂಬಲ್ಲಿನ ಇಂಡೋ-ನೇಪಾಳ ಗಡಿಭಾಗದಲ್ಲಿ ಆತನನ್ನು ಪೊಲೀಸರು ಪತ್ತೆಹಚ್ಚಿ ವಶಕ್ಕೆ ಪಡೆದುಕೊಂಡು, ಹೆಡೆಮುರಿ ಕಟ್ಟಿದ್ದಾರೆ.

ಮೇ 4ರ ತನಕ ಟಿಎಂಸಿಯಲ್ಲಿ ಜಹಾಂಗೀರ್ ಖಾನ್ ನಂತಹ ಹತ್ತಾರು ಮಂದಿ ಇದ್ದರು. ಈಗ ಬಹುಮಂದಿ ನಾಪತ್ತೆಯಾಗಿದ್ದಾರೆ. ಎಡಪಕ್ಷ, ಕಾಂಗ್ರೆಸ್, ಬಿಜೆಪಿ ಮೂರೂ ಪಕ್ಷಗಳ ಕಾರ್ಯಕರ್ತರಿಗೆ, ಅವರ ಕುಟುಂಬಸ್ಥರಿಗೆ ಹಿಂಸೆ ನೀಡುವುದು, ಲೂಟಿ ಹೊಡೆಯುವುದು, ಕಟ್ ಮನಿ ಸಂಗ್ರಹದ ಕುಕೃತ್ಯಗಳಲ್ಲೇ ತೊಡಗಿದ್ದರು. ಈ ಕ್ರಿಮಿನಲ್‌ಗಳ ಮಹಾಪೋಷಕನಾಗಿದ್ದದ್ದು ಸಿಎಂ ಮಮತಾ ಬ್ಯಾನರ್ಜಿಯ ಸೋದರಳಿಯ ಅಭಿಷೇಕ್ ಬ್ಯಾನರ್ಜಿ. ಸೋದರಳಿಯನ ಅಕ್ರಮ ಕೃತ್ಯ, ಅವ್ಯವಹಾರಗಳನ್ನು ನೋಡಿಯೂ ಜಾಣಕುರುಡು ಪ್ರದರ್ಶಿಸುತ್ತಿದ್ದ ಮಮತಾ ತಾನೊಬ್ಬ ಮಹಾನ್ ಜನನಾಯಕಿ ಎಂಬಂತೆ ಪೋಸು ಕೊಡುತ್ತಿದ್ದರು. ಆದರೆ, ಮೇ 4ರಂದು ಮಮತಾ ದೀದಿಯ ದರ್ಪ, ಅಹಂಕಾರವನ್ನು ಜನರೇ ಕೊನೆಗೊಳಿಸಿದರು. ದೆಹಲಿಯಲ್ಲಿರುವ ಇಂಡಿ ಮೈತ್ರಿಕೂಟದವರ ಮನೆಗಳಿಗೆ ಎಡತಾಕುತ್ತಾ ನಮ್ಮ ಟಿಎಂಸಿಯನ್ನು ರಕ್ಷಿಸಿ ಎಂದು ಮನವಿ ಮಾಡುವ ಸ್ಥಿತಿ ಈ ಮಮತಾರದ್ದು.

ಬಂಗಾಳದಲ್ಲಿ ಜಹಾಂಗೀರ್ ಮೇಲೆ ಹತ್ತು ಹಲವು ಕೇಸುಗಳಿವೆ. ಟಿಎಂಸಿ ನಾಯಕತ್ವದಿಂದಾಗಿಯೇ ಆತನಿಗೆ ರಾಜಕೀಯ ರಕ್ಷಣೆ ಸಿಗುತ್ತಿತ್ತು. ಆದರೆ, ಇನ್ನು ಹಾಗಿಲ್ಲ. ಕೆಲ ವರ್ಷ ಆತನಿಗೆ ಜೈಲೂಟ ಗ್ಯಾರಂಟಿಯಾಗಿದೆ. ಮತ್ತೊಂದೆಡೆ ಅಭಿಷೇಕ್ ಬ್ಯಾನರ್ಜಿ ಕೂಡ ಹಣಕಾಸು ಅವ್ಯವಹಾರ ಪ್ರಕರಣದಲ್ಲಿ ಆರೋಪಿಯಾಗಿ ಜಾರಿ ನಿರ್ದೇಶನಾಲಯದ ತನಿಖೆ ಎದುರಿಸುತ್ತಿದ್ದಾರೆ. ಕೆಲ ದಿನಗಳ ಹಿಂದಿನ ಶಾಸಕರ ನಕಲಿ ಸಹಿ ಪ್ರಕರಣದಲ್ಲೂ ಆರೋಪಿಯಾಗಿರುವ ಅಭಿಷೇಕ್, ಕಂಬಿ ಹಿಂದೆ ಕೂರುವ ದಿನಗಳು ದೂರದಲ್ಲಿಲ್ಲ ಅನಿಸುತ್ತಿದೆ.

ಪರಿಸ್ಥಿತಿ ಹೀಗಿರುವಾಗ, ಜಹಾಂಗೀರ್ ಜನರ ಮುಂದೆ ಕೈ ಮುಗಿಯಲೇ ಬೇಕು, ತನ್ನದು ತಪ್ಪಾಗಿದೆ ಕ್ಷಮಿಸಿ ಎಂದು ಕೇಳುತ್ತಾ, ಅವರ ಮುಂದೆ ನಡು ಬಗ್ಗಿಸಲೇಬೇಕಾಗಿದೆ. ಇದೇ ಜಹಾಂಗೀರ್ ಡೈಮಂಡ್ ಹಾರ್ಬರ್, ಫಾಲ್ತಾ ಕ್ಷೇತ್ರಗಳಲ್ಲಿ ಸಂಚರಿಸುತ್ತಿದ್ದಾಗ ನಡುಬಗ್ಗಿಸಿದ ಜನ ಈಗ ಚಪ್ಪಲಿ ತೋರಿಸುವ ಧೈರ್ಯ ಮಾಡುವಷ್ಟು ಬದಲಾವಣೆಯಾಗಿದೆ ಎಂದರೆ ಒಂದು ವೋಟಿನ ಕರಾಮತ್ತು ಹೇಗಿದೆ ನೋಡಿ...! ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಆತ ಪೊಲೀಸರೊಂದಿಗೆ ಬೀದಿ ಬೀದಿಗಳಲ್ಲಿ ಪರೇಡ್ ಮಾಡುತ್ತಿರುವ ದೃಶ್ಯಗಳೇ ಬದಲಾವಣೆಗೆ ಹಾಕುವ ಮತಕ್ಕಿರುವ ಶಕ್ತಿಗೆ ಸಾಕ್ಷಿ.

ಬಂಗಾಳದ ಬೆಳವಣಿಗೆ ಬಗ್ಗೆ ಹಾಗೂ ಸ್ಥಳೀಯ ಮಟ್ಟದಲ್ಲಿ ಏನಾಗುತ್ತಿದೆ ಎಂದು ತಿಳಿದುಕೊಳ್ಳಲು ಡೈಮಂಡ್ ಹಾರ್ಬರ್‌ನಲ್ಲಿ ಪರಿಚಯವಾಗಿದ್ದ ರಾಜಕೀಯ ಕಾರ್ಯಕರ್ತರೊಬ್ಬರಿಗೆ ಫೋನ್ ಮಾಡಿದ್ದೆ. ಅವರ ಪ್ರಕಾರ, ಎಗ್ಗಿಲ್ಲದೆ ವಸೂಲಿ ದಂಧೆ ಮಾಡುತ್ತಿದ್ದ ಜಹಾಂಗೀರ್ ಬೆಂಬಲಿಗರಲ್ಲಿ ಬಹುಪಾಲು ಈಗ ನಾಪತ್ತೆಯಾಗಿದ್ದಾರಂತೆ. ಟಿಎಂಸಿ ಅಧಿಕಾರದಲ್ಲಿದ್ದಾಗ ಬಿಜೆಪಿ ಕಾರ್ಯಕರ್ತರಿಗೆ, ಜನ ಸಾಮಾನ್ಯರಿಗೆ ತೊಂದರೆ ಕೊಡುತ್ತಾ, ಅಕ್ರಮವಾಗಿ ಸಂಪಾದಿಸಿದ್ದ ವಸೂಲಿ ಹಣವನ್ನು ಕೂಡ ಅವರು ಹಿಂತಿರುಗಿಸುತ್ತಿದ್ದಾರಂತೆ. ಬಿಜೆಪಿಗೆ ಮತ ಹಾಕಿದ್ದರು ಎಂಬ ಕಾರಣಕ್ಕಾಗಿ ಆ ಕುಟುಂಬಗಳಿಗೆ ಹಿಂಸೆ ನೀಡುತ್ತಿದ್ದ, ಮನೆಗಳಿಗೆ ದಾಳಿ ಮಾಡುತ್ತಿದ್ದ ಟಿಎಂಸಿ ಕಾರ್ಯಕರ್ತರು ತಲೆಮರೆಸಿಕೊಂಡು ಓಡಾಡುತ್ತಿದ್ದಾರಂತೆ. ಮತ್ತೊಂದಿಷ್ಟು ಮಂದಿ ಊರೇ ಬೇಡ ಎಂದು ಬೇರೆಡೆಗೆ ಹೋಗಿದ್ದಾರಂತೆ... ಕಾಲಚಕ್ರ ಹೇಗೆ ತಿರುಗುತ್ತದೆ ನೋಡಿ. 2021ರಲ್ಲಿ ಟಿಎಂಸಿ ಅಧಿಕಾರಕ್ಕೆ ಬಂದಾಗ ಬಿಜೆಪಿ ಜತೆ ಗುರುತಿಸಿಕೊಂಡಿದ್ದ ಅನೇಕ ಮಂದಿ, ಟಿಎಂಸಿ ನಾಯಕರ ಆಕ್ರಮಣದಿಂದಾಗಿ ಅನಿವಾರ್ಯವಾಗಿ ಬೇರೆ ರಾಜ್ಯಗಳಿಗೆ ವಲಸೆ ಹೋದರು. ಊರು ಬಿಡಲು ಸಾಧ್ಯವಾಗದವರು ಹಿಂಸೆ, ನೋವನ್ನು ನುಂಗಿಕೊಂಡು ಬದುಕಿದರು. ಈಗ ಜಹಾಂಗೀರ್ ಬರ್ಮುಡ ಚಡ್ಡಿ, ಕಪ್ಪು ಟೀ ಶರ್ಟ್ ಧರಿಸಿ ಬೀದಿ ಬೀದಿಗಳಲ್ಲಿ ಕೈ ಮುಗಿಯುತ್ತಾ, ಬೆರಳುಗಳಲ್ಲಿ ಎರಡೂ ಕಿವಿಗಳನ್ನು ಮುಟ್ಟಿ ನನ್ನದು ತಪ್ಪಾಯ್ತು ಎಂದು ಅಂಗಲಾಚುವುದನ್ನು ನೋಡುತ್ತಾ ಈ ಸಂತ್ರಸ್ತರೆಲ್ಲರೂ ಸಂಭ್ರಮಿಸುತ್ತಿದ್ದಾರೆ.

ಹೀಗೆ ಪರೇಡ್ ಮಾಡಿಸುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೇ? ಇದು ಸಂವಿಧಾನಕ್ಕೆ ಅವಮಾನವಲ್ಲವೇ ಎಂದು ಅನೇಕರು ಪ್ರಶ್ನಿಸುತ್ತಿದ್ದಾರೆ. ಆದರೆ, ಬಂಗಾಳವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಬಂಗಾಳದ ಒಳಹೊಕ್ಕು ನೋಡಬೇಕು. ಬಂಗಾಳದ ಸಾಮಾಜಿಕ- ರಾಜಕೀಯ ಪರಿಸ್ಥಿತಿ ಬೇರೆಲ್ಲಾ ರಾಜ್ಯಗಳಿಗಿಂತ ಭಿನ್ನ. ಕ್ರೂರತೆ ಯಾವತ್ತೂ ಉತ್ತುಂಗದಲ್ಲೇ ಇತ್ತು. ದುರದೃಷ್ಟವಶಾತ್, ಹೆಚ್ಚಿನವು ವರದಿಯಾಗಲಿಲ್ಲ, ಅಲ್ಲಿ ಕಾನೂನು-ಸುವ್ಯವಸ್ಥೆ ಇದ್ದದ್ದು ಕಾಗದದಲ್ಲಿ ಮಾತ್ರ. ಆದರೆ, ಪರಿವರ್ತನೆಗಾಗಿ ಬಿದ್ದ ಜನರ ಒಂದೊಂದು ಮತ ಈಗ ಎಲ್ಲವನ್ನೂ ಬದಲಿಸುತ್ತಿದೆ. ಮತದಾರರಿಂದ ತಿರಸ್ಕೃತಗೊಂಡ ಟಿಎಂಸಿ ಪೂರ್ತಿ ಬೆತ್ತಲಾಗಿದೆ.

ಜಹಾಂಗೀರ್ ಖಾನ್ ಹೇಗೆ ತನ್ನ ಉಳಿವಿಗಾಗಿ ಜನ ಸಾಮಾನ್ಯರ ಮುಂದೆ ಕೈ ಮುಗಿಯುತ್ತಿದ್ದಾನೋ ಹಾಗೆಯೇ ಟಿಎಂಸಿಯ ರೆಬೆಲ್ ಶಾಸಕರು, ಸಂಸದರು ತಮ್ಮ ರಾಜಕೀಯ ಉಳಿವಿಗಾಗಿ ಬಂಡೆದ್ದಿದ್ದಾರೆಯೇ ಹೊರತು ಎನ್‌ಡಿಎ ಬೆಂಬಲಿಸಿ ಅಭಿವೃದ್ಧಿಗೆ ಕೈ ಜೋಡಿಸುತ್ತೇವೆ ಎನ್ನುವುದೆಲ್ಲಾ ಅವಕಾಶವಾದಿ ರಾಜಕಾರಣದ ಒಂದು ಭಾಗವಷ್ಟೇ. ರಾಜ್ಯ ಅಭಿವೃದ್ಧಿಯಾಗಬೇಕು ಎಂಬ ನೈಜ ಕಾಳಜಿ ಇದ್ದಿದ್ದರೆ ಅವರು ಮಮತಾ, ಅಭಿಷೇಕ್ ವಿರುದ್ಧ ಎಂದೋ ಬಂಡೇಳಬೇಕಿತ್ತು, ಪಕ್ಷ ಬಿಟ್ಟು ಹೊರ ನಡೆಯಬೇಕಿತ್ತು. ಟಿಎಂಸಿಯ 28 ಸಂಸದರಲ್ಲಿ 20 ಮಂದಿ ಟಿಎಂಸಿ ಪಕ್ಷವನ್ನು ತ್ರಿಪುರಾ ಮೂಲದ ಎನ್‌ಸಿಪಿಐ ಎಂಬ ಸಣ್ಣ ಪಕ್ಷದೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದ್ದಾರೆ. ಒಂದುವೇಳೆ ಬಂಗಾಳದಲ್ಲಿ ಟಿಎಂಸಿ ಮತ್ತೆ ಅಧಿಕಾರಕ್ಕೆ ಬರುತ್ತಿದ್ದರೆ ಈ 20 ಸಂಸದರು ಟಿಎಂಸಿ ಬಿಡುತ್ತಿದ್ದರೇ? ಮಮತಾ ಬ್ಯಾನರ್ಜಿ, ಅಭಿಷೇಕ್ ಬ್ಯಾನರ್ಜಿ ವಿರುದ್ಧ ಬುಸುಗುಡುವ ಧೈರ್ಯ ಪ್ರದರ್ಶಿಸುತ್ತಿದ್ದರೇ? ಇದೇ ಮಮತಾ ಬ್ಯಾನರ್ಜಿಯನ್ನು ಅವರು ಕಾಳಿ ಮಾತೆಗೆ ಹೋಲಿಸುತ್ತಾ ವ್ಯಕ್ತಿಪೂಜೆ ಮಾಡುತ್ತಿರಲಿಲ್ಲವೇ? ಹಾಗಿದ್ದರೆ, ಚುನಾವಣೆ ಸೋತ ಕೂಡಲೇ ಕಾಳಿಮಾತೆ ಬೇಡವಾದಳೇ? ಮಮತಾ ಬ್ಯಾನರ್ಜಿ

ಪ್ರಧಾನಿ ಸ್ಥಾನಕ್ಕೆ ಅರ್ಹ ಎಂದು ಪುಂಗಿ ಊದುತ್ತಿದ್ದ ನಾಯಕರು ಫಲಿತಾಂಶದ ನಂತರ ವಾಸ್ತವ ಜಗತ್ತಿಗೆ ಬಂದರೇ?

ಬಂಗಾಳದ ವಾಸ್ತವ ಏನೆಂದರೆ ; ಬಿಜೆಪಿ, ಕೇಂದ್ರ ಸರಕಾರದ ವಿರುದ್ಧ ಟೀಕೆ-ಟಿಪ್ಪಣಿ ಮಾಡುವ ಭರದಲ್ಲಿ ಹಿಂಸಾಪ್ರೇರಿತ ರಾಜಕಾರಣ ಅನುಮೋದಿಸುತ್ತಿದ್ದ ಟಿಎಂಸಿಯ ಈ ಬಂಡಾಯ ಸಂಸದ-ಶಾಸಕರಿಗೆ, ಜನರು ಚೋರ್-ಚೋರ್ ಎನ್ನುತ್ತಾ ಮೊಟ್ಟೆಗಳನ್ನೆಸೆದು ಸ್ವಾಗತಿಸುತ್ತಿರುವುದರಿಂದ, ತಮ್ಮ ಕ್ಷೇತ್ರಗಳಿಗೆ ಕಾಲಿಡಲು ಸಾಧ್ಯವಾಗುತ್ತಿಲ್ಲ. ಮಾಡಿದ್ದುಣ್ಣೋ ಮಹರಾಯ ಎಂಬ ಸ್ಥಿತಿ ಅವರದ್ದು. ಸಾಮೂಹಿಕ ಅತ್ಯಾಚಾರಗಳಾದಾಗ, ಹತ್ಯೆಗಳಾದಾಗ, ಹಿಂಸೆಯಿಂದ ಬೇಸತ್ತು ಬಡವರು ವಲಸೆ ಹೋದಾಗ ತಮ್ಮ ಪಕ್ಷ, ನಾಯಕಿ, ಗೂಂಡಾಗಳನ್ನು ಸಮರ್ಥಿಸುತ್ತಿದ್ದ ಇದೇ ಟಿಎಂಸಿ ಶಾಸಕ, ಸಂಸದರಿಗೆ ಬದಲಾದ ರಾಜಕೀಯ ಸನ್ನಿವೇಶ ಪ್ರತಿಕೂಲ ಸ್ಥಿತಿಯನ್ನು ನಿರ್ಮಾಣ ಮಾಡಿದೆ. ಸ್ವಕ್ಷೇತ್ರದಲ್ಲೇ ಉಳಿಗಾಲವಿಲ್ಲ. ಆಡಳಿತ ವರ್ಗದ ಬೆಂಬಲವೂ ಇಲ್ಲ, ಹೀಗಾಗಿ, ರಾಜಕೀಯ ರಕ್ಷಣೆ ಬೇಕೆಂದರೆ, ಅಸ್ತಿತ್ವ ಉಳಿಯಬೇಕೆಂದರೆ ಟಿಎಂಸಿ ತೊರೆಯುವುದು ಅನಿವಾರ್ಯ. ಅಷ್ಟಕ್ಕೂ ಇವರ್ಯಾರೂ ಸೈದ್ಧಾಂತಿಕ ಹಿನ್ನೆಲೆ, ಬದ್ಧತೆ ಅಥವಾ ಸ್ಪಷ್ಟ ವೈಚಾರಿಕ ನಿಲುವು, ದೃಷ್ಟಿಕೋನಗಳನ್ನಿಟ್ಟುಕೊಂಡು ಟಿಎಂಸಿಯಲ್ಲಿ ರಾಜಕಾರಣ ಮಾಡಿದವರಲ್ಲ. ಟಿಎಂಸಿ ವ್ಯಕ್ತಿಕೇಂದ್ರಿತ ಪಕ್ಷವಾಗಿತ್ತೇ ವಿನಃ ಸಂಘಟನೆ ಅಥವಾ ಕೇಡರ್ ಹಿನ್ನೆಲೆ ಅದಕ್ಕಿರಲಿಲ್ಲ. ಟಿಎಂಸಿ ನಾಯಕರ ಮಹಾವಲಸೆಗೆ ಕಾರಣವೂ ಇದೇ. ಅಧಿಕಾರ ಮತ್ತು ರಕ್ಷಣೆ ಇದ್ದಲ್ಲಿ ಅವರಿರುತ್ತಾರೆ.

2021ರ ಚುನಾವಣೆ ವೇಳೆ ಬಿಜೆಪಿ ಸೇರಿದ್ದ ಅನೇಕ ಟಿಎಂಸಿ ಮುಖಂಡರು, ಚುನಾವಣೆಯಲ್ಲಿ ಬಿಜೆಪಿ ಸೋತ ಕೂಡಲೇ ಟಿಎಂಸಿಗೇ ವಾಪಸಾಗಿದ್ದರು. ಹಾಗಾಗಿ, ರೆಬೆಲ್‌ಗಳೆಂದು ಗುರುತಿಸಿಕೊಂಡು ಸಂಚಲನ ಎಬ್ಬಿಸುತ್ತಿರುವುದು ವಿಲಕ್ಷಣ ಬೆಳವಣಿಗೆಯೇನಲ್ಲ, ಇದು ನಿರೀಕ್ಷಿತ. ಮಮತಾ ಬ್ಯಾನರ್ಜಿ ನೆರಳಿನಂತಿದ್ದ, ಭವಿಷ್ಯದ ಟಿಎಂಸಿ ನಾಯಕಿ ಎಂದೇ ಪ್ರಸಿದ್ಧಿಯಾಗಿದ್ದ, ಚುನಾವಣೆ ಸಂದರ್ಭದಲ್ಲಿ ಪಿಎಂ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿ ಎಲ್ಲರನ್ನೂ ವ್ಯಂಗ್ಯೋಕ್ತಿಗಳ ಮೂಲಕ ಟೀಕಿಸಿ ಚಪ್ಪಾಳೆ ಗಿಟ್ಟಿಸುತ್ತಿದ್ದ ಜಾಧವಪುರ ಸಂಸದೆ ಸಾಯೋನಿ ಘೋಷ್ ಕೂಡ ರೆಬೆಲ್ ಬಣ ಸೇರಿಕೊಂಡು ಬಿಜೆಪಿ ಮಂತ್ರ ಜಪಿಸುತ್ತಿದ್ದಾರೆ. ಕನಿಷ್ಠ ನಾಚಿಕೆಯೂ ಇಲ್ಲವೇ ಎಂದು ಹೀಗಳೆಯುತ್ತಿರುವ ಜನರ ಮಧ್ಯೆ ಮುಖ ಮುಚ್ಚಿಕೊಂಡು ಬದುಕುವ ಸ್ಥಿತಿ. ಸಾಯೋನಿ ಘೋಷ್ ವಿಮಾನ ನಿಲ್ದಾಣವೊಂದರಿಂದ ಮುಖಕ್ಕೆ ವಸ್ತ್ರ ಧರಿಸಿ ಹೊರಬರುತ್ತಿದ್ದ ದೃಶ್ಯವೇ ಇದಕ್ಕೆ ಸಾಕ್ಷಿ.

ಬಹುಶಃ ಈ ಎಲ್ಲಾ ಕಾರಣಕ್ಕಾಗಿಯೇ 2026ರ ಮೇ 4 ಇತಿಹಾಸದ ಪುಟಗಳಲ್ಲಿ ದಾಖಲಾಗಲೇಬೇಕಾದ ದಿನ. ಬಂಗಾಳ ಫಲಿತಾಂಶ ಹೊರಬಿದ್ದ ದಿನದಿಂದ ದೇಶದ ರಾಜಕಾರಣ ಹತ್ತಾರು ಬದಲಾವಣೆಗಳಿಗೆ ಸಾಕ್ಷಿಯಾಗುತ್ತಿದೆ. ಒಂದು ಕಡೆ ಬಂಗಾಳದಲ್ಲಿ ನೆಲೆಸಿದ್ದ ಬಾಂಗ್ಲಾದ ಸಾವಿರಾರು ಅಕ್ರಮ ವಾಸಿಗಳು ತಮ್ಮ ಮೂಲ ದೇಶಕ್ಕೆ ವಾಪಸಾಗುತ್ತಿದ್ದರೆ, ಟಿಎಂಸಿ ರಾಜಕೀಯ ಅವಸಾನದಂಚಿಗೆ ಬಂದು ನಿಂತಿದೆ. 15 ವರ್ಷ ಬಂಗಾಳದಲ್ಲಿ ಸಿಂಹಿಣಿಯಂತೆ ಮೆರೆದಿದ್ದ ಮಮತಾ ಬ್ಯಾನರ್ಜಿ, ಸಂಗಡಿಗರ ದ್ರೋಹದಿಂದಾಗಿ ಯಾರಿಗೂ ಬೇಡದವರಾಗಿದ್ದಾರೆ. ಅಧಿಕಾರಕ್ಕಾಗಿ ಮಮತಾ ಮತ್ತು ಸೋದರಳಿಯ ಅಭಿಷೇಕ್ ಜತೆ ಗುರುತಿಸಿಕೊಂಡಿದ್ದ ಮಂದಿ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ಹಾದಿ ಕಂಡುಕೊಂಡಿದ್ದಾರೆ.

ಮತದಾರರು ಟಿಎಂಸಿಯನ್ನು ಸಂಪೂರ್ಣ ತಿರಸ್ಕರಿಸಿ ಬಿಜೆಪಿಯನ್ನೇ ನೆಚ್ಚಿಕೊಂಡದ್ದರಿಂದ, ಟಿಎಂಸಿ ರೆಬೆಲ್ ಬಣದ ನಾಯಕರನ್ನು ತಕ್ಷಣವೇ ಪಕ್ಷಕ್ಕೆ ಸೇರಿಸಿಕೊಂಡರೆ ಬಿಜೆಪಿ ಜನಾಕ್ರೋಶ ಹಾಗೂ ಪಕ್ಷದ ಕಾರ್ಯಕರ್ತರ ಆಕ್ರೋಶ ಎದುರಿಸಬೇಕಾದೀತು. ಹಾಗಾಗಿಯೇ, ಅವರೆಲ್ಲರೂ ಎನ್ಸಿಪಿಐ ಎಂಬ ಸಣ್ಣ ಪಕ್ಷದೊಂದಿಗೆ ವಿಲೀನಗೊಂಡು ಎನ್‌ಡಿಎ ಮೈತ್ರಿಕೂಟದ ಭಾಗವಾಗುತ್ತಿದ್ದಾರೆ. ಸದ್ಯಕ್ಕೆ ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಬಿಜೆಪಿಯನ್ನು ಅನುಮೋದಿಸುತ್ತಿದ್ದಾರೆ. ಭವಿಷ್ಯದಲ್ಲಿ ಬಿಜೆಪಿ ಟಿಕೆಟ್‌ನಿಂದಲೇ ಬಂಗಾಳದಲ್ಲಿ ಚುನಾವಣೆ ಸ್ಪರ್ಧಿಸಬೇಕು ಎನ್ನುವ ಆಶಯ ಇಟ್ಟುಕೊಂಡೇ ಕೇಸರಿ ನಾಯಕರ ಮನೆಗಳಿಗೆ ಎಡತಾಕುತ್ತಿದ್ದಾರೆ. ಅವರ ಪಾಲಿಗೆ ಟಿಎಂಸಿ ಮುಗಿದ ಅಧ್ಯಾಯ. ಹೆಚ್ಚುಕಡಿಮೆ ಬಂಗಾಳದಲ್ಲೂ ಟಿಎಂಸಿ ಅಧ್ಯಾಯ ಕೊನೆಗೊಂಡಂತೆಯೇ.

ಲಾಸ್ಟ್ ಸಿಪ್ : ಜನಸಮೂಹದಲ್ಲಿ ಸದ್ದೇ ಮಾಡದ ಒಬ್ಬನೇ ಒಬ್ಬ ಶಾಸಕ ಅಥವಾ ಸಂಸದ ಹೊಂದಿರದ ಎನ್‌ಸಿಪಿಐ ಪಕ್ಷವು, ರಾತ್ರಿ ಹಗಲಾಗುವುದರೊಳಗೆ ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಎರಡನೇ (ಬಿಜೆಪಿ ನಂತರ) ಅತಿದೊಡ್ಡ ಪಕ್ಷವಾಗುತ್ತಿದೆ! ಚುನಾವಣೆಯಲ್ಲಿ ಸ್ಪರ್ಧಿಸದೆಯೇ 20 ಸಂಸದರನ್ನೊಳಗೊಂಡು, ಕಾಂಗ್ರೆಸ್, ಸಮಾಜವಾದಿ ಪಕ್ಷ ಹಾಗೂ ಡಿಎಂಕೆ ಬಳಿಕ ಭಾರತದ 5ನೇ ಅತಿ ದೊಡ್ಡ ಪಕ್ಷ ಎಂಬ ಖ್ಯಾತಿಗೆ ಪಾತ್ರವಾಗುತ್ತಿದೆ.

ವೈಯಕ್ತಿಕ ನಿಂದನೆಯಾಚೆಗಿರಲಿ ವಚನ ಸಾಹಿತ್ಯದ ಸತ್ಯಶೋಧ

ಪ್ರತಿಕ್ರಿಯೆ

ವಿನಯ ಶಿರಹಟ್ಟಿಮಠ
vveditoped@gmail.com

ವಿಶ್ವವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಹಿರಿಯ ಲೇಖಕ, ಶರಣ ರವಿ ಹಂಜ್ ಅವರ 'ವೀರಶೈವ ಪದ ತೆಗೆದು ಲಿಂಗಾಯತ ಹಾಕಿದರೆ ಸಾಲದು!' ಎಂಬ ಲೇಖನವು ಪ್ರಸ್ತುತ ನಡೆಯುತ್ತಿರುವ ಬಹುದೊಡ್ಡ ಸೈದ್ಧಾಂತಿಕ ಚರ್ಚೆಯ ಮುಂದುವರಿದ ಭಾಗವಾಗಿದೆ. ಬಸವಾದಿ ಶರಣರ ತತ್ವಗಳು, ವಚನ ಸಾಹಿತ್ಯದ ಮೂಲ ಆಶಯಗಳು ಹಾಗೂ ಮಠಾಧೀಶರ ನಡೆನುಡಿಗಳ ಕುರಿತು ಮುಕ್ತವಾಗಿ ಚರ್ಚೆಯಾಗುವುದು ಪ್ರಜಾಪ್ರಭುತ್ವದ ಆರೋಗ್ಯಕರ ಲಕ್ಷಣ. ಆದರೆ, ಚರ್ಚೆಗಳು ಆರೋಗ್ಯಕರವಾಗಿರಬೇಕು, ತಾರ್ಕಿಕವಾಗಿರಬೇಕು, ಪರಸ್ಪರ ಗೌರವದಿಂದ ಕೂಡಿರಬೇಕು. ವಿಷಯಾಧಾರಿತವಾಗಿರಬೇಕೇ ಹೊರತು, ಭಾವನಾತ್ಮಕ ಉದ್ವೇಗದಿಂದ ಕೂಡಿರಬಾರದು. ದುರದೃಷ್ಟವಶಾತ್, ಸದರಿ ಲೇಖನದಲ್ಲಿ ಶರಣರ ಹೆಸರಿನಲ್ಲಿಯೇ ತೀವ್ರವಾದ ಅಸಹನೆ, ಹಿರಿಯ ಸಂಶೋಧಕರ ವೈಯಕ್ತಿಕ ನಿಂದನೆ ಹಾಗೂ ತಮಗೆ ಒಪ್ಪಿಗೆಯಾಗದ ವಿಚಾರ ಮಂಡಿಸುವವರನ್ನು ಹೀಯಾಳಿಸುವ ಪ್ರವೃತ್ತಿ ಎದ್ದು ಕಾಣುತ್ತಿದೆ. ಬೌದ್ಧಿಕ ಭಿನ್ನಾಭಿಪ್ರಾಯಗಳನ್ನು ಬೌದ್ಧಿಕವಾಗಿಯೇ ಎದುರಿಸಬೇಕೇ ಹೊರತು, ಭಾವನಾತ್ಮಕ ಉದ್ವೇಗದಿಂದಲ್ಲ ಎಂಬುದನ್ನು ಮೊದಲಿಗೆ ಮನಗಾಣಬೇಕಿದೆ.

ಶರಣ ರವಿ ಹಂಜ್ ಅವರ ಲೇಖನಕ್ಕೆ ಪ್ರತಿಕ್ರಿಯಿಸುವ ಮುನ್ನ, ವಿಷಯದ ಗಾಂಭೀರ್ಯ ಕಾಯ್ದುಕೊಳ್ಳುವ ಸಲುವಾಗಿ ಇಡೀ ಚರ್ಚೆಯನ್ನು ಒಂದು ಸ್ಪಷ್ಟವಾದ ಚೌಕಟ್ಟಿನೊಳಗೆ ತರುವುದು ಅತ್ಯಗತ್ಯವಾಗಿದೆ.

ಈ ನಿಟ್ಟಿನಲ್ಲಿ ಪ್ರಸ್ತುತ ಸಮಸ್ಯೆಯನ್ನು ನಾವು ಮೊದಲು ಸ್ಪಷ್ಟವಾಗಿ ವ್ಯಾಖ್ಯಾನಿಸಿಕೊಳ್ಳಬೇಕಿದೆ. ವಚನ ಸಾಹಿತ್ಯದ ಮೂಲ ಆಶಯಗಳ ಅಧ್ಯಯನದಲ್ಲಿ, ಸಾಂಪ್ರದಾಯಿಕ ನಂಬಿಕೆಗಳು ಮತ್ತು ಆಧುನಿಕ ವೈಜ್ಞಾನಿಕ ಸಂಶೋಧನಾ ವಿಧಾನಗಳ ನಡುವೆ ಉಂಟಾಗಿರುವ ತೀವ್ರ ಸ್ವರೂಪದ ಸೈದ್ಧಾಂತಿಕ ಸಂಘರ್ಷವೇ ಇಲ್ಲಿನ ಪ್ರಧಾನ ಸಮಸ್ಯೆಯಾಗಿದೆ. ಹನ್ನೆರಡನೇ ಶತಮಾನದ ವಚನಗಳಿಗೆ ಕಾಲಾನಂತರದಲ್ಲಿ ಸೇರ್ಪಡೆಯಾದ 'ಪ್ರಕ್ಷಿಪ್ತ'ಗಳನ್ನು ಶೋಧಿಸುವ ಬೌದ್ಧಿಕ ಪ್ರಕ್ರಿಯೆಯನ್ನು, ಕೇವಲ ಒಂದು ನಿರ್ದಿಷ್ಟ ಗುಂಪಿನ ಸೈದ್ಧಾಂತಿಕ ಅಜೆಂಡಾ ಎಂದು ಬಿಂಬಿಸುವ ಯತ್ನಗಳು ನಡೆಯುತ್ತಿವೆ. ಜೊತೆಗೆ, ಧಾರ್ಮಿಕ ಅಸ್ಮಿತೆಯ ಕುರಿತಾದ ಭಿನ್ನಾಭಿಪ್ರಾಯಗಳು ಆರೋಗ್ಯಕರ ಬೌದ್ಧಿಕ ಚರ್ಚೆಯ ಗಡಿಯನ್ನು ದಾಟಿ, ವೈಯಕ್ತಿಕ ನಿಂದನೆ ಹಾಗೂ ಅಸಹಿಷ್ಣುತೆಯ ಸ್ವರೂಪ ಪಡೆದುಕೊಳ್ಳುತ್ತಿರುವುದು ವಚನ ಸಾಹಿತ್ಯದ ವಸ್ತುನಿಷ್ಠ ಇತಿಹಾಸದ ಅಧ್ಯಯನಕ್ಕೆ ದೊಡ್ಡ ಅಡಚಣೆಯಾಗುತ್ತಿದೆ.

ಈ ಮೂಲ ಸಮಸ್ಯೆಯ ಆಧಾರದ ಮೇಲೆ, ಸತ್ಯಶೋಧನೆಗಾಗಿ ನಾಲ್ಕು ನಿರ್ದಿಷ್ಟ ಸಂಶೋಧನಾ ಪ್ರಶ್ನೆಗಳನ್ನು ನಮ್ಮ ಮುಂದಿಟ್ಟುಕೊಂಡು ಮುಂದಿನ ವಿಶ್ಲೇಷಣೆ ಮಾಡಬಹುದು.

ಒಂದನೆಯದಾಗಿ, ವಚನ ಸಾಹಿತ್ಯದಲ್ಲಿನ ಪ್ರಕ್ಷಿಪ್ತಗಳನ್ನು ಶೋಧಿಸುವ ಡಾ.ಎಂ.ಎಂ. ಕಲಬುರ್ಗಿ ಅವರಂತಹ ಹಿರಿಯ ವಿದ್ವಾಂಸರ ವಿಧಾನವು ಐತಿಹಾಸಿಕ ಪುರಾವೆಗಳನ್ನಾಧರಿಸಿದ ವೈಜ್ಞಾನಿಕ ಪ್ರಕ್ರಿಯೆಯಾಗಿದೆಯೋ ಅಥವಾ ಲೇಖಕರು ಆರೋಪಿಸುವಂತೆ ಕೇವಲ ವೀರಶೈವ ಪದವನ್ನು ಅಳಿಸುವ ದುರುದ್ದೇಶಪೂರಿತ ತಂತ್ರವೋ ಎನ್ನುವುದನ್ನು ವಿಶ್ಲೇಷಿಸಬೇಕಿದೆ.

ಎರಡನೆಯದಾಗಿ, ಸಾರ್ವಜನಿಕ ವೇದಿಕೆಗಳಲ್ಲಿ ಸಂಶೋಧಕರು ತಮ್ಮ ವಿಚಾರಗಳನ್ನು ಮಂಡಿಸುವಾಗ ಮಠಾಧೀಶರು ಪ್ರದರ್ಶಿಸುವ ಮೌನವನ್ನು ಸೈದ್ಧಾಂತಿಕ ಕುಮ್ಮಕ್ಕು ಎಂದು ಏಕಪಕ್ಷೀಯವಾಗಿ ನಿರ್ಧರಿಸುವುದು ಎಷ್ಟು ಸರಿ, ಹಾಗೂ ಬಸವಣ್ಣನವರ 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ಸಂಯಮದ ತತ್ವದ ಹಿನ್ನೆಲೆಯಲ್ಲಿ ಇದನ್ನು ಹೇಗೆ ವ್ಯಾಖ್ಯಾನಿಸಬೇಕು ಎಂಬುದು ಮುಖ್ಯ ಪ್ರಶ್ನೆಯಾಗಿದೆ.

ಮೂರನೆಯದಾಗಿ, ಬೌದ್ಧಿಕ ಭಿನ್ನಾಭಿಪ್ರಾಯಗಳನ್ನು ಎದುರಿಸುವಾಗ ವಿಚಾರಗಳನ್ನು ವಿಚಾರಗಳಿಂದಲೇ ಖಂಡಿಸುವ ಬದಲು, ಎದುರಾಳಿಗಳನ್ನು 'ಧರ್ಮಭಂಜಕರು' ಎಂದು ವೈಯಕ್ತಿಕವಾಗಿ ನಿಂದಿಸುವುದು ಶರಣ ಪರಂಪರೆಯ ಘನತೆಗೆ ಎಸಗುವ ಅಪಚಾರವಲ್ಲವೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ನಾಲ್ಕನೆಯದಾಗಿ, ಹನ್ನೆರಡನೇ ಶತಮಾನದ ಶರಣರ ಮೌಖಿಕ ಪರಂಪರೆಯನ್ನು ಹದಿನೈದನೇ ಶತಮಾನದ ನಂತರದ ಲಿಖಿತ ದಾಖಲೆಗಳ ಮುಖಾಂತರ ವಿಶ್ಲೇಷಿಸುವಾಗ, ವಸ್ತುನಿಷ್ಠ ಇತಿಹಾಸ ಮತ್ತು ಸಾಂಪ್ರದಾಯಿಕ ಅಂಧಾನುಕರಣೆಗಳ ನಡುವಿನ ಗೆರೆಯನ್ನು ನಿಖರವಾಗಿ ಎಳೆಯುವುದು ಹೇಗೆ ಎಂಬುದು ನಮ್ಮ ಮುಂದಿರುವ ಬಹುದೊಡ್ಡ ಸವಾಲಾಗಿದೆ.

ಈ ಪ್ರಶ್ನೆಗಳ ಹಿನ್ನೆಲೆಯಲ್ಲಿ ರವಿ ಹಂಜ್ ಅವರ ಲೇಖನವನ್ನು ವಿಶ್ಲೇಷಿಸಿದಾಗ, ಅವರ ವಾದಗಳಲ್ಲಿನ ತಾರ್ಕಿಕ ಕೊರತೆಗಳು ಸ್ಪಷ್ಟವಾಗುತ್ತವೆ. ಅವರು ನಾಡು ಕಂಡ ಅಪ್ರತಿಮ ಸಂಶೋಧಕ ಡಾ. ಕಲಬುರ್ಗಿ ಅವರನ್ನು 'ಧರ್ಮಭಂಜಕ ಪಿತಾಮಹ' ಎಂದು ಅತ್ಯಂತ ಕಟುವಾಗಿ ನಿಂದಿಸಿದ್ದಾರೆ. ಸಾಹಿತ್ಯ ಮತ್ತು ಇತಿಹಾಸದ ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿದಿರುವಂತೆ, ಹನ್ನೆರಡನೇ ಶತಮಾನದಲ್ಲಿ ರಚನೆಯಾದ ವಚನಗಳು ನೂರಾರು ವರ್ಷ ಮೌಖಿಕ ಪರಂಪರೆಯಲ್ಲಿಯೇ ಉಳಿದು, ಹದಿನೈದನೇ ಶತಮಾನದ ಆಸುಪಾಸಿನಲ್ಲಿ ತಾಳೆಗರಿಗಳ ರೂಪ ಪಡೆದುಕೊಂಡವು. ಈ ಸುದೀರ್ಘ ಅವಧಿಯಲ್ಲಿ ಮೂಲ ವಚನಗಳಿಗೆ ಅನೇಕ ಸೇರ್ಪಡೆಗಳು, ತಿದ್ದುಪಡಿಗಳು ಹಾಗೂ ಅನ್ಯ ವಿಚಾರಗಳ ಹಸ್ತಕ್ಷೇಪವಾಗಿದೆ. ಇವುಗಳನ್ನೇ ಪ್ರಕ್ಷಿಪ್ತ ಎಂದು ಕರೆಯಲಾಗುತ್ತದೆ. ಕಲಬುರ್ಗಿಯಂತಹ ನಿಷ್ಠಾವಂತ ಸಂಶೋಧಕರು ಮಾಡಿದ್ದು ಈ ಪ್ರಕ್ಷಿಪ್ತಗಳನ್ನು ವೈಜ್ಞಾನಿಕವಾಗಿ ಶೋಧಿಸಿ, ಶರಣರ ನೈಜ ಇತಿಹಾಸ ಮತ್ತು ಮೂಲ ವಚನಗಳ ಶುದ್ಧ ರೂಪವನ್ನು ಜಗತ್ತಿಗೆ ಪರಿಚಯಿಸುವ ಪ್ರಾಮಾಣಿಕ ಪ್ರಯತ್ನ. ಇದನ್ನು ವಿಕೃತಿ ಎಂದು ಜರಿಯುವುದು ವಿವೇಚನಾರಹಿತ ನಡೆ. ಸಂಶೋಧನೆ ಯಾವುದೇ ಪೂರ್ವಗ್ರಹಗಳಿಲ್ಲದೆ ಸತ್ಯದ ಶೋಧನೆಗಾಗಿ ನಡೆಯುವ ಪ್ರಕ್ರಿಯೆಯೇ ಹೊರತು, ಕೇವಲ ಪದಗಳ ಬಳಕೆಯ ಆಧಾರದ ಮೇಲೆ ಸಂಶೋಧಕರನ್ನು ವಿಭಜಕರು ಎಂದು ಹೀಯಾಳಿಸುವುದು ಶೈಕ್ಷಣಿಕ ಮೌಲ್ಯಗಳಿಗೆ ತಕ್ಕುದಲ್ಲ.

ಲೇಖಕರು ಎಲ್. ಬಸವರಾಜು ಅವರ 'ಅಲ್ಲಮನ ವಚನ ಚಂದ್ರಿಕೆ'ಯನ್ನು ಉಲ್ಲೇಖಿಸಿ, ತಾರ್ಕಿಕವಾಗಿ ಪ್ರಕ್ಷಿಪ್ತವೆಂದು ಗುರುತಿಸುವ ಸ್ಪಷ್ಟತೆಯನ್ನು ಅವರು ಕಟ್ಟಿಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಬಸವರಾಜು ಅವರ ವಿದ್ವತ್ತಿಗೆ ನಮ್ಮೆಲ್ಲರ ನಮನಗಳಿವೆ. ಆದರೆ, ಕಲಬುರ್ಗಿ ಅಥವಾ ಇತರ ಆಧುನಿಕ ಸಂಶೋಧಕರು ಅಳವಡಿಸಿಕೊಂಡ ವಿಧಾನವೂ ಇದೇ ತಾರ್ಕಿಕ ನೆಲೆಯದ್ದಾಗಿದೆ ಎಂಬುದನ್ನು ಲೇಖಕರು ಮರೆತಂತಿದೆ.

ಇಲ್ಲಿ ನಾವು ಲೇಖಕರಿಗೆ ಒಂದು ಮುಖ್ಯವಾದ ಪ್ರಶ್ನೆಯನ್ನು ಕೇಳಬೇಕಾಗುತ್ತದೆ; ಹನ್ನೆರಡನೇ ಶತಮಾನದ ವಚನಗಳು ಹದಿನೈದನೇ ಶತಮಾನದಲ್ಲಿ ತಾಳೆಗರಿಗಳ ರೂಪ ಪಡೆದಾಗ, ಆ ಮೂರು ನೂರು ವರ್ಷಗಳ ಮೌಖಿಕ ಪರಂಪರೆಯಲ್ಲಿ ಅನೇಕ ಅನ್ಯ ವಿಚಾರಗಳು ಸೇರ್ಪಡೆಯಾಗಿವೆ ಎಂಬುದನ್ನು ಇತಿಹಾಸಕಾರರು ಒಪ್ಪುವಾಗ, ಕಲಬುರ್ಗಿಯವರ ವೈಜ್ಞಾನಿಕ ಶೋಧನಾ ವಿಧಾನವನ್ನು ನೀವು ಸಂಪೂರ್ಣವಾಗಿ ತಿರಸ್ಕರಿಸುವುದಾದರೆ, ಮೂಲ ವಚನಗಳು ಮತ್ತು ಕಾಲಾನಂತರದಲ್ಲಿ ಸೇರ್ಪಡೆಯಾದ ಪ್ರಕ್ಷಿಪ್ತಗಳನ್ನು ಬೇರ್ಪಡಿಸಲು ನಿಮ್ಮ ಬಳಿ ಇರುವ ಐತಿಹಾಸಿಕವಾಗಿ ಮತ್ತು ಭಾಷಿಕವಾಗಿ ಸ್ವೀಕಾರಾರ್ಹವಾದ ಪರ್ಯಾಯ ಮಾನದಂಡಗಳೇನು ಎಂಬುದನ್ನು ಸಮಾಜದ ಮುಂದೆ ಸ್ಪಷ್ಟಪಡಿಸಬಲ್ಲಿರಾ? ಕೇವಲ ಪದಗಳ ಬಳಕೆಯ ಆಧಾರದ ಮೇಲೆ ಸಂಶೋಧಕರನ್ನು ವಿಭಜಕರು ಎಂದು ಹೀಯಾಳಿಸುವ ಮುನ್ನ, ಆ ಸಂಶೋಧನೆಗಳ ಹಿಂದಿರುವ ಹಗಲಿರುಳಿನ ಶ್ರಮ, ಭಾಷಿಕ ಅಧ್ಯಯನ ಮತ್ತು ಶಾಸನಗಳ ಆಧಾರಿತ ಪುರಾವೆಗಳನ್ನು ನಾವು ವಸ್ತುನಿಷ್ಠವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ಸಾರ್ವಜನಿಕ ವೇದಿಕೆಗಳಲ್ಲಿ ಜಾಮದಾರರು, ಜೆ.ಎಸ್. ಪಾಟೀಲರು ಅಥವಾ ಸಾಣೇಹಳ್ಳಿ ಶ್ರೀಗಳು ವಿಚಾರಗಳನ್ನು ಮಂಡಿಸುವಾಗ ಸಿದ್ದರಾಮ ಶ್ರೀಗಳು ಅದನ್ನು ತಡೆಯದೆ ಮಂದಸ್ಮಿತರಾಗಿ ಕುಳಿತಿರುತ್ತಾರೆ ಎಂಬುದು ಲೇಖಕರ ಮತ್ತೊಂದು ಪ್ರಮುಖ ಆಕ್ಷೇಪಣೆ. ಸಾರ್ವಜನಿಕ ಸಂವಾದಗಳಲ್ಲಿ ಭಾಗವಹಿಸುವ ಚಿಂತಕರ ಪ್ರತಿಯೊಂದು ಮಾತಿಗೂ ಮಠಾಧೀಶರೊಬ್ಬರು ತಕ್ಷಣವೇ ಪ್ರತಿಕ್ರಿಯಿಸಿ, ವೇದಿಕೆಯ ಮೇಲೆಯೇ ವಾಗ್ವಾದಕ್ಕೆ ಇಳಿಯಬೇಕು ಎಂದು ನಿರೀಕ್ಷಿಸುವುದು ಎಷ್ಟರಮಟ್ಟಿಗೆ ಸರಿ?

ಡಾ. ಸಿದ್ದರಾಮ ಶ್ರೀಗಳು ಜವಾಬ್ದಾರಿಯುತ ವಿರಕ್ತ ಪರಂಪರೆಯ ಮಠಾಧೀಶರಾಗಿ, ವೇದಿಕೆಯ ಘನತೆಯನ್ನು ಕಾಪಾಡಿಕೊಳ್ಳಲು ಹಾಗೂ ಅನಗತ್ಯ ಉದ್ವೇಗಗಳನ್ನು ತಡೆಯಲು ಮೌನವನ್ನು ಒಂದು ಸಂಯಮದ ಅಸ್ತ್ರವಾಗಿ ಬಳಸುತ್ತಿರಬಹುದು. ವಚನ ಸಾಹಿತ್ಯದಲ್ಲಿಯೇ ಸಭಾಗೌರವವೆಂದು ಮಂದಸ್ಮಿತರಾಗಿ ಕುಳಿತ ಯಾವೊಬ್ಬ ಶರಣನ ಕತೆಯೂ ಇಲ್ಲ ಎಂದು ಲೇಖಕರು ವಾದಿಸುತ್ತಾರೆ. ಶರಣರು ತಮ್ಮ ವಿರೋಧಿಗಳನ್ನು ಎದುರಿಸಿದ್ದು ತಾಳ್ಮೆ, ಅರಿವು ಮತ್ತು ವೈಚಾರಿಕತೆಯಿಂದಲೇ ಹೊರತು, ಅಬ್ಬರದ ಪ್ರತಿಕ್ರಿಯೆಗಳಿಂದಲ್ಲ ಎಂಬುದನ್ನು ನಾವು ಕಾಣಬಹುದು.

ಈ ನಿಟ್ಟಿನಲ್ಲಿ ಲೇಖಕರಲ್ಲಿ ಮೂಡುವ ಮತ್ತೊಂದು ಜಿಜ್ಞಾಸೆಯೆಂದರೆ, ಶರಣ ಪರಂಪರೆಯಲ್ಲಿ 'ಮುನಿಯ ಬೇಡ'

ಎಂಬುದು ಅತಿಮುಖ್ಯ ತತ್ವವಾಗಿರುವಾಗ, ವೇದಿಕೆಯಲ್ಲಿ ವ್ಯಕ್ತವಾಗುವ ಭಿನ್ನಾಭಿಪ್ರಾಯಗಳಿಗೆ ತಕ್ಷಣವೇ ಉದ್ವೇಗಗೊಂಡು ಪ್ರತಿಕ್ರಿಯಿಸದಿರುವುದು ಮಠಾಧೀಶರೊಬ್ಬರ ಘನತೆ ಮತ್ತು ತಾಳ್ಮೆಯನ್ನು ತೋರುತ್ತದೆಯೋ, ಅಥವಾ ನೀವು ಆರೋಪಿಸುವಂತೆ ಅದು ಅವರ ದೌರ್ಬಲ್ಯವನ್ನು ತೋರುತ್ತದೆಯೋ?

ಲೇಖಕರು ಚೌಕಿಮಠರ ಸಮನ್ವಯದ ನಿಲುವು ಮತ್ತು ಸೌಮ್ಯ ಮನಸ್ಸನ್ನು ಪ್ರಸ್ತಾಪಿಸುತ್ತಲೇ, ಅವರು ಸಿದ್ದರಾಮ ಶ್ರೀಗಳಿಗೆ 'ಬಾರಾ ಖೂನ್ ಮಾಫ್' ಮಾಡುತ್ತಿದ್ದಾರೆ ಎಂದು ಗಂಭೀರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಮಾಜದಲ್ಲಿನ ಭಿನ್ನಾಭಿಪ್ರಾಯಗಳು ವ್ಯಕ್ತಿತ್ವದ ಸಮಗ್ರ ಸೇವೆಯನ್ನು ಮಸುಕಾಗಿಸಬಾರದು ಎಂಬ ಚೌಕಿಮಠರ ನಿಲುವು ಅತ್ಯಂತ ಪ್ರಬುದ್ಧವಾದದ್ದು ಮತ್ತು ಇಂದಿನ ವಿಭಜಿತ ವಾತಾವರಣಕ್ಕೆ ಅತ್ಯಗತ್ಯವಾದದ್ದು. ಸಮಾಜದ ಒಳಿತಿಗಾಗಿ ಮತ್ತು ಅಖಂಡತೆಗಾಗಿ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಸಮಗ್ರತೆಗೆ ಹಾಗೂ ಶಾಂತಿಗೆ ಆದ್ಯತೆ ನೀಡುವುದು 'ಬಾರಾ ಖೂನ್ ಮಾಫ್' ಮಾಡಿದಂತಲ್ಲ; ಬದಲಾಗಿ ಅದು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ದೊಡ್ಡ ಮಟ್ಟದ ಸಾಮಾಜಿಕ ಕಳಕಳಿಯಾಗಿದೆ. ಚೌಕಿಮಠರಂತಹ ಹಿರಿಯರು ವಿಭಜಿತ ಮನಸ್ಸುಗಳನ್ನು ಒಗ್ಗೂಡಿಸುವ ಕೊಂಡಿಯಾಗಿ ಕೆಲಸ ಮಾಡುತ್ತಿರುವಾಗ, ಅವರ ನೈತಿಕ ಬೆಂಬಲವನ್ನು ಹಾಗೂ ಸೌಮ್ಯ ನಿಲುವನ್ನು ಅಪಾರ್ಥ ಮಾಡಿಕೊಳ್ಳುವುದು ಸಕಾರಾತ್ಮಕ ಅಲ್ಲ. ಭಿನ್ನಾಭಿಪ್ರಾಯಗಳನ್ನೇ ಕೆದಕಿ, ಇತಿಹಾಸದ ಪುಟಗಳಲ್ಲಿನ ಗೊಂದಲಗಳನ್ನು ಮುಂದಿಟ್ಟುಕೊಂಡು ದ್ವೇಷದ ಬೆಂಕಿ ಹಚ್ಚುವುದಕ್ಕಿಂತ, ತಪ್ಪು- ಒಪ್ಪು ಮೀರಿ ಸಮಾಜವನ್ನು ಒಗ್ಗೂಡಿಸುವ ಚೌಕಿಮಠರಂತಹ ಹಿರಿಯರ ಆಶಯವೇ ಬಸವತತ್ವದ ನಿಜವಾದ ಪ್ರತಿರೂಪ. ಇದನ್ನು ಲೇಖಕರು ಅರಿತುಕೊಳ್ಳಬೇಕಿದೆ.

ಲೇಖನದುದ್ದಕ್ಕೂ ರವಿ ಹಂಜ್ ಅವರು ಬಳಸಿರುವ ಭಾಷೆ ಮತ್ತು ಶಬ್ದಕೋಶವು ತೀರಾ ಖೇದಕರವಾಗಿದೆ. ಅವರು ತಮ್ಮ ಎದುರಾಳಿಗಳನ್ನು 'ಲಿಂಗಾಹತರು', 'ಧರ್ಮಭಂಜಕರು', ಹಾಗೂ ಅವರ ಮನಸ್ಥಿತಿಯನ್ನು 'ಅರಿವಿನ ವ್ಯತಿರಿಕ್ತತಾ ಅಸ್ವಸ್ಥತೆ' ಎಂದು ಕೀಳಾಗಿ ಜರಿದಿದ್ದಾರೆ. ಬಸವಣ್ಣನವರ 'ಇವನಾರವ ಇವನಾರವ' ಎಂಬ ವಿಶ್ವಭ್ರಾತೃತ್ವದ ವಚನವನ್ನು ಉಲ್ಲೇಖಿಸುತ್ತಲೇ, ಇತರರ ಮೇಲೆ ಇಷ್ಟೊಂದು ವೈಯಕ್ತಿಕ ದ್ವೇಷವನ್ನು ಕಾರುವುದು ಲೇಖಕರ ಬರಹದಲ್ಲಿರುವ ದೊಡ್ಡ ದ್ವಂದ್ವವನ್ನು ಎತ್ತಿ ತೋರಿಸುತ್ತದೆ. 'ಉದಕದ ತಂಪವ ತಾವರೆಯಲ್ಲದೆ ಹೊರಗಣ ಕೊರಡೆತ್ತಬಲ್ಲುದೋ?' ಎಂಬ ವಚನವನ್ನು ಲೇಖಕರು ಉಲ್ಲೇಖಿಸಿ, ಅಪಾತ್ರರನ್ನು ಅಲಂಕರಿಸಲು ವಚನಗಳನ್ನು ಬಳಸಬಾರದು ಎಂದು ಬುದ್ಧಿವಾದ ಹೇಳಿದ್ದಾರೆ. ಇದೇ ಮಾತು ಅವರ ಲೇಖನದ ಕಟು ಶೈಲಿಗೂ ಸಂಪೂರ್ಣವಾಗಿ ಅನ್ವಯಿಸುತ್ತದೆ. ವಚನ ಸಾಹಿತ್ಯದ ನಿಜವಾದ ಸೌರಭವನ್ನು ಗ್ರಹಿಸಲು ಅತ್ಯಂತ ಪ್ರಶಾಂತವಾದ, ಪೂರ್ವಾಗ್ರಹ ಪೀಡಿತವಲ್ಲದ ಮತ್ತು ವಿನಯಶೀಲ ಮನಸ್ಸು ಬೇಕು. ದ್ವೇಷಪೂರಿತ ಭಾಷೆ, ವ್ಯಂಗ್ಯಗಳ ಮೂಲಕ ನಾವು ವಚನಗಳ ಆಳವಾದ ಅರ್ಥವನ್ನು ಸಾರಲು ಎಂದಿಗೂ ಸಾಧ್ಯವಿಲ್ಲ.

ಸಾಹಿತಿ, ಇತಿಹಾಸಕಾರ ಅಥವಾ ವಿದ್ವಾಂಸನೆಂಬ ಯಾವ ಬಿರುದುಗಳೂ ನನಗಿಲ್ಲದಿರಬಹುದು. ಹಾಗೆಂದ ಮಾತ್ರಕ್ಕೆ, ತಮ್ಮ ವಿಚಾರಗಳನ್ನು ಒಪ್ಪದವರನ್ನೆಲ್ಲಾ 'ಸೈದ್ಧಾಂತಿಕ ಗುಲಾಮರು' ಎಂದು ಕೀಳಾಗಿ ಕಾಣುವುದು ಪ್ರಬುದ್ಧ ಚಿಂತಕರಿಗೆ ಶೋಭೆ ತರುವಂತಹುದ್ದಲ್ಲ.

ಇಲ್ಲಿ ಲೇಖಕರ ಆತ್ಮಸಾಕ್ಷಿಯನ್ನೇ ಪ್ರಶ್ನಿಸಬೇಕಾಗುತ್ತದೆ; 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ವಚನವನ್ನು ಉಲ್ಲೇಖಿಸುವ ನೀವು, ಅದೇ ಲೇಖನದಲ್ಲಿ ಭಿನ್ನಾಭಿಪ್ರಾಯ ಹೊಂದಿದವರನ್ನು 'ಲಿಂಗಾಹತರು', 'ಅರಿವಿನ ವ್ಯತಿರಿಕ್ತತಾ ಅಸ್ವಸ್ಥತೆ ಉಳ್ಳವರು', 'ಗುಲಾಮಿಕೆಯ ಮನಸ್ಸಿನವರು' ಎಂದು ಜರಿಯುವುದು ಬಸವಣ್ಣನವರ ಕರುಣೆಯ ಮತ್ತು ಸಮಾನತೆಯ ಸಿದ್ಧಾಂತಕ್ಕೆ ಬಗೆಯುವ ದ್ರೋಹವಲ್ಲವೇ? ಇಂತಹ ದ್ವೇಷಪೂರಿತ ಮತ್ತು ನಿಂದನಾತ್ಮಕ ಪದಬಳಕೆಯು ಸ್ವತಃ ವಚನ ಸಾಹಿತ್ಯದ ಮೂಲ ಆಶಯಕ್ಕೆ ವಿರುದ್ಧವಾಗಿ ನಿಲ್ಲುವುದಿಲ್ಲವೇ?

ಐತಿಹಾಸಿಕ ಸತ್ಯಗಳ ಮುಖಾಮುಖಿ ಮಾಡಬೇಕು ಎಂದು ಲೇಖಕರು ಲೇಖನದಲ್ಲಿ ಸವಾಲು ಹಾಕಿದ್ದಾರೆ. ವಾಸ್ತವವಾಗಿ, ಆಧುನಿಕ ಸಂಶೋಧಕರು ಮಾಡುತ್ತಿರುವುದು ಇದನ್ನೇ. ಹನ್ನೆರಡನೇ ಶತಮಾನದ ಶರಣರ ಚಳುವಳಿ ಕೇವಲ ಧಾರ್ಮಿಕ ಸುಧಾರಣೆಯಾಗಿರಲಿಲ್ಲ; ಅದೊಂದು ಸಮಗ್ರ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯಾಗಿತ್ತು. ಅಲ್ಲಿ ಹುಟ್ಟಿನ ಆಧಾರದ ಮೇಲು-ಕೀಳು ಅಳಿಸಿಹಾಕಿ, 'ಕಾಯಕವೇ ಕೈಲಾಸ' ಎಂಬ ಉದಾತ್ತ ದರ್ಶನವನ್ನು ಸಾರಲಾಯಿತು. ಇಂತಹ ಕ್ರಾಂತಿಕಾರಿ ಚಿಂತನೆಗಳನ್ನು ಒಳಗೊಂಡ ವಚನಗಳು ಕಾಲಾನಂತರದಲ್ಲಿ ವಿವಿಧ ಹಿತಾಸಕ್ತಿಗಳ ಪ್ರಭಾವಕ್ಕೆ ಸಿಲುಕಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುವ ಅಪಾಯ ಎದುರಾದಾಗ, ಅವುಗಳನ್ನು ಮರಳಿ ಪಡೆಯುವ ವೈಜ್ಞಾನಿಕ ಪ್ರಯತ್ನಗಳೇ ಇಂದಿನ ಸಂಶೋಧನೆಗಳು. ಇಲ್ಲಿ ಯಾರಿಗೂ ಯಾವುದೇ ನಿರ್ದಿಷ್ಟ ಪದ ಅಳಿಸುವ ಅಥವಾ ಹೊಸದನ್ನು ತುರುಕುವ ದುರುದ್ದೇಶವಿಲ್ಲ. ಬದಲಾಗಿ, ಲಿಂಗಾಯತ ಎಂಬುದು ಬಸವಣ್ಣನವರಿಂದ ಸ್ಥಾಪಿತವಾದ, ಸಂಪೂರ್ಣ ಸಮಾನತೆಯ ತಳಹದಿಯ ಮೇಲಿರುವ ಸ್ವತಂತ್ರ ಅಸ್ಮಿತೆ ಎಂಬ ಐತಿಹಾಸಿಕ ಸತ್ಯವನ್ನು ಅನಾವರಣಗೊಳಿಸುವ ಪ್ರಾಮಾಣಿಕ ಯತ್ನವಿದು. ಇದನ್ನು ಅಖಂಡತೆಗೆ ತಂದೊಡ್ಡುವ ಕಂಟಕ ಎಂದು ವ್ಯಾಖ್ಯಾನಿಸುವುದು ಕೇವಲ ಭಾವನಾತ್ಮಕ ಪ್ರತಿಕ್ರಿಯೆ. ನಮ್ಮ ಬೇರುಗಳನ್ನು, ನೈಜ ಅಸ್ಮಿತೆಯನ್ನು ಹುಡುಕುವ ಯತ್ನವನ್ನು ದ್ವೇಷದಿಂದ ನೋಡಬಾರದು.

ಒಟ್ಟಾರೆಯಾಗಿ, ರವಿ ಹಂಜ್ ಅವರ ಲೇಖನವು ಹಳೆಯ ತಲೆಮಾರಿನ ಸಾಂಪ್ರದಾಯಿಕ ನಂಬಿಕೆಗಳು ಮತ್ತು ವಾಸ್ತವ ಆಧಾರಿತ ಹೊಸ ತಲೆಮಾರಿನ ವೈಚಾರಿಕ ಸಂಶೋಧನೆಗಳ ನಡುವಿನ ಸಂಘರ್ಷವನ್ನು ಪ್ರತಿಬಿಂಬಿಸುತ್ತದೆ. ನಾವು ವಿಮರ್ಶೆಯನ್ನು ಗೌರವಯುತವಾಗಿ ಸ್ವೀಕರಿಸುವ ಮತ್ತು ಅಷ್ಟೇ ಘನತೆಯಿಂದ ಮರುಮಂಡಿಸುವ ವಾತಾವರಣವನ್ನು ನಿರ್ಮಿಸಬೇಕಿದೆ. ಮಠಾಧೀಶರ ನಡೆನುಡಿಗಳನ್ನು, ಸಂಶೋಧಕರ ಕೃತಿಗಳನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ; ಆದರೆ ಪ್ರಶ್ನೆಗಳು ಅಧ್ಯಯನದ ಹಿನ್ನೆಲೆಯಿಂದ ಕೂಡಿರಬೇಕೇ ಹೊರತು ರಾಗ-ದ್ವೇಷಗಳ ಆಧಾರದ ಮೇಲಲ್ಲ. ಬಸವಣ್ಣನವರು ನೀಡಿದ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ಸಪ್ತಸೂತ್ರಗಳನ್ನು ಉಲ್ಲೇಖಗಳಿಗೆ ಸೀಮಿತಗೊಳಿಸದೆ, ನಮ್ಮ ಬರವಣಿಗೆಯಲ್ಲಿ ಹಾಗೂ ವೈಚಾರಿಕ ವಿಮರ್ಶೆಗಳಲ್ಲಿ ಅಳವಡಿಸಿಕೊಂಡಾಗ ಮಾತ್ರ, ನಾವು ನಿಜವಾದ ಶರಣರಾಗಲು ಸಾಧ್ಯ.

ಭಟ್ಟರ್ ಸ್ಕಾಚ್

- **ಶಂಕರ ಪಾಟೀಲ, ಗದಗ**
  ಭಟ್ರೇ, ಗಂಡಸರು ನಿವೃತ್ತರಾದರೆ ಹೆಂಗಸರಿಗೆ ಖುಷಿನಾ?
  - **ಖುಷಿ ಎಲ್ಲಿ ಬಂತು.. ಅರ್ಧರ್ಧ ಗಂಟೆಗೆ ಕಾಫಿ ಮಾಡಿ ಸಾಯಬೇಕಲ್ಲ!!?**
- **ವಸಂತ ಹೊನಕೆರೆ, ಬಾಗಲಕೋಟೆ**
  ಭಟ್ರೇ, ಆತ ಬಾಸ್ ಹೇಳುವ ಜೋಕಿಗೆ ನಗುವುದೇ ಇಲ್ಲವಲ್ಲ?
  - **ಹಾಗಾದ್ರೆ ಆತನ ರಿಟೈರ್ಮೆಂಟ್ ದಿನ ಸಮೀಪಿಸುತ್ತಿರಬೇಕು!**
- **ಬಸವರಾಜ ಹೊರಡಿ, (ಇಮೇಲ್ ಮೂಲಕ)**
  ಭಟ್ರೇ, ಪರೀಕ್ಷೆಯಲ್ಲೇಕೋ ಸ್ಕೋರ್ ಮಾಡಲಿಲ್ಲ ಅಂತ ಕೇಳಿದರೆ, ಪಕ್ಕದ ಮನೆ ಹುಡುಗ ಸ್ಕೋರ್ ಮಾಡಿದ್ದಾನಾ ಅಂತಾನಲ್ಲ?
  - **ಹಾಗಾದ್ರೆ ಭವಿಷ್ಯದಲ್ಲಿ ರಾಜಕಾರಣಿ ಆಗಬಹುದು!**
- **ವಿದ್ಯಾ ಭಾಗವತ, ಹೊನ್ನಾವರ**
  ಭಟ್ರೇ, ಗೊರಕೆ ಹೊಡೆಯುವ ಗಂಡನ ಜತೆ ಸಂಸಾರ ಹೇಗೆ ಮಾಡೋದು?
  - **ಇದು ವೈಯಕ್ತಿಕ ಅಲ್ಲ, ಜಾಗತಿಕ ಸಮಸ್ಯೆಯಮ್ಮ, ಕ್ರಮೇಣ ನಿನಗೂ ರೂಢಿಯಾಗುತ್ತೆ!**
- **ರುದ್ರಣ್ಣ ನಾಯಕನಕಟ್ಟೆ, (ಇಮೇಲ್ ಮೂಲಕ)**
  ಭಟ್ರೇ, ಜಗತ್ತಿಗೇ ಒಳ್ಳೆಯದಾಗಲಿ ಎಂದು ಪ್ರಾರ್ಥಿಸಬೇಕು ಅಂತ ನಿರ್ಧರಿಸಿದ್ದೇನೆ, ಹೇಗೆ?
  - **ಆಗ ನನಗೆ ಒಳ್ಳೆಯದಾಗಲಿ ಎಂದು ಪ್ರತ್ಯೇಕವಾಗಿ ಪ್ರಾರ್ಥಿಸಬೇಕಾದ ಅಗತ್ಯವಿಲ್ಲ!**
- **ಕೆ.ಸಿದ್ದಪ್ಪ, ಗಂಡಸಿ**
  ಸರ್, ತೋಳ ಬಂದು ಧರ್ಮದ ಬಗ್ಗೆ ಉಪದೇಶ ನೀಡಿದರೆ ಏನಾಗಬಹುದು?
  - **ಆಗ ಕೋಳಿಯನ್ನು ಕಳವು ಮಾಡುವುದು ದಾನ ಎಂದು ಕರೆಯಿಸಿಕೊಳ್ಳಬಹುದು!**
- **ರಮೇಶಕುಮಾರ ಬಣಜಿ, (ಇಮೇಲ್ ಮೂಲಕ)**
  ಭಟ್ರೇ, ಪತ್ನಿಗೂ, ಮಾಜಿ ಪತ್ನಿಗೂ ಏನು ವ್ಯತ್ಯಾಸ?
  - **ಮದುವೆ ಚಾಲ್ತಿಯಲ್ಲಿರುವ ತನಕ ಪತ್ನಿ, ಜೀವ ಹೋಗುವ ತನಕ ಮಾಜಿ ಪತ್ನಿ!**
- **ರಶ್ಮಿ, ಬೆಂಗಳೂರು**
  ಭಟ್ರೇ, ನನ್ನ ಬಾಯ್‌ಫ್ರೆಂಡ್ ತೀರಾ ತಿಕ್ಕಲನಂತೆ ವರ್ತಿಸುತ್ತಾನಲ್ಲ?
  - **ಹಾಗಾದ್ರೆ, ಆತ ನಿನ್ನನ್ನು ಗಾಢವಾಗಿ ಪ್ರೀತಿಸುತ್ತಿದ್ದಾನೆ ಅಂತಾಯ್ತು!**
- **ಭೀಮರಾವ್ ಮನಗೂಳಿ, ಚಾಮರಾಜಪೇಟೆ**
  ಭಟ್ರೇ, ಹಸುವನ್ನು ಕೊಟ್ಟಿಗೆಯಲ್ಲಿ ಕಟ್ಟಿ ಹಾಲು ಹಿಂಡಿದರೆ ಅದು ಹೈನುಗಾರಿಕೆ, ತಲೆ ಕೂದಲು ಯದ್ವಾತದ್ವಾ ಬೆಳೆಯಲು ಬಿಟ್ಟು ಪೋಷಿಸಿದರೆ ಅದು?
  - **ಹೇನುಗಾರಿಕೆ!**

ಮನೆಯೇ ಮೊದಲ ಕ್ರೌರ್ಯದ ತಾಣ ಆಗದಿರಲಿ!

ಹೆತ್ತವರನ್ನು ಬಿಟ್ಟು ತನ್ನನ್ನೇ ನಂಬಿ ಬಂದ ಹೆಂಡತಿಯನ್ನು ಗಂಡನೇ ಕತ್ತು ಹಿಸುಕಿ ಸಾಯಿಸುತ್ತಾನೆ. 'ಧರ್ಮಪತ್ನಿ' ಎನಿಸಿಕೊಂಡವಳು ಎರಡು ಕೋಟಿ ರೂಪಾಯಿ ವಿಮೆ ಹಣಕ್ಕಾಗಿ ಪ್ರಿಯಕರನೊಂದಿಗೆ ಸೇರಿ ಮಾಜಿ ಸೈನಿಕನಾದ ತನ್ನ ಗಂಡನನ್ನೇ ಮುಗಿಸುತ್ತಾಳೆ.ಹಣ ಮತ್ತು ಆಸ್ತಿಯ ಮುಂದೆ ರಕ್ತದ ಬಣ್ಣ ಮಾಸಿಹೋಗಿದೆ.

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

'ತಾಯಿಗಿಂತ ದೊಡ್ಡ ದೇವರಿಲ್ಲ', 'ಮನೆಯೇ ಮೊದಲ ಪಾಠಶಾಲೆ', 'ಜನನಿ ತಾನೇ ಮೊದಲ ಗುರು' ಮುಂತಾದ ಉದಾತ್ತ ಚಿಂತನೆಗಳ ನೆಲ ನಮ್ಮದು. ಮಕ್ಕಳನ್ನು ದೇವರಂತೆ ಕಾಣುವ, ಪ್ರತಿಯೊಂದು ಶುಭ ಕಾರ್ಯದಲ್ಲೂ ಗುರು, ಹಿರಿಯರ ಪಾದಕ್ಕೆ ನಮಿಸುವ ಸಂಸ್ಕಾರ ನಮ್ಮ ಹೆಮ್ಮೆಯಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಈ ನಂಬಿಕೆಯ ತಳಹದಿಯನ್ನೇ ಬುಡಮೇಲು ಮಾಡುವಂತಹ ಭೀಕರ ಅಪರಾಧಗಳು ನಮ್ಮ ಕಣ್ಣೆದುರೇ ಜರುಗುತ್ತಿವೆ. ಯಾರು ಯಾರನ್ನು ರಕ್ಷಿಸಬೇಕೋ, ಅವರೇ ಭಕ್ಷಕರಾಗುತ್ತಿದ್ದಾರೆ. ಹೆತ್ತ ಮಗುವನ್ನು ಸಲಹಬೇಕಾದ ತಾಯಿ ಕಾಮ ಲಾಲಸೆಯಲ್ಲಿ ಮಗುವನ್ನೇ ಕತ್ತು ಹಿಸುಕಿ ಸಾಯಿಸುತ್ತಿದ್ದಾಳೆ. ಮಕ್ಕಳಿಗಾಗಿಯೇ ತಮ್ಮ ಇಡೀ ಬದುಕನ್ನು ಸವೆಸಿದ ಹೆತ್ತವರನ್ನು, ಪುಡಿ ಆಸ್ತಿಗಾಗಿ ಮಗ/ಮಗಳು ಸಂಚು ಹೂಡಿ ಸಾಯಿಸುತ್ತಿದ್ದಾರೆ. ಈ ಕ್ರೌರ್ಯ, ಈ ಸಂವೇದನಾಶೂನ್ಯತೆ ಕೇವಲ ಬಿಡಿ ಅಪರಾಧಗಳಲ್ಲ; ಬದಲಿಗೆ ನಮ್ಮ ಸಮಾಜದ ಸ್ವಾಸ್ಥ್ಯ ಕೆಟ್ಟಿರುವುದಕ್ಕೆ, ಸಾಂಸ್ಕೃತಿಕ ಅಧಃಪತನಕ್ಕೆ ಹಿಡಿದ ಕನ್ನಡಿಯಾಗಿದೆ. ಸಂವೇದನೆ ಇಲ್ಲದ ಮನುಷ್ಯ ರಕ್ಕಸನಿಗಿಂತ ಕ್ರೂರಿಯಾಗಬಲ್ಲ ಎಂಬುದಕ್ಕೆ ಇತ್ತೀಚಿನ ಘಟನೆಗಳೇ ಸಾಕ್ಷಿ.

ಬೆಂಗಳೂರಿನ ಕಾಡುಗೋಡಿಯಲ್ಲಿ ತಾಯಿಯೊಬ್ಬಳು ತನ್ನ ಪ್ರಿಯಕರನೊಂದಿಗೆ ಸೇರಿ 5 ವರ್ಷದ ಕಂದಮ್ಮ 'ವೆನ್ನೆಲ'ಳನ್ನು ಕೊಂದ ಮುಗಿಸಿದ ಘಟನೆ ಇಡೀ ರಾಜ್ಯ ಬೆಚ್ಚಿಬೀಳುವಂತೆ ಮಾಡಿದೆ. ಈ ಕೃತ್ಯವನ್ನು ಬಯಲಿಗೆಳೆದು ಶಿಕ್ಷಿಸಬೇಕಾದ ಪೊಲೀಸರು, ಇಂತಹ ಬರ್ಬರ ಕೃತ್ಯದಲ್ಲೂ ಆರೋಪಿಗಳೊಂದಿಗೆ ಕೈ ಜೋಡಿಸಿದ್ದು, ಇನ್ನಷ್ಟು ಆಘಾತಕಾರಿ ವಿಚಾರ. ಇತ್ತ ನೆರೆರಾಜ್ಯ ಕೇರಳದ ತಿರುವನಂತಪುರದಲ್ಲಿ ಒಂದೂವರೆ ವರ್ಷದ ಹಸುಗೂಸು 'ಅರ್ಶಿತ್' ಎಂಬ ಮಗುವನ್ನು ತಾಯಿಯ ಪ್ರಿಯಕರ ಸಿಗರೇಟಿನಿಂದ ಸುಟ್ಟು, ಚಿತ್ರಹಿಂಸೆ ನೀಡಿ ಕೊಂದಿದ್ದಾನೆ. ಕಾಮದ ವಿಕೃತಿಗೆ ಹೆತ್ತ ಒಡಲಿನ ಮಮತೆ ಬಲಿಯಾಗುತ್ತಿದೆ ಎಂದರೆ ನಾವಿನ್ನೂ ಮಾನವ ಸಮಾಜದಲ್ಲಿದ್ದೇವೆಯೇ ಅಥವಾ ಕಾಡುಮೃಗಗಳ ಲೋಕದಲ್ಲಿದ್ದೇವೆಯೇ ಎಂಬ ಸಂಶಯ ಮೂಡುತ್ತದೆ.

ನಮ್ಮ ದೇಶದಲ್ಲಿ ಮಕ್ಕಳನ್ನು ಹೊಡೆಯುವುದು, ಗದರಿಸುವುದು ಶಿಕ್ಷಣ ಅಥವಾ ಶಿಸ್ತಿನ ಭಾಗ ಎಂದು ಭಾವಿಸಲಾಗಿದೆ. ಯೂರೋಪ್ ರಾಷ್ಟ್ರಗಳಂತೆ ಮಕ್ಕಳ ಮೇಲಿನ ಸಣ್ಣ ದೈಹಿಕ ದಂಡನೆಯೂ ಶಿಕ್ಷಾರ್ಹ ಅಪರಾಧ ಎಂದು ನಮ್ಮಲ್ಲಿ ಕಾನೂನು ಕಟ್ಟುನಿಟ್ಟಾಗಿ ಜಾರಿಯಾಗಿದ್ದರೆ, ಭಾರತದ ಜೈಲುಗಳು ಹೆತ್ತವರಿಂದಲೇ ತುಂಬಿಹೋಗುತ್ತಿದ್ದವೇನೋ? ಆದರೆ, ಇಲ್ಲಿ ಕೇವಲ ಶಿಸ್ತಿನ ಹೆಸರಿನ ದಂಡನೆಯಷ್ಟೇ ಇಲ್ಲ; ಎರಡು ವರ್ಷದ ಹೆಣ್ಣು ಮಗುವಿನ ಮೇಲೂ ಲೈಂಗಿಕ ದೌರ್ಜನ್ಯ ಎಸಗುವ ಕಾಮಪಿಪಾಸು ನರರಾಕ್ಷಸರು ರಾಜಾರೋಷವಾಗಿ ಓಡಾಡುತ್ತಿದ್ದಾರೆ.

ರಕ್ತ ಸಂಬಂಧದಲ್ಲೇ ರಕ್ತದಾಹ

ರಾಷ್ಟ್ರೀಯ ಅಪರಾಧ ದಾಖಲಾತಿ ಬ್ಯೂರೋ ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ ದೇಶದಲ್ಲಿ ಪ್ರತಿದಿನ ಮಕ್ಕಳ ಮೇಲೆ 500ಕ್ಕೂ ಹೆಚ್ಚು ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿವೆ. ಅಂದರೆ ಪ್ರತಿ ಗಂಟೆಗೆ 21 ಪ್ರಕರಣಗಳು, ಪ್ರತಿ ನಿಮಿಷಕ್ಕೊಂದು ಬಾಲ ದೌರ್ಜನ್ಯದ ಕೃತ್ಯ ನಡೆಯುತ್ತಲೇ ಇದೆ. ಇವು ಕೇವಲ ಸಂಖ್ಯೆಗಳಲ್ಲ, ಇರುವೆಯನ್ನು ಸಾಯಿಸುವುದೂ ಪಾಪ ಕೃತ್ಯ ಎಂದು ಭಾವಿಸುವ ಇದೇ ದೇಶದ ಇನ್ನೊಂದು ಮುಖದ ಅನಾವರಣ. ಆಘಾತಕಾರಿ ವಿಷಯವೆಂದರೆ, ಮಕ್ಕಳ ಮೇಲಿನ ಶೋಷಣೆಯ ಶೇ.90ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಅಪರಾಧಿಗಳು ಹೊರಗಿನವರಲ್ಲ; ಬದಲಿಗೆ ಮಲತಂದೆ, ಚಿಕ್ಕಪ್ಪ, ದೊಡ್ಡಪ್ಪ, ಸೋದರಮಾವ ಅಥವಾ ತೀರಾ ಹತ್ತಿರದ ಸಂಬಂಧಿಗಳೇ ಆಗಿರುತ್ತಾರೆ.

ಮಕ್ಕಳ ಕಥೆ ಹೀಗಾದರೆ, ಬದುಕಿನ ಸಂಧ್ಯಾಕಾಲದಲ್ಲಿ ನಿಶ್ಚಿಂತೆಯಾಗಿ ಇರಬೇಕಾದ ಹಿರಿಯ ನಾಗರಿಕರ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ನಗರ ಪ್ರದೇಶಗಳಲ್ಲಿ ತಮ್ಮದೇ ಬದುಕಿನ ಜಂಜಾಟ, ಹಣದ ಅಂಧಾಭಿಮಾನದಲ್ಲಿ ತೇಲುತ್ತಿರುವ ಮಕ್ಕಳಿಗೆ ಹೆತ್ತವರು ಹೊರೆಯಾಗಿ ಕಾಣುತ್ತಿದ್ದಾರೆ. ಕೇವಲ ನಿರ್ಲಕ್ಷ್ಯವಷ್ಟೇ ಅಲ್ಲ, ಆಸ್ತಿಗಾಗಿ ಹೆತ್ತವರ ಪ್ರಾಣವನ್ನೇ ತೆಗೆಯುವ ಕ್ರೂರ ಘಟನೆಗಳು ಹೆಚ್ಚುತ್ತಿವೆ. ತೀರಾ ಇತ್ತೀಚೆಗೆ ಬೆಂಗಳೂರಿನಲ್ಲಿ ವಾಯುಪಡೆಯ ನಿವೃತ್ತ ಅಧಿಕಾರಿಯೊಬ್ಬರ ಪುತ್ರ ತನ್ನ ತಂದೆ-ತಾಯಿಯನ್ನು ಬರ್ಬರವಾಗಿ ಹತ್ಯೆ ಮಾಡಿದ ಘಟನೆ ನಡೆದಿತ್ತು. ಹಾವೇರಿ ಜಿಲ್ಲೆಯಲ್ಲಿ ನಡೆದ ಮತ್ತೊಂದು ಪ್ರಕರಣದಲ್ಲಿ, ಮಗನೊಬ್ಬ ಆಸ್ತಿಯ ಆಸೆಗಾಗಿ ತಂದೆ, ತಾಯಿ, ಅಕ್ಕ ಸೇರಿದಂತೆ ಇಡೀ ಕುಟುಂಬವನ್ನೇ ಬಲಿ ತೆಗೆದುಕೊಂಡಿದ್ದ. ಇದಕ್ಕಾಗಿ ಆತ ಹೂಡಿದ ಸಂಚು, ಎಂಥವರ ಎದೆಯನ್ನೂ ನಡುಗಿಸುವಂತಿತ್ತು. ರಕ್ತಸಂಬಂಧಗಳೆಂದರೆ ಕಷ್ಟ-ಸುಖದಲ್ಲಿ ಭಾಗಿಯಾಗಬೇಕಾದ ಆಸರೆಗಳು. ಆದರೆ ಇಂದು ಹಣ ಮತ್ತು ಆಸ್ತಿಯ ಮುಂದೆ ಆ ರಕ್ತದ ಬಣ್ಣ ಮಾಸಿಹೋಗಿದೆ.

'ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನ'ದ ಅಂಗವಾಗಿ ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಮೊನ್ನೆ ನಡೆದ ಸಭೆಯಲ್ಲಿ ಕೆಲವು ಹಿರಿಯರು ಹಂಚಿಕೊಂಡ ಕಣ್ಣೀರಿನ ಕಥೆಗಳು ಕಲ್ಲನ್ನಾದರೂ ಕರಗಿಸುವಂತಿದ್ದವು. ಬೆಂಗಳೂರಿನ ಹಿರಿಯರ ಸಹಾಯವಾಣಿ ನಡೆಸಿರುವ ಮೂರು ವರ್ಷಗಳ (2023ರಿಂದ ಈಚೆಗೆ) ಅಧ್ಯಯನದ ಪ್ರಕಾರ ಹಿರಿಯರ ಮೇಲಿನ ಒಟ್ಟು ದೌರ್ಜನ್ಯಗಳಲ್ಲಿ ಶೇ. 68ರಷ್ಟು ಕೃತ್ಯಗಳು ಸ್ವಂತ ಕುಟುಂಬದ ಸದಸ್ಯರಿಂದಲೇ ನಡೆದಿದೆ. ಇವುಗಳಲ್ಲಿ ಶೇ.42ರಷ್ಟು ಪ್ರಕರಣಗಳಲ್ಲಿ ಸ್ವಂತ ಮಕ್ಕಳೇ (ಮಗ ಅಥವಾ ಮಗಳು) ಹೆತ್ತವರನ್ನು ಪೀಡಿಸುತ್ತಿದ್ದಾರೆ. ಶೇ.29ರಷ್ಟು ಪ್ರಕರಣಗಳಲ್ಲಿ ಮನೆಗೆ ಬಂದ ಸೊಸೆಯಂದಿರಿಂದ ದೌರ್ಜನ್ಯ ನಡೆಯುತ್ತಿದೆ.

ಇಂದಿನ ಅಪರಾಧ ಲೋಕದ ಚಿತ್ರಣ ಬದಲಾಗಿದೆ. ಈ ಹಿಂದೆ ನಮಗೆ ಅಪರಾಧ ಕೃತ್ಯ ಎಂದಾಕ್ಷಣ ಕಳ್ಳಕಾಕರು, ರೌಡಿಗಳು, ವಿಕ್ಷಿಪ್ತ, ವಿಕೃತ ಮನಸ್ಥಿತಿಯ ಕ್ರಿಮಿನಲ್‌ಗಳ ನೆನಪಾಗುತ್ತಿತ್ತು.

ಇಂದು ಮನೆಯ ನಾಲ್ಕು ಗೋಡೆಗಳ ಮಧ್ಯೆ ಒಂದಾಗಿ ಬದುಕು ಸಾಗಿಸಿದವರು, ಒಟ್ಟಿಗೇ ಅನ್ನಾಹಾರ ಸೇವಿಸಿದರು, ಒಂದೇ ಹಾಸಿಗೆ ಹಂಚಿಕೊಂಡವರೇ ಪಾತಕಿಗಳಾಗುತ್ತಿದ್ದಾರೆ. ಹೆತ್ತವರನ್ನು ಬಿಟ್ಟು ತನ್ನನ್ನೇ ನಂಬಿ ಬಂದ ಹೆಂಡತಿಯನ್ನು ಗಂಡನೇ ಕತ್ತು ಹಿಸುಕಿ ಸಾಯಿಸುತ್ತಾನೆ. 'ಧರ್ಮಪತ್ನಿ' ಎನಿಸಿಕೊಂಡವಳು ಎರಡು ಕೋಟಿ ರೂಪಾಯಿ ವಿಮೆ ಹಣಕ್ಕಾಗಿ ಪ್ರಿಯಕರನೊಂದಿಗೆ ಸೇರಿ ಮಾಜಿ ಸೈನಿಕನಾದ ತನ್ನ ಗಂಡನನ್ನೇ ಮುಗಿಸುತ್ತಾಳೆ.

ಮನುಷ್ಯನ ಆಸೆಗಳು ಮಿತಿಮೀರಿದಾಗ, ನೈತಿಕತೆಯ ಬೇರುಗಳು ಸಡಿಲವಾದಾಗ ಇಂತಹ ವಿಕೃತ ಮನಸ್ಥಿತಿಗಳು ಜನ್ಮತಾಳುತ್ತವೆ. ಮಕ್ಕಳಾಗಲಿ, ಹಿರಿಯರಾಗಲಿ ತಮ್ಮ ಮೇಲಿನ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಲು ಉಚಿತ ಸಹಾಯವಾಣಿಗಳಿದ್ದರೂ, ಹೆಚ್ಚಿನವರು ದೂರು ನೀಡಲು ಮುಂದೆ ಬರುವುದಿಲ್ಲ. ದೂರು ನೀಡಿದರೆ ಮುಂದೇನು ಎನ್ನುವುದೇ ದೊಡ್ಡ ಪ್ರಶ್ನೆ. ಎಲ್ಲವೂ ನಮ್ಮ ಹಣೆ ಬರಹ, ಕರ್ಮಫಲ ಎಂದು ಮೌನವಾಗಿ ಸಹಿಸಿಕೊಳ್ಳುವವರೇ ಹೆಚ್ಚು. ಈ ಮೌನವೇ ಅಪರಾಧಿಗಳಿಗೆ ಮತ್ತಷ್ಟು ಬಲ ನೀಡುತ್ತಿದೆ.

ಜಗತ್ತಿನ ಅತಿ ಪ್ರಾಚೀನ ನಾಗರಿಕತೆ, ಉದಾತ್ತ ಮತ್ತು ಆದರ್ಶ ಪರಂಪರೆಯನ್ನು ಹೊಂದಿದ ದೇಶದಲ್ಲಿ ಮನೆ ಮಂದಿಯೇ ಪಾತಕಿಗಳಾಗಲು ಏನು ಕಾರಣ ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ. ಲಕ್ಷಾಂತರ ರೂಪಾಯಿ ಡೊನೇಷನ್ ನೀಡಿ, ಪ್ರತಿಷ್ಠಿತ ಎನಿಸಿಕೊಂಡ ಶಿಕ್ಷಣ ಸಂಸ್ಥೆಗಳಿಗೆ ಮಕ್ಕಳನ್ನು ಸೇರಿಸಿದರೂ ಅಲ್ಲಿ ದೊರಕುವ ಶಿಕ್ಷಣವು, ಅಂಕಗಳನ್ನು ಗಳಿಸುವ, ಹಣ ತರುವ ಯಂತ್ರಗಳನ್ನು ಸೃಷ್ಟಿಸುತ್ತಿದೆಯೇ ವಿನಃ ನೈತಿಕತೆ ಮತ್ತು ಮಾನವೀಯ ಮೌಲ್ಯಗಳ ಅರಿವು ಮೂಡಿಸುತ್ತಿಲ್ಲ. ಇನ್ನೊಬ್ಬರ ಅಭಿವೃದ್ಧಿಯನ್ನು ಕಂಡು ಕರುಬುವ, ಇತರರನ್ನು ಸಂಶಯ ದೃಷ್ಟಿಯಿಂದ ನೋಡುವ, ಹಣ ಗಳಿಕೆಯೊಂದೇ ಜೀವನದ ಪರಮ ಧ್ಯೇಯವೆಂದು ಭಾವಿಸುವ ಪೋಷಕರ ನಡವಳಿಕೆಯನ್ನೇ ಇಂದಿನ ಮಕ್ಕಳು ರೂಢಿಸಿಕೊಳ್ಳುತ್ತಿದ್ದಾರೆ.

ಸದಾ ಋಣಾತ್ಮಕ ಸುದ್ದಿ ಮತ್ತು ಚಿಂತನೆಗಳನ್ನು, ವಿಚಿತ್ರ ಅಪರಾಧ ಕೃತ್ಯಗಳನ್ನೇ ರೋಚಕವಾಗಿ ಬಿತ್ತರಿಸುವ ಮಾಧ್ಯಮಗಳು, ಜನರನ್ನು ಸುಲಭದಲ್ಲಿ ಮರಳು ಮಾಡುವ, ದಾರಿ ತಪ್ಪಿಸುವ ಸಾಮಾಜಿಕ ಜಾಲತಾಣಗಳು ಮತ್ತು ರೀಲ್ಸ್‌ಗಳ ದುನಿಯಾ, ಹಿಂಸೆಯನ್ನೇ ಬಂಡವಾಳನ್ನಾಗಿಸಿಕೊಂಡ ಸಿನಿಮಾ ಲೋಕ ಜನರ ಮನಸ್ಸನ್ನು ವಿಕೃತಗೊಳಿಸುತ್ತಿವೆ. ಅಪರಾಧ ಮಾಡುವುದು ಎಷ್ಟು ಸುಲಭ ಎಂಬ ದಾರಿಯನ್ನು ಇವು ಪರೋಕ್ಷವಾಗಿ ತೋರಿಸಿಕೊಡುತ್ತಿವೆ. ಇನ್ನೊಂದೆಡೆ ನಿಕಟ ಸಂಬಂಧಿಕರು, ಅಜ್ಜಿ-ತಾತ, ಮುತ್ತಾತಂದಿರು, ಮಾವ-ಅತ್ತೆಯಂದಿರ ಸಂಪರ್ಕವಿಲ್ಲದೆ, ಮನೆ ಮತ್ತು ಶಾಲೆ ಎಂಬ ನಾಲ್ಕು ಗೋಡೆಗಳ ಮಧ್ಯೆ, ಮೊಬೈಲ್ ಪರದೆಯ ಮುಂದೆ ಬೆಳೆಯುವ ನಮ್ಮ ಮಕ್ಕಳು ಸಾಮಾಜಿಕ ಸಂವೇದನೆ ಇಲ್ಲದೆ, ಭಾವನೆಗಳ ಬೆಲೆ ಅರಿಯದೆಯೇ ಬೆಳೆಯುತ್ತಿದ್ದಾರೆ.

ನಮ್ಮ ಪೊಲೀಸ್ ವ್ಯವಸ್ಥೆ, ನ್ಯಾಯಾಂಗ ಮತ್ತು ತನಿಖಾ ವ್ಯವಸ್ಥೆಯಲ್ಲಿನ ಒತ್ತಡ, ಪ್ರಭಾವ ಮತ್ತು ವಿಳಂಬ ನೀತಿಗಳು ಅಪರಾಧಿಗಳಿಗೆ ವರದಾನವಾಗುತ್ತಿವೆ. ಇಲ್ಲಿ ಎಂತಹ ಘೋರ ಅಪರಾಧ ಎಸಗಿದರೂ ಹಣ, ರಾಜಕೀಯ ಪ್ರಭಾವ ಬಳಸಿ ಸುಲಭವಾಗಿ ಜಾಮೀನಿನ ಮೇಲೆ ಹೊರಬರಬಹುದು. ಪೋಕ್ಸೋ ಪ್ರಕರಣದಲ್ಲಿ ಸಿಲುಕಿದ ಬಡ ಹಿನ್ನೆಲೆಯ ವ್ಯಕ್ತಿಗೆ 30 ವರ್ಷಗಳಷ್ಟು ದೀರ್ಘ ಶಿಕ್ಷೆ ನೀಡಿದ ನಮ್ಮ ವ್ಯವಸ್ಥೆಗೆ, ಪ್ರಭಾವಿಗಳೆನಿಸಿಕೊಂಡವರನ್ನು ಕನಿಷ್ಠ ಒಂದು ಬಾರಿಯೂ ಕಂಬಿ ಹಿಂದೆ ತಳ್ಳಲು ಸಾಧ್ಯವಾಗಿಲ್ಲ. ಶಿಕ್ಷೆಯ ಭೀತಿ ಇಲ್ಲದಿರುವುದು ಅಪರಾಧಗಳು ಮರುಕಳಿಸಲು ಮುಖ್ಯ ಕಾರಣ.

ಇಡೀ ದುರಂತದ ಮತ್ತೊಂದು ಕರಾಳ ಮುಖವೆಂದರೆ, ದೌರ್ಜನ್ಯಕ್ಕೆ ಒಳಗಾಗುತ್ತಿರುವವರಲ್ಲಿ ಬಹುಪಾಲು ಹೆಣ್ಣುಮಕ್ಕಳು ಮತ್ತು ಅಬಲರೇ ಆಗಿದ್ದಾರೆ. ಭ್ರೂಣ ಹತ್ಯೆಯಿಂದ ಹಿಡಿದು ವೃದ್ಧಾಪ್ಯದವರೆಗೂ ಹೆಣ್ಣು ಸಾಲು ಸಾಲು ದೌರ್ಜನ್ಯಗಳನ್ನು ಎದುರಿಸುತ್ತಲೇ ಇದ್ದಾಳೆ. ದೇವಿ ಹೆಸರಿನಲ್ಲಿ ನಾವು ದೇವಸ್ಥಾನಗಳನ್ನು ಕಟ್ಟುತ್ತೇವೆ, ನದಿಗಳನ್ನು ಪೂಜಿಸುತ್ತೇವೆ, ದೇಶವನ್ನು 'ಭಾರತ ಮಾತೆ' ಎಂದು ಕರೆಯುತ್ತೇವೆ. ಆದರೆ ಅದೇ ದೇಶದ ಹೆಣ್ಣುಮಕ್ಕಳಿಗೆ, ವೃದ್ಧರಿಗೆ ಮತ್ತು ಹಸುಗೂಸುಗಳಿಗೆ ಅವರ ಸ್ವಂತ ಮನೆಯಲ್ಲೇ ರಕ್ಷಣೆ ಇಲ್ಲದಂತಾಗಿದೆ. ಸಮಾಜದಲ್ಲಿ ಹೆಚ್ಚುತ್ತಿರುವ ಸಾಂಸ್ಕೃತಿಕ ಮಾಲಿನ್ಯಕ್ಕೆ ಬಲಿಯಾಗುತ್ತಿರುವುದು ಕೇವಲ ಜೀವಗಳಲ್ಲ, ಬದಲಿಗೆ ಇಡೀ ಸಮಾಜದ ನೈತಿಕ ಸ್ಥಿರತೆ ಕುಸಿಯುತ್ತಿದೆ.

ದೇಶದ ಅಭಿವೃದ್ಧಿ ಎಂದರೆ ಕೇವಲ ಗಗನಚುಂಬಿ ಕಟ್ಟಡಗಳು, ಹೆದ್ದಾರಿಗಳು, ಮೇಲ್ಸೇತುವೆಗಳು, ಸ್ಮಾರ್ಟ್ ಸಿಟಿಗಳು, ಜಿಡಿಪಿ ದರ ಅಥವಾ ಅಂಕಿ-ಅಂಶಗಳಲ್ಲಿ ಕಾಣಿಸುವ ಭೌತಿಕ ಪ್ರಪಂಚವಲ್ಲ. ನಿಜವಾದ ಅಭಿವೃದ್ಧಿ ಇರುವುದು ದೇಶದ ಜನರ ಮನೋಭಾವ, ನಡವಳಿಕೆ ಮತ್ತು ವರ್ತನೆಯಲ್ಲಿ. ನಾಗರಿಕರಲ್ಲಿ ಸಂವೇದನೆ, ಕರುಣೆ, ಪ್ರೀತಿ ಮತ್ತು ಗೌರವದ ಭಾವನೆಗಳು ಇಲ್ಲದಿದ್ದರೆ ನಾವು ಎಷ್ಟೇ ಆರ್ಥಿಕವಾಗಿ ಶ್ರೀಮಂತರಾದರೂ ಆ ಸಮಾಜವು ಮರುಭೂಮಿಗೆ ಸಮಾನ.

ಮಕ್ಕಳು, ಹಿರಿಯರು, ಮಹಿಳೆಯರು ಮತ್ತು ಅಬಲರ ಮೇಲಿನ ಈ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಇಡೀ ಸಮಾಜ ಒಟ್ಟಾಗಿ ನಿಲ್ಲಬೇಕಿದೆ. ಮಕ್ಕಳಲ್ಲಿ ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತುವ ಕೆಲಸ ಮನೆಯಲ್ಲಿ ಮತ್ತು ಶಾಲೆಯಲ್ಲಿ ಸಮಾನವಾಗಿ ಸಾಗಬೇಕು. ಹೆತ್ತವರು, ಪೋಷಕರು, ಗುರುಗಳು ಮಕ್ಕಳ ಪಾಲಿಗೆ ಮೊದಲ ಆದರ್ಶ. ಸರಿ, ತಪ್ಪುಗಳ ನೈತಿಕ ಪರಿಧಿಗೆ ಭದ್ರ ಬುನಾದಿ ಹಾಕುವ ಶಕ್ತಿ ಇವರಲ್ಲಿದೆ. ಆದರೆ ಈ ವರ್ಗ ಹಾದಿ ತಪ್ಪದಂತೆ ನೋಡಿಕೊಳ್ಳುವುದು ಸಮಾಜದ ಕರ್ತವ್ಯ.

ಎಲ್ಲಕ್ಕಿಂತ ಹೆಚ್ಚಾಗಿ, ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಂತರ್ಯದ ಕ್ರೌರ್ಯ ಮತ್ತು ಸ್ವಾರ್ಥವನ್ನು ಕಳಚಿಕೊಂಡು ಮಾನವೀಯತೆಯನ್ನು ಜಾಗೃತಗೊಳಿಸಿಕೊಳ್ಳಬೇಕಿದೆ. ರಕ್ತಸಂಬಂಧಗಳು ಸ್ವಾರ್ಥದ, ವ್ಯವಹಾರದ ಮಾರುಕಟ್ಟೆಯಾಗಬಾರದು; ಅವು ಪ್ರೀತಿಯ ಆಸರೆಯಾಗಬೇಕು. ಮಾನವೀಯ ಮೌಲ್ಯಗಳನ್ನು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು ಕೇವಲ ಸರಕಾರದ ಕೆಲಸವಲ್ಲ, ಅದು ನಮ್ಮೆಲ್ಲರ ಜವಾಬ್ದಾರಿ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕತ್ತೆ ನೀ ಸತ್ತೆ !

ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಹೈರಾಣವಾಗಿರುವ ಪಾಕಿಸ್ತಾನ, ತನ್ನ ಬರಿದಾದ ಬೊಕ್ಕಸವನ್ನು ತುಂಬಿಸಿಕೊಳ್ಳಲು, ತನ್ನ ದೇಶದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿರುವ ಕತ್ತೆಗಳನ್ನು ಚೀನಾ ದೇಶಕ್ಕೆ ರಫ್ತು ಮಾಡುವ ಬಗ್ಗೆ ಚಿಂತಿಸುತ್ತಿದೆ ಎಂಬ ಮಾಧ್ಯಮ ವರದಿಗಳು ಕುತೂಹಲಕಾರಿಯಾಗಿದೆ. ಇತ್ತೀಚೆಗೆ ಪಾಕಿಸ್ತಾನದ ಹಣಕಾಸು ಸಚಿವ ಮಹಮ್ಮದ್ ಔರಂಗಜೇಬ್ ಪ್ರಕಟಿಸಿರುವ ಸಮೀಕ್ಷಾ ಅಧಿಕೃತ ವರದಿಯಲ್ಲಿ ಈ ವಿಷಯ ಬಹಿರಂಗವಾಗಿದೆ. ಚೀನಾದಲ್ಲಿ ಕತ್ತೆ ಮಾಂಸ ಮತ್ತು ಇತರ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಹಾಗೂ ಪಾಕಿಸ್ತಾನದಲ್ಲಿ 60 ಲಕ್ಷಕ್ಕೂ ಹೆಚ್ಚು ಕತ್ತೆಗಳಿರುವುದರಿಂದ ಪಾಕಿಸ್ತಾನ ಈ ದೂ(ದು)ರಾಲೋಚನೆಯನ್ನು ಮಾಡಿದೆ ಎಂದು ಹೇಳಲಾಗಿದ್ದು, ಪಾಕಿಸ್ತಾನದ ಕತ್ತೆಗಳಿಗೆ ಇನ್ನು ಉಳಿಗಾಲವಿಲ್ಲ ಎಂಬುದು ಮಾತ್ರ ಬೇಸರದ ಸಂಗತಿ.

- ಕೆ.ವಿ.ವಾಸು, ಮೈಸೂರು

ಬಿಎಂಟಿಸಿ ಡಿಜಿಟಲ್ ಟಿಕೆಟ್ ಸಮಸ್ಯೆ

ಇತ್ತೀಚೆಗಿನ ಕೆಲವು ದಿನಗಳಿಂದ ಬಿಎಂಟಿಸಿ ಬಸ್ಸುಗಳಲ್ಲಿ ಕ್ಯೂಆರ್ ಕೋಡ್‌ಗಳನ್ನು ತೆಗೆದುಹಾಕಲಾಗಿದೆ. ಇದರಿಂದ ಸಾರ್ವಜನಿಕರಿಗೆ, ತುಂಬಾ ತೊಂದರೆ ಯಾಗಿರುವುದಷ್ಟೇ ಅಲ್ಲ, ನಿರ್ವಾಹಕರಿಗೂ ಟಿಕೆಟ್ ಕೊಡಲು ಎರಡರಷ್ಟು ಸಮಯ ಆಗುತ್ತಿದೆ. ಅಲ್ಲದೆ, ಪ್ಲಾಸ್ಟಿಕ್ ಮುಚ್ಚಿದ ಟಿಕೆಟ್ ಕೊಡುವ ಯಂತ್ರಗಳು ಸರಿಯಾಗಿ ಸ್ಕ್ಯಾನ್ ಮಾಡುತ್ತಿಲ್ಲ. ಇದು ನಿರ್ವಾಹಕರೊಡನೆ ವಾಗ್ಯುದ್ಧಕ್ಕೂ ಕಾರಣವಾಗಿದೆ. ಸಂಬಂಧಪಟ್ಟವರು ತಕ್ಷಣ ಕ್ಯುಆರ್ ಕೋಡ್‌ಗಳನ್ನು ಮರು ಅಂಟಿಸಬೇಕಾಗಿ ಕೋರಿಕೆ. ಗ್ಯಾರಂಟಿಗಳ ಭರಾಟೆಗಳ ನಡುವೆ ಮುಳುಗಿರುವ ಸರಕಾರ ಅಪರೂಪಕ್ಕೆನ್ನುವಂತೆ ಮಾಡಿದ ಜನೋಪಯೋಗಿ ಕೆಲಸ ಈ ರೀತಿ ಜನಾಪಕಾರಿಯಾಗಿರುವುದು ಚೋದ್ಯವೇ ಸರಿ.

- ಹೇಮಂತ ಆರ್., ಬೆಂಗಳೂರು

ಮಧ್ಯಂತರ ಬಜೆಟ್ ಹಾಸ್ಯಾಸ್ಪದ

ಸಾರ್ವಜನಿಕ ಹಣದ ವೆಚ್ಚದಲ್ಲಿ ಪದೇ ಪದೆ ಬಜೆಟ್ ಮಂಡಿಸುವುದು ಕೇವಲ ರಾಜಕೀಯ ಹಿತಾಸಕ್ತಿಯ ಗಿಮಿಕ್ ಅಷ್ಟೇ. ಫೆಬ್ರವರಿಯಲ್ಲಿ ಈಗಾಗಲೇ ಪೂರ್ಣ ಪ್ರಮಾಣದ ಆಯವ್ಯಯ ಅಂಗೀಕಾರವಾಗಿದ್ದರೂ ಕೇವಲ ಅಧಿಕಾರ ಹಂಚಿಕೆಯ ಗೊಂದಲ ಮತ್ತು 2028ರ ಚುನಾವಣಾ ಸ್ವಾರ್ಥಕ್ಕಾಗಿ ಮತ್ತೊಂದು ಮಧ್ಯಂತರ ಬಜೆಟ್‌ಗೆ ಚಿಂತಿಸುವುದು ಆರ್ಥಿಕ ದುರುದ್ದೇಶವನ್ನು ತೋರಿಸುತ್ತದೆ.ಆಡಳಿತ ಯಂತ್ರದ ಚುರುಕಿಗೆ ಹೊಸ ಬಜೆಟ್ ಬೇಕೆಂಬ ವಾದ ಹಾಸ್ಯಾಸ್ಪದ. ಕೇವಲ ಜನಪ್ರಿಯ ಯೋಜನೆಗಳ ಮೂಲಕ ಬೊಕ್ಕಸ ಖಾಲಿ ಮಾಡುವ ಬದಲು ಹಾಲಿ ಯೋಜನೆಗಳಲ್ಲೇ ಸುಧಾರಣೆ ತರಬಹುದು. ಹೊಸ ಬಜೆಟ್ ಮಂಡನೆಯಿಂದ ಕನಿಷ್ಠ 15-20% ಹೆಚ್ಚುವರಿ ಆಡಳಿತಾತ್ಮಕ ವೆಚ್ಚ ಮತ್ತು ಸಮಯ ವ್ಯರ್ಥವಾಗುತ್ತದೆ. ರಾಜಕೀಯ ಮೇಲಾಟಕ್ಕಾಗಿ ತೆರಿಗೆದಾರರ ಹಣವನ್ನು ಪೋಲು ಮಾಡದೆ ಪಾರದರ್ಶಕ ಆರ್ಥಿಕ ನಿರ್ವಹಣೆ ಮಾಡಿ ನವೀನ ತಂತ್ರಜ್ಞಾನ ಬಳಸಿ ಈಗಿರುವ ಬಜೆಟ್ ಅನ್ನೇ ಜನಪರವಾಗಿ ಜಾರಿಗೊಳಿಸುವುದು ಇಂದಿನ ಅಗತ್ಯವಾಗಿದೆ.

- ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಬೆಂಗಳೂರು ಥಳಥಳ!

ಬೆಂಗಳೂರಿನ ಮೂಲಸೌಕರ್ಯಕ್ಕೆ 20,000 ಕೋಟಿ ರೂ. ವಿನಿಯೋಗಿಸುವುದಾಗಿ ನೂತನ ಸಿಎಂ ಹೇಳಿದ್ದಾರೆ. ಈ ಹಣದ ಗಾತ್ರ ನೋಡಿದರೆ ಎದೆ ನಡುಗುತ್ತೆ. ಇದರಲ್ಲಿ ಎಷ್ಟೆಷ್ಟು ಯಾರು ಯಾರ ಪಾಲಾಗಲಿದೆ ಎಂದು ಈಗಲೇ ಹೇಳಿಬಿಡಬಹುದು. ಇಷ್ಟು ಪ್ರಮಾಣದ ಹಣದಲ್ಲಿ ಬೆಂಗಳೂರಿನ ರಸ್ತೆಗಳನ್ನೆಲ್ಲಾ ಸಿಂಗರಿಸಿ ಬಿಡಬಹುದು. ಪಾದಚಾರಿ ಮಾರ್ಗಗಳನ್ನು ಥಳಥಳ ಹೊಳೆಯುವಂತೆ ಮಾಡಬಹುದು. ಪಾರ್ಕ್‌ಗಳನ್ನು ಸ್ವಚ್ಛ ಮಾಡಬಹುದು. ಚರಂಡಿಗಳನ್ನು ಕ್ಲೀನ್ ಮಾಡಬಹುದು. ಆದರೆ ನಿಜಕ್ಕೂ ಅದೆಲ್ಲಾ ಆಗುತ್ತದೆಯೇ?

- ವೀಣಾ ರಾವ್, ಕೆಂಗೇರಿ

ಪ್ರಜ್ಞೆ, ವಾಸ್ತವ ಮತ್ತು ರಾಮಚಂದ್ರ ಗುಹಾ

ಸಕಾಲಿಕ
ಟಿ. ದೇವಿದಾಸ್
vveditoped@gmail.com

ರಾಮಚಂದ್ರ ಗುಹಾ (ಜನನ: ಏಪ್ರಿಲ್ 29, 1958) ಭಾರತದ ಪ್ರಸಿದ್ಧ ಇತಿಹಾಸಕಾರ, ಪರಿಸರವಾದಿ, ಮತ್ತು ಸಾರ್ವಜನಿಕ ಬುದ್ಧಿಜೀವಿ. ಇವರು ಆಧುನಿಕ ಭಾರತದ ಇತಿಹಾಸ, ಗಾಂಧೀಜಿ, ಸಾಮಾಜಿಕ ಚಳುವಳಿಗಳು, ಪರಿಸರ, ಮತ್ತು ಕ್ರಿಕೆಟ್ ಇತಿಹಾಸದ ಕುರಿತು ಬರೆದಿರುವ ಕೃತಿಗಳಿಗೆ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಾರೆ. ಇವರು ಡೆಹ್ರಾಡೂನ್‌ನಲ್ಲಿ ತಮಿಳು ಮೂಲದ ಕುಟುಂಬದಲ್ಲಿ ಜನಿಸಿದವರು. ದೆಹಲಿ ವಿಶ್ವವಿದ್ಯಾಲಯ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಕೋಲ್ಕತ್ತಾದಲ್ಲಿ ತಮ್ಮ ಶಿಕ್ಷಣವನ್ನು ಪೂರೈಸಿದರು. ಇವರ 'ಗಾಂಧಿ ಬಿಫೋರ್ ಇಂಡಿಯಾ' ಮತ್ತು 'ಗಾಂಧಿ: ದಿ ಇಯರ್ಸ್ ದಟ್ ಚೇಂಜ್ಡ್ ದಿ ವರ್ಲ್ಡ್' ಕೃತಿಗಳು ಗಾಂಧೀಜಿಯವರ ಜೀವನ ಕುರಿತ ಆಳವಾದ ಸಂಶೋಧನೆಗಳಾಗಿವೆ. ಅಲ್ಲದೆ, 'ಇಂಡಿಯಾ ಆಫ್ಟರ್ ಗಾಂಧಿ' ಭಾರತದ ಇತಿಹಾಸದ ಪ್ರಮುಖ ಪುಸ್ತಕಗಳಲ್ಲಿ ಒಂದಾಗಿದೆ.

ಕೇಂದ್ರ ಸರಕಾರ ಗೋಮಾಂಸ ನಿಷೇಧವನ್ನು ಜಾರಿಗೊಳಿಸಿದ ಸಂದರ್ಭದಲ್ಲಿ, ಸಂಪೂರ್ಣ ಸಹಿಷ್ಣುತೆ ಅಥವಾ ವಾಕ್ ಸ್ವಾತಂತ್ರ್ಯವನ್ನು ಹೊಂದಿದ್ದ ಸ್ವತಂತ್ರ ರಾಷ್ಟ್ರವಾಗಿ ನಮ್ಮ ಇತಿಹಾಸದಲ್ಲಿ ಎಂದಿಗೂ ಸುವರ್ಣಯುಗ ಇರಲಿಲ್ಲ ಎಂಬುದನ್ನು ಗುರುತಿಸುವುದು ಮುಖ್ಯ. ರಾಜಕಾರಣಿಗಳು ಮತ್ತು ಸರಕಾರಗಳಿಂದ ಯಾವಾಗಲೂ ನಿರ್ಬಂಧಗಳು ಮತ್ತು ದಬ್ಬಾಳಿಕೆ ಇದ್ದೇ ಇರುತ್ತದೆ. ಆದರೆ, ನಾವು ಖಂಡಿತವಾಗಿಯೂ ಹೆಚ್ಚು ಅಸಹಿಷ್ಣುತೆ ಹೊಂದುತ್ತಿದ್ದೇವೆ ಮತ್ತು ಹಿಂಸಾಚಾರವಿದೆ ಎಂದಿದ್ದರು. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರವನ್ನು ಖಂಡಿಸುತ್ತ, ವಿರೋಧಿಸುತ್ತ, ಟೀಕಿಸುತ್ತಲೇ ಇರುವವರು ಗುಹಾ. ಇದಕ್ಕೆ ಅಂಥಾ ಪರಿಯ ಕಾರಣವಾದರೂ ಏನು? ಎಡಪಂಥೀಯ ಸಿದ್ಧಾಂತವನ್ನು ಮೆಚ್ಚಿದ ಗುಹಾ ಅವರು ಗಾಂಧಿ, ನೆಹರೂ, ಮತ್ತು ಸರಿಹೊತ್ತಿನ ಗಾಂಧಿ ಕುಟುಂಬ ಅಂದರೆ ಸೋನಿಯಾ ಗಾಂಧಿ ಕುಟುಂಬದ ಅಪ್ಪಟ ಬೆಂಬಲಿಗರಾಗಿ ಅಭಿವ್ಯಕ್ತಿಸಿಕೊಂಡವರು. ತಪ್ಪೇನಿಲ್ಲ. ಆದರೆ ಅರಾಷ್ಟ್ರೀಯವಾದಿಯಾಗಿ ಇಂಥವರು ಸಾರ್ವಜನಿಕವಾಗಿ ತಮ್ಮನ್ನು ಅಭಿವ್ಯಕ್ತಿಸಿಕೊಳ್ಳಬಾರದು, ಅಷ್ಟೆ.

ಹಿಂದೂ, ಹಿಂದುತ್ವ, ಬಿಜೆಪಿ, ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಖಂಡಿಸುತ್ತ, ವಿರೋಧಿಸುತ್ತ ಇಷ್ಟೂ ವರ್ಷಗಳ ಕಾಲ ಗಾಂಧಿ ಕುಟುಂಬಕ್ಕೆ ವಿಧೇಯರಾಗಿ, ಅವರ ರಾಜಕೀಯ ನಡೆನುಡಿಯನ್ನು ಉತ್ಪ್ರೇಕ್ಷೆಯ ರೀತಿಯಲ್ಲಿ ಶ್ಲಾಘಿಸುತ್ತ ಅದುವೇ ತನ್ನ ನಿತ್ಯ ಪರಮಕಾರ್ಯ ಎಂಬಂತೆ ಗುಹಾ ಅವರು ಪಾಲಿಸಿಕೊಂಡು ಬಂದವರು ಎಂದರೆ ತಪ್ಪಿಲ್ಲ.

ಆದರೆ, ಇವರ ಬರೆಹ, ಚಿಂತನೆಯನ್ನು ಯಾರೂ ಮೆಚ್ಚುವಂಥದ್ದೇ. ಸಂದೇಹವೇ ಇಲ್ಲ. ಇವರೊಬ್ಬ ಇಂಟೆಲೆಕ್ಚುವಲ್ ಸ್ಕಾಲರ್. ಆದರೆ, ತಮ್ಮ ಚಿಂತನೆಗಳನ್ನು ನೆಹರೂ ಆದಿಯಾಗಿ ಸೋನಿಯಾ, ರಾಹುಲ್ ಗಾಂಧಿಯವರೆಗೆ ನಿಷ್ಠರಾಗಿದ್ದುಕೊಂಡೇ ಪ್ರಚುರ ಪಡಿಸಿಕೊಂಡವರು. ಇವರು ಹಿಂದೂಗಳನ್ನು ಹೀಯಾಳಿಸುವುದು, ಮೋದಿ ಮತ್ತು ಟೀಮ್, ಬಿಜೆಪಿ, ಆರ್‌ಎಸ್‌ಎಸ್ ಅನ್ನು ನಖಶಿಖಾಂತ ವಿರೋಧಿಸಿ ತಾನೊಬ್ಬ ಪ್ರಮುಖ ಬುದ್ಧಿಜೀವಿ ಅಂತ ಗಾಂಧಿ ಕುಟುಂಬದ ಸದಸ್ಯರಿಗೆ ಮೆಚ್ಚಿಸುವುದರಲ್ಲೇ ಇವರು ಬಹುವಾಗಿ ಶ್ರಮಿಸಿದವರು. ಇವರಿಗೆ 2009ರಲ್ಲಿ ಪದ್ಮಭೂಷಣ ಕೊಡಮಾಡಲ್ಪಟ್ಟಿದೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ನೀಡಲ್ಪಟ್ಟಿದೆ.

ಈಗ ರಾಮಚಂದ್ರ ಗುಹಾ ಕೂಡ ರಾಹುಲ್ ಗಾಂಧಿಯ ರಾಜಕೀಯ ವಿಧಾನದ ಬಗ್ಗೆ ಪ್ರಶ್ನೆಗಳನ್ನು ಎತ್ತಿದ್ದಾರೆಂದರೆ ಇದು ಕಾಂಗ್ರೆಸ್ ಬಗ್ಗೆ ಕಳವಳಗಳು, ಪಕ್ಷದ ರೇಖೆಗಳು ಮತ್ತು ಸಿದ್ಧಾಂತಗಳನ್ನು ಮೀರಿವೆ ಎಂದು ಅದು ತೋರಿಸುತ್ತದೆ.



ವಿಷಯವಿಷ್ಟೆ: 'ನಾನು ಮೋದಿ ಮತ್ತು ಬಿಜೆಪಿಯನ್ನು ದ್ವೇಷಿಸಿದಷ್ಟು ಬೇರಾರೂ ದ್ವೇಷಿಸಿಲ್ಲ, ಆದರೆ ಇಂದಿನ ಯುದ್ಧದ ಪರಿಸ್ಥಿತಿ, ಇಂಧನ ಸಮಸ್ಯೆಗಳಂತಹ ಸಂದಿಗ್ಧ ಮತ್ತು ತುರ್ತು ಸಮಯದಲ್ಲಿ ಮೋದಿಯಲ್ಲದೆ ಬೇರೆ ಯಾರೂ ಇಷ್ಟು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಧೃಡವಾಗಿ ಹೇಳುತ್ತೇನೆ. ಮತ್ತು ರಾಹುಲ್ ಗಾಂಧಿಗೆ ಪ್ರಧಾನಿ ಆಗೋ ಯಾವ ಯೋಗ್ಯತೆಯೂ ಸಹ ಇಲ್ಲ. ತನ್ನ ಮುತ್ತಾತ, ಅಜ್ಜಿ, ಅಪ್ಪ ಅರ್ಹತೆ ಇಲ್ಲದಿದ್ದರೂ ಪ್ರಧಾನಿಗಳು ಆಗಿದ್ದರು. ಆದ್ದರಿಂದ ನಾನು ಸಹ ಅರ್ಹತೆ ಇಲ್ಲದಿದ್ದರೂ ಪ್ರಧಾನಿಯಾಗಬೇಕು ಅನ್ನೋದು ಹುಂಬತನವಷ್ಟೆ' ಅಂತ ರಾಮಚಂದ್ರ ಗುಹಾ ಹೇಳಿದ್ದಾರೆ.

ತಡವಾಗಿಯಾದರೂ ಕೇಂದ್ರ ಸರಕಾರದ ನೀತಿ ಮತ್ತು ಮೋದಿಯ ದಕ್ಷತೆಯ ಬಗ್ಗೆ ಗುಹಾ ಅವರಿಗೆ ಜ್ಞಾನೋದಯ ಅಂದರೆ ಅರಿವು ಆದಂತಿದೆ ಎಂದು ಅವರ ಈ ಮಾತುಗಳು ಹೇಳುತ್ತಿವೆ. ಇವರಿಗೇ ಹೀಗಾದರೆ ಇನ್ನು ಜನಸಾಮಾನ್ಯರ ಪಾಡೇನು? ಸರಿಹೊತ್ತಿನ ಬಿಕ್ಕಟ್ಟನ್ನು ಮೋದಿ ನಿರ್ವಹಿಸಿದ ರೀತಿಯನ್ನು ಗುಹಾ ಅವರು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ ಎಂಬುದಂತೂ ಸುಸ್ಪಷ್ಟ. ಇಂಥ ಅವಲೋಕನದ ಅಗತ್ಯ ಸದಾಕಾಲ ಪ್ರಜಾಪ್ರಭುತ್ವದಲ್ಲಿ ತೀರಾ ಅನಿವಾರ್ಯವೂ ಆವಶ್ಯಕವೂ ಅಗತ್ಯವೂ ಆದುದಾಗಿದೆ. ಪ್ರಜ್ಞೆಯಿದ್ದರಲ್ಲವೆ ಪ್ರಜಾಪ್ರಭುತ್ವದ ಯಶಸ್ಸು?

ಜಾಗತಿಕವಾಗಿ ಪೆಟ್ರೋಲ್ ರೇಟು ಸರಿಸುಮಾರು 146 ರೂಪಾಯಿಯಿದೆ. 140 ಕೋಟಿ ಜನಸಂಖ್ಯೆಯನ್ನು ಮೀರಿದ ಭಾರತದಂಥ ದೇಶದಲ್ಲಿ ಸರಿಸುಮಾರು 102- 113 ರೂ. ಇದೆ. ಕರ್ನಾಟಕದಲ್ಲಿ ಸರಾಸರಿ 110- 112 ರೂ.ಇದೆ. ಅಮೆರಿಕಾ 86- 105 ರೂ., ಚೀನಾ 113 ರೂ., ರಷಿಯಾ 89-92 ರೂ., ಪಾಕಿಸ್ತಾನ 141 ರೂ., ಫ್ರಾನ್ಸ್ 268-270 ರೂ., ಜರ್ಮನಿ 216 ರೂ., ಇರಾನ್ 30-33 ರೂ., ಇಸ್ರೇಲ್ 215-220 ರೂ., ಶ್ರೀಲಂಕಾ 434 ರೂ., ಸೌದಿ ಅರೇಬಿಯಾ 55-60 ರೂ., ದ.ಆಫ್ರಿಕಾ 200 ರೂ., ಕುವೈತ್ 26-52 ರೂ., ಜಪಾನ್ 101-105 ರೂ., ಆಸ್ಟ್ರೇಲಿಯಾ 90-95 ರೂ., ಇಂಗ್ಲೆಂಡ್ 201-223 ರೂ., ಟರ್ಕಿ 130-133 ರೂ.- ಹೀಗೆ ವಿಶ್ವದ ಬೇರೆ ಬೇರೆ ರಾಷ್ಟ್ರಗಳಲ್ಲಿ ಪೆಟ್ರೋಲ್ ದರ ಇದೆ. ಯುದ್ಧದಿಂದಾಗಿ ಜಾಗತಿಕವಾಗಿ ಪೆಟ್ರೋಲ್ ದರ ಹೆಚ್ಚಿದೆ. ಹಾಗೆಯೇ ಡೀಸೆಲ್ ಮತ್ತು ಎಲ್ಪಿಜಿ ದರವೂ ಕಚ್ಚಾತೈಲದ ಬೆಲೆಯೇರಿಕೆಯನ್ನೇ ಅವಲಂಬಿಸಿದೆ. ಇದಕ್ಕೆ ಭಾರತವೇನೂ ಹೊರತಲ್ಲ. ಕಚ್ಚಾತೈಲದ ಬೆಲೆಯಲ್ಲಿ ಏರಿಕೆಯಾಗದೇ ಹೋಗಿದ್ದರೆ ಇಂಧನ ಅಥವಾ ಅಡುಗೆ ಅನಿಲದ ಬೆಲೆ ಏರುವ ಸಾಧ್ಯತೆಯಿತ್ತೆ? ಅದರಲ್ಲೂ ಇರಾನ್‌ನಿಂದ ಹೆಚ್ಚು ಪ್ರಮಾಣದಲ್ಲಿ ಕಚ್ಚಾತೈಲವನ್ನು ಭಾರತ ಆಮದು ಮಾಡಿಕೊಳ್ಳುತ್ತಿರುವುದರಿಂದ ಭಾರತದಂಥ ಜನಸಂಖ್ಯೆ ಹೆಚ್ಚಿರುವ ರಾಷ್ಟ್ರಕ್ಕೆ ಬೆಲೆಯೇರಿಕೆಯ ಬಿಸಿ ತಕ್ಷಣ ತಟ್ಟುತ್ತದೆ. ಯಾಕೆಂದರೆ, ನಮ್ಮಲ್ಲಿ ತೈಲ ಉತ್ಪಾದನೆಯ ಪ್ರಮಾಣ ಕಡಿಮೆಯಿದೆ. ಯುದ್ಧ ಆರಂಭವಾಗಿ ಸುಮಾರು 72 ದಿನಗಳ ಅನಂತರ ಭಾರತದಲ್ಲಿ ಬೆಲೆಯೇರಿಕೆ ಬಿಸಿ ತಟ್ಟಿತು. ಆದರೂ ಕೊರತೆ ಇಲ್ಲದಂತೆ ಕೇಂದ್ರ ಸರಕಾರ ನೋಡಿಕೊಂಡಿದೆ. ಜಾಗತಿಕವಾಗಿ ಹೋಲಿಸಿದರೆ ಇದ್ದುದರಲ್ಲಿ ನಮ್ಮ ದೇಶಕ್ಕೆ ಯುದ್ಧದ ಪರಿಣಾಮ ಅಷ್ಟಾಗಿ ತಟ್ಟದಿರಲು ಕಾರಣ, ಕೇಂದ್ರ ಸರಕಾರ ಈ ಸನ್ನಿವೇಶವನ್ನು ನಿರ್ವಹಿಸಿದ ರೀತಿಯೆಂಬುದನ್ನು ಯಾರೂ ಒಪ್ಪಬೇಕಾದ ಸತ್ಯ! ಇದನ್ನೇ ಗುಹಾ ಅವರು ಹೇಳಿದ್ದು.

ಉಚಿತವಾಗಿ ಕೊಟ್ಟಿದ್ದನ್ನು ಅನುಭವಿಸಿ ದೈಹಿಕವಾದ ಶ್ರಮವನ್ನೇ ಮರೆತು ನಿತ್ಯದ ಬದುಕನ್ನು ಬಾಳುವ ನಮಗೆ ಅಷ್ಟು ಸುಲಭವಾಗಿ ಯಾವ ಸಮಸ್ಯೆಯೂ ವೈಯಕ್ತಿಕವಾಗಿ ಆಗಬಾರದು ಎಂಬ ವಿಚಿತ್ರ ಧೋರಣೆಯೊಂದು ಬೆಳೆದುಬಿಟ್ಟಿದೆ. ನಾವೊಂದು ಸಾವಯವ ಸಮಗ್ರ ಸಮೃದ್ಧ ರಾಷ್ಟ್ರವಾಗಿದ್ದು ಯಾರೊಬ್ಬನ ವೈಚಾರಿಕತೆಯೂ ದಿವಾಳಿತನಕ್ಕೆ ಬಿದ್ದರೆ ಇಡಿಯ ರಾಷ್ಟ್ರ ಅವನತಿಯ ಪಾರಸ್ಪರ್ಯವನ್ನು ಹೊಂದಿದೆ ಎಂಬುದು ಅರ್ಥವಾಗುವವರೆಗೂ ಈ ದೇಶದ ಜನರ ಮನಃಸ್ಥಿತಿ ಮತ್ತು ಆಲೋಚನೆಯ ಗತಿ ಹೀಗೆಯೇನೋ!

ಪ್ರಸ್ತುತ

ನಾಗರಾಜ ನಾಯಕ

ಕರಾವಳಿ ಎಂದರೆ ಮಂಗಳೂರಷ್ಟೇ ಅಲ್ಲ!

ಕರಾವಳಿಯೆಂದರೆ ಕೇವಲ ಮಂಗಳೂರು ಎನ್ನುವುದು ಹಲವು ಬೆಂಗಳೂರಿಗರ ಭ್ರಮೆ. ಕರ್ನಾಟಕದ ಕರಾವಳಿಯಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಎಂದು ಮೂರು ಜಿಲ್ಲೆಗಳು ಇವೆ. 1859ಕ್ಕೆ ಮೊದಲು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡವನ್ನು ಕೆನರಾ (ಕನ್ನಡದ ತಪ್ಪು ಉಚ್ಚಾರ) ಜಿಲ್ಲೆ ಎಂತಲೇ ಕರೆಯುತ್ತಿದ್ದರು. ಅದಕ್ಕೆ ಇಂದಿನ ಉತ್ತರ ಕನ್ನಡದ ಹೊನ್ನಾವರ ಜಿಲ್ಲಾ ಕೇಂದ್ರವಾಗಿತ್ತು. 1859ರಲ್ಲಿ ಬ್ರಿಟಿಷರು ಕೆನರಾ ಜಿಲ್ಲೆಯನ್ನು ಒಡೆದು 1862ರಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಬಾಂಬೆ ಪ್ರೆಸಿಡೆನ್ಸಿಗೆ ಮತ್ತು ದಕ್ಷಿಣ ಕನ್ನಡ (ಅವಿಭಜಿತ) ವನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಿದರು. ಇಂದಿಗೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯವರು ಹಳೆಯ ಸರಕಾರಿ ಕಾಗದ ಪತ್ರಗಳಿಗೆ ಹೊನ್ನಾವರಕ್ಕೆ ಬರುವುದುಂಟು. ಕರ್ನಾಟಕ ಕರಾವಳಿಯ ಉದ್ದ ಒಟ್ಟು 320 ಕಿ.ಮೀ ಎಂದು ಹೇಳಲಾಗುತ್ತದೆ. ಅದರಲ್ಲಿ ಉತ್ತರ ಕನ್ನಡ ಜಿಲ್ಲೆಯದೇ ಸಿಂಹಪಾಲು. ಉತ್ತರ ಕನ್ನಡವು ಸುಮಾರು 160 ಕಿ.ಮೀ, ಉಡುಪಿ ಸುಮಾರು 95 ಕಿ.ಮೀ ಹಾಗೂ ದಕ್ಷಿಣ ಕನ್ನಡ ಸುಮಾರು 65 ಕಿ.ಮೀ ಉದ್ದವನ್ನು ಹೊಂದಿದೆ ಎಂದು ಹೇಳಲಾಗುತ್ತಿದೆ. ದುರ್ದೈವ ಎಂದರೆ ಈಗಲೂ ಕರಾವಳಿ ಎಂದರೆ ಬೆಂಗಳೂರಿಗರು ಒಂದೋ ಮಂಗಳೂರು ಎನ್ನುತ್ತಾರೆ, ಇಲ್ಲವೇ ಗೋವಾ ಎನ್ನುತ್ತಾರೆ. ಎಷ್ಟೋ ಬೆಂಗಳೂರಿಗರಿಗೆ ಗೋಕರ್ಣ, ಮಜಾಳಿಯ ಕಪ್ಪು ಮರಳಿನ ಸಮುದ್ರ ತೀರ ಇವೆಲ್ಲಾ ಗೋವಾದಲ್ಲಿಯೇ ಬರುತ್ತದೆ ಎನ್ನುವ ಭ್ರಮೆ. ಉತ್ತರ ಕನ್ನಡ ಜಿಲ್ಲೆಯ ವಿಸ್ತೀರ್ಣ 10277 ಚದರ ಕಿಲೋ ಮೀಟರ್, ದಕ್ಷಿಣ ಕನ್ನಡ 4866 ಚ. ಕಿ.ಮೀ ಮತ್ತು ಉಡುಪಿಯ ವಿಸ್ತೀರ್ಣ 3582 ಚ. ಕಿ.ಮೀ.

ಹೀಗಿರುವಾಗ ಕಳೆದ ಕೆಲವು ದಿನಗಳಿಂದ ಕರಾವಳಿ ಮತ್ತು ಮಲೆನಾಡಿನ ಕೆಲವು ಭಾಗಕ್ಕೆ ಉಚ್ಚ ನ್ಯಾಯಾಲಯದ ಪೀಠವನ್ನು ಕೊಡುವುದೆಂತಲೂ ಹಾಗೂ ಅದನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕೆಂತಲೂ ನಿರ್ಧಾರ ಮಾಡಿಯಾಗಿದೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ಅದು ಸತ್ಯವೇ ಆಗಿದ್ದಲ್ಲಿ ಇತ್ತೀಚೆಗೆ ನ್ಯಾಯ ಕೊಡುವ ದೃಷ್ಟಿಯಿಂದ ಎಸಗಿದ ದೊಡ್ಡ ಅನ್ಯಾಯ ಎಂತಲೇ ಇದನ್ನು ಬಣ್ಣಿಸಬಹುದು. ಉಚ್ಚ ನ್ಯಾಯಾಲಯದ ಪೀಠಗಳ ರಚನೆ ಇಡೀ ದೇಶದಲ್ಲಿ ಹೆಚ್ಚೆಚ್ಚು ಆಗುತ್ತಿವೆ. ಇದರ ಉದ್ದೇಶ ನ್ಯಾಯವನ್ನು ಮನೆ ಬಾಗಿಲಿಗೆ ತಂದು ಕೊಡುವುದೇ ಆಗಿದೆ. ಅದರ ಜೊತೆಗೆ ಸಮಯ, ಹಣದ ಉಳಿತಾಯ, ಸಾರ್ವಜನಿಕರಿಗೆ ಸುಲಭ ಲಭ್ಯತೆ ಇತ್ಯಾದಿ ಕಾರಣಗಳು. ಆದರೆ ಇವೆಲ್ಲವನ್ನೂ ಪರಿಗಣಿಸದೇ ಕೇರಳದ ಗಡಿಯ ಮಂಗಳೂರಿನಲ್ಲಿ ಉಚ್ಚ ನ್ಯಾಯಾಲಯದ ಪೀಠ ಸ್ಥಾಪಿಸುವುದು ಹೆಚ್ಚಿನ ಸಾರ್ವಜನಿಕರಿಗೆ ಅನನುಕೂಲ ಉಂಟು ಮಾಡುವಂತಹದು.

ಈಗಾಗಲೇ ಉತ್ತರ ಕನ್ನಡ ಜಿಲ್ಲೆ ಧಾರವಾಡ ಉಚ್ಚ ನ್ಯಾಯಾಲಯದ ಪೀಠದ ನ್ಯಾಯಾಧಿಕರಣಕ್ಕೆ ಬರುತ್ತಿದೆ. ಉದಾಹರಣೆ ನೀಡಿ ಹೇಳುವುದಾದರೆ ಮುಂಚೆ ಕಾರವಾರದವರು ಉಚ್ಚ ನ್ಯಾಯಾಲಯ ಧಾರವಾಡಕ್ಕೆ ಮೂರು ತಾಸಿಗೆ ಹೋಗುತ್ತಿದ್ದರು. ಕ್ರಮಿಸಬೇಕಾದ ದೂರ ಅಂದಾಜು 170 ಕಿ.ಮೀ ಆಗುತ್ತಿತ್ತು. ಈಗ ಮಂಗಳೂರಿಗೆ ಹೋಗಬೇಕಾದರೆ 5.30 ತಾಸು ಬೇಕಾಗುತ್ತದೆ ಹಾಗೂ ಕ್ರಮಿಸಬೇಕಾದ ದೂರ 270 ಕಿ.ಮೀ. ಇದು ನ್ಯಾಯವೇ? ಅದೇ ರೀತಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದವರು ಧಾರವಾಡಕ್ಕೆ ಹೋಗಲು ಅರ್ಧ ತಾಸು ತೆಗೆದುಕೊಳ್ಳುತ್ತಿದ್ದರು, ಈಗ ಮಂಗಳೂರಿಗೆ ಹೋಗಲು ಸುಮಾರು 7 ತಾಸು ಕ್ರಮಿಸಬೇಕಾಗುತ್ತದೆ. ಹಳಿಯಾಳದವರು ಮಾಡಿದ ಪಾಪವಾದರೂ ಏನು? ಅದಕ್ಕಾಗಿ ಇತ್ತೀಚೆಗೆ ಉತ್ತರ ಕನ್ನಡ ಜಿಲ್ಲಾ ವಕೀಲರ ಸಂಘದವರು ತೀರ್ಮಾನ ಮಾಡಿ ಕರಾವಳಿ ಪೀಠವನ್ನು ಉತ್ತರ ಕನ್ನಡ ಜಿಲ್ಲೆಯ ಮಧ್ಯಂತರ ಸ್ಥಳದಲ್ಲಿ ಮಾಡಲು ಠರಾವು ಪಾಸು ಮಾಡಿದೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಪೀಠವಾದರೆ ಶಿವಮೊಗ್ಗದವರು ಒಟ್ಟು 150 ಕಿ.ಮೀನ ಹೊನ್ನಾವರಕ್ಕೆ ಮೂರು ತಾಸಿನಲ್ಲಿ ಪ್ರಯಾಣಿಸಬಹುದು. ಶಿವಮೊಗ್ಗದವರು ಮಂಗಳೂರಿಗೆ ಹೋಗಲು 203 ಕಿ.ಮೀ ಚಲಿಸಲು 4.15 ತಾಸು ತೆಗೆದುಕೊಳ್ಳಬೇಕಾಗುತ್ತದೆ. ಹೊನ್ನಾವರದಲ್ಲಿ ಪೀಠವಾದರೆ ಬೈಂದೂರಿನವರಿಗೆ ಮಂಗಳೂರು 124 ಕಿ.ಮೀ, ಅದೇ ಹೊನ್ನಾವರ ಕೇವಲ 56 ಕಿ.ಮೀ. ಕುಂದಾಪುರದವರಿಗೂ ಮಂಗಳೂರು ಮತ್ತು ಹೊನ್ನಾವರ ಸಮಾನ ದೂರ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 12 ತಾಲೂಕುಗಳಲ್ಲಿ 11 ವಕೀಲರ ಸಂಘಗಳು ಇವೆ. ಇದರ ಅರ್ಥ 11 ಕಡೆ ನ್ಯಾಯಾಲಯಗಳು ಇವೆ. ಅದೇ ಉಡುಪಿಯಲ್ಲಿ 4 ಮತ್ತು ದಕ್ಷಿಣ ಕನ್ನಡದಲ್ಲಿ 6 ವಕೀಲರ ಸಂಘಗಳಿವೆ. ಉತ್ತರ ಕನ್ನಡ ಜಿಲ್ಲೆಯ ಪ್ರಕರಣಗಳ ಸಂಖ್ಯೆ ಧಾರವಾಡದ ಉಚ್ಚ ನ್ಯಾಯಾಲಯದಲ್ಲಿ ಸಾಕಷ್ಟು ಇವೆ. ಉತ್ತರಕನ್ನಡ ಜಿಲ್ಲೆಯಲ್ಲಿ ಅನೇಕ ಉದ್ದೇಶಗಳಿಗೆ ಭೂ ಸ್ವಾಧೀನ ಆಗಿರುವುದರಿಂದ ಆ ಪ್ರಕರಣಗಳು, ಸಿವಿಲ್, ಕ್ರಿಮಿನಲ್ ಪ್ರಕರಣಗಳು ಸಾಕಷ್ಟು ಉಚ್ಚ ನ್ಯಾಯಾಲಯದಲ್ಲಿ ಇವೆ. ಅಷ್ಟೇ ಅಲ್ಲದೇ ಈ ಜಿಲ್ಲೆಯಲ್ಲಿ ಒಟ್ಟು ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗಿವೆ. ಅನೇಕ ಎಂಎಫ್ಎ ಪ್ರಕರಣಗಳು ಸಾಕಷ್ಟು ಉಚ್ಚ ನ್ಯಾಯಾಲಯದ ಹಂತದಲ್ಲಿವೆ. ಮೇಲಾಗಿ ಉತ್ತರ ಕನ್ನಡದವರಿಗೆ ಬೆಳಗಾವಿ ರೆವಿನ್ಯೂ ವಿಭಾಗವಾಗಿರುತ್ತದೆ. ಗ್ರಾಹಕ ನ್ಯಾಯಾಲಯದ ಪೀಠ, ಕೆಎಟಿ ಪೀಠ, ರೆವಿನ್ಯೂ ಅರೆ ನ್ಯಾಯಿಕ ಪ್ರಾಧಿಕಾರಿಗಳು ಹೀಗೆ ಅನೇಕ ಕೆಲಸಗಳಿಗಾಗಿ ಬೆಳಗಾವಿಗೆ ಹೋಗಬೇಕಾಗುತ್ತದೆ. ಒಂದೇ ಪ್ರಕರಣದಿಂದ ಉದ್ಭವಿಸಿದ ರೆವಿನ್ಯೂ ಹಾಗೂ ಸಿವಿಲ್ ಪ್ರಕರಣಗಳಿಗೆ ಬೆಳಗಾವಿ ಹಾಗೂ ಮಂಗಳೂರಿಗೆ ಅಲೆಯುವುದೆಂದರೆ ಆ ಬಡ ಕಕ್ಷಿಗಾರನ ಪರಿಸ್ಥಿತಿ ಏನಾಗಬೇಡ.

ಆದ್ದರಿಂದ ಉತ್ತರ ಕನ್ನಡದ ಜಿಲ್ಲೆಯ ವಕೀಲರು ಹಾಗೂ ನಾಗರಿಕರು ಎದ್ದು ನಿಂತು ಹೋರಾಟಕ್ಕೆ ಅಣಿಯಾಗುತ್ತಿದ್ದಾರೆ. ನ್ಯಾಯದ ಹೆಸರಿನಲ್ಲಿ ಅನ್ಯಾಯ ಆಗುವುದನ್ನು ತಪ್ಪಿಸಲು ಹೋರಾಡಲೇ ಬೇಕಿದೆ. ಉತ್ತರ ಕನ್ನಡದಲ್ಲಿ ಪೀಠ ಸ್ಥಾಪನೆ ಅಸಾಧ್ಯವಾದರೆ ಉತ್ತರ ಕನ್ನಡ ಧಾರವಾಡ ಪೀಠದ ನ್ಯಾಯಾಧಿಕರಣಕ್ಕೇ ಇರಲಿ, ಮತ್ತೆ ಮುಂದಿನ ದಿನಗಳಲ್ಲಿ ವಾರಕ್ಕೆ 2- 3 ದಿನ ಸಂಚಾರಿ ಪೀಠವನ್ನು ಉತ್ತರ ಕನ್ನಡದಲ್ಲಿ ಸ್ಥಾಪಿಸಿದರೆ ಆಯಿತು ಎನ್ನುವುದು ಉತ್ತರ ಕನ್ನಡದವರ ಅಂಬೋಣವಾಗಿದೆ. ಈಗಾಗಲೇ ಶಿವಮೊಗ್ಗದವರೂ ಸಹ ಮಂಗಳೂರಿನಲ್ಲಿ ಪೀಠ ಬೇಡ ಎಂದು ಹೋರಾಟಕ್ಕೆ ಇಳಿದಾಗಿದೆ. ಉತ್ತರ ಕನ್ನಡವೂ ಇಳಿಯಲೇಬೇಕಾದ ಅನಿವಾರ್ಯತೆ ಹೊಂದಿದೆ. ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ, ಕರಾವಳಿ ಭಾಗದ ಭೌಗೋಳಿಕ ಪರಿಚಯವನ್ನು ಹೊಂದಿರುವ, ರಾಜ್ಯಪಾಲರೂ ಆಗಿರುವ ಗೌರವಾನ್ವಿತ ನ್ಯಾಯಮೂರ್ತಿ ನಜೀರ್‌ರವರು ಉತ್ತರ ಕನ್ನಡಿಗರ ಸಮಸ್ಯೆಯನ್ನು ಗಮನಕ್ಕೆ ತೆಗೆದುಕೊಂಡರೆ ಮತ್ತು ಅವರು ಮಧ್ಯ ಪ್ರವೇಶಿಸಿ ಉತ್ತರ ಕನ್ನಡಕ್ಕೆ ನ್ಯಾಯ ಒದಗಿಸಿದರೆ ಅವರಿಗೆ ಸದಾ ಉತ್ತರ ಕನ್ನಡ ಚಿರಋಣಿ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:152

ಪ.ಬಂಗಾಳದಲ್ಲಿದ್ದ ಅಕ್ರಮ ವಲಸಿಗರನ್ನು ಮರಳಿ ಬಾಂಗ್ಲಾಕ್ಕೆ ದಬ್ಬಿದ ಬಿಎಸ್‌ಎಫ್ | ಅವರು ನಮ್ಮವರಲ್ಲ, ಸ್ವೀಕರಿಸುವುದಿಲ್ಲ ಎನ್ನುತ್ತಿದೆ ನೆರೆರಾಷ್ಟ್ರ

ಸದ್ಯ ಗಡಿಪ್ರದೇಶದಲ್ಲಿರುವ ಭಾರತೀಯರಿಂದಲೇ ನೆರೆರಾಷ್ಟ್ರದ ವಲಸಿಗರಿಗೆ ಊಟದ ವ್ಯವಸ್ಥೆ, ನಿರಾಶ್ರಿತರಾಗಿದ್ದಾರೆ ಬಾಂಗ್ಲಾ ಅಕ್ರಮವಾಸಿಗಳು

ತನ್ನದೇ ಪ್ರಜೆಗಳನ್ನು ಬೇಡವೆನ್ನುತ್ತಿದೆ ಬಾಂಗ್ಲಾದೇಶ

ದೆಹಲಿ: ಪಶ್ಚಿಮ ಬಂಗಾಳ ಹಾಗೂ ಅಸ್ಸಾಮ್‌ನಲ್ಲಿ ಅಕ್ರಮ ವಲಸಿಗರ ಗಡೀಪಾರು ಪ್ರಕ್ರಿಯೆ ಆರಂಭವಾದ ಬಳಿಕ ಭಾರತ- ಬಾಂಗ್ಲಾದೇಶ ನಡುವೆ ಗಡಿಯಲ್ಲಿ ಉದ್ವಿಗ್ನತೆ ಉಂಟಾಗಿದೆ. ಸತತ ಮೂರನೇ ದಿನವೂ ಭಾರತ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹಾಗೂ ಬಾಂಗ್ಲಾದೇಶ ಗಡಿ ರಕ್ಷಣಾ ಪಡೆಗಳ (ಬಿಜಿಬಿ) ನಡುವೆ ಸಂಘರ್ಷ ತಲೆದೋರಿದೆ. ದೇಶದಲ್ಲಿರುವ ಅಕ್ರಮ ಬಾಂಗ್ಲಾ ವಲಸಿಗರನ್ನು ಅವರ ದೇಶಕ್ಕೆ ರವಾನಿಸುವ ಕಾರ್ಯ ಚುರುಕು ಪಡೆಯುತ್ತಿದ್ದಂತೆಯೇ, ಇತ್ತ ಬಾಂಗ್ಲಾದೇಶವು ತನ್ನದೇ ಪ್ರಜೆಗಳನ್ನು ದೇಶದೊಳಗೆ ಬಿಟ್ಟುಕೊಳ್ಳಲು ಹಿಂದೇಟು ಹಾಕುತ್ತಿದೆ.

ಇದು ಗಡಿಯಲ್ಲಿ ಹೊಸ ಸಮಸ್ಯೆ ಉದ್ಭವವಾಗಲು ಕಾರಣವಾಗಿದೆ. ಈ ಪ್ರಕ್ರಿಯೆಯಲ್ಲಿ ಅತಂತ್ರರಾಗಿರುವ ವಲಸಿ ಗರಿಗೆ ಇದೀಗ ಗಡಿಯಲ್ಲಿನ ಭಾರತದ ಸ್ಥಳೀಯರು ಊಟ, ವಸತಿ ಕಲ್ಪಿಸಿದ್ದಾರೆ ಎಂದು ವರದಿಯಾಗಿದೆ. ಬಾಂಗ್ಲಾ ಮೂಲದ 12 ಮಂದಿಯ ಗಡೀಪಾರು ಸಂಬಂಧ ನಡೆದ ಸರಣಿ ಸಭೆಗಳು ವಿಫಲವಾಗಿವೆ. ಉಭಯ ದೇಶಗಳ ಗಡಿ ಭದ್ರತಾ ಪಡೆಗಳ ನಡುವೆ ಮೂರು ಸುತ್ತಿನ ಧ್ವಜಸಭೆ ಹೊರತಾಗಿಯೂ ಬಿಕ್ಕಟ್ಟು ಇತ್ಯರ್ಥಗೊಂಡಿಲ್ಲ. ದೇಶದ ಪ್ರಜೆಗಳನ್ನೇ ಸ್ವೀಕರಿಸಲು ಬಾಂಗ್ಲಾದೇಶ ನಿರಾಕರಿಸಿದೆ. ಪರಿಣಾಮ 21 ಮಂದಿ ಬಾಂಗ್ಲಾ ನಾಗರಿಕರು ತ್ರಿಶಂಕು ಸ್ಥಿತಿಗೆ ಸಿಲುಕಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ನೆಲೆಸಿದ್ದ 12 ಮಂದಿ ಅಕ್ರಮ ವಲಸಿಗರನ್ನು ಗುರುತಿಸಿದ್ದ ಸರಕಾರ ಗಡೀಪಾರು ಮಾಡಲು ಬಿಎಸ್‌ಎಫ್ ನಿಯಂತ್ರಣಕ್ಕೆ ವಹಿಸಿತು. ನಾಡಿಯಾ ಜಿಲ್ಲೆಗೆ ಹೊಂದಿಕೊಂಡ ಗಡಿ ಮೂಲಕ ಬಾಂಗ್ಲಾದೇಶಕ್ಕೆ ರವಾನಿಸಲಾಯಿತು.

ಅಸ್ಸಾಮ್ ಗಡಿಯಲ್ಲೂ ಬಾಂಗ್ಲಾದೇಶ ತಗಾದೆ

ಈ ಮಧ್ಯೆ ಅಸ್ಸಾಮ್‌ನ ಮಂಕಾಚಾರ್ ಗಡಿಪ್ರದೇಶದಲ್ಲೂ ಭಾರತ- ಬಾಂಗ್ಲಾದೇಶದ ನಡುವೆ ಉದ್ವಿಗ್ನತೆ ಮುಂದುವರಿದಿದೆ. 'ನೋ-ಮ್ಯಾನ್ಸ್ ಲ್ಯಾಂಡ್' ಪ್ರದೇಶದಲ್ಲಿ ಸಿಲುಕಿರುವ ಒಂಬತ್ತು ಮಂದಿ ಬಾಂಗ್ಲಾದೇಶಿ ನಾಗರಿಕರ ವಿಷಯವಾಗಿ ಬಿಕ್ಕಟ್ಟು ತಲೆದೋರಿದೆ. ಸಮಸ್ಯೆ ಇತ್ಯರ್ಥಕ್ಕೆ ಬಿಎಸ್‌ಎಫ್-ಬಿಜಿಬಿ ನಡುವೆ ಭಾನುವಾರ ನಡೆದ ಸಂಧಾನಸಭೆ ವಿಫಲವಾಗಿದೆ. ವಲಸಿಗರ ಗಡೀ ಪಾರು ಪ್ರಕ್ರಿಯೆ ಮುಂದು ವರಿಸುವ ಸಂಬಂಧ ಮತ್ತೊಂದು ಸುತ್ತಿನ ಸಭೆ ನಡೆಸಲು ನಿರ್ಧರಿಸಲಾಗಿದೆ.

ಬಿಎಸ್‌ಎಫ್ ವರ್ಸಸ್ ಬಿಜಿಬಿ: ಗಡೀಪಾರು ಪ್ರಕ್ರಿಯೆಗೆ ಅಡ್ಡಿಪಡಿಸಿದ ಬಿಜಿಬಿ, ಭಾರತ ಗಡೀಪಾರು ಮಾಡಿದ ನಾಗರಿಕರು ಭಾರತೀಯರು ಎಂದು ಹೇಳಿ ಮರಳಿ ಹಿಂದಕ್ಕೆ ಕಳಿಸಲು ಯತ್ನಿಸಿತು. ಗಡಿ ದಾಟಲೆತ್ನಿಸಿದ ವಲಸಿಗರನ್ನು ಬಿಎಸ್‌ಎಫ್ ತಡೆಯಿತು. ಈ ವೇಳೆ ಬಿಎಸ್‌ಎಫ್ ಹಾಗೂ ಬಿಜಿಬಿ ನಡುವೆ ಘರ್ಷಣೆ ನಡೆಯಿತು. ಬಿಕ್ಕಟ್ಟು ಇತ್ಯರ್ಥಗೊಳ್ಳದ ಹಿನ್ನೆಲೆಯಲ್ಲಿ 12 ಮಂದಿ ಬಾಂಗ್ಲಾ ನಾಗರಿಕರು ಗಡಿಗೆ ಹೊಂದಿಕೊಂಡ ರಾಣಿನಗರದ ಭತ್ತದ ಗದ್ದೆಯಲ್ಲಿ ವಾಸ್ತವ್ಯ ಹೂಡಿದ್ದಾರೆ.

ಅಡಕತ್ತರಿಯಲ್ಲಿ ಸಿಲುಕಿದ ವಲಸಿಗರಿಗೆ ಸ್ಥಳೀಯರು ತಾತ್ಕಾಲಿಕ ಊಟ, ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಭಾರತ ತನ್ನ ದೇಶದ ಪ್ರಜೆಗಳನ್ನು ಬಾಂಗ್ಲಾದೇಶಕ್ಕೆ ದೂಡಿದೆ. ಗಡೀಪಾರಾದವರು ನಮ್ಮ ಪ್ರಜೆಗಳಲ್ಲ ಎಂದು ಬಿಜಿಬಿ ಹೇಳಿದೆ. ಬಾಂಗ್ಲಾ ಆರೋಪ ನಿರಾಕರಿಸಿರುವ ಬಿಎಸ್ ಎಫ್, ಅಕ್ರಮವಾಗಿ ಗಡಿ ದಾಟಿ ಬಂದವರನ್ನು ಮಾತ್ರ ಗಡೀಪಾರು ಮಾಡಲಾಗಿದೆ. ಮೂಲತಃ ಭಾರತೀಯರಲ್ಲ ಎಂದು ಸ್ಪಷ್ಟಪಡಿಸಿದೆ.

ಸಮಾಚಾರ ಸಣ್ಣದಲ್ಲ

ಜಿ7 ಸಭೆ: ಇಂದು ಮೋದಿ, ಟ್ರಂಪ್ ಮಹತ್ವದ ಮಾತುಕತೆ

ದೆಹಲಿ: ಮಂಗಳವಾರ ನಡೆದ ಜಿ7 ನಾಯಕರ ಸಭೆಯಲ್ಲಿ ಪ್ರಧಾನಿ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂಕ್ಷಿಪ್ತ ಸಂಭಾಷಣೆ ನಡೆಸಿದರು. 16 ತಿಂಗಳಲ್ಲಿ ಮೊದಲ ಬಾರಿಗೆ ಮುಖಾಮುಖಿಯಾಗಿ ಭೇಟಿ ಯಾದ ಇಬ್ಬರೂ ಶುಭಾಶ ಯಗಳನ್ನು ವಿನಿಮ ಯ ಮಾಡಿಕೊಂಡರು. ಈ ವರ್ಷದ ಪ್ರಬಲ ಜಿ7 ಶೃಂಗಸಭೆಯ ಸ್ಥಳವಾದ ಫ್ರಾನ್ಸ್‌ನ ಎವಿಯನ್-ಲೆಸ್ -ಬೈನ್ಸ್‌ನಲ್ಲಿ ಮೋದಿ ಮತ್ತು ಟ್ರಂಪ್ ಒಟ್ಟಾದರು. ಸಭೆಯ ಹೊರತಾಗಿ ಬುಧವಾರ ಪೂರ್ಣ ದ್ವಿಪಕ್ಷೀಯ ಸಭೆ ನಡೆಯಲಿದೆ. ಕಳೆದ ತಿಂಗಳು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಭಾರತಕ್ಕೆ ಭೇಟಿ ನೀಡಿದ ನಂತರ, ಎರಡೂ ಕಡೆಯವರು ಈಗ ದ್ವಿಪಕ್ಷೀಯ ಸಂಬಂಧಗಳನ್ನು ಪುನರ್ನಿರ್ಮಿಸುವ ಬಗ್ಗೆ ಗಮನಹರಿಸುತ್ತಿವೆ. ವಾಷಿಂಗ್ಟನ್ ಭಾರತದ ಮೇಲೆ ಭಾರೀ ಸುಂಕಗಳನ್ನು ವಿಧಿಸಿದ ನಂತರ, ಕಳೆದ ಮೇನಲ್ಲಿ ಭಾರತ-ಪಾಕಿಸ್ತಾನ ಯುದ್ಧ ನಿಲ್ಲಲು ತಾನೇ ಕಾರಣ ಎಂದು ಟ್ರಂಪ್ ಪದೇಪದೇ ಹೇಳಿಕೊಂಡ ನಂತರ ಎರಡೂ ದೇಶಗಳ ಸಂಬಂಧ ತುಸು ಹದಗೆಟ್ಟಿತ್ತು. ಇದನ್ನು ಸರಪಡಿಸುವುದು ಸೇರಿ, ಹತ್ತಾರು ವಿಚಾರಗಳು ಚರ್ಚೆಗೆ ಬರಲಿವೆ. ಎರಡೂ ದೇಶಗಳ ನಡುವೆ ವಾಣಿಜ್ಯ ಒಪ್ಪಂದಗಳನ್ನು ಮಾಡಿಕೊಳ್ಳುವ ನಿಟ್ಟಿನಲ್ಲೂ ಮಾತುಕತೆ ನಡೆಯಬಹುದು.

ಟ್ರಂಪ್ ಕೊಲೆಗಾರ: ಕೇಜ್ರಿವಾಲ್ ಆಕ್ರೋಶ

ದೆಹಲಿ: ಅಮೆರಿಕದ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟಿರುವ ಘಟನೆಗೆ

ಸಂಬಂಧಿಸಿ ಆಮ್ ಆದ್ಮಿ ಪಕ್ಷದ ನಾಯಕ ಅರವಿಂದ್ ಕೇಜ್ರಿ ವಾಲ್ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿ ಸಿದ್ದಾರೆ. ಟ್ರಂಪ್ ಒಬ್ಬ ಕೊಲೆಗಾರ, ಅವರು ಒಮಾನ್ ಕರಾವಳಿಯಲ್ಲಿ ಭಾರತೀಯರ ಜೀವಹಾನಿಗೆ ಉತ್ತರಿಸಲೇಬೇಕು. ನೀವು ಒಬ್ಬ ನಿರ್ದಯ ವ್ಯಕ್ತಿ ಎಂದು ವಾಗ್ದಾಳಿ ನಡೆಸಿದ್ದಾರೆ. ಅದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಪ್ರಶ್ನಿಸಿರುವ ಅವರು, ಭಾರತೀಯರ ಜೀವಹಾನಿಯಂತಹ ಗಂಭೀರ ವಿಷಯದಲ್ಲಿ ಕೇಂದ್ರ ಸರ್ಕಾರದ ಪ್ರತಿಕ್ರಿಯೆ ಸಮರ್ಪಕವಾಗಿಲ್ಲ ಎಂದು ಆರೋಪಿಸಿದ್ದಾರೆ. ಮೂವರು ಭಾರತೀಯರು ಮೃತಪಟ್ಟಿದ್ದರೂ ಪ್ರಧಾನಿ ಮೋದಿ ಮೌನವಾಗಿರುವುದು ದುರದೃಷ್ಟಕರ. ಶೀಘ್ರದಲ್ಲೇ ಭಾರತಕ್ಕೆ ಬಲಿಷ್ಠ ನಾಯಕತ್ವ ದೊರೆಯಲಿದೆ. ಭಾರತೀಯರ ಜೀವಕ್ಕೆ ಹಾನಿ ಮಾಡಿದವರನ್ನು ಹೊಣೆಗಾರರನ್ನಾಗಿ ಮಾಡುವ ಸರ್ಕಾರ ದೇಶಕ್ಕೆ ಬೇಕಿದೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಚೀನಾದ ಕ್ವಿಂಗ್‌ಹೈನಲ್ಲಿ 6.3 ತೀವ್ರತೆ ಭೂಕಂಪ

ಬೀಜಿಂಗ್: ವಾಯುವ್ಯ ಚೀನಾದ ಕ್ವಿಂಗ್‌ಹೈ ಪ್ರಾಂತ್ಯದ ಸಮೀಪದ ಹೈಕ್ಸಿ ಪ್ರದೇಶದಲ್ಲಿ ಮಂಗಳವಾರ ಸಂಜೆ 6.3 ತೀವ್ರತೆಯ ಭೂಕಂಪ ಸಂಭವಿಸಿದೆ. ವಿರಳ ಜನಸಂಖ್ಯೆ ಹೊಂದಿರುವ ಎತ್ತರದ ಪ್ರದೇಶದಲ್ಲಿ ಭೂಕಂಪ ಸಂಭವಿಸಿದ್ದು, ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಚೀನಾದ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಚೀನಾ ಭೂಕಂಪ ಜಾಲ ಕೇಂದ್ರದ ಪ್ರಕಾರ, ಸ್ಥಳೀಯ ಸಮಯ (ಬೀಜಿಂಗ್ ಸಮಯ) ಸಂಜೆ 5:06ಕ್ಕೆ ಭೂಕಂಪ ಸಂಭವಿಸಿದೆ. ರಾಯಿಟರ್ಸ್ ವರದಿ ಪ್ರಕಾರ, ಸಾವುನೋವುಗಳು ಅಥವಾ ಹಾನಿಯ ಬಗ್ಗೆ ತಕ್ಷಣದ ವರದಿಗಳು ಬಂದಿಲ್ಲ. ಹತ್ತಿರದ ಸಮುದಾಯಗಳು ಮತ್ತು ಮೂಲಸೌಕರ್ಯಗಳ ಮೇಲೆ ಯಾವುದೇ ಪರಿಣಾಮದ ಪ್ರಮಾಣವನ್ನು ನಿರ್ಧರಿಸಲು ಸ್ಥಳೀಯ ಅಧಿಕಾರಿಗಳು ಮೌಲ್ಯಮಾಪನಗಳನ್ನು ಪ್ರಾರಂಭಿಸಿದ್ದಾರೆ.

ಟ್ರಂಪ್ ಮನ ಅರಿಯಲು ಇರಾನ್‌ನಿಂದ ಮನೋ ವೈದ್ಯರ ತಂಡ ರಚನೆ

ಟೆಹರಾನ್: ಮಧ್ಯಪ್ರಾಚ್ಯದಲ್ಲಿ ಯುದ್ಧವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿರುವ ಅಮೆರಿಕ-ಇರಾನ್ 14 ಅಂಶಗಳ ಶಾಂತಿ ಒಪ್ಪಂದ

ಮಾತುಕತೆಯ ಸಮಯದಲ್ಲಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅನಿಯಮಿತ ನಡೆವಳಿಕೆಯನ್ನು ನಿಭಾಯಿಸಲು, ಇರಾನ್ ಮನೋವೈದ್ಯಕೀಯ ವೃತ್ತಿಪರರ ಸಹಾಯ ಪಡೆದುಕೊಂಡಿದೆ ಎಂದು ವರದಿಯಾಗಿದೆ. ಡ್ರಾಪ್ ಸೈಟ್ ವರದಿಯ ಪ್ರಕಾರ, ಟ್ರಂಪ್ ಅವರ ಮಾನಸಿಕ ಸ್ಥಿತಿಯನ್ನು ಅರಿಯಲು ಮತ್ತು ಪ್ರಾದೇಶಿಕ ಮಧ್ಯವರ್ತಿ ಗಳು ಅಮೆರಿಕ ನಾಯಕನಿಗೆ ರವಾನಿಸಿದ ಸಂದೇಶ ಗಳನ್ನು ರೂಪಿಸುವಲ್ಲಿ, ಇರಾನ್ ಸಮಾಲೋಚಕರಿಗೆ ಸಹಾಯ ಮಾಡಲು ಇಬ್ಬರು ಹಿರಿಯ ಮನಶ್ಶಾಸ್ತ್ರಜ್ಞರ ತಂಡವನ್ನು ನಿಯೋಜಿ ಸಲಾಗಿದೆ. ಡೊನಾಲ್ಡ್ ಟ್ರಂಪ್ ಅವರ ನಿರಂತರ ಕೋಪವನ್ನು ಉತ್ತಮವಾಗಿ ನಿಭಾಯಿಸಲು, ಈ ಅಸಾಮಾನ್ಯ ತಂತ್ರವನ್ನು ಬಳಸಲಾಗಿದೆ.

{ ನರೇಂದ್ರ ಮೋದಿ } ಪ್ರಧಾನಮಂತ್ರಿ

ಫ್ರಾನ್ಸ್‌ನ ಎವಿಯನ್‌ನಲ್ಲಿನ ಜಿ7 ಸಭೆಯಲ್ಲಿ ಹೊಸ ಪಾಲುದಾರಿಕೆಯನ್ನು ಸ್ಥಾಪಿಸುವುದು, ಅಂತಾರಾಷ್ಟ್ರೀಯ ಬಾಂಧವ್ಯವನ್ನು ಮತ್ತೆ ಕಟ್ಟುವುದು ಎಂಬ ವಿಚಾರದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಮಂಡಿಸಿದೆ. ಹಿಂದೆಂದಿಗಿಂತೂ ಇಂದು ವಿಶ್ವ ಒಳಗೊಳಗೇ ಗರಿಷ್ಠ ಸಂಬಂಧ ಹೊಂದಿದೆ, ಅವಲಂಬಿತವಾಗಿದೆ. ಇದು ಈಗ ಮಹತ್ವದ ಸಂಗತಿಯಾಗಿದೆ. ಯಾವುದೇ ಭಾಗೀದಾರಿಕೆಯನ್ನೂ ಪರಸ್ಪರ ನಂಬಿಕೆ ಆಧಾರದಲ್ಲೇ ಕಟ್ಟಲು ಸಾಧ್ಯ.

ಲಾಸ್ ಏಂಜಲೀಸ್‌ನ ಎಡ್ವರ್ಡ್ಸ್ ವಾಯುನೆಲೆಯಲ್ಲಿ ಟೇಕ್‌ಆಫ್ ನಂತರ ನೆಲಕ್ಕೆ

ಅಮೆರಿಕದ ಬಿ-52 ಬಾಂಬರ್ ಯುದ್ಧ ವಿಮಾನ ಪತನ, 8 ಮಂದಿ ದುರ್ಮರಣ

ವಾಷಿಂಗ್ಟನ್: ಅಮೆರಿಕ ವಾಯುಪಡೆಯ ಶಕ್ತಿಶಾಲಿ ಬಿ-52 ಬಾಂಬರ್ ಪತನಗೊಂಡಿದ್ದು, ವಿಮಾನದಲ್ಲಿದ್ದ ಎಲ್ಲಾ 8 ಮಂದಿ ಸಾವನ್ನಪ್ಪಿರುವ ಘಟನೆ ಕ್ಯಾಲಿಫೋರ್ನಿಯಾದಲ್ಲಿ ಸೋಮವಾರ ನಡೆದಿದೆ. ವಿಮಾನ ಅಪಘಾತವು ಲಾಸ್ ಏಂಜಲೀಸ್‌ನ ಉತ್ತರಕ್ಕೆ ಸುಮಾರು 95 ಕಿಮೀ ದೂರದಲ್ಲಿ, ಎಡ್ವರ್ಡ್ಸ್ ವಿಮಾನ ನೆಲೆಯಲ್ಲಿ ಸಂಭವಿಸಿದೆ. ವಿಮಾನ ಪತನಗೊಂಡ ಬೆನ್ನಲ್ಲೇ ಸ್ಥಳದಲ್ಲಿ ಭಾರೀ ಬೆಂಕಿ ಹಾಗೂ ದಟ್ಟ ಹೊಗೆ ಆವರಿಸಿರುವ ದೃಶ್ಯಗಳು ಸೋಶಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿವೆ.

ದಕ್ಷಿಣ ಕ್ಯಾಲಿಫೋರ್ನಿಯಾದ ಮೊಜಾವೆ ಮರುಭೂಮಿಯಲ್ಲಿರುವ ಎಡ್ವರ್ಡ್ಸ್ ವಾಯು ನೆಲೆಯಲ್ಲಿ ಮಧ್ಯಾಹ್ನ ಟೇಕ್-ಆಫ್ ಆದ ಸ್ವಲ್ಪ ಸಮಯದಲ್ಲೇ ವಿಮಾನ ದುರಂತಕ್ಕೀಡಾಗಿದೆ. ನಿತ್ಯ ಪರೀಕ್ಷಾ ಕಾರ್ಯಾಚರಣೆಗಾಗಿ 8 ಜನರನ್ನು ಹೊತ್ತೊಯ್ಯುತ್ತಿದ್ದ ವಾಯುಪಡೆಯ ಸ್ಟ್ರಾಟೊ ಫೋರ್ಟ್ರೆಸ್ ಹೆಸರಿನ ಬಿ-52 ಬಾಂಬರ್, ಸೋಮವಾರ ಬೆಳಗ್ಗೆ 11:20ರ ಸುಮಾರಿಗೆ ಟೇಕ್ ಆಫ್ ಆದ ಸ್ವಲ್ಪ ಸಮಯದಲ್ಲೇ ಅಪಘಾತಕ್ಕೀಡಾಗಿದೆ.

ಈ ಅಪಘಾತದಲ್ಲಿ ಬದುಕುಳಿಯುವ ಯಾವುದೇ ಸಾಧ್ಯತೆಗಳಿಲ್ಲ ಎಂದು ಎಡ್ವರ್ಡ್ಸ್ ನೆಲೆಯ ವಾಯುಪಡೆ ಹೇಳಿದೆ.

ಘಟನೆ ತಿಳಿಯುತ್ತಿದ್ದಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ತುರ್ತು ಕಾರ್ಯಾಚರಣೆ ಕೈಗೊಂಡಿದ್ದಾರೆ. ತಾತ್ಕಾಲಿಕವಾಗಿ ವಿಮಾನ ನಿಲ್ದಾಣವನ್ನು ಬಂದ್ ಮಾಡಲಾಗಿದೆ. ಅಲ್ಲದೇ ಈ ಮಾರ್ಗದಲ್ಲಿ ಬರುವ ಎಲ್ಲಾ ವಿಮಾನಗಳನ್ನ ಬೇರೆಡೆಗೆ ತಿರುಗಿಸಲಾಗಿದೆ.

8 ಎಂಜಿನ್‌ಗಳಿರುವ ಬಿ-52 ಬಾಂಬರ್ ವಿಮಾನವು ಪರಮಾಣು ಮತ್ತು ಸಾಂಪ್ರದಾಯಿಕ ಬಾಂಬ್‌ಗಳನ್ನು ಸಾಗಿಸಲು ವಿನ್ಯಾಸಗೊಳಿಸಲಾಗಿತ್ತು. ಇದು ಟೇಕ್ ಆಫ್ ಆದ ಕೆಲವೇ ಗಂಟೆಗಳ ಬಳಿಕ ಎಡ್ವರ್ಡ್ಸ್ ವಾಯುನೆಲೆಯ ರನ್‌ವೇಗೆ ಅಪ್ಪಳಿಸಿದೆ ಎಂದು ವಾಯುಪಡೆಯ ಕರ್ನಲ್ ಜೇಮ್ಸ್ ಹೇಯ್ಸ್ ತಿಳಿಸಿದ್ದಾರೆ. ಈ ವಿಮಾನವು ರಾಡಾರ್ ಆಧುನೀಕರಣ ಕಾರ್ಯಕ್ರಮದ ಭಾಗವಾಗಿತ್ತು. ಇದರಲ್ಲಿ ಸರಕಾರಿ ಹಾಗೂ ಸೇನಾ ಸಿಬ್ಬಂದಿ ಸೇರಿ 8 ಮಂದಿ ಪ್ರಯಾಣಿಸುತ್ತಿದ್ದರು. ವಿಮಾನವು ಸಂಪೂರ್ಣ ನಾಶವಾಗಿದ್ದು, ಒಳಗಿದ್ದವರು ಬದುಕುಳಿಯುವ ಸಾಧ್ಯತೆಯೇ ಇಲ್ಲ ಎಂದು ಮೂಲಗಳು ಹೇಳಿವೆ. ಅಪಘಾತಕ್ಕೆ ಇನ್ನೂ ನಿಖರ ಕಾರಣ ತಿಳಿದುಬಂದಿಲ್ಲ, ಈ ಬಗ್ಗೆಯೂ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಹಲವು ಹಂತದ ತಪಾಸಣೆಯಿಂದ ಒತ್ತಡ: ಅಣ್ಣಾಮಲೈ

ನೀಟ್ ಪರೀಕ್ಷೆ ತಪಾಸಣೆ ನೀಟಾಗಿಲ್ಲ: ಅಣ್ಣಾಮಲೈ ವಿರೋಧ, ಕೇಂದ್ರದ ಭದ್ರತಾ ವ್ಯವಸ್ಥೆ ಮೆಚ್ಚಬೇಕು: ಬಿಜೆಪಿ

ಚೆನ್ನೈ: ಇದೇ ಜೂನ್ 21ರಂದು ನಡೆಯಲಿರುವ ನೀಟ್ ಮರುಪರೀಕ್ಷೆಗೆ ಉನ್ನತ ಮಟ್ಟದ, ವರ್ಗೀಕೃತ, ಸೇನಾದರ್ಜೆಯ ಭದ್ರತೆ ಮತ್ತು ಎಐ ಮುಖ ಗುರುತಿಸುವಿಕೆ ವ್ಯವಸ್ಥೆಗಳು, ಅಭ್ಯರ್ಥಿಗಳ ಮೇಲೆ

ಈಗಾಗಲೇ ಹೆಚ್ಚುತ್ತಿರುವ ಪರೀಕ್ಷಾ ಒತ್ತಡವನ್ನು ಹೆಚ್ಚಿಸುತ್ತವೆ ಮತ್ತು ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತವೆ ಎಂದು ತಮಿಳುನಾಡು ಬಿಜೆಪಿ ಮಾಜಿ ಮುಖ್ಯಸ್ಥ ಕೆ.ಅಣ್ಣಾಮಲೈ ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದನ್ನು ತಮಿಳುನಾಡು ಬಿಜೆಪಿ ನಾಯಕ ವಿನೋದ್ ಸೆಲ್ವಂ ವಿರೋಧಿಸಿದ್ದಾರೆ.

ಇತ್ತೀಚೆಗಷ್ಟೇ ಬಿಜೆಪಿ ತೊರೆದಿರುವ ಅಣ್ಣಾಮಲೈ, ಕೇಂದ್ರ ಸರ್ಕಾರದ ನೀಟ್ ಮರುಪರೀಕ್ಷೆ ನೀತಿಯನ್ನು ಟೀಕಿಸುವ ಮೂಲಕ ಗಮನ ಸೆಳೆದಿದ್ದಾರೆ. ಕೇಂದ್ರದ ತ್ರಿಭಾಷಾ ಸೂತ್ರವನ್ನೂ ಅವರು ವಿರೋಧಿಸಿದ್ದಾರೆ. ಅವರು ನಿಧಾನಕ್ಕೆ ಬಿಜೆಪಿ ವಿರೋಧಿ ಬಣ ಸೇರಿಕೊಳ್ಳುತ್ತಿದ್ದಾರಾ ಎಂಬ ಪ್ರಶ್ನೆಗಳು ಮೂಡಿವೆ. ಕಳೆದ ಮೇ ತಿಂಗಳಲ್ಲಿ ನಡೆದ ನೀಟ್ ಪರೀಕ್ಷೆಯನ್ನು, ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಹಿನ್ನೆಲೆಯಲ್ಲಿ ರದ್ದುಗೊಳಿಸಲಾಗಿತ್ತು. ಈಗ ನಡೆಯಲಿರುವ ಮರುಪರೀಕ್ಷೆಗೆ ಕೇಂದ್ರ ಸರ್ಕಾರ ಕಟ್ಟುನಿಟ್ಟಿನ ಕ್ರಮಕೈಗೊಂಡಿದೆ.

ಅಣ್ಣಾಮಲೈ ವಾದವೇನು?: ನೀಟ್ ಪರೀಕ್ಷೆ 2026 ರದ್ದು ಮತ್ತು ಮರುಪರೀಕ್ಷೆಗಾಗಿ ಕೇಂದ್ರ ಸರ್ಕಾರ ಸೇನಾ ದರ್ಜೆಯ ಭದ್ರತೆಯ ನಿರ್ಧಾರವನ್ನು ಅಣ್ಣಾಮಲೈ ಟೀಕಿಸಿದ್ದಾರೆ. ಜೂನ್ 21, 2026ರಂದು ನಿಗದಿಯಾಗಿರುವ ನೀಟ್ ಮರುಪರೀಕ್ಷೆಗೆ ಶಿಕ್ಷಣ ಸಚಿವಾಲಯ ಮಾಡಿರುವ ವ್ಯವಸ್ಥೆಗಳು ಪ್ರಶ್ನಾರ್ಹ ಎಂದು ಅಣ್ಣಾ ಹೇಳಿದ್ದಾರೆ. ಹೆಚ್ಚುವರಿ ಭದ್ರತಾ ಕ್ರಮಗಳನ್ನು ಮತ್ತು ಹಲವು ಹಂತದ ಪರಿಶೀಲನೆಯನ್ನು ಜಾರಿಗೆ ತರುವ ಮೂಲಕ ಪತ್ರಿಕೆ ಸೋರಿಕೆಯನ್ನು ತಡೆಗಟ್ಟಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ಮೆಚ್ಚುತ್ತಾರೆ. ಆದರೆ ಪ್ರವೇಶದ ಮೊದಲು ಪರಿಶೀಲನೆಯಲ್ಲಿ ಹೆಚ್ಚಳ, ವಿಸ್ತೃತ ತಪಾಸಣೆ ಮತ್ತು ಒಟ್ಟಾರೆ ಪರೀಕ್ಷಾ ಸಮಯವನ್ನು 180 ನಿಮಿಷಗಳಿಂದ 195 ನಿಮಿಷಗಳಿಗೆ ಹೆಚ್ಚಿಸುವುದು, ವಿದ್ಯಾರ್ಥಿಗಳಲ್ಲಿ ಮನೆ ಮಾಡಿರುವ ಪರೀಕ್ಷಾ ಒತ್ತಡವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅಣ್ಣಾಮಲೈ ಅಭಿಪ್ರಾಯಪಟ್ಟಿದ್ದಾರೆ. ಸೋರಿಕೆಯನ್ನು ತಡೆಯಲು ಸರ್ಕಾರ ಕ್ರಮಗಳನ್ನು ತೆಗೆದುಕೊಂಡಿದ್ದರೂ, ವಿದ್ಯಾರ್ಥಿ ಗಳ ಮೇಲೆ ಹೇರಿರುವ ಹೆಚ್ಚುವರಿ ಹೊರೆಯನ್ನು ಅದು ಮರೆತಿದೆ. ಇದು ನಮ್ಮ ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ಉದ್ದೇಶ ಮತ್ತು ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡುವ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಗುರಿಯನ್ನು ಕರಗಿಸುತ್ತದೆ ಎಂದು ಅಣ್ಣಾಮಲೈ ಅಸಮಾಧಾನ ಹೊರಹಾಕಿದ್ದಾರೆ.

ಪರೀಕ್ಷೆಗೆ ಇಷ್ಟೆಲ್ಲಾ ವ್ಯವಸ್ಥೆಗಳ ಹೊರತಾಗಿಯೂ, ಪ್ರವೇಶ ಪತ್ರ ಡೌನ್ಲೋಡ್ ಮಾಡುವಲ್ಲಿ ಸಮಸ್ಯೆಗಳಿವೆ ಎಂದು ಅಣ್ಣಾಮಲೈ ಎಚ್ಚರಿಸಿದ್ದಾರೆ.

ಬಿಜೆಪಿ ತಿರುಗೇಟು: ಇನ್ನು ಅಣ್ಣಾಮಲೈ ಅವರ ನೀಟ್ ಮರುಪರೀಕ್ಷೆ ಕುರಿತ ಹೇಳಿಕೆಗೆ ತಿರುಗೇಟು ನೀಡಿರುವ ಬಿಜೆಪಿ, ಯಾವುದೇ ಗೊಂದಲಗಳಿಗ ಆಸ್ಪದ ಕೊಡದಂತೆ ಪರೀಕ್ಷೆಯನ್ನು ಆಯೋಜಿಸುತ್ತಿರುವುದಕ್ಕೆ ನಾವೆಲ್ಲರೂ ಹೆಮ್ಮೆಪಡಬೇಕು ಎಂದು ಹೇಳಿದೆ.

ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಬಿಜೆಪಿ ನಾಯಕ ವಿನೋದ್ ಸೆಲ್ವಂ, ಪ್ರತಿ ವರ್ಷ ಚೀನಾದ ಗಾವೊಕಾವೊ ವಿಶ್ವದ ಅತ್ಯಂತ ಕಟ್ಟುನಿಟ್ಟಾದ ಪರೀಕ್ಷಾ ಶಿಷ್ಟಾಚಾರಗಳ ಅಡಿಯಲ್ಲಿ, 1.3 ಕೋಟಿಗಿಂತಲೂ ಹೆಚ್ಚು ವಿದ್ಯಾರ್ಥಿಗಳ ಪರೀಕ್ಷೆ ತೆಗೆದುಕೊಳ್ಳುತ್ತದೆ. ಯಾರೂ ಇದನ್ನು ಸೈನ್ಯೀಕರಣ ಎಂದು ಕರೆಯುವುದಿಲ್ಲ. ಬದಲಿಗೆ ಅದನ್ನು ಚೀನೀಯರು ಅರ್ಹತೆಯನ್ನು ರಕ್ಷಿಸುವ ವಿಧಾನ ಎಂದು ಕರೆಯುತ್ತಾರೆ ಎಂದು ಅಣ್ಣಾಮಲೈ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವಾಯುಪಡೆಯೇ ಪ್ರಶ್ನೆಪತ್ರಿಕೆ ತಲುಪಿಸುತ್ತದೆ

ಈ ಹಿಂದೆ ನೀಟ್ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳು ಹಲವಾರು ಮಾರ್ಗದಲ್ಲಿ ಸೋರಿಕೆಯಾಗಿತ್ತು. ಹಲವಾರು ವಿದ್ಯಾರ್ಥಿಗಳು, ಪ್ರೊಫೆಸರ್‌ಗಳನ್ನು ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ಮರುಪರೀಕ್ಷೆಗೆ ಆದೇಶಿಸಲಾಗಿದೆ. ಸ್ವತಃ ಪ್ರಧಾನಿಯೇ ಪರೀಕ್ಷೆಯ ಮೇಲುಸ್ತುವಾರಿ ವಹಿಸಿದ್ದಾರೆ. ಪ್ರಮುಖವಾಗಿ ನೀಟ್ ಮರುಪರೀಕ್ಷೆಗಾಗಿ, ವಾಯುಪಡೆಯು ದೇಶಾದ್ಯಂತ ಪ್ರಶ್ನೆಪತ್ರಿಕೆಗಳನ್ನು ಸಾಗಿಸಲಿದೆ, ಕೇಂದ್ರ ಮೀಸಲು ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಮತ್ತು ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿ (ಸಿಐಎಸ್‌ಎಫ್), ಈ ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ಸಾಗಿಸಲು ಸ್ಥಳೀಯ ಪೊಲೀಸರಿಗೆ ನೆರವು ಒದಗಿಸಲಿದ್ದಾರೆ. ವಿದ್ಯಾರ್ಥಿ ಗಳನ್ನು ಪರೀಕ್ಷಾ ಸ್ಥಳಕ್ಕೆ ಅನುಮತಿಸುವ ಮೊದಲು ಬಯೋಮೆಟ್ರಿಕ್ ಮತ್ತು ಮುಖ ಗುರುತಿಸುವಿಕೆ ಪರಿಶೀಲನೆಗಳು ಸಹ ಇರುತ್ತವೆ. ಹಲವು ಹಂತ ದಲ್ಲಿ ವಿದ್ಯಾರ್ಥಿಗಳನ್ನು ತಪಾಸಣೆ ಮಾಡಲಾಗುತ್ತದೆ.

ಟಿಟಿಡಿಯಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ

ತಿರುಪತಿ ಪ್ರಸಾದದ ಗುಣಮಟ್ಟ ಕಾಪಾಡಲು ಮೈಸೂರಿನ ಸಿಎಫ್‌ಟಿಆರ್‌ಐ ಜತೆ ಒಪ್ಪಂದ

ಅಮರಾವತಿ: ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ತನ್ನ ಆಹಾರ ನಿರ್ವಹಣಾ ವ್ಯವಸ್ಥೆಗಳಲ್ಲಿ ವೈಜ್ಞಾನಿಕ ವಿಧಾನಗಳನ್ನು ಪರಿಚಯಿಸಲು ಮೈಸೂರಿನ ಸಿಎಸ್‌ಐಆರ್-ಸಿಎಫ್‌ಟಿಆರ್‌ಐ (ಕೇಂದ್ರ ಆಹಾರ ತಾಂತ್ರಿಕ ಸಂಶೋಧನಾ ಸಂಸ್ಥೆ)ನೊಂದಿಗೆ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮತ್ತು ಟಿಟಿಡಿ ಖರೀದಿ ಉಸ್ತುವಾರಿ ಇಇ ಉಮಾ ಶಂಕರ್ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಈ ಒಪ್ಪಂದವು ಶ್ರೀವಾರಿ ಪ್ರಸಾದಗಳು ಮತ್ತು ಭಕ್ತರಿಗೆ ವಿತರಿಸುವ ಇತರ ಆಹಾರ ಪದಾರ್ಥಗಳ ಸುರಕ್ಷತೆ, ಪೌಷ್ಟಿಕಾಂಶದ ಮೌಲ್ಯ ಮತ್ತು ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ಹೊಂದಿದೆ. ಬೆಂಗಳೂರಿನಲ್ಲಿ ನಡೆದ ರೈಸ್ (ಸಂಶೋಧನೆ, ನಾವೀನ್ಯತೆ, ಸ್ಟಾರ್ಟ್‌ಅಪ್‌ಗಳು ಮತ್ತು ಉದ್ಯಮಶೀಲತೆ ಸಮಾವೇಶ 2026)ರ ನಂತರ ಇದಕ್ಕೆ ಸಹಿ ಹಾಕಲಾಗಿದೆ. ಟಿಟಿಡಿಯ ಮೇಲ್ವಿಚಾರಣೆಯಲ್ಲಿ ತಯಾರಿಸಿದ ಪ್ರಸಾದಗಳು ಮತ್ತು ಆಹಾರ ಉತ್ಪನ್ನಗಳನ್ನು ಭಕ್ತರಿಗೆ ಅತ್ಯುನ್ನತ ಆಹಾರ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿ ತಲುಪಿಸಲಾಗುತ್ತದೆ. ಅವುಗಳ ಸಾಂಪ್ರದಾಯಿಕ ಗುಣ ಮತ್ತು ಪಾವಿತ್ರ್ಯವನ್ನು ಕಾಪಾಡುವುದು ಇದರ ಉದ್ದೇಶವಾಗಿದೆ. ಒಪ್ಪಂದದಡಿಯಲ್ಲಿ, ಟಿಟಿಡಿ ಮತ್ತು ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ಜಂಟಿ ತಂಡಗಳು ಕಚ್ಚಾ ವಸ್ತುಗಳ ಸಂಗ್ರಹಣೆ, ಆಹಾರ ತಯಾರಿಕೆ ಮತ್ತು ವಿತರಣಾ ಪ್ರಕ್ರಿಯೆಗಳನ್ನು ಒಳಗೊಂಡ ಗುಣಮಟ್ಟ- ನಿಯಂತ್ರಣ ಮಾನದಂಡಗಳು, ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳು (ಎಸ್‌ಒಪಿಗಳು) ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸುತ್ತವೆ. ಶೇಖರಣಾ ವ್ಯವಸ್ಥೆ, ಪರೀಕ್ಷಾ ವಿಧಾನ ಮತ್ತು ಖರೀದಿ ಕಾರ್ಯವಿಧಾನಗಳನ್ನು ಆಧುನೀಕರಿಸಲು ಸಿಎಫ್‌ಟಿಆರ್‌ಐ ತಾಂತ್ರಿಕ ಮಾರ್ಗದರ್ಶನ ಒದಗಿಸುತ್ತದೆ. ಮಾಲಿನ್ಯದ ಅಪಾಯಗಳನ್ನು ಕಡಿಮೆ ಮಾಡಲು ಮತ್ತು ಆಹಾರ ಗುಣಮಟ್ಟದಲ್ಲಿ ಸ್ಥಿರತೆಯನ್ನು ಖಚಿತಪಡಿಸಿಕೊಳ್ಳಲು ಸಂಸ್ಥೆಯು ವೈಜ್ಞಾನಿಕವಾಗಿ ಮೌಲ್ಯೀಕರಿಸಿದ ತಂತ್ರಜ್ಞಾನಗಳು ಮತ್ತು ಉತ್ತಮ-ಅಭ್ಯಾಸದ ಕೆಲಸದ ಕ್ರಮಗಳನ್ನು ಶಿಫಾರಸು ಮಾಡುತ್ತದೆ.

ಹಿಂದೊಮ್ಮೆ ಒಡೆದು ಶಿಂದೆ ಬಣ ಸೃಷ್ಟಿ | ಈಗ ಮತ್ತೆ ಉದ್ಧವ್ ಬಣದ 7 ಸಂಸದರು, 16 ಶಾಸಕರಿಂದ ಶಿಂದೆ ಬಣ ಸೇರಲು ಕಸರತ್ತು: ವರದಿ

ಉದ್ಧವ್ ಶಿವಸೇನೆಗೆ ಚೂರಾಗುವ ಭೀತಿ

ಮುಂಬೈ: ಉದ್ಧವ್ ಠಾಕ್ರೆಯ ಪುತ್ರ ವ್ಯಾಮೋಹ, ಹಿರಿಯ ನಾಯಕರು ಮತ್ತು ಶಾಸಕರ ಕಡೆಗಣನೆಯಿಂದಾಗಿ 4 ವರ್ಷಗಳ ಹಿಂದೆ ಶಿವಸೇನೆ ಒಡೆದು ಹೋಳಾಯಿತು. ಏಕನಾಥ್ ಶಿಂದೆ ನೇತೃತ್ವದಲ್ಲಿ ಶಿವಸೇನೆ ನಾಯಕರು ಬಂಡಾಯ ಎದ್ದು ಸರ್ಕಾರವನ್ನೇ ಕೆಡವಿದ್ದರು. ಇದೀಗ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣ ಮತ್ತೆ ಒಡೆದು ಚೂರಾಗುವ ಸನಿಹದಲ್ಲಿದೆ. ಪ್ರಸ್ತುತ ಉದ್ಧವ್ ಬಣದ ಬಳಿ 9 ಸಂಸದರು, 20 ಶಾಸಕರಿದ್ದಾರೆ. ಈ ಪೈಕಿ ಪಕ್ಷದ ಹಿರಿಯ ನಾಯಕ ನಿತಿನ್ ತಿವಾರಿ ಸೇರಿ 14ರಿಂದ 16 ಶಾಸಕರು ಮತ್ತು 7 ಸಂಸದರು ಪಕ್ಷ ತೊರೆಯಲು ಸಿದ್ಧತೆ ನಡೆಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಇದು ನಡೆದರೆ ಮೂಲ ಶಿವಸೇನೆ ಸಂಪೂರ್ಣ ಇಲ್ಲವಾಗುತ್ತದೆ. ಅಲ್ಲಿಗೆ ಬಾಳಾ ಠಾಕ್ರೆಯ ಪರಂಪರೆಯೇ ನೆಲಸಮವಾಗುವ ಸಾಧ್ಯತೆಯಿದೆ.

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಶಾಸಕರು ಹಾಗೂ ಸಂಸದರು ಬಂಡಾಯ ಎದ್ದು ಎನ್‌ಡಿಎಗೆ ಬೆಂಬಲ ನೀಡಲು ಹೊರಟಿರುವ ಹೊತ್ತಿನಲ್ಲೇ ಈ ಬೆಳವಣಿಗೆ ನಡೆದಿದೆ. ಮೂಲಗಳ ಪ್ರಕಾರ, ಮುಂದಿನ 6-7 ದಿನಗಳಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ ಮತ್ತೊಂದು ಬಣವಾಗಿ ಭಾಗವಾಗಬಹುದು. ಎಲ್ಲವೂ ಅಂದುಕೊಂಡಂತೆ ನಡೆದರೆ ಸಂಸತ್ತಿನ ಮುಂಗಾರು ಅಧಿವೇಶನಕ್ಕೂ ಮುನ್ನ ಆಪರೇಷನ್ ಟೈಗರ್ ಫೈನಲ್ ಆಗಲಿದೆ ಎಂದು ಹೇಳಲಾಗುತ್ತಿದೆ.

ಇದಕ್ಕೂ ಮುಂಚೆ ಒಮ್ಮೆ ಏಕನಾಥ್ ಶಿಂದೆ ನೇತೃತ್ವದಲ್ಲಿ ಮುಕ್ಕಾಲು ಸಂಸದರು, ಶಾಸಕರು ಹೊರಹೋಗಿ ತಮ್ಮ ಪರವಾಗಿ ಪಕ್ಷದ ಚಿಹ್ನೆ, ಹೆಸರನ್ನು ಪಡೆದುಕೊಂಡಿದ್ದರು. ಪ್ರಸ್ತುತ 2024ರ ಲೋಕಸಭಾ ಚುನಾವಣೆಯ ನಂತರ ಶಿಂದೆ ಬಣದ ಬಳಿ 57 ಶಾಸಕರಿದ್ದಾರೆ. 7 ಸಂಸದರಿದ್ದಾರೆ.

ಉದ್ಧವ್ ನಿರಂತರ ಸಭೆ

ತನ್ನ ಬಣದ ನಾಯಕರು ಪಕ್ಷ ತೊರೆಯಲು ಸಜ್ಜಾಗುತ್ತಿದ್ದಾರೆ ಅನ್ನುವ ವದಂತಿ ಬೆನ್ನಲ್ಲೇ ಎಚ್ಚೆತ್ತ ಉದ್ಧವ್ ಠಾಕ್ರೆ ತಮ್ಮ ಮಾತೋಶ್ರೀ ನಿವಾಸದಲ್ಲಿ ಸಭೆ ಕರೆದಿದ್ದಾರೆ. 9 ಲೋಕಸಭಾ ಸಂಸದರ ಸಭೆ ಕರೆದು, ಗಂಭೀರ ಚರ್ಚೆ ನಡೆಸುತ್ತಿದ್ದಾರೆ. ಈ ಮೂಲಕ ಯುಬಿಟಿ ಪಕ್ಷದ ಬಲ ನಿರ್ಣಯಿಸುವ ಜೊತೆಗೆ ವದಂತಿಗಳನ್ನು ಅಲ್ಲಗಳೆದಿದೆ. ಇದಕ್ಕೂ ಮುನ್ನ ಶಿವಸೇನೆಯ ಸಂಸದ ಸಂಜಯ್ ದೇಶಮುಖ್ ಅವರನ್ನು ಭೇಟಿಯಾದ ಶಿಂದೆ ಬಣದ ಸಂಸದ ಪ್ರತಾಪ್ ರಾವ್ ಜಾಧವ್, ನಾವು ಹಿಂದೆ ಸಹೋದ್ಯೋಗಿಗಳಾಗಿದ್ದೆವು. ಆದ್ದರಿಂದ ಭೇಟಿಯಾಗುತ್ತಲೇ ಇರುತ್ತೇವೆ. ಹಾಗೆಂದ ಮಾತ್ರಕ್ಕೆ ಅವರು ತೊರೆಯುತ್ತಿದ್ದಾರೆ ಎಂದರ್ಥವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ನಾವು ಉದ್ಧವ್ ಬಣದ ಸಂಸದರೊಂದಿಗೆ ಮಾತನಾಡುವಾಗ, ಅನೇಕರು ಠಾಕ್ರೆಗಳು ಮತ್ತು ಸಂಜಯ್ ರಾವತ್ ಬಗ್ಗೆ ಅತೃಪ್ತರಾಗಿದ್ದಾರೆ ಅನ್ನುವುದು ಗೊತ್ತಾಗಿದೆ. ಅವರು ಯಾರನ್ನು ಭೇಟಿಯಾಗುತ್ತಾರೆ ಎಂಬ ಬಗ್ಗೆ ನಿರಂತರವಾಗಿ ಅನುಮಾನದಲ್ಲಿದ್ದಾರೆ. ಅಸಮಾಧಾನ ಸ್ಫೋಟಗೊಂಡರೆ ಪಕ್ಷ ತೊರೆಯಬಹುದು ಎಂದು ಹೇಳಿದ್ದಾರೆ.

75,000 ರು.ಗಿಂತ ಹೆಚ್ಚು ಸಾಲವಿದ್ದರೆ 35000 ರು. ಮನ್ನಾ | 14.43 ಲಕ್ಷ ರೈತರಿಗೆ ಲಾಭ

75000 ರು.ವರೆಗೆ ತಮಿಳುನಾಡು ರೈತರ ಸಾಲಮನ್ನಾ

ಚೆನ್ನೈ: ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ತಮಿಳುನಾಡಿನ ರೈತರಿಗೆ ಬಂಪರ್ ಕೊಡುಗೆ ನೀಡಿದ್ದಾರೆ. ವಿವಿಧ ಸಹಕಾರಿ ಬ್ಯಾಂಕುಗಳಲ್ಲಿ ರೈತರು ಪಡೆದಿರುವ 75,000 ರು.ವರೆಗಿನ ಬೆಳೆ

ಸಾಲವನ್ನು ಸಂಪೂರ್ಣ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ಇದರೊಂದಿಗೆ 75,000 ರು.ಗಿಂತಲೂ ಹೆಚ್ಚು ಬೆಳೆ ಸಾಲ ಪಡೆದವರಿಗೆ 35,000 ರು.ವರೆಗಿನ ಸಾಲ ಮನ್ನಾ ಮಾಡುವುದಾಗಿ ಘೋಷಿಸಿದ್ದಾರೆ. ಪರಿಷ್ಕೃತ ಯೋಜನೆಯ ಪ್ರಕಾರ, 2025ರ ಮೇ 1ರಿಂದ 2026ರ ಫೆ.28ರ ನಡುವೆ ಸಹಕಾರಿ ಬ್ಯಾಂಕುಗಳಿಂದ 75,000 ರು.ವರೆಗಿನ ಸಾಲ ಸಂಪೂರ್ಣ ಮನ್ನಾ ಆಗಲಿದೆ. ರಾಜ್ಯಾದ್ಯಂತ ಸುಮಾರು 14.43 ಲಕ್ಷಕ್ಕೂ ಹೆಚ್ಚು ರೈತರು ಇದರ ಪ್ರಯೋಜನ ಪಡೆಯಲಿದ್ದಾರೆ. ಆದರೆ ಈ ಕ್ರಮದಿಂದ ಸರ್ಕಾರಕ್ಕೆ 5,932.23 ಕೋಟಿ ರು. ಹೊರೆಯಾಗಲಿದೆ.

ಒಟ್ಟು ಫಲಾನುಭವಿಗಳಲ್ಲಿ 75,000 ರು. ವರೆಗಿನ ಸಾಲ ಹೊಂದಿರುವ 6.22 ಲಕ್ಷಕ್ಕೂ ಹೆಚ್ಚು ರೈತರು ಸಂಪೂರ್ಣ ಮನ್ನಾ ಪ್ರಯೋಜನ ಪಡೆಯುತ್ತಾರೆ. ಅದಕ್ಕಿಂತಲೂ ಹೆಚ್ಚಿನ ಸಾಲ ಹೊಂದಿದವರಲ್ಲಿ 8.21 ಲಕ್ಷ ರೈತರ ಸಾಲ ತಲಾ 35,000 ರು. ಮನ್ನಾ ಆಗಲಿದೆ. ಇದು ಮುಖ್ಯಮಂತ್ರಿ ವಿಜಯ್ ಸರ್ಕಾರ ಇದುವರೆಗೆ ಘೋಷಿಸಿದ ಅತಿದೊಡ್ಡ ರೈತ ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ರಾಜ್ಯದ ರೈತರ ಆರ್ಥಿಕ ಸ್ಥಿತಿ ಮತ್ತು ರೈತರ ಅಗತ್ಯಗಳನ್ನು ನಿರ್ವಹಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಯೋಜನೆಯಡಿ ಸಹಕಾರಿ ಬ್ಯಾಂಕುಗಳಿಗೆ ಪಾವತಿಸಬೇಕಾದ ಪಾವತಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗಸೂಚಿಗಳಿಗೆ ಅನುಗುಣವಾಗಿ 45ರಿಂದ 60 ದಿನಗಳಲ್ಲಿ ಇತ್ಯರ್ಥಪಡಿಸುವ ಸಾಧ್ಯತೆಗಳಿವೆ.

ಯಾರಿಗೆ ಪ್ರಯೋಜನ?

- 8.33 ಲಕ್ಷ ಸಣ್ಣ ರೈತರು
- 5.16 ಲಕ್ಷ ಮಧ್ಯಮ ರೈತರು
- 93,548 ಬೃಹತ್ ರೈತರು

ಕರ್ನಾಟಕ ಭವನದ ಕೊಠಡಿಗಳು ರಾಜ್ಯ ಪ್ರವಾಸೋದ್ಯಮ ಇಲಾಖೆ ಸುಪರ್ದಿಗೆ

ತಿರುಪತಿ: 350 ಕೊಠಡಿ ಕೆಎಸ್‌ಟಿಡಿಸಿಗೆ ಹಸ್ತಾಂತರ

ತಿರುಪತಿ: ತಿರುಪತಿಯಲ್ಲಿ ಕರ್ನಾಟಕದ ಭಕ್ತರಿಗಾಗಿ ನಿರ್ಮಿಸಿರುವ ಸುಸಜ್ಜಿತ ಕರ್ನಾಟಕ ಭವನದ ವಸತಿ ಕೊಠಡಿಗಳನ್ನು ಕೆಎಸ್‌ಟಿಡಿಸಿಗೆ (ಕರ್ನಾಟಕ ಪ್ರವಾಸೋದ್ಯಮ ಸಚಿವಾಲಯ) ಹಸ್ತಾಂತರಿಸಲು, ರಾಜ್ಯ ಮುಜರಾಯಿ ಇಲಾಖೆ ನಿರ್ಧರಿಸಿದೆ. ತಿರುಮಲದ ರಿಂಗ್‌ರೋಡ್‌ನಲ್ಲಿ ಟಿಟಿಡಿ ಮ್ಯೂಸಿಯಂ ಎದುರು, ಮುಖ್ಯ ದೇವಾಲಯದ ಹಿಂಭಾಗದಲ್ಲಿ ಕೇವಲ 700 ಮೀಟರ್ ದೂರದಲ್ಲಿ ರಾಜ್ಯದ ಕರ್ನಾಟಕ ಪ್ರವಾಸಿ ಸೌಧವಿದೆ, ಇದರಲ್ಲಿ 350 ಕೊಠಡಿಗಳಿವೆ. ಇಲ್ಲಿ ಹವಾನಿಯಂತ್ರಿತ ಮತ್ತು ಹವಾನಿಯಂತ್ರಿತವಲ್ಲದ (ಎಸಿ ಮತ್ತು ನಾನ್ ಎಸಿ) ಕೊಠಡಿಗಳಿವೆ.

ದರ ಎಷ್ಟಿದೆ?: ಇತ್ತೀಚೆಗೆ ಸುಸಜ್ಜಿತವಾಗಿ ನಿರ್ಮಿಸಿರುವ ವಸತಿ ಕೊಠಡಿಗಳಿಗೆ ಹೆಚ್ಚು ಬೇಡಿಕೆಯಿದ್ದು, ಎಸಿಯಿಲ್ಲದ ಕೊಠಡಿಗಳ ದರ 1,500 ರು.ಇದೆ. ಎಸಿ ಕೊಠಡಿಗಳ ದರ 2800-3800 ರು. ಇದೆ. ಕೊಠಡಿಗಳನ್ನು ಆನ್‌ಲೈನ್‌ನಲ್ಲೇ ಬುಕಿಂಗ್ ಮಾಡಬಹುದು.

'ಭಕ್ತರಿಗೆ ಉತ್ತಮ ಸೇವೆ ನೀಡುವ ಉದ್ದೇಶದಿಂದ ಕರ್ನಾಟಕ ಭವನದ ವಸತಿ ಕೊಠಡಿಗಳ ನಿರ್ವಹಣೆಯನ್ನು ಕೆಎಸ್‌ಟಿಡಿಸಿಗೆ ವಹಿಸಲಾಗುವುದು. ಆದರೆ, ಬುಕಿಂಗ್ ಸೌಲಭ್ಯ ನಮ್ಮ ಸುಪರ್ದಿಯಲ್ಲೇ ಇರಲಿದೆ. ಎರಡೂ ಸಂಸ್ಥೆಗಳು ತಲಾ ಶೇ.50ರಂತೆ ನಿರ್ವಹಣೆ ಮತ್ತು ಲಾಭಾಂಶವನ್ನು ಪಡೆಯಲಿವೆ' ಎಂದು ಮುಜರಾಯಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಏನೆಲ್ಲಾ ಸೌಲಭ್ಯ?: ಕರ್ನಾಟಕ ಭವನದ ವಸತಿ ಕೊಠಡಿಗಳಲ್ಲಿ ಪಾರ್ಕಿಂಗ್ ಸೌಲಭ್ಯ, ಬಿಸಿ ನೀರಿನ ವ್ಯವಸ್ಥೆ, ಕ್ಯಾಂಟೀನ್ ಸೌಲಭ್ಯ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯಗಳನ್ನು ಹೊಂದಿರಲಿವೆ. ಕೊಠಡಿ ಕೊಡಿಸುವ ನೆಪದಲ್ಲಿ ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಭಕ್ತರೇ ಬುಕ್ ಮಾಡಿಕೊಂಡು ತಂಗಬಹುದು.

ಸಮಾಚಾರ ಸಣ್ಣದಲ್ಲ

ಶ್ರೀ ಆತ್ಮಾನಂದರ ಚಿತ್ರಕಲಾ ಪ್ರದರ್ಶನ ನಾಳೆ

ಬೆಂಗಳೂರು: ಕರ್ನಾಟಕ ಆರ್ಟ್ಸ್ ಫೌಂಡೇಶನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರ ನಗರ ಜಿಲ್ಲೆ ಇವರ ಸಹಯೋಗದೊಂದಿಗೆ ಚಿತ್ರಕಲಾವಿದ, ಸಮಾಜ ಸೇವಕ, ಬಹುಮುಖ್ಯ ಪ್ರತಿಭೆ ಹಾಗೂ ಕರ್ನಾಟಕ ಲಲಿತ ಕಲಾ ಅಕಾಡೆಮಿ ನಿಕಟಪೂರ್ವ ಸದಸ್ಯ, ಆತ್ಮಾನಂದ ಅವರ ಚಿತ್ರಕಲಾ ಪ್ರದರ್ಶನವನ್ನು ಜೂ.18 ಗುರುವಾರ ಬೆಳಗ್ಗೆ 11 ಗಂಟೆಗೆ ವರ್ಣಆರ್ಟ್ ಗ್ಯಾಲರಿ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ ಎಂದು ಕರ್ನಾಟಕ ಆರ್ಟ್ಸ್ ಫೌಂಡೇಶನ್ ಅಧ್ಯಕ್ಷೆ ಸರೋಜಾ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಚಿತ್ರಕಲಾ ಪ್ರದರ್ಶನವನ್ನು ಕನ್ನಡ ಚಿತ್ರರಂಗದ ಖ್ಯಾತ ಚಲನಚಿತ್ರ ನಟ ಸುಚೇಂದ್ರ ಪ್ರಸಾದ್ ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ವಿಧಾನ ಪರಿಷತ್ತಿನ ಸದಸ್ಯ ಕೇಶವ್ ಪ್ರಸಾದ್, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು ಅಧ್ಯಕ್ಷ ಪ.ಸ. ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ನಗರ ಜಿಲ್ಲೆಯ ಸಹಾಯಕ ನಿರ್ದೇಶಕ ಆರ್. ಚಂದ್ರಶೇಖರ್, ಕರ್ನಾಟಕ ಆರ್ಟ್ಸ್ ಫೌಂಡೇಶನ್ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಸ್ಫೋಟ: ಮೂವರು ಯೋಧರಿಗೆ ಗಾಯ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಜೌರಿ ಸೆಕ್ಟರ್‌ನ ಗಡಿ ನಿಯಂತ್ರಣ ರೇಖೆ ಬಳಿ ಸಂಭವಿಸಿದ ಸ್ಫೋಟದಲ್ಲಿ ಜೂನಿಯರ್ ಕಮಿಷನ್ಡ್ ಆಫೀಸರ್ (ಜೆಸಿಒ) ಸೇರಿದಂತೆ ಮೂವರು ಸೇನಾ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಫೋಟ ಸಂಭವಿಸಿದಾಗ ಸೈನಿಕರು ದಿನನಿತ್ಯದ ಗಸ್ತು ತಿರುಗುತ್ತಿದ್ದರು. ಗಾಯಗೊಂಡ ಮೂವರು ಸಿಬ್ಬಂದಿಯನ್ನು ತಕ್ಷಣವೇ ಸ್ಥಳಾಂತರಿಸಲಾಗಿದ್ದು, ಚಿಕಿತ್ಸೆಗಾಗಿ ಮಿಲಿಟರಿ ಆಸ್ಪತ್ರೆಗೆ ದಾಖಲಿಸಲಾಯಿತು. ಸ್ಫೋಟಕ್ಕೆ ನಿಖರವಾದ ಕಾರಣ ಇನ್ನೂ ತಿಳಿದುಬಂದಿಲ್ಲ, ಘಟನೆಗೆ ಏನು ಕಾರಣ ಎಂಬುದನ್ನು ತಿಳಿಯಲು ತನಿಖೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ. ನೌಶೇರಾ ಸೆಕ್ಟರ್‌ನ ಕಲಾಲ್ ಪ್ರದೇಶದಲ್ಲಿ ಸೇನಾ ಸಿಬ್ಬಂದಿ ಗಸ್ತು ತಿರುಗುವಿಕೆಯ ಸಮಯದಲ್ಲಿ ಆಕಸ್ಮಿಕವಾಗಿ ನೆಲಬಾಂಬ್ ಸಕ್ರಿಯಗೊಂಡ ಪರಿಣಾಮ ಈ ಸ್ಫೋಟ ಸಂಭವಿಸಿದೆ ಎನ್ನಲಾಗಿದೆ. ಒಳನುಸುಳುವಿಕೆ ತಡೆಯುವ ಉದ್ದೇಶದಿಂದ, ಗಡಿಯ ಮುಂಚೂಣಿ ಪ್ರದೇಶಗಳಲ್ಲಿ ಭೂಕುಸಿತ ಸ್ಫೋಟಕಗಳನ್ನು ಅಳವಡಿಸಲಾಗಿರುತ್ತದೆ. ಆದರೆ ಕೆಲವೊಮ್ಮೆ ಮಳೆಯಿಂದಾಗಿ ಈ ಸ್ಫೋಟಕಗಳು ಕೊಚ್ಚಿಹೋಗಬಹುದು, ಇದರಿಂದ ಇಂತಹ ಅಪಘಾತಗಳು ಸಂಭವಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಜಯ್ ವಿರುದ್ಧ ಸ್ಟಾಲಿನ್ ವಾಗ್ದಾಳಿ

ಚೆನ್ನೈ: ಡಿಎಂಕೆ ಅಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಂಗಳವಾರ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು

ಆಡಳಿತದ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿದ್ದು, ನೀವು ಯಾವಾಗ ಸೈಲೆಂಟ್ ಮೋಡ್‌ನಿಂದ ಹೊರಬರುತ್ತೀರಿ ಎಂದು ಪ್ರಶ್ನಿಸಿದ್ದಾರೆ. ತಮಿಳುನಾಡಿನಲ್ಲಿ ಅಪರಾಧಿಗಳು ನಿರ್ಭೀತಿಯಿಂದ ವರ್ತಿಸುವುದನ್ನು ತಡೆಯಲು ತೆಗೆದುಕೊಂಡ ಕ್ರಮಗಳನ್ನು ವಿವರಿಸುತ್ತೀರಾ? ಜನರ ಸುರಕ್ಷತೆಗೆ ಸಂಬಂಧಿಸಿದಂತೆ ನೀವು ಯಾವಾಗ ಕಾಲ್ ಶೀಟ್ ನೀಡುತ್ತೀರೆ? ಎಂದು ಸ್ಟಾಲಿನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ದಕ್ಷ ಅಧಿಕಾರಿಗಳನ್ನು ನೇಮಿಸಿ ಸಿಂಗಪ್ಪೆನ್ ವಿಶೇಷ ಪಡೆ ಆರಂಭಿಸಿದ್ದೇನೆ ಎಂದು ಹೇಳಿಕೊಂಡರೂ, ಮಕ್ಕಳನ್ನು ಕಳೆದುಕೊಂಡ ಪೋಷಕರ ಕೂಗು ಮುಖ್ಯಮಂತ್ರಿಗೆ ಕೇಳುಸುತ್ತಿಲ್ಲವೇ? ಎಂದು ಸ್ಟಾಲಿನ್ ಪ್ರಶ್ನಿಸಿದ್ದಾರೆ. ಮಕ್ಕಳ ಸುರಕ್ಷತೆ ಮತ್ತು ಜೀವಗಳು ಕಳವಳಕಾರಿ ವಿಷಯವಾಗಿದ್ದಾಗಲೂ ಮುಖ್ಯಮಂತ್ರಿಗಳು ಆರು ತಿಂಗಳು ಮೌನವಾಗಿರಬೇಕೆಂದು ಬಯಸಿದ್ದಾರೆಯೇ ಎಂದು ಮಾಜಿ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಡಿಎಂಕೆಯಿಂದ ನೀವು ದೊಡ್ಡ ಪ್ರತಿಭಟನೆಯನ್ನು ನಿರೀಕ್ಷಿಸುತ್ತೀರಾ? ಮಿಸ್ಟರ್ ಮುಖ್ಯಮಂತ್ರಿಗಳೇ, ನೀವು ಏಕೆ ಮೌನವಾಗಿದ್ದೀರಿ? ಎಂದು ಸ್ಟಾಲಿನ್ ಪ್ರಶ್ನಿಸಿದ್ದಾರೆ.

ಮಸೀದಿ ತೆರವಿಗೆ ರೈಲ್ವೆ ಇಲಾಖೆ ನೋಟಿಸ್

ವಾರಣಾಸಿ: ವಾರಣಾಸಿಯ ಕಾಶಿ ರೈಲು ನಿಲ್ದಾಣದ ಮುಖ್ಯ ಪ್ರವೇಶದ್ವಾರದ ಸಮೀಪದಲ್ಲಿರುವ ಗಂಜ್ ಶಹೀದಾ ಮಸೀದಿಯನ್ನು ತೆರವುಗೊಳಿಸುವಂತೆ ರೈಲ್ವೇ ಇಲಾಖೆ ನೋಟಿಸ್ ಜಾರಿ ಮಾಡಿದೆ. ಜೂನ್ 20ರೊಳಗೆ ಖಾಲಿ ಮಸೀದಿ ಖಾಲಿ ಮಾಡಬೇಕೆಂದು ರೈಲ್ವೆ ಇಲಾಖೆ ಕಾನೂನುಬದ್ಧ ನೋಟಿಸ್ ಅಂಟಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಕಾಶಿ ರೈಲು ನಿಲ್ದಾಣದ ಪುನರ್‌ಅಭಿವೃದ್ಧಿ ಯೋಜನೆಯಡಿ ನಿಲ್ದಾಣ ವಿಸ್ತರಣೆ ಮತ್ತು ಪ್ರಸ್ತಾವಿತ ನಿರ್ಮಾಣ ಕಾಮಗಾರಿಗಳಿಗಾಗಿ ರೈಲ್ವೆ ಭೂಮಿಯ ಮೇಲಿನ ಅತಿಕ್ರಮಣಗಳನ್ನು ತೆರವುಗೊಳಿಸುವ ಪ್ರಕ್ರಿಯೆಯ ಭಾಗವಾಗಿ ಈ ನೋಟಿಸ್ ನೀಡಲಾಗಿದೆ ಎಂದು ನಿಲ್ದಾಣ ಅಧೀಕ್ಷಕ ಅರ್ಪಿತ್ ಗುಪ್ತಾ ತಿಳಿಸಿದ್ದಾರೆ. ರೈಲ್ವೆ ಅಧಿಕಾರಿಗಳು ಹಾಗೂ ಜಿಲ್ಲಾ ಆಡಳಿತವು ಈ ಹಿಂದೆ ಕಾಶಿ ರೈಲು ನಿಲ್ದಾಣದ ಸುತ್ತಮುತ್ತ ಅತಿಕ್ರಮಣ ತೆರವು ಕಾರ್ಯಾಚರಣೆ ನಡೆಸಿದ್ದು, ರೈಲ್ವೆ ಭೂಮಿಯಲ್ಲಿರುವ ವಿವಿಧ ಕಟ್ಟಡಗಳನ್ನು ಗುರುತಿಸಿ ಅಗತ್ಯ ಕ್ರಮ ಕೈಗೊಂಡಿದೆ ಎಂದು ಅವರು ಹೇಳಿದರು.

{ನಿರ್ಮಲಾ ಸೀತಾರಾಮನ್} ಕೇಂದ್ರ ವಿತ್ತ ಸಚಿವರು

ವಿದೇಶಿ ಬಂಡವಾಳವನ್ನು ಪುನಃ ಆಕರ್ಷಿಸಲು ಸರಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಗ್ ಘೋಷಿಸಿರುವ ಕ್ರಮಗಳು ಮೊದಲ ಹೆಜ್ಜೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕ್ರಮಗಳ ಘೋಷಣೆ ಸಾಧ್ಯತೆ ಇದೆ. ವಿದೇಶಿ ವಿನಿಮಯ ಸಂಗ್ರಹ ಹೆಚ್ಚಿಸಲು ಇದು ನೆರವಾಗಲಿದೆ.

ಜಯಂತಿ ಆಚರಣೆಗೆ ರಾಜ್ಯದ 224 ಕ್ಷೇತ್ರಗಳಿಗೆ ತಲಾ 1 ಲಕ್ಷ ರು. ಅನುದಾನ | ಬಿಡಿಎ ದಿಂದ 15 ಲಕ್ಷ ಗಿಡ ನೆಡುವ ಗುರಿ: ಡಿಕೆಶಿ

ಕೆಂಪೇಗೌಡ ಜಯಂತಿಗಾಗಿ ಬೆಂಗಳೂರಿನ ಪ್ರತಿ ವಾರ್ಡ್‌ಗೆ 1 ಲಕ್ಷ ರು.ಅನುದಾನ

ಬೆಂಗಳೂರು: ನೂತನವಾಗಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಜೂ.27ರಂದು ಬೆಳಗ್ಗೆ 11.30ಕ್ಕೆ ನಾಡಪ್ರಭು ಕೆಂಪೇಗೌಡ ಜಯಂತಿ ನಡೆಸಲು ತೀರ್ಮಾನಿಸಲಾಗಿದೆ. ಬಿಡಿಎ ವತಿಯಿಂದ ಅಧ್ಯಕ್ಷರಾದ ಹ್ಯಾರೀಸ್ ಅವರ ನೇತೃತ್ವದಲ್ಲಿ ನಗರದಲ್ಲಿ 15 ಲಕ್ಷ ಗಿಡಗಳನ್ನು ನೆಡಲಾಗುವುದು. ಈ ಬಡಾವಣೆಯಲ್ಲಿ ನೂತನ ರಸ್ತೆಯನ್ನು ಉದ್ಘಾಟಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ ಪೂರ್ವಭಾವಿ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ವರ್ಷದಂತೆ ಕೆಂಪೇಗೌಡ ಜಯಂತಿ ಆಚರಣೆ ಕುರಿತಾಗಿ ಪೂರ್ವಭಾವಿ ಸಭೆ ಕರೆಯಲಾಗಿತ್ತು. ಕಾರ್ಯಕ್ರಮದ ರೂಪುರೇಷೆ ಬಗ್ಗೆ ಎಲ್ಲಾ ಸಂಘಟನೆಗಳ ಜತೆ ಚರ್ಚೆ ಮಾಡಲಾಗಿದೆ. ಪ್ರತಿ ಬಾರಿಯಂತೆ ನಗರದ ನಾಲ್ಕು ಕೆಂಪೇಗೌಡ ಗೋಪುರಗಳಿಂದ ಪ್ರತ್ಯೇಕ ತಂಡಗಳು ಆಗಮಿಸಲಿವೆ. ನಾಲ್ಕು ಗೋಪುರಗಳ ಪೈಕಿ ರಾಮಲಿಂಗಾರೆಡ್ಡಿ, ಕೃಷ್ಣ ಬೈರೇಗೌಡ, ಕೆ.ಜೆ ಜಾರ್ಜ್ ಹಾಗೂ ಬೈರತಿ ಸುರೇಶ್ ಅವರು ಜವಾಬ್ದಾರಿ ವಹಿಸಲಿದ್ದಾರೆ. ಇನ್ನು ಮಾಗಡಿ ತಂಡವನ್ನು ಸ್ಥಳೀಯ ಶಾಸಕರಾದ ಬಾಲಕೃಷ್ಣ, ಹುಲಿಯೂರು ದುರ್ಗ ಕಡೆಯಿಂದ ರಂಗನಾಥ್ ಅವರು ಮುನ್ನಡೆಸಲಿದ್ದಾರೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಕಾರ್ಯಕ್ರಮವನ್ನು ಸಚಿವರಾದ ಕೆ.ಹೆಚ್ ಮುನಿಯಪ್ಪ ಅವರಿಂದ ನಡೆಸಲಾಗುವುದು. ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬೆಂಗಳೂರಿನ ಕೆಲವು ಭಾಗಗಳಲ್ಲಿ ತಯಾರಿ ಮಾಡಲಾಗುವುದು ಎಂದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ನಿರ್ಮಿಸಲು ತೀರ್ಮಾನಿಸಲಾಗಿತ್ತು. ಅದರ ಸಿದ್ಧತೆ ನಡೆಸಲಾಗುತ್ತಿದೆ. ಪ್ರತಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಜಯಂತಿ ಆಚರಿಸಲಾಗುವುದು. ಇದಕ್ಕಾಗಿ 1 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಬೇರೊಂದು ದಿನ ಬೆಂಗಳೂರಿನ 369 ವಾರ್ಡ್‌ಗಳಲ್ಲಿ ಈ ಕಾರ್ಯಕ್ರಮ ನಡೆಸಲು ಜಿಬಿಎ ವತಿಯಿಂದ ತಲಾ 1 ಲಕ್ಷ ಅನುದಾನ ನೀಡಲಾಗುವುದು. ಈ ಕಾರ್ಯಕ್ರಮದ ದಿನಾಂಕವನ್ನು ಬೆಂಗಳೂರು ನಗರದ ಸಚಿವರು ತೀರ್ಮಾನ ಮಾಡಲಿದ್ದಾರೆ. ಈ ಸಭೆಯಲ್ಲಿ ಅನೇಕ ಸಲಹೆಗಳು ಬಂದಿವೆ ಎಂದರು.

ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಪೂರ್ಣಗೊಂಡಿದ್ದು, ಇದನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲು ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ತಯಾರಿ ಮಾಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಗಣ್ಯರು, ಸ್ವಾಮೀಜಿಗಳು ಹಾಗೂ ನಾಯಕರ ಆಹ್ವಾನದ ಜವಾಬ್ದಾರಿಯನ್ನು ಕೃಷ್ಣ ಬೈರೇಗೌಡರು ವಹಿಸಿಕೊಂಡಿದ್ದಾರೆ. ಸಂಘಟನೆಗಳು ಹಾಗೂ ಒಕ್ಕಲಿಗರ ಸಂಘ ತಮ್ಮದೇ ಆದ ಜವಾಬ್ದಾರಿ ಹೊತ್ತುಕೊಂಡಿವೆ. ಈ ಕಾರ್ಯಕ್ರಮ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ. ಕೆಂಪೇಗೌಡರು ಬೆಂಗಳೂರು ನಗರ ಹಾಗೂ ರಾಜ್ಯದ ಆಸ್ತಿ. ಎಲ್ಲಾ ಧರ್ಮ, ಜಾತಿ, ಸಂಘಟನೆಯವರು ಸೇರಿ ಜಯಂತಿ ಆಚರಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿನ ಪ್ರಮುಖ ಸಲಹೆಗಳು

- ನಾಡಪ್ರಭು ಕೆಂಪೇಗೌಡ ಅವರನ್ನು ಬೆಂಗಳೂರಿನ ಸಾಂಸ್ಕೃತಿಕ ನಾಯಕ ಎಂದು ಘೋಷಣೆ
- ಎಲ್ಲಾ ಜಿಲ್ಲೆಗಳಲ್ಲಿ ಕೆಂಪೇಗೌಡ ಜಿಲ್ಲಾ ಭವನ ನಿರ್ಮಾಣ, ಕೆಂಪೇಗೌಡರ ವಸ್ತುಸಂಗ್ರಹಾಲಯ
- ಕೆಂಪೇಗೌಡರ ಹೆಸರಿನಲ್ಲಿ ಅಂತಾರಾಷ್ಟ್ರೀಯ ಉದ್ಯಾನವನ ಹಾಗೂ ಅಂತಾರಾಷ್ಟ್ರೀಯ ಸಮುದಾಯ ಭವನ ನಿರ್ಮಾಣ
- ಕೆಂಪೇಗೌಡರ ಸ್ಮರಣೆಯಲ್ಲಿ ಬೆಂಗಳೂರಿನ ಕೆರೆಗಳ ಶುದ್ಧೀಕರಣ, ಪುನಶ್ಚೇತನ
- ಸ್ವಾಮಿನಾಥನ್ ವರದಿ ಆಧರಿಸಿ ಜಲ ನಿರ್ವಹಣೆ ಬಗ್ಗೆ ಬೆಂಗಳೂರಿಗರಿಗೆ ಜಾಗೃತಿ ಮೂಡಿಸಲು ಕಾರ್ಯಾಗಾರ
- ಪಠ್ಯಪುಸ್ತಕದಲ್ಲಿ ಕೆಂಪೇಗೌಡರ ಜೀವನ ಚರಿತ್ರೆ, ಜಯಂತಿಯಂದು ಸರಕಾರಿ ರಜೆ ಘೋಷಣೆ
- ನಗರದ ನಾಲ್ಕು ದಿಕ್ಕಿನಲ್ಲಿ 50-60 ಅಡಿ ಎತ್ತರದ ಕೆಂಪೇಗೌಡರ ಕಲ್ಲಿನ ಪ್ರತಿಮೆ ನಿರ್ಮಾಣ
- ಬೆಂಗಳೂರು ಗ್ರಾಮಾಂತರ ಜಿಲ್ಲೆ ಆವತಿ ಗ್ರಾಮ ಅಭಿವೃದ್ಧಿ ಮಾಡಲು ಸಭೆಯಲ್ಲಿ ಸಲಹೆ

ಕೆಂಪೇಗೌಡರ ಸಮಾಧಿ 10 ಎಕರೆ ಜಾಗದಲ್ಲಿ ಅಭಿವೃದ್ಧಿ

ಕೆಂಪೇಗೌಡರ ಜಯಂತಿ ಆಚರಣೆ ಸಂಬಂಧಿಸಿದಂತೆ ನಡೆದ ಪೂರ್ವಭಾವಿ ಸಭೆಯಲ್ಲಿ ಅನೇಕ ಸಲಹೆಗಳು ವ್ಯಕ್ತವಾಗಿದ್ದು, ಕೆಂಪೇಗೌಡ ಸಮಾಧಿ ಸ್ಥಳವನ್ನು 10 ಎಕರೆ ಜಾಗದಲ್ಲಿ ಅಭಿವೃದ್ಧಿ ಪಡಿಸಬೇಕು. ಜತೆಗೆ ಕೆಂಪೇಗೌಡರ ಕೋಟೆ ಅಭಿವೃದ್ಧಿಗೆ 100 ಕೋಟಿ ರು. ವೆಚ್ಚದ ಟೆಂಡರ್ ಆಗಿದ್ದು, ಕಾಮಗಾರಿ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು. ಜಿಬಿಎ ವ್ಯಾಪ್ತಿಯಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚಿಸಬೇಕು ಎಂಬ ವಿಚಾರಗಳು ಚರ್ಚೆಯಾದವು.

ಪವನ ವಿದ್ಯುತ್ ಸಾಮರ್ಥ್ಯ: ಕರ್ನಾಟಕಕ್ಕೆ ರಾಷ್ಟ್ರೀಯ ಪ್ರಶಸ್ತಿ

ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಅವರಿಗೆ ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ವೇಳೆ ಕೇಂದ್ರ ರಾಜ್ಯ ಸಚಿವ ಶ್ರೀಪಾದ್ ಯೆಸ್ಸೊ ನಾಯಕ್, ಸಚಿವಾಲಯದ ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ ಹಾಗೂ ಗೋವಾ ರಾಜ್ಯದ ಇಂಧನ ಸಚಿವ ರಾಮಕೃಷ್ಣ ಧವಳೀಕರ್ ಉಪಸ್ಥಿತರಿದ್ದರು.

ಗೋವಾ/ಬೆಂಗಳೂರು: ಪವನ ವಿದ್ಯುತ್ ಕ್ಷೇತ್ರದಲ್ಲಿ ಕರ್ನಾಟಕ ಮತ್ತೊಮ್ಮೆ ರಾಷ್ಟ್ರ ಮಟ್ಟದಲ್ಲಿ ತನ್ನ ಸಾಧನೆ ಮೆರೆದಿದ್ದು, ಅನುಷ್ಠಾನ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯ ವಿಭಾಗದಲ್ಲಿ ಪ್ರತಿಷ್ಠಿತ ರಾಷ್ಟ್ರೀಯ ಪ್ರಶಸ್ತಿ ಪಡೆದುಕೊಂಡಿದೆ.

ಗೋವಾದಲ್ಲಿ ನಡೆದ 2026ರ ವಿಶ್ವ ಪವನ ದಿನಾಚರಣೆಯ ಸಂದರ್ಭದಲ್ಲಿ ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ (ಕ್ರೆಡಲ್) ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಸ್ತುತ ರಾಜ್ಯದಲ್ಲಿ ಸುಮಾರು 9 ಗಿಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳು ಅನುಷ್ಠಾನ ಹಂತದಲ್ಲಿದ್ದು, ಈ ಸಾಧನೆ ಗುರುತಿಸಿ ಕರ್ನಾಟಕಕ್ಕೆ ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್ ಲೈನ್ ಪ್ರಶಸ್ತಿ ನೀಡಲಾಗಿದೆ. ಕಾರ್ಯಕ್ರಮದಲ್ಲಿ ಕೇಂದ್ರ ರಾಜ್ಯ ಸಚಿವ ಶ್ರೀಪಾದ್ ಯೆಸ್ಸೊ ನಾಯಕ್, ಸಚಿವಾಲಯದ ಕಾರ್ಯದರ್ಶಿ ಸಂತೋಷ್ ಕುಮಾರ್ ಸಾರಂಗಿ ಹಾಗೂ ಗೋವಾ ರಾಜ್ಯದ ಇಂಧನ ಸಚಿವ ರಾಮಕೃಷ್ಣ ಧವಳೀಕರ್ ಉಪಸ್ಥಿತರಿದ್ದರು.

> ರಾಜ್ಯದ ಪ್ರಗತಿಪರ ನೀತಿಗಳು, ಹೂಡಿಕೆ ಸ್ನೇಹಿ ವಾತಾವರಣ ಹಾಗೂ ನವೀಕರಿಸಬಹುದಾದ ಇಂಧನ ವಲಯಕ್ಕೆ ನೀಡಲಾಗುತ್ತಿರುವ ಸಾಂಸ್ಥಿಕ ಬೆಂಬಲವೇ ಈ ಸಾಧನೆಗೆ ಕಾರಣ.
> -ಗೌರವ್ ಗುಪ್ತ, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ

> ಉದ್ಯಮದ ಪಾಲುದಾರರು ಹಾಗೂ ಸಂಸ್ಥೆಯ ಸಮನ್ವಯದ ಫಲವಾಗಿ ಈ ಗೌರವ ಲಭಿಸಿದ್ದು, ಮುಂದೆಯೂ ಹೂಡಿಕೆ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಅನುಕೂಲಕರ ವಾತಾವರಣ ನಿರ್ಮಿಸಲು ಬದ್ಧರಾಗಿದ್ದೇವೆ.
> -ಕೆ.ಪಿ. ರುದ್ರಪ್ಪಯ್ಯ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ

ರಾಜ್ಯದ ಪವನ ವಿದ್ಯುತ್ ಯೋಜನೆಗಳು ದೇಶದಲ್ಲೇ ಅಗ್ರಸ್ಥಾನ

ಕಳೆದ ಬಾರಿಯೂ ಕರ್ನಾಟಕ ಇದೇ ಪ್ರಶಸ್ತಿಯನ್ನು ಪಡೆದಿತ್ತು. ದೇಶದಲ್ಲೇ ಅಗ್ರಸ್ಥಾನದಲ್ಲಿರುವ ಪವನ ವಿದ್ಯುತ್ ಯೋಜನೆಗಳ ಅನುಷ್ಠಾನ ಸಾಮರ್ಥ್ಯ ಗುರುತಿಸಿ ದೊರೆತಿರುವ ಈ ಪ್ರಶಸ್ತಿ ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ. ನವೀಕರಿಸಬಹುದಾದ ಇಂಧನ ಉತ್ಪಾದನೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಸರಕಾರದ ಬದ್ಧತೆಯನ್ನು ಇದು ಪ್ರತಿಬಿಂಬಿಸುತ್ತದೆ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಶಾಲಾವಧಿಯಲ್ಲೇ ವಿಷ ಸೇವಿಸಿದ ಮುಖ್ಯ ಶಿಕ್ಷಕ

ಸಹ ಶಿಕ್ಷಕ-ಅಡುಗೆ ಸಿಬ್ಬಂದಿ ಗಲಾಟೆಗೆ ಬೇಸತ್ತು ಮುಖ್ಯ ಶಿಕ್ಷಕ ಆತ್ಮಹತ್ಯೆ ಯತ್ನ

ದಾವಣಗೆರೆ: ಸಹ ಶಿಕ್ಷಕರು, ಅಡುಗೆ ಸಿಬ್ಬಂದಿ ನಡುವಿನ ಭಿನ್ನಾಭಿಪ್ರಾಯದಿಂದ ಬೇಸತ್ತ ಮುಖ್ಯ ಶಿಕ್ಷಕರೊಬ್ಬರು ಶಾಲಾವಧಿಯಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಮಂಗಳವಾರ ಹರಿಹರ ತಾಲೂಕಿನ ಮಲೆಬೆನ್ನೂರು ಸಮೀಪದ ಕೊಕ್ಕನೂರಿನಲ್ಲಿ ನಡೆದಿದೆ.

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಜಯಪ್ಪ (55) ಆತ್ಮಹತ್ಯೆಗೆ ಯತ್ನಿಸಿದವರು. ವಿಷ ಸೇವಿಸಿ ಆತ್ಮ ಹತ್ಯೆಗೆ ಯತ್ನಿಸಿದ್ದು ಗೊತ್ತಾಗುತ್ತಿದ್ದಂತೆ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಜಿಲ್ಲಾ ಚಿಗಟೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಹಲವಾರು ದಿನಗಳಿಂದ ಮುಖ್ಯ ಶಿಕ್ಷಕ ಜಯಪ್ಪ ಹಾಗೂ ಶಾಲೆಯ ಸಹಶಿಕ್ಷಕರು, ಅಡುಗೆ ಸಿಬ್ಬಂದಿ ನಡುವೆ ಭಿನ್ನಾಭಿಪ್ರಾಯ ಉಂಟಾಗುತ್ತು. ವಿವಾದಕ್ಕೆ ಸಂಬಂಧಿಸಿದಂತೆ ಸೋಮವಾರ ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮದ ಮುಖಂಡರ ನೇತೃತ್ವದಲ್ಲಿ ರಾಜಿ ಸಂಧಾನ ಸಭೆ ನಡೆಸಲಾಗಿತ್ತು. ಆದರೂ ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಮಂಗಳವಾರ ಬಿಆರ್‌ಸಿ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಸಭೆ ನಡೆಯುತ್ತಿದ್ದ ವೇಳೆ ಶೌಚಾಲಯಕ್ಕೆ ತೆರಳಿ ಜಯಪ್ಪ ಅಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳೀಯರು ಹಾಗೂ ಶಾಲಾ ಸಿಬ್ಬಂದಿ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಮುಖ್ಯ ಶಿಕ್ಷಕರು ಆತ್ಮಹತ್ಯೆಗೆ ಯತ್ನಿಸಿರುವ ಬಗ್ಗೆ ಈವರೆಗೆ ಪ್ರಕರಣ ದಾಖಲಾಗಿಲ್ಲ.

ಆದ್ಯತೆ ಮೇರೆಗೆ ಪೌರಕಾರ್ಮಿಕರ ಹುದ್ದೆ ಕಾಯಂಗೊಳಿಸಲು ಕ್ರಮ: ಸಚಿವ ಡಾ.ಯತೀಂದ್ರ

ಪೌರ ಕಾರ್ಮಿಕರ ಬೇಡಿಕೆಗಳಿಗೆ ಸರಕಾರ ಸ್ಪಂದನೆ

ಬೆಂಗಳೂರು: ಪೌರ ಕಾರ್ಮಿಕರ ನೇಮಕಾತಿ, ಖಾಯಂಗೊಳಿಸುವಿಕೆ ಹಾಗೂ ಕಲ್ಯಾಣ ಯೋಜನೆಗಳಿಗೆ ಸಂಬಂಧಿಸಿದ ಎಲ್ಲಾ ಬೇಡಿಕೆಗಳಿಗೆ ಸರಕಾರ ಸಹಾನುಭೂತಿಯಿಂದ ಪರಿಗಣಿಸಿ ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಭರವಸೆ ನೀಡಿದರು.

ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ರಾಜ್ಯ ನಗರ ಪಾಲಿಕೆ, ನಗರಸಭೆ ಹಾಗೂ ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಯಿತು. ಈ ವೇಳೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರವೀಂದ್ರ, ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಮಂಗಳವಾರ ಗೃಹ ಕಚೇರಿಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ ಹಾಗೂ ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ, ಪೌರ ಕಾರ್ಮಿಕರ ಸಮಸ್ಯೆಗಳು ಮತ್ತು ಬೇಡಿಕೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ತ್ವರಿತ ಕ್ರಮಕ್ಕೆ ಸೂಚನೆ ನೀಡಿದರು.

ಸಭೆಯಲ್ಲಿ ಮಹಾಸಂಘದ ಪ್ರತಿನಿಧಿಗಳು, ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 6,800 ನೇರ ವೇತನ ಪೌರಕಾರ್ಮಿಕರನ್ನು ಶೀಘ್ರ ಖಾಯಂಗೊಳಿಸುವಂತೆ ಮನವಿ ಮಾಡಿದರು. ಈಗಾಗಲೇ ಸುಮಾರು 29 ಸಾವಿರ ಪೌರಕಾರ್ಮಿಕರನ್ನು ಖಾಯಂಗೊಳಿಸಿರುವ ಸರಕಾರ ಕ್ರಮ ಅವರು ಸ್ವಾಗತಿಸಿದರು.

ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ಸ್ವಚ್ಛತಾ ವಾಹನ ಚಾಲಕರು, ಲೋಡರ್ಸ್ ಮತ್ತು ಕ್ಲೀನರ್ಸ್ ನೇರ ಪಾವತಿ ವ್ಯವಸ್ಥೆಗೆ ಒಳಪಡಿಸುವುದು, ಎಲ್ಲಾ ಪೌರಕಾರ್ಮಿಕರಿಗೆ ನಗದುರಹಿತ ಆರೋಗ್ಯ ಸೇವೆ ಒದಗಿಸುವ ಸಂಜೀವಿನಿ ಯೋಜನೆ ಜಾರಿಗೊಳಿಸುವುದು, ಕರ್ತವ್ಯದ ವೇಳೆ ಮೃತಪಟ್ಟ ಕಾರ್ಮಿಕರ ಕುಟುಂಬ ಸದಸ್ಯರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಸಂಘದ ಮುಖಂಡರು ಮಂಡಿಸಿದರು.

ಇದೇ ವೇಳೆ, ಪೌರಕಾರ್ಮಿಕರ ಮಕ್ಕಳ ಶಿಕ್ಷಣ ಶುಲ್ಕ ಸ್ಥಳೀಯ ಸಂಸ್ಥೆಗಳ ಮೂಲಕ ಭರಿಸುವುದು ಹಾಗೂ ನಿವೃತ್ತ ಕಾರ್ಮಿಕರಿಗೆ ವಿಶೇಷ ಆರ್ಥಿಕ ನೆರವು ನೀಡುವಂತೆ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 670 ಒಳಚರಂಡಿ ಸಹಾಯಕ ಪೌರಕಾರ್ಮಿಕರ ಪೈಕಿ 477 ಮಂದಿಯನ್ನು ಖಾಯಂಗೊಳಿಸುವ ಸರಕಾರದ ನಿರ್ಧಾರ ಸ್ವಾಗತಿಸಿದ ಸಂಘದ ಪ್ರತಿನಿಧಿಗಳು, ಉಳಿದ 193 ಮಂದಿಯನ್ನೂ ಶೀಘ್ರ ಖಾಯಂಗೊಳಿಸುವಂತೆ ಒತ್ತಾಯಿಸಿದರು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರವೀಂದ್ರ ಹಾಗೂ ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

> ಪೌರ ಕಾರ್ಮಿಕರ ಎಲ್ಲ ಬೇಡಿಕೆಗಳನ್ನು ಸರಕಾರ ಸಕಾರಾತ್ಮಕವಾಗಿ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಿದೆ.
> -ಡಾ.ಯತೀಂದ್ರ ಸಿದ್ದರಾಮಯ್ಯ, ನಗರಾಭಿವೃದ್ಧಿ ಸಚಿವ

ಭಾರತದೊಳಗೆ ಗಡಿಯ ಮೂಲಕ ಹೆರಾಯಿನ್, ಅತ್ಯಾಧುನಿಕ ಆಯುಧಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ತಂಡ

ಐಎಸ್‌ಐ ಬೆಂಬಲಿತ ಉಗ್ರರ ಬಂಧನ

ದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜತೆ ನೇರ ಸಂಪರ್ಕ ಹೊಂದಿದ್ದ ಅಂತಾರಾಷ್ಟ್ರೀಯ ಭಯೋತ್ಪಾದನಾ ಮತ್ತು ಅಪರಾಧ ಜಾಲವನ್ನು ದೆಹಲಿ ಪೊಲೀಸರು ಯಶಸ್ವಿಯಾಗಿ ಧ್ವಂಸಗೊಳಿಸಿದ್ದಾರೆ. ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್ ಹಾಗೂ ಉಗ್ರ ಶಹಜಾದ್ ಭಟ್ಟಿ ಮತ್ತು ಆತನ ಸಹಚರ ಅಜ್ಮಲ್ ಗುಜ್ಜರ್ ಸೇರಿದಂತೆ ಏಳು ಮಂದಿ ಸಕ್ರಿಯ ಏಜೆಂಟರನ್ನು ಪೊಲೀಸರು ಬಂಧಿಸಿದ್ದಾರೆ.

ದೆಹಲಿ ಪೊಲೀಸ್ ವಿಶೇಷ ಘಟಕದ ಈ ಕಾರ್ಯಾಚರಣೆಯಿಂದಾಗಿ ದೆಹಲಿ ಎನ್‌ಸಿಆರ್ ಪ್ರದೇಶದಲ್ಲಿ ನಡೆಯಬೇಕಿದ್ದ ಭಾರಿ ಸರಣಿ ಭಯೋತ್ಪಾದನಾ ದಾಳಿಗಳು, ಕಾನೂನುಬಾಹಿರ ಶಸ್ತ್ರಾಸ್ತ್ರ ಸರಬರಾಜು ಮತ್ತು ಮಾದಕ ದ್ರವ್ಯ ಜಾಲವನ್ನು ಮುಂಚಿತವಾಗಿಯೇ ತಡೆಯಲಾಗಿದೆ. ಈ ಉಗ್ರ ಜಾಲವು ಪಾಕಿಸ್ತಾನದಿಂದ ಪಂಜಾಬ್ ಗಡಿಯ ಮೂಲಕ ಡ್ರೋನ್‌ಗಳ ಸಹಾಯದಿಂದ ಹೆರಾಯಿನ್ ಹಾಗೂ ಅತ್ಯಾಧುನಿಕ ಆಯುಧಗಳನ್ನು

ಭಾರತದೊಳಗೆ ಕಳ್ಳಸಾಗಣೆ ಮಾಡುತ್ತಿತ್ತು, ನಂತರ ಅವುಗಳನ್ನು ದೆಹಲಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಿಗೆ ವಿತರಿಸಲಾಗುತ್ತಿತ್ತು. ಬಂಧಿತ ಉಗ್ರರು ದೆಹಲಿಯ ಪ್ರಮುಖ ಸಾರ್ವಜನಿಕ ಸ್ಥಳಗಳು, ಸೂಕ್ಷ್ಮ ಪ್ರದೇಶಗಳು ಮತ್ತು ಪ್ರಮುಖ ಧಾರ್ಮಿಕ ಮುಖಂಡರ ನೆಲೆಗಳ ಮೇಲೆ ನಿಗಾ ಇಟ್ಟು, ಅವುಗಳ ವಿಡಿಯೋ ಹಾಗೂ ಫೋಟೋಗಳನ್ನು ಪಾಕಿಸ್ತಾನದ ಹ್ಯಾಂಡ್ಲರ್‌ಗಳಿಗೆ ಕಳುಹಿಸಿಕೊಟ್ಟಿರುವುದು ತನಿಖೆಯಲ್ಲಿ ಬಹಿರಂಗವಾಗಿದೆ.

ಜೈಲಿನೊಳಗಿನಿಂದ ಕಾರ್ಯಾಚರಣೆ

ಜೈಲಿನ ಒಳಗಿದ್ದೇ ಗ್ಯಾಂಗ್‌ಸ್ಟರ್ ದೀಪಕ್ ಅಗ್ರೋಲಾ ಮೊಬೈಲ್ ಬಳಸಿ ಈ ಕಾರ್ಯಾಚರಣೆಯನ್ನು ಸಂಯೋಜಿಸುತ್ತಿದ್ದ ಎನ್ನುವುದು ಪತ್ತೆಯಾಗಿದೆ. ಶಸ್ತ್ರಾಸ್ತ್ರಗಳ ವ್ಯವಹಾರಕ್ಕಾಗಿ ಡಿಜಿಟಲ್ ಯುಪಿಐ ಖಾತೆಗಳ ಮೂಲಕ ಲಕ್ಷಾಂತರ ರುಪಾಯಿ ಹಣದ ವಹಿವಾಟು ನಡೆಸಿರುವುದು ಬೆಳಕಿಗೆ ಬಂದಿದೆ. ಸಾಮಾಜಿಕ ಮಾಧ್ಯಮಗಳ ಮೂಲಕ ಭಾರತದ ನಿರುದ್ಯೋಗಿ ಯುವಕರನ್ನು ಸಂಪರ್ಕಿಸಿ, ಹಣದ ಆಮಿಷ ಒಡ್ಡಿ ಈ ದೇಶದ್ರೋಹಿ ಜಾಲಕ್ಕೆ ನೇಮಿಸಿಕೊಳ್ಳಲಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದು, ತಲೆಮರೆಸಿಕೊಂಡಿರುವ ಇತರರಿಗಾಗಿ ತೀವ್ರ ಹುಡುಕಾಟ ಮುಂದುವರಿಸಿದ್ದಾರೆ.

ಹೋಂಸ್ಟೇಯಲ್ಲಿ ವಾಸವಾಗಿದ್ದ ದೆಹಲಿ ಮೂಲದ ಐಟಿ ದಂಪತಿ

ನವವಿವಾಹಿತೆ ನಿಗೂಢ ಸಾವು

ಮಸ್ಸೂರಿ (ಉತ್ತರಾಖಂಡ): ಮಸ್ಸೂರಿಯ ಹೋಂಸ್ಟೇಯಲ್ಲಿ ವಾಸವಾಗಿದ್ದ ದೆಹಲಿಯ 27 ವರ್ಷದ ನವವಿವಾಹಿತೆ ಸೋಮವಾರ ನಿಗೂಢವಾಗಿ ಸಾವನ್ನಪ್ಪಿದ್ದಾರೆ. ದೆಹಲಿಯ ದಂಪತಿ ಮಸ್ಸೂರಿ ಧನೌಲ್ಟಿ ರಸ್ತೆಯ ತಿಪ್ರಿಧರ್ ಬಳಿಯ ಹೋಂಸ್ಟೇಯಲ್ಲಿ ತಂಗಿದ್ದರು ಎಂದು ತಿಳಿದುಬಂದಿದೆ. ಸೋಮವಾರ ಕೊಠಡಿಯಲ್ಲಿ ಪತ್ನಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದರು.

ಪೊಲೀಸರಿಂದ ಮಾಹಿತಿ: ಬೆಳಗ್ಗೆ ಎದ್ದಾಗ ತನ್ನ ಪತ್ನಿಯ ಮೂಗಿನಿಂದ ರಕ್ತಸ್ರಾವವಾಗಿ ನೆಲದ ಮೇಲೆ ಬಿದ್ದಿರುವುದನ್ನು ಕಂಡ ಪತಿ, ಗಾಬರಿಗೊಂಡು ತಕ್ಷಣ ಹೋಂಸ್ಟೇ ಆಡಳಿತ ಮಂಡಳಿ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಸಿಕ್ಕ ತಕ್ಷಣ ಮಸ್ಸೂರಿ ಪೊಲೀಸರು, 108 ಆಂಬ್ಯುಲೆನ್ಸ್ ಮತ್ತು ನಂತರ ವಿಧಿವಿಜ್ಞಾನ ತಂಡದೊಂದಿಗೆ ಸ್ಥಳಕ್ಕೆ ಆಗಮಿಸಿತು. ಬಳಿಕ ಅಸ್ವಸ್ಥ ಸ್ಥಿತಿಯಲ್ಲಿದ್ದ ಮಹಿಳೆಯನ್ನು ಪರೀಕ್ಷಿಸಿದರು. ತಪಾಸಣೆ ಬಳಿಕ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು.

ಮೃತ ಮಹಿಳೆಯನ್ನು ರಾಧಾ ಗಾಯತ್ರಿ ಎಂದು ಪೊಲೀಸರು ಗುರುತಿಸಿದ್ದಾರೆ. ಅವರು ಸುಮಾರು ಏಳು ತಿಂಗಳ ಹಿಂದೆ ಐಟಿ ವಲಯದಲ್ಲಿ ಕೆಲಸ ಮಾಡುವ ಸೌಮ್ಯ ಶ್ರೀಚರಣ್ ಅವರನ್ನು ವಿವಾಹವಾಗಿದ್ದರು. ಪೊಲೀಸ್ ತನಿಖೆಯಲ್ಲಿ ದಂಪತಿಗಳು ನವೆಂಬರ್ 2023ರಲ್ಲಿ ವಿವಾಹವಾಗಿದ್ದರು ಎಂದು ತಿಳಿದು ಬಂದಿದೆ. ಪತಿ ಪುಣೆಯಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಪತ್ನಿ ಗುರುಗ್ರಾಮ್‌ನಲ್ಲಿ ಉದ್ಯೋಗದಲ್ಲಿದ್ದರು.

ದಂಪತಿ ಜೂನ್ 13ರಂದು ದೆಹಲಿಯಿಂದ ಉತ್ತರಾಖಂಡಕ್ಕೆ ಹೊರಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಋಷಿಕೇಶದಲ್ಲಿ ಸಮಯ ಕಳೆದ ನಂತರ ಅವರು ಶನಿವಾರ ರಾತ್ರಿ ಮಸ್ಸೂರಿಗೆ ಆಗಮಿಸಿ ಧನೌಲ್ತಿ ರಸ್ತೆಯಲ್ಲಿರುವ ಹೋಂಸ್ಟೇನಲ್ಲಿ ತಂಗಿದ್ದರು.

---

45 ಕೋಟಿ ರು. ಮೌಲ್ಯದ ಆಸ್ತಿಪಾಸ್ತಿ ವಶ, 598 ಎಫ್‌ಐಆರ್‌ಗಳು ದಾಖಲು

ಮಾದಕದ್ರವ್ಯ: ಕಾಶ್ಮೀರದಲ್ಲಿ 700 ಮಂದಿ ಬಂಧನ

ಶ್ರೀನಗರ: ಜಮ್ಮುಕಾಶ್ಮೀರ ಕಣಿವೆಯ ಜಮ್ಮು ವಿಭಾಗದಾದ್ಯಂತ ನಡೆಯುತ್ತಿರುವ ಮಾದಕ ದ್ರವ್ಯ ವಿರೋಧಿ ಕಾರ್ಯಾಚರಣೆಯು ಗಮನಾರ್ಹ ಫಲಿತಾಂಶಗಳನ್ನು ನೀಡಿದ್ದು, 700ಕ್ಕೂ ಹೆಚ್ಚು ಮಾದಕ ದ್ರವ್ಯ ಮಾರಾಟಗಾರರನ್ನು ಬಂಧಿಸಲಾಗಿದೆ. ಈ ವೇಳೆ 45 ಕೋಟಿ ರು.ಗಳಿಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಶಾ ಮುಕ್ತ್ ಜೆ-ಕೆ ಅಭಿಯಾನದ ಅಡಿಯಲ್ಲಿ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿ ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡಿದ್ದಾರೆ, ಮಾದಕ ದ್ರವ್ಯ ಕಳ್ಳಸಾಗಣೆ ಜಾಲಗಳನ್ನು ಕಿತ್ತುಹಾಕಿದ್ದಾರೆ ಮತ್ತು ಪುನರ್ವಸತಿ ಪ್ರಯತ್ನಗಳನ್ನು ತೀವ್ರಗೊಳಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಈ ಪ್ರದೇಶದಲ್ಲಿ 100 ದಿನಗಳ ಮಾದಕ ದ್ರವ್ಯ ವಿರೋಧಿ ಅಭಿಯಾನದ ಎರಡು ತಿಂಗಳ ಪ್ರಗತಿಯನ್ನು ಪರಿಶೀಲಿಸಲು ಜಮ್ಮುವಿನ ವಿಭಾಗೀಯ ಆಯುಕ್ತ ರಮೇಶ್ ಕುಮಾರ್ ಮತ್ತು ಜಮ್ಮು ವಲಯದ ಪೊಲೀಸ್ ಮಹಾನಿರ್ದೇಶಕ ಭೀಮ್ ಸೇನ್ ಟುಟಿ ಅವರ ಜಂಟಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಮಾಹಿತಿಯನ್ನು ನೀಡಲಾಗಿದೆ ಎಂದು ಅವರು ಹೇಳಿದರು.

ಮಾದಕದ್ರವ್ಯ ಮಾರಾಟಗಾರರ ವಿರುದ್ಧ ಒಟ್ಟು 598 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಇದರಲ್ಲಿ ಇಲ್ಲಿಯವರೆಗೆ 701 ಮಾದಕ ದ್ರವ್ಯ ಮಾರಾಟಗಾರರನ್ನು ಬಂಧಿಸಲಾಗಿದೆ. ಜಮ್ಮುವಿನಾದ್ಯಂತ 155 ಮಾದಕದ್ರವ್ಯ ಚಟುವಟಿಕೆಯ ತಾಣಗಳನ್ನು ಗುರುತಿಸಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಮಾದಕವಸ್ತು ಕಳ್ಳಸಾಗಣೆದಾರರ ವಿರುದ್ಧ 24 ಪಿಐಟಿ-ಎನ್‌ಡಿಪಿಎಸ್ ಬಂಧನ ಆದೇಶಗಳನ್ನು ಹೊರಡಿಸಲಾಗಿದ್ದು, 14 ಕೆಜಿಗೂ ಹೆಚ್ಚು ಹೆರಾಯಿನ್, 49 ಕೆಜಿ ಗಾಂಜಾ, 3.712 ಕೆಜಿ ಚರಸ್ ಮತ್ತು 204.5 ಕೆಜಿ ಗಸಗಸೆ ಸೇರಿದಂತೆ ದೊಡ್ಡ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಡ್ರಗ್ಸ್ ತಡೆಗಟ್ಟುವ ಕ್ರಮವಾಗಿ, 19.30 ಕೋಟಿ ರು. ಮೌಲ್ಯದ ಮಾದಕವಸ್ತು ಕಳ್ಳಸಾಗಣೆದಾರರ 62 ಸ್ಥಿರ ಆಸ್ತಿಗಳನ್ನು ಕೆಡವಲಾಗಿದೆ. 24.868 ಕೋಟಿ ರು. ಮೌಲ್ಯದ 21 ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿದೆ. 1.69 ಕೋಟಿ ರು. ಮೌಲ್ಯದ ಚರಾಸ್ತಿಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ ಅಥವಾ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಒಟ್ಟು 180 ಪಾಸ್‌ಪೋರ್ಟ್‌ಗಳನ್ನು ಅಮಾನತುಗೊಳಿಸಲು ಶಿಫಾರಸು ಮಾಡಲಾಗಿದೆ, 101 ಚಾಲನಾ ಪರವಾನಗಿಗಳನ್ನು ಅಮಾನತುಗೊಳಿಸಲಾಗಿದೆ ಮತ್ತು ಇಲ್ಲಿಯವರೆಗೆ 81 ರದ್ದುಪಡಿಸಲಾಗಿದೆ ಎಂದು ಅವರು ಹೇಳಿದರು.

ಹೆಚ್ಚುವರಿಯಾಗಿ, ಜಮ್ಮು ವಿಭಾಗದ ವಿವಿಧ ಜಿಲ್ಲೆಗಳಲ್ಲಿ ಸಾರಿಗೆ ಇಲಾಖೆಯು 243 ವಾಹನಗಳ ನೋಂದಣಿ ಪ್ರಮಾಣಪತ್ರಗಳನ್ನು ಅಮಾನತುಗೊಳಿಸಿದೆ ಮತ್ತು 94 ಜನರನ್ನು ರದ್ದುಗೊಳಿಸಿದೆ ಎಂದು ವಕ್ತಾರರು ತಿಳಿಸಿದ್ದಾರೆ. ಮಾದಕದ್ರವ್ಯ ಸೇವನೆಯ ಬಲಿಪಶುಗಳ ಪುನರ್ವಸತಿಯನ್ನು ಕೇಂದ್ರೀಕರಿಸಿ, 2,293 ಮಾದಕ ದ್ರವ್ಯ ಬಳಕೆದಾರರಲ್ಲಿ 884 ಯುವಕರನ್ನು ಪುನರ್ವಸತಿಗಾಗಿ ಗುರುತಿಸಲಾಗಿದೆ. ಈ ಪೈಕಿ 547 ಯುವಕರನ್ನು ಪುನರ್ವಸತಿ ಕೇಂದ್ರಕ್ಕೆ ಸಾಗಿಸಲಾಗಿದೆ ಮತ್ತು 254 ಜನರನ್ನು ಸ್ವ-ಉದ್ಯೋಗ ಯೋಜನೆಗಳೊಂದಿಗೆ ಸಂಪರ್ಕಿಸಲಾಗಿದೆ ಎಂದು ಅವರು ಹೇಳಿದರು.

ಅಮೆರಿಕ-ಇರಾನ್ ಶಾಂತಿ ಒಪ್ಪಂದ | ಹಾರ್ಮುಜ್ ಜಲಸಂಧಿ ಮಾರ್ಗ ತೆರವು

ಕಚ್ಚಾ ತೈಲ ಬೆಲೆ ಭಾರೀ ಇಳಿಕೆ

ವಾಷಿಂಗ್ಟನ್: ಅಮೆರಿಕ ಮತ್ತು ಇರಾನ್ ಸಂಘರ್ಷ ಅಂತ್ಯಗೊಂಡು ಶಾಂತಿ ಒಪ್ಪಂದ ಘೋಷಣೆ ಬೆನ್ನಲ್ಲೇ ಕಚ್ಚಾ ತೈಲ ಬೆಲೆಗಳಲ್ಲಿ ಇಳಿಕೆಯಾಗಿದೆ. ಡಬ್ಲ್ಯೂಟಿಐ ಕಚ್ಚಾ ತೈಲ ಇಂದು ಬ್ಯಾರೆಲ್‌ಗೆ ಸುಮಾರು 80 ಡಾಲರ್‌ಗೆ ಇಳಿದರೆ, ಬ್ರೆಂಟ್ ಕಚ್ಚಾ ತೈಲವು ಸುಮಾರು 4%ರಷ್ಟು ಕುಸಿದು ಪ್ರತಿ ಬ್ಯಾರೆಲ್‌ಗೆ 83.82 ಡಾಲರ್‌ಗೆ ತಲುಪಿದೆ. ಅಮೆರಿಕ ಮತ್ತು ಇರಾನ್ ಶಾಂತಿ ಒಪ್ಪಂದ ಘೋಷಿಸಿದ್ದು, ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಒಪ್ಪಿಕೊಂಡಿವೆ, ಹೀಗಾಗಿ ಕಚ್ಚಾ ತೈಲ ಬೆಲೆಯಲ್ಲಿ ಕುಸಿತ ಕಂಡುಬಂದಿದೆ. ಈ ಬೆಳವಣಿಗೆಯು ಜಾಗತಿಕ ಇಂಧನ ಪೂರೈಕೆಯಲ್ಲಿನ ಅಡಚಣೆಗಳ ಬಗೆಗಿದ್ದ ಕಳವಳ ನಿವಾರಣೆ ಮಾಡಿದೆ. ವಿಶ್ವಾದ್ಯಂತ ಇಂಧನ ಬೆಲೆಗಳು ಕಡಿಮೆಯಾಗುವ ಭರವಸೆಯನ್ನು ಹುಟ್ಟುಹಾಕಿದೆ.

ಯುದ್ಧದಿಂದಾಗಿ ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿತ್ತು. ಇದರಿಂದ ಭಾರತದ ತೈಲ ಮಾರುಕಟ್ಟೆ ಕಂಪನಿಗಳು ಇತ್ತೀಚಿನ



ತಿಂಗಳುಗಳಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಬೆಲೆಗಳನ್ನು ಹೆಚ್ಚಿಸಿದ್ದವು. ಈಗ ತೈಲ ಬೆಲೆ ಇಳಿಕೆಯಾಗಿದ್ದು, ಭಾರತದ ಇಂಧನ ದರವೂ ಕಡಿಮೆಯಾಗುವ ಸಾಧ್ಯತೆ ಇದೆ.

ಮಧ್ಯಪ್ರಾಚ್ಯದಿಂದ ಬರುವ ಇಂಧನ ಪೂರೈಕೆಯ ಮೇಲೆ ಭಾರತ ಹೆಚ್ಚು ಅವಲಂಬಿತವಾಗಿದೆ. ದೇಶದ ಕಚ್ಚಾ ತೈಲ ಮತ್ತು ಎಲ್‌ಪಿಜಿ ಆಮದುಗಳ ಹೆಚ್ಚಿನ ಪಾಲು ಹಾರ್ಮುಜ್ ಜಲಸಂಧಿಯ ಮೂಲಕ ಬರುತ್ತಿತ್ತು. ಯುದ್ಧದಿಂದ ತೈಲ ಆಮದಿನಲ್ಲೂ ವ್ಯತ್ಯಯವಾಗಿತ್ತು. ಈಗ ಮಾರ್ಗವನ್ನು ಮತ್ತೆ ತೆರೆಯುವುದರಿಂದ ಪೂರೈಕೆಯಲ್ಲಿ ಸುಧಾರಣೆ ಆಗುವ ಜೊತೆಗೆ ಭಾರತಕ್ಕೆ ನೇರವಾಗಿ ಪ್ರಯೋಜನವಾಗಬಹುದು.

ಸಮಾಚಾರ ಸಣ್ಣದಲ್ಲ

ಆನೆ ಅವಾಂತರ: ಭಕ್ತರಲ್ಲಿ ಆತಂಕ

ಕಣ್ಣೂರು: ಕೇರಳದ ಕೊಟ್ಟಿಯೂರು ದೇವಾಲಯದ ವಾರ್ಷಿಕ ಉತ್ಸವದ ವೇಳೆ ಅಲಂಕರಿಸಲ್ಪಟ್ಟ ಆನೆಯೊಂದು ಆಕಸ್ಮಿಕವಾಗಿ ನಿಯಂತ್ರಣ ತಪ್ಪಿ ಓಡಾಟ ನಡೆಸಿದ ಪರಿಣಾಮ ಭಕ್ತರಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಯಿತು. ದೇವಾಲಯದ ಆವರಣದಲ್ಲಿ ಭಕ್ತರು ಹಾಗೂ ಉತ್ಸವ ಸಿಬ್ಬಂದಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದು, ಆನೆ ಅಶಾಂತಗೊಂಡು ಓಡಾಡತೊಡಗಿತು. ಇದರಿಂದ ಜನರು ಸುರಕ್ಷಿತ ಸ್ಥಳಗಳಿಗೆ ಓಡಿಹೋಗಿ ಆತಂಕಕ್ಕೆ ಒಳಗಾದರು. ಘಟನೆ ನಡೆದ ತಕ್ಷಣ ಮಾವುತರು ಹಾಗೂ ದೇವಾಲಯದ ಸಿಬ್ಬಂದಿ ಆನೆಯನ್ನು ನಿಯಂತ್ರಣಕ್ಕೆ ತರಲು ಕ್ರಮ ಕೈಗೊಂಡರು. ಕೆಲ ಸಮಯದ ಪ್ರಯತ್ನದ ಬಳಿಕ ಆನೆಯನ್ನು ಶಾಂತಗೊಳಿಸಿ ಪರಿಸ್ಥಿತಿಯನ್ನು ಹತೋಟಿಗೆ ತರಲಾಯಿತು. ಈ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಅಥವಾ ಗಂಭೀರ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ದೇವಾಲಯ ಉತ್ಸವಗಳಲ್ಲಿ ಆನೆಗಳ ಸುರಕ್ಷಾ ನಿರ್ವಹಣೆ ಕುರಿತು ಮತ್ತೊಮ್ಮೆ ಪ್ರಶ್ನೆಗಳು ಎದ್ದಿವೆ. ಉತ್ಸವಕ್ಕೆ ಯಾವುದೇ ತೊಂದರೆಯಾಗದೆ ನೆರವೇರಿದೆ.

ಚುನಾವಣಾ ಫಲಿತಾಂಶ ಪ್ರಶ್ನಿಸಿದ ಮಮತಾ

ಕೋಲ್ಕತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಭಬಾನಿಪುರದಲ್ಲಿ ಸೋಲು ಕಂಡರೂ ಟಿಎಂಸಿ ನಾಯಕಿ ಹೋರಾಟ ಮುಂದುವರೆಸಲು

ಮುಂದಾಗಿದ್ದಾರೆ. ಭಬಾನಿಪುರ ಕ್ಷೇತ್ರದಲ್ಲಿನ ಚುನಾವಣಾ ಫಲಿತಾಂಶವನ್ನು ಪ್ರಶ್ನಿಸಿ ಅವರು ಕೊಲ್ಕತಾ ಹೈಕೋರ್ಟ್ ಮೊರೆ ಹೋಗಿದ್ದಾರೆ. ಮಂಗಳವಾರ ಮಧ್ಯಾಹ್ನ ಕಲ್ಕತ್ತಾ ಹೈಕೋರ್ಟ್‌ಗೆ ಹಾಜರಾಗಿ ಅರ್ಜಿ ಸಲ್ಲಿಸಿರುವ ಮಾಜಿ ಸಿಎಂ ಮಮತಾ ಬ್ಯಾನರ್ಜಿಗೆ, ಟಿಎಂಸಿ ಹಿರಿಯ ನಾಯಕರಾದ ರಾಜ್ಯಸಭಾ ಸಂಸದ ಡೆರೆಕ್ ಒ'ಬ್ರೇನ್ ಮತ್ತು ದೊಲ ಸೇನ್ ಮತ್ತು ಅವರ ವಕೀಲರಾಗಿರುವ ಲೋಕಸಭಾ ಸಂಸದ ಕಲ್ಯಾಣ್ ಬ್ಯಾನರ್ಜಿ, ಪಕ್ಷದ ನಾಯಕ ಕುನಾಲ್ ಘೋಷ್ ಬೆಂಬಲವಾಗಿ ನಿಂತರು. ಭಬಾನಿಪುರ ವಿಧಾನಸಭಾ ಕ್ಷೇತ್ರದಲ್ಲಿನ ಫಲಿತಾಂಶ ಪ್ರಶ್ನಿಸಿ ಅರ್ಜಿ ಸಲ್ಲಿಸಿರುವ ಅವರು, ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ಕಾನೂನು ದಾಖಲಾತಿಗಳಿಗೆ ಸಹಿ ಹಾಕಲು ಕೋರ್ಟ್‌ಗೆ ಹಾಜರಾದರು. ಎರಡು ಹಂತದಲ್ಲಿ ನಡೆದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಏಪ್ರಿಲ್ 29ರಂದು ಮತದಾನ ಎದುರಿಸಿದ್ದ ಭಬಾನಿಪುರದಲ್ಲಿ ಸುವೇಂದು ಅಧಿಕಾರಿ 15,105 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದರು.

ತನ್ನ ಮೇಲಿನ ಹಲ್ಲೆಗೆ ನಿರುದ್ಯೋಗ ಕಾರಣ

ದೆಹಲಿ: ರಾಜಸ್ಥಾನದ ಜೈಪುರದಲ್ಲಿ ನಡೆದ ಪ್ರತಿಭಟನೆಯ ವೇಳೆ ತಮ್ಮ ಮೇಲಾದ ನಡೆದ ಹಲ್ಲೆ ಮತ್ತು ಕಪಾಳಮೋಕ್ಷದ ಘಟನೆಗೆ ದೇಶದಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಬಿಕ್ಕಟ್ಟೇ ಮುಖ್ಯ ಕಾರಣ

ಎಂದು ಕಾಕ್ರೋಚ್ ಜನತಾ ಪಾರ್ಟಿ ಸ್ಥಾಪಕ ಅಭಿಜಿತ್ ದೀಪ್ಕೆ ಮಂಗಳವಾರ ಹೇಳಿದ್ದಾರೆ. ಕಳೆದ ತಿಂಗಳು ಈ ವ್ಯಂಗ್ಯ ರಾಜಕೀಯ ಪಕ್ಷವನ್ನು ಸ್ಥಾಪಿಸಿ ದೇಶದ ಗಮನ ಸೆಳೆದಿದ್ದ ದೀಪ್ಕೆ, ಯುವಕರಿಗೆ ಸೂಕ್ತ ಉದ್ಯೋಗಾವಕಾಶಗಳು ಇಲ್ಲದಿರುವುದೇ ಇಂತಹ ಹಿಂಸಾತ್ಮಕ ಕೃತ್ಯಗಳಿಗೆ ಪ್ರೇರಣೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಜೈಪುರದಲ್ಲಿ ನಡೆದ ಘಟನೆಯು ದೇಶದ ತೀವ್ರ ನಿರುದ್ಯೋಗದ ಫಲಿತಾಂಶ. ದಾಳಿ ಮಾಡಿದ ವ್ಯಕ್ತಿಗೆ ಒಂದು ಉತ್ತಮ ಕೆಲಸವಿದ್ದಿದ್ದರೆ, ಆತ ಇಂತಹ ಕೃತ್ಯಕ್ಕೆ ಕೈಹಾಕುತ್ತಿರಲಿಲ್ಲ ಎಂದು ದೀಪ್ಕೆ ಸುದ್ದಿಗಾರರಿಗೆ ತಿಳಿಸಿದ್ದಾರೆ. ನೀಟ್ ಸೇರಿ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣದ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ದೀಪ್ಕೆ ಪ್ರತಿಭಟನೆ ನಡೆಸುತ್ತಿದ್ದರು. ಯುವಕರಿಗೆ ಸರಿಯಾದ ಆದಾಯದ ಮಾರ್ಗಗಳಿಲ್ಲದ ಕಾರಣ, ಕೇವಲ 1,000 ರು.ಯಿಂದ 2,000 ರು. ನೀಡಿ ಇಂತಹ ಕೃತ್ಯಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಸರಕಾರ ಇಂತಹ ಜನರಿಗೆ ಉದ್ಯೋಗ ನೀಡಲು ಗಮನಹರಿಸಲಿ ಎಂದು ಅವರು ವಿನಂತಿಸಿದ್ದಾರೆ.

ಸ್ವಿಗ್ಗಿ ಜತೆ ವಾರಣಾಸಿ ರುಚಿಗೆ ಚಾಲನೆ

ವಾರಣಾಸಿ: ಭಾರತದ ಪ್ರಖ್ಯಾತ ತೀರ್ಥಕ್ಷೇತ್ರಗಳಲ್ಲಿ ಒಂದಾದ ಕಾಶಿಯ ಸಾಂಪ್ರದಾಯಿಕ ಆಹಾರದ ರುಚಿಯನ್ನು ಜನರಿಗೆ ಇನ್ನಷ್ಟು ಸುಲಭವಾಗಿ ತಲುಪಿಸುವ ನಿಟ್ಟಿನಲ್ಲಿ ಜನಪ್ರಿಯ ಆನ್‌ಲೈನ್ ಫುಡ್ ಡೆಲಿವರಿ ಪ್ಲಾಟ್‌ಫಾರ್ಮ್ ಸ್ವಿಗ್ಗಿ ಮಹತ್ವದ ಹೆಜ್ಜೆ ಇಟ್ಟಿದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಈ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಿದರು. ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯ ಮತ್ತು ವಾರಣಾಸಿ ನಗರ ನಿಗಮದ ಸಹಭಾಗಿತ್ವದಲ್ಲಿ 'ಸ್ವಿಗ್ಗಿ ಜೊತೆಗೆ ವಾರಣಾಸಿಯ ರುಚಿ' (ವಾರಣಾಸಿ ಕಾ ಸ್ವಾದ್, ಸ್ವಿಗ್ಗಿ ಕೆ ಸಾಥ್) ಎಂಬ ಹೊಸ ಯೋಜನೆಯನ್ನು ಸ್ವಿಗ್ಗಿ ಪರಿಚಯಿಸಿದೆ.

{ **ಅಖಿಲೇಶ್ ಯಾದವ್** } ಅಧ್ಯಕ್ಷ, ಸಮಾಜವಾದಿ ಪಕ್ಷ

ಅಯೋಧ್ಯೆಯ ರಾಮಮಂದಿರದ ಕಾಣಿಕೆ ಹಣ ನಾಪತ್ತೆ ಪ್ರಕರಣದಲ್ಲಿ ಅದ್ಯಾವ ಸನಾತನ ವಿರೋಧಿ ತಂಡ ಭಾಗಿಯಾಗಿದೆ ಎನ್ನುವ ಬಗ್ಗೆ ಸಮಗ್ರ ತನಿಖೆ ಆಗಬೇಕು. ಕಾಣಿಕೆ ವಿಚಾರ ಈಗ ಬೆಳಕಿಗೆ ಬಂದಿದೆ, ಮುಂದೆ ಏನೆಲ್ಲಾ ವಿಷಯಗಳು ಹೊರಬರುತ್ತದೆ ಎನ್ನುವುದನ್ನು ಕಾದು ನೋಡೋಣ.

ಮುಂಗಾರು ಬೆಳೆಗಳಿಗಾಗಿ ಜಿಲ್ಲಾ ಮಟ್ಟದ ತುರ್ತು ಯೋಜನೆ ರೂಪಿಸಿ: ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್

ಎಲ್ ನಿನೊ ಪರಿಣಾಮ ತೀವ್ರ ಸಾಧ್ಯತೆ ಎಚ್ಚರಿಕೆ

ದೆಹಲಿ: ಮುಂಗಾರು ಬೆಳೆ ಋತುವಿನಲ್ಲಿ 'ಎಲ್ ನಿನೊ' ಪರಿಣಾಮ ತೀವ್ರವಾಗಿರುವ ಸಾಧ್ಯತೆಗಳಿವೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮಂಗಳವಾರ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

2026ರ ಮುಂಗಾರು ಹಂಗಾಮಿನ ಬೆಳೆಗಳ ಸಿದ್ಧತೆಗಳ ಕುರಿತು ಸಾಪ್ತಾಹಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳೆ ಕೊರತೆ ಇರುವ ಜಿಲ್ಲೆಗಳಲ್ಲಿ ಮುಂಗಡ ತುರ್ತು ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದ್ದು, ಹತ್ತಿ ಮತ್ತು ದ್ವಿದಳ ಧಾನ್ಯಗಳ ಬೆಳೆಯ ವಿಸ್ತೀರ್ಣ ಹೆಚ್ಚಿಸುವಂತೆ ಒತ್ತಾಯಿಸಿದ್ದಾರೆ.

ಹವಾಮಾನ ವೈಪರೀತ್ಯದ ಸಂದರ್ಭದಲ್ಲಿ ರೈತರಿಗೆ ಆಯ್ಕೆಗಳು, ಸಲಹೆ ಮತ್ತು ಸಹಾಯವನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗುವಂತೆ, ದುರ್ಬಲ ಜಿಲ್ಲೆಗಳನ್ನು ಸ್ಪಷ್ಟವಾಗಿ ಗುರುತಿಸಲು ಮತ್ತು ಬೆಳೆವಾರು ತುರ್ತು ಯೋಜನೆಗಳನ್ನು ಮುಂಚಿತವಾಗಿ ಸಿದ್ಧಪಡಿಸಲು ಚೌಹಾಣ್ ರಾಜ್ಯ ಸರಕಾರಗಳಿಗೆ ನಿರ್ದೇಶನ ನೀಡಿದ್ದಾರೆ.

ಪ್ರತೀ ದುರ್ಬಲ ಜಿಲ್ಲೆಗೆ ಪ್ರತ್ಯೇಕ ಮತ್ತು ಪ್ರಾಯೋಗಿಕ ಕಾರ್ಯತಂತ್ರವನ್ನು ಅಭಿವೃದ್ಧಿಪಡಿಸಬೇಕು, ನೀರಿನ ಸಂರಕ್ಷಣೆ, ತೇವಾಂಶ ನಿರ್ವಹಣೆ, ಅಂತರ ಬೆಳೆ ಮತ್ತು ಪರ್ಯಾಯ ಬೆಳೆ ಮಾದರಿಗಳಿಗೆ ವಿಶೇಷ ಗಮನ ನೀಡಬೇಕು ಎಂದು ಅವರು ಹೇಳಿದರು.

ಎಚ್ಚರಿಕೆ ನೀಡುವ ಸಂದೇಶಗಳಲ್ಲದೇ ರೈತರು ವೈಜ್ಞಾನಿಕ ವಿಶ್ಲೇಷಣೆಯ ಆಧಾರದ ಮೇಲೆ ಶಾಂತ, ವಿಶ್ವಾಸಾರ್ಹ ಮತ್ತು ಪರಿಹಾರ-ಆಧಾರಿತ ಸಂದೇಶಗಳನ್ನು ಪಡೆಯುವುದನ್ನು ಖಚಿತಪಡಿಸಿ ಕೊಳ್ಳುವುದು ಸರಕಾರದ ಆದ್ಯತೆಯಾಗಿದೆ ಎಂದು ಸಚಿವರು ಒತ್ತಿ ಹೇಳಿದರು.

ಉತ್ಪಾದಕತೆ ಮತ್ತು ಕೃಷಿ ಆದಾಯ ಎರಡನ್ನೂ ಸುಧಾರಿಸಲು ವೈಜ್ಞಾನಿಕ ವಿಧಾನಗಳು, ಸರಿಯಾದ ತಳಿ ಆಯ್ಕೆ, ಅಂತರ ಬೆಳೆ, ಹಸಿಗೊಬ್ಬರ ಹಾಕುವಿಕೆ ಮತ್ತು ತೇವಾಂಶ ಸಂರಕ್ಷಣೆಯನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳುವಂತೆ ಚೌಹಾಣ್ ಕರೆ ನೀಡಿದ್ದಾರೆ.

ಕೃಷಿ ಸಚಿವರ ಸಭೆಯಲ್ಲಿ ನಡೆದ ಪ್ರಮುಖ ಚರ್ಚೆಗಳು

ಸಭೆಯಲ್ಲಿ ಬೆಳೆವಾರು ಗುರಿಗಳು, ಬಿತ್ತನೆ ಪ್ರಗತಿ ಮತ್ತು ರಾಜ್ಯವಾರು 2026ರ ಮುಂಗಾಳು ಬೆಳೆ ಸಿದ್ಧತೆಗಳನ್ನು ವಿಶೇಷವಾಗಿ ಹತ್ತಿ ಉತ್ಪಾದನೆ ಹೆಚ್ಚಿಸುವ ಬಗ್ಗೆ ಹೆಚ್ಚು ಒತ್ತು ನೀಡಿ ಚರ್ಚಿಸಲಾಯಿತು. ದ್ವಿದಳ ಧಾನ್ಯಗಳ ಸ್ವಾವಲಂಬನೆ ಮಿಷನ್ ಕುರಿತು ಪ್ರಮುಖವಾಗಿ ಚರ್ಚೆ ನಡೆಸಲಾಯಿತು. ಕೃಷಿ ವಿಶ್ವವಿದ್ಯಾಲಯಗಳು, ಐಸಿಎಆರ್ ಸಂಸ್ಥೆಗಳು, ಕೆವಿಕೆಗಳು ಮತ್ತು ರಾಜ್ಯ ಕೃಷಿ ಇಲಾಖೆಗಳ ನಡುವೆ ಬಿಗಿಯಾದ ಸಮನ್ವಯದ ಅಗತ್ಯವನ್ನು ಒತ್ತಿ ಹೇಳಿದ ಚೌಹಾಣ್, ತಾಂತ್ರಿಕ ಜ್ಞಾನ ಸಕಾಲಕ್ಕೆ ಹೊಲಗಳಿಗೆ ತಲುಪಿದಾಗ ಮಾತ್ರ ಅರ್ಥಪೂರ್ಣವಾಗಿರುತ್ತದೆ ಎಂದು ಕೇಂದ್ರ ಕೃಷಿ ಸಚಿವರು ಹೇಳಿದರು.

ಎಲ್ಲ ವರ್ಗಗಳ ಯುವಕರು ಹಾಗೂ ಮಹಿಳೆಯರಿಗೆ ನಿತಿನ್ ನವೀನ್ ತಂಡದಲ್ಲಿ ಹೆಚ್ಚಿನ ಅವಕಾಶ ಸಾಧ್ಯತೆ

ಸದ್ಯದಲ್ಲೇ ರಾಷ್ಟ್ರೀಯ ಬಿಜೆಪಿ ಹೊಸ ತಂಡ ಘೋಷಣೆ

ದೆಹಲಿ: ಹಿರಿಯ ಬಿಜೆಪಿ ನಾಯಕರು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರತಿನಿಧಿಗಳು ರಕ್ಷಣಾ ಸಚಿವ ರಾಜನಾಥ್ ಸಿಂಗ್

ಅವರ ನಿವಾಸದಲ್ಲಿ ನಾಲ್ಕು ಗಂಟೆಗಳ ಕಾಲ ಸಭೆ ನಡೆಸಿದವು. ಪಕ್ಷದ ಮೂಲಗಳ ಪ್ರಕಾರ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಹೊಸ ತಂಡವನ್ನು ಶೀಘ್ರದಲ್ಲೇ ಘೋಷಿಸುವ ಸಾಧ್ಯತೆಯಿದೆ.

ಸಂಘಟನಾ ಮಟ್ಟದಲ್ಲಿ ಮಹತ್ವದ ಪುನಾರಚನೆಯ ಕುರಿತು ಊಹಾಪೋಹಗಳು ನಡೆಯುತ್ತಿರುವ ಸಂದರ್ಭದಲ್ಲಿ, ಈ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಆರ್‌ಎಸ್‌ಎಸ್ ಕಾರ್ಯಕರ್ತ ಅರುಣ್ ಕುಮಾರ್ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಭಾಗವಹಿಸಿದ್ದರು. ಸಭೆಯ ಕುರಿತು ಅಧಿಕೃತ ಮಾಹಿತಿ ಪ್ರಕಟ ವಾಗದಿದ್ದರೂ, ಪಕ್ಷದ ಮೂಲಗಳ ಪ್ರಕಾರ ಸಂಘಟನಾ ಪುನರ್‌ರಚನೆ ಮತ್ತು ನಿತಿನ್ ನವೀನ್ ಅವರ ನೇತೃತ್ವದ ಹೊಸ ತಂಡದ ರಚನೆ ಕುರಿತು ಚರ್ಚೆ ನಡೆದಿದೆ.

ನಿತಿನ್ ನವೀನ್ ಸ್ವತಃ ಪಕ್ಷದ ಅತ್ಯಂತ ಕಿರಿಯ ರಾಷ್ಟ್ರೀಯ ಅಧ್ಯಕ್ಷರಾಗಿರುವುದರಿಂದ, ಅವರ ಹೊಸ ತಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಹಾಗೂ ಯುವ ಮುಖಗಳಿಗೆ ಅವಕಾಶ ಸಿಗುವ ನಿರೀಕ್ಷೆಯಿದೆ ಎಂದು ಮೂಲವೊಂದು ತಿಳಿಸಿದೆ.

ವ್ಯಾಪಕ ಪುನರ್‌ರಚನೆಯ ಭಾಗವಾಗಿ ಕೆಲವು ನಾಯಕರನ್ನು ಸಂಘಟನೆ ಮತ್ತು ಸರಕಾರದ ಜವಾಬ್ದಾರಿಗಳ ನಡುವೆ ಸ್ಥಳಾಂತರಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ. ವಿವಿಧ ಜಾತಿ ಮತ್ತು ಸಮುದಾಯಗಳ ನಾಯಕರಿಗೆ ಅವಕಾಶ ನೀಡುವ ಮೂಲಕ ಪಕ್ಷದ ಸಾಮಾಜಿಕ ಸಮತೋಲನದ ತಂತ್ರವನ್ನೂ ಹೊಸ ತಂಡದಲ್ಲಿ ಪ್ರತಿಬಿಂಬಿಸುವ ನಿರೀಕ್ಷೆಯಿದೆ.

ಆರ್‌ಎಸ್‌ಎಸ್ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದ ಅರುಣ್ ಕುಮಾರ್ ಅವರು ಚರ್ಚೆಯಲ್ಲಿದ್ದ ವಿಷಯಗಳ ಕುರಿತು ಸಂಘದ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಮುಂದಿನ ವಾರ ನಿರೀಕ್ಷೆ?

ಪಕ್ಷದ ಮೂಲಗಳ ಪ್ರಕಾರ, ನಿತಿನ್ ನವೀನ್ ಅವರು ಜೂನ್ 20ರಂದು ತಮ್ಮ ಹೊಸ ತಂಡವನ್ನು ಘೋಷಿಸುವ ನಿರೀಕ್ಷೆಯಿದೆ. ಇದೇ ವೇಳೆ, ಎನ್‌ಡಿಎ 3.0 ಸರಕಾರದ ಎರಡು ವರ್ಷಗಳ ಅವಧಿ ಪೂರ್ಣಗೊಂಡ ಬಳಿಕ ಕೇಂದ್ರ ಸಚಿವ ಸಂಪುಟದಲ್ಲಿಯೂ ಪುನಾರಚನೆ ನಡೆಯುವ ಸಾಧ್ಯತೆ ಇದೆ ಎಂಬ ಸೂಚನೆಗಳಿವೆ.

ಅನುಭವಿ ಕಾರ್ಯಕರ್ತರು ಹಾಗೂ ಸಂಘಟನಾ ನಾಯಕರಿಗೆ ಹೊಸ ವ್ಯವಸ್ಥೆಯಲ್ಲಿ ಆದ್ಯತೆ ನೀಡುವ ಸಾಧ್ಯತೆ ಇದೆ. ನಿತಿನ್ ನವೀನ್ ಅವರಿಗೆ ಸಹಕರಿಸಲು ಆಯ್ಕೆಯಾಗುವ ನಾಯಕರು, ಸಮಾಜದ ಎಲ್ಲ ವರ್ಗಗಳ ಯುವಕರು ಹಾಗೂ ಮಹಿಳೆಯರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೃಷ್ಟಿಕೋನಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುವ ನಿರೀಕ್ಷೆಯಿದೆ.

ತಮಿಳುನಾಡಿನಲ್ಲಿ ಹುಟ್ಟುವ ಪ್ರತೀ ಮಗುವಿನ ಮೇಲೆ 1.28 ಲಕ್ಷ ರು.ಸಾಲ

ತ.ನಾಡು ಸಾಲ 13.18 ಲಕ್ಷ ಕೋಟಿ

ಚೆನ್ನೈ: ಹಲವು ಗ್ಯಾರಂಟಿ ಜಾರಿ ಮಾಡಿ ಅಧಿಕಾರಕ್ಕೆ ಏರಿರುವ ತಮಿಳುನಾಡಿನ ವಿಜಯ್ ಸರಕಾರ ಈಗ ರಾಜ್ಯದ ಆರ್ಥಿಕ ಸ್ಥಿತಿಗೆ ಸಂಬಂಧಿಸಿದಂತೆ ಶ್ವೇತಪತ್ರ ಬಿಡುಗಡೆ ಮಾಡಿದೆ. ರಾಜ್ಯದ ಒಟ್ಟು ಹಣಕಾಸು ಸಾಲ 13.18 ಲಕ್ಷ ಕೋಟಿ ರು.ಗೆ ಏರಿಕೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.



ಮುಖ್ಯಮಂತ್ರಿ ವಿಜಯ್ ನೇತೃತ್ವದ ಟಿವಿಕೆ ಸರಕಾರ ಬಿಡುಗಡೆ ಮಾಡಿರುವ ಶ್ವೇತಪತ್ರದ ಅನುಸಾರ, ರಾಜ್ಯದ ನೇರ ಸಾಲದ ಮೊತ್ತ ಈಗ ಸುಮಾರು 10 ಲಕ್ಷ ಕೋಟಿ ರು.ಗೆ ತಲುಪಿದೆ. ಐದು ವರ್ಷಗಳ ಹಿಂದೆ ಈ ಮೊತ್ತ ಸುಮಾರು 4.8 ಲಕ್ಷ ಕೋಟಿ ರು.ಇತ್ತು. ಕಳೆದ ಐದು ವರ್ಷಗಳಲ್ಲಿ ಸಾಲದ ಪ್ರಮಾಣ ಬಹುತೇಕ ದ್ವಿಗುಣಗೊಂಡಿದೆ.

ತಮಿಳುನಾಡಿನಲ್ಲಿ ಜನಿಸುವ ಪ್ರತಿಯೊಂದು ಮಗುವಿನ ಮೇಲೂ ಸರಾಸರಿ 1.28 ಲಕ್ಷ ರು.ಸಾಲದ ಹೊರೆ ಇದೆ. ನೇರ ಸಾಲದ ಜೊತೆಗೆ, ಸರಕಾರದ ಖಾತೆ ಹೊರಗಿನ ಸಾಲಗಳು, ಗ್ಯಾರಂಟಿಗಳು ಮತ್ತು ಇತರೆ ಹಣಕಾಸು ಬಾಧ್ಯತೆಗಳನ್ನು ಸೇರಿಸಿದರೆ ರಾಜ್ಯದ ಒಟ್ಟು ಹೊರೆ 13.18 ಲಕ್ಷ ಕೋಟಿ ರು.ಗೆ ತಲುಪುತ್ತದೆ ಎಂದು ಅಂದಾಜಿಸಲಾಗಿದೆ

ಹಣಕಾಸು ಸಚಿವ ಎನ್. ಮೇರಿ ವಿಲ್ಸನ್ ಬಿಡುಗಡೆ ಮಾಡಿದ ಮಾಹಿತಿಯ ಪ್ರಕಾರ, ಕಳೆದ ಐದು ವರ್ಷಗಳಲ್ಲಿ ರಾಜ್ಯದ ಸಾಲದ ಪ್ರಮಾಣದಲ್ಲಿ ಭಾರೀ ಏರಿಕೆಯಾಗಿದೆ. ಈ ಅವಧಿಯಲ್ಲಿ ಹೆಚ್ಚಿದ ಸಾಲದ ಮೊತ್ತವು ಹಿಂದಿನ ಹಲವು ದಶಕಗಳಲ್ಲಿ ಸಂಗ್ರಹವಾಗಿದ್ದ ಸಾಲಕ್ಕಿಂತಲೂ ಹೆಚ್ಚಾಗಿದೆ ಎಂದು ವರದಿ ಸೂಚಿಸಿದೆ.

ಕಳೆದ ತಿಂಗಳು ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ ವಿಜಯ್ ಸರಕಾರದ ಪ್ರಮುಖ ಘೋಷಣೆಗಳಲ್ಲಿ ಈ ಶ್ವೇತಪತ್ರವೂ ಒಂದಾಗಿದ್ದು, ಹಿಂದಿನ ಎಂ.ಕೆ. ಸ್ಟಾಲಿನ್ ನೇತೃತ್ವದ ಸರಕಾರದಿಂದ ಬಂದಿದ್ದ ಹಣಕಾಸಿನ ಸ್ಥಿತಿಯ ಚಿತ್ರಣವನ್ನು ಇದರಲ್ಲಿ ನೀಡಲಾಗಿದೆ.

ಉಪಗ್ರಹ ಡೇಟಾ ವರ್ಗಾವಣೆ ಮೇಲೆ ಸರಕಾರದ ಕಣ್ಣು

ಸ್ಟಾರ್‌ಲಿಂಕ್: ಹೊಸ ನಿರ್ಬಂಧಗಳ ಸಾಧ್ಯತೆ

ದೆಹಲಿ: ಉದ್ಯಮಿ ಎಲೋನ್ ಮಸ್ಕ್ ಅವರ ಉಪಗ್ರಹ ಆಧಾರಿತ ಇಂಟರ್‌ನೆಟ್ ಸೇವೆ ಸ್ಟಾರ್‌ಲಿಂಕ್ ಭಾರತದಲ್ಲಿ ಸೇವೆ ಆರಂಭಿಸುವ ಮೊದಲೇ ಹೊಸ ಭದ್ರತಾ ನಿರ್ಬಂಧಗಳನ್ನು ಎದುರಿಸಬೇಕಾದ ಪರಿಸ್ಥಿತಿ ಎದುರಾಗಿದೆ. ಭಾರತ ಸರಕಾರವು ಸ್ಟಾರ್‌ಲಿಂಕ್ ಬಳಸುವ ಲೇಸರ್ ಇಂಟರ್-ಸ್ಯಾಟಲೈಟ್ ಲಿಂಕ್ (ಎಲ್‌ಐಎಸ್‌ಎಲ್) ತಂತ್ರಜ್ಞಾನದ ಬಗ್ಗೆ ರಾಷ್ಟ್ರೀಯ ಭದ್ರತಾ ಇಲಾಖೆ ಕಳವಳ ವ್ಯಕ್ತಪಡಿಸಿದೆ.

ಸ್ಟಾರ್‌ಲಿಂಕ್‌ನ ಹೊಸ ತಲೆಮಾರಿನ ಉಪಗ್ರಹಗಳು ಪರಸ್ಪರ ಲೇಸರ್ ಸಂಪರ್ಕದ ಮೂಲಕ ಡೇಟಾವನ್ನು ನೇರವಾಗಿ ವಿನಿಮಯ ಮಾಡಿಕೊಳ್ಳುತ್ತವೆ. ಇದರಿಂದ ಭಾರತೀಯ ಬಳಕೆದಾರರ ಡೇಟಾ ದೇಶದ ಗಡಿಗಳನ್ನು ದಾಟಿ ವಿದೇಶಿ ಜಾಲತಾಣಗಳು ಅಥವಾ ಗೇಟ್‌ವೇಗಳ ಮೂಲಕ ಸಾಗುವ ಸಾಧ್ಯತೆ ಇದೆ ಎಂಬ ಆತಂಕವಿದೆ.

ಸರಕಾರದ ಮೂಲಗಳ ಪ್ರಕಾರ, ಭಾರತೀಯ ಬಳಕೆದಾರರಿಂದ ಉತ್ಪತ್ತಿಯಾಗುವ ಡೇಟಾ ಕಡ್ಡಾಯವಾಗಿ ಭಾರತದೊಳಗಿನ ಗೇಟ್‌ವೇಗಳ ಮೂಲಕವೇ ಸಾಗಬೇಕು. ವಿದೇಶಿ ಗೇಟ್‌ವೇಗಳಿಗೆ

'ಡೇಟಾ ಜಂಪ್' ಆಗುವುದನ್ನು ಅನುಮತಿಸಲಾಗುವುದಿಲ್ಲ. ಇದಕ್ಕಾಗಿ ಸ್ಟಾರ್‌ಲಿಂಕ್ ತನ್ನ ರೌಟಿಂಗ್ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕಿದೆ.

ಸ್ಟಾರ್‌ಲಿಂಕ್ ಈಗಾಗಲೇ ಭಾರತೀಯ ಅಧಿಕಾರಿಗಳೊಂದಿಗೆ ಹಲವು ಸುತ್ತಿನ ಮಾತುಕತೆ ನಡೆಸಿದ್ದು, ತನ್ನ ತಂತ್ರಜ್ಞಾನದ ಬಗ್ಗೆ ಭದ್ರತಾ ಸಂಸ್ಥೆಗಳಿಗೆ ವಿವರ ನೀಡಿದೆ. ಆದರೂ, ಲೇಸರ್ ಲಿಂಕ್ ತಂತ್ರಜ್ಞಾನದಿಂದ ಉಂಟಾಗಬಹುದಾದ ಭದ್ರತಾ ಅಪಾಯಗಳ ಹಿನ್ನೆಲೆಯಲ್ಲಿ ಸರಕಾರ ಎಚ್ಚರಿಕೆಯ ನಿಲುವು ಅನುಸರಿಸುತ್ತಿದೆ.

ಈ ತಂತ್ರಜ್ಞಾನವನ್ನು ಸ್ಪೇಸ್‌ಎಕ್ಸ್ ಅಮೆರಿಕದಿಂದ ನಿಯಂತ್ರಿಸಬಹುದಾದ ಕಾರಣ, ಸೇವೆಯನ್ನು ದೂರದಿಂದಲೇ ಆನ್ ಅಥವಾ ಆಫ್ ಮಾಡುವ ಸಾಮರ್ಥ್ಯವೂ ಇದೆ ಎಂಬುದು ಅಧಿಕಾರಿಗಳ ಮತ್ತೊಂದು ಕಳವಳವಾಗಿದೆ. ಉಕ್ರೇನ್ ಮತ್ತು ಪಶ್ಚಿಮ ಏಷ್ಯಾ ಯುದ್ಧಗಳ ಸಂದರ್ಭಗಳಲ್ಲಿ ಈ ರೀತಿಯ ತಂತ್ರಜ್ಞಾನ ಬಳಕೆಯ ಉದಾಹರಣೆಗಳನ್ನೂ ಉಲ್ಲೇಖಿಸಲಾಗಿದೆ.

ಇದೀಗ ಭಾರತದಲ್ಲಿ ಉಪಗ್ರಹ ಸಂವಹನ ಸೇವೆಗಳಿಗೆ ಅನುಮತಿ ಪಡೆದಿರುವ ಇತರ ಸಂಸ್ಥೆಗಳಾದ ಜಿಯೊ-ಎಸ್‌ಇಎಸ್ ಮತ್ತು ಯುಟೆಲ್‌ಸ್ಯಾಟ್ ಒನ್‌ವೆಬ್ ಈ ಲೇಸರ್ ಲಿಂಕ್ ತಂತ್ರಜ್ಞಾನವನ್ನು ಬಳಸುವುದಿಲ್ಲ. ಆದ್ದರಿಂದ ಸರಕಾರದ ಹೊಸ ನಿರ್ಬಂಧಗಳು ಮುಖ್ಯವಾಗಿ ಸ್ಟಾರ್‌ಲಿಂಕ್ ಮೇಲೆಯೇ ಪರಿಣಾಮ ಬೀರುವ ಸಾಧ್ಯತೆ ಇದೆ.

ಸ್ಟಾರ್‌ಲಿಂಕ್ ಭಾರತದಲ್ಲಿ ಗೇಟ್‌ವೇಗಳು ಹಾಗೂ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಭದ್ರತಾ ನಿಯಮಗಳನ್ನು ಪಾಲಿಸಲು ಪ್ರಯತ್ನಿಸುತ್ತಿದೆ. ಆದರೆ, ಅಂತಿಮ ಭದ್ರತಾ ಅನುಮತಿ ನೀಡುವ ಮೊದಲು ಸರಕಾರ ಹೆಚ್ಚಿನ ಪರಿಶೀಲನೆ ನಡೆಸುವ ಸಾಧ್ಯತೆ ಇದೆ.

ಭಾರತದಲ್ಲಿ ಟೆಲಿಗ್ರಾಂಗೆ ತಾತ್ಕಾಲಿಕ ನಿರ್ಬಂಧ

ಜೂ.22ರವರೆಗೆ ಸೇವೆ ಸ್ಥಗಿತ

ದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ)ಯ ಮನವಿಯ ಮೇರೆಗೆ ಕೇಂದ್ರ ಸರಕಾರವು ಮೆಸೇಜಿಂಗ್ ಅಪ್ಲಿಕೇಶನ್ ಟೆಲಿಗ್ರಾಂ ಮೇಲೆ ಜೂನ್ 22ರವರೆಗೆ ತಾತ್ಕಾಲಿಕ ನಿರ್ಬಂಧ ಹೇರಿದೆ. ವೈದ್ಯಕೀಯ ಪ್ರವೇಶ ಪರೀಕ್ಷೆಯಾದ ನೀಟ್-ಯುಜಿ 2026

ಮರುಪರೀಕ್ಷೆ ಹಿನ್ನೆಲೆಯಲ್ಲಿ ಅಕ್ರಮ ಚಟುವಟಿಕೆಗಳು ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧಿತ ವಂಚನೆಗಳನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

ಕೆಲವು ಮೋಸಗಾರರ ಜಾಲಗಳು ಟೆಲಿಗ್ರಾಂ ವೇದಿಕೆಯನ್ನು ಬಳಸಿಕೊಂಡು ಅಭ್ಯರ್ಥಿಗಳನ್ನು ತಪ್ಪುದಾರಿಗೆಳೆಯುವುದು, ಪ್ರಶ್ನೆಪತ್ರಿಕೆ ಸೋರಿಕೆಯ ಸುಳ್ಳು ಮಾಹಿತಿ ಹರಡುವುದು ಹಾಗೂ ವಂಚನೆ ನಡೆಸುತ್ತಿರುವುದು ಪತ್ತೆಯಾಗಿದೆ. ಇದರಿಂದ ಪರೀಕ್ಷೆಯ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 69ಎ ಅಡಿಯಲ್ಲಿ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಈ ನಿರ್ಬಂಧ ಜಾರಿಗೊಳಿಸಿದೆ. ಕೆಲವು ವರದಿಗಳ ಪ್ರಕಾರ, ಟೆಲಿಗ್ರಾಂನ ಸಂದೇಶ ತಿದ್ದುಪಡಿ ಸೇರಿದಂತೆ ಕೆಲವು ವೈಶಿಷ್ಟ್ಯಗಳ ಮೇಲೂ ಹೆಚ್ಚುವರಿ ನಿರ್ಬಂಧ ವಿಧಿಸಲಾಗಿದೆ.

ಇತ್ತೀಚೆಗೆ ನಡೆದ ನೀಟ್-ಯುಜಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳು ಕೇಳಿಬಂದಿದ್ದರಿಂದ ಪರೀಕ್ಷೆಯನ್ನು ರದ್ದುಗೊಳಿಸಿ ಜೂನ್ 21ರಂದು ಮರುಪರೀಕ್ಷೆ ನಡೆಸಲು ಸರಕಾರ ನಿರ್ಧರಿಸಿದೆ. ಈ ಹಿನ್ನೆಲೆ ಪರೀಕ್ಷಾ ಅಕ್ರಮಗಳನ್ನು ತಡೆಯಲು ಟೆಲಿಗ್ರಾಂ ಮೇಲಿನ ತಾತ್ಕಾಲಿಕ ನಿರ್ಬಂಧವನ್ನು ಕೊನೆಯ ಆಯ್ಕೆ ಎಂದು ಸರಕಾರ ವಿವರಿಸಿದೆ.

- **ಟೆಲಿಗ್ರಾಂಗೆ ಜೂನ್ 22ರವರೆಗೆ ತಾತ್ಕಾಲಿಕ ನಿರ್ಬಂಧ**
- **ಮನವಿಯ ಮೇರೆಗೆ ಕ್ರಮ**
- **ನೀಟ್-ಯುಜಿ 2026 ಮರುಪರೀಕ್ಷೆ ಜೂನ್ 21ಕ್ಕೆ**
- **ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ವಂಚನೆ ತಡೆಯುವುದು ಮುಖ್ಯ ಉದ್ದೇಶ**
- **ಐಟಿ ಕಾಯ್ದೆ ಸೆಕ್ಷನ್ 69ಎ ಅಡಿಯಲ್ಲಿ ನಿರ್ಬಂಧ ಜಾರಿ**

ಔಷಧೀಯ ಸಿರಪ್ ಖರೀದಿಗೆ ವೈದ್ಯರ ಚೀಟಿ ಕಡ್ಡಾಯ

ದೆಹಲಿ: ದೇಶದಲ್ಲಿ ಔಷಧಿಗಳ ದುರುಪಯೋಗವನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರಕಾರ ಮಹತ್ವದ ನಿರ್ಧಾರ ಕೈಗೊಂಡಿದ್ದು, ಇನ್ನು ಮುಂದೆ ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್‌ಗಳನ್ನು ಖರೀದಿಸಲು ವೈದ್ಯರ ಪ್ರಿಸ್ಕ್ರಿಪ್ಷನ್ ಕಡ್ಡಾಯವಾಗಬೇಕು ಎಂದು ಆರೋಗ್ಯ ಸಚಿವಾಲಯವು 1945 ರ ಡ್ರಗ್ಸ್ ನಿಯಮಗಳಲ್ಲಿ ತಿದ್ದುಪಡಿ ಮಾಡಿ, ಇದರ ಬಗ್ಗೆ ವಿಶೇಷ ಅಧಿಸೂಚನೆಯನ್ನು ಹೊರಡಿಸಿದೆ.

ಡಿಸೆಂಬರ್ 29, 2025 ರಂದು ಕರಡು ಅಧಿಸೂಚನೆಯನ್ನು ಹೊರಡಿಸಿದ ನಂತರ ಈ ತಿದ್ದುಪಡಿ ತಂದಿದೆ. ಔಷಧಗಳಿಗೆ ಸಂಬಂಧಿಸಿದ ತಾಂತ್ರಿಕ ವಿಷಯಗಳ ಕುರಿತು ದೇಶದ ಅತ್ಯುನ್ನತ ಶಾಸನಬದ್ಧ ಸಂಸ್ಥೆಯಾದ ಡ್ರಗ್ಸ್ ಟೆಕ್ನಿಕಲ್ ಅಡ್ವೈಸರಿ ಬೋರ್ಡ್ (ಡಿಟಿಎಬಿ) ಜತೆಗೆ ಸಮಾಲೋಚಿಸಿದ ನಂತರ, ಈ ತಿದ್ದುಪಡಿಯನ್ನು ಅಂತಿಮಗೊಳಿಸುವ ಮೊದಲು ಸಾರ್ವಜನಿಕರಿಂದ ಸ್ವೀಕರಿಸಿದ ಕಾಮೆಂಟ್‌ಗಳನ್ನು ಪರಿಗಣಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಕೆಲವು ಔಷಧೀಯ ಸಿರಪ್‌ಗಳಲ್ಲಿ ಇರುವ ನಿರ್ದಿಷ್ಟ ರಾಸಾಯನಿಕ ಅಂಶಗಳ ದುರುಪಯೋಗ ಹಾಗೂ ಅತಿಯಾದ ಬಳಕೆಯ ಬಗ್ಗೆ ಆತಂಕ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ವಿಶೇಷವಾಗಿ ಕೋಡೀನ್ ಸೇರಿದಂತೆ ಕೆಲವು ಅಂಶಗಳನ್ನು ಒಳಗೊಂಡಿರುವ ಕೆಮ್ಮಿನ ಸಿರಪ್‌ಗಳನ್ನು ಮಾದಕ ವಸ್ತುಗಳಂತೆ ದುರುಪಯೋಗಪಡಿಸಿಕೊಳ್ಳುತ್ತಿರುವ ಪ್ರಕರಣಗಳು ವಿವಿಧ ರಾಜ್ಯಗಳಲ್ಲಿ ವರದಿಯಾಗಿವೆ. ಇದರಿಂದ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ. ಹೊಸ ನಿಯಮದ ಪ್ರಕಾರ ಔಷಧ ಅಂಗಡಿಗಳು ವೈದ್ಯರ ಮಾನ್ಯ ಚೀಟಿ ಇಲ್ಲದೆ ಯಾವುದೇ ಔಷಧೀಯ ಸಿರಪ್‌ಗಳನ್ನು ಮಾರಾಟ ಮಾಡಬಾರದು.

ಪೊಲೀಸ್ ಠಾಣೆಯ ಜಾಗದಲ್ಲಿ ಮಸೀದಿ ವಿವಾದ: ಇಮಾಮ್‌ಗೆ ನೋಟಿಸ್

ಲಖನೌ: ಉತ್ತರ ಪ್ರದೇಶದ ಮೀರತ್‌ನ ಮಸೀದಿಯೊಂದರಲ್ಲಿ ವಿವಾದವೊಂದು ಸೃಷ್ಟಿಯಾಗಿದೆ. ಅಧಿಕಾರಿಗಳು ಮಸೀದಿಯನ್ನು ಪೊಲೀಸ್ ಠಾಣೆಯ ಭೂಮಿಯಲ್ಲಿ ನಿರ್ಮಿಸಲಾಗಿದೆ ಎಂದು ಆರೋಪಿಸುತ್ತಿದ್ದಾರೆ. ಆದರೆ, ಮಸೀದಿ ಆಡಳಿತ ಮಂಡಳಿಯು ಇದನ್ನು ವಕ್ಫ್ ಆಸ್ತಿಯಲ್ಲಿ ನಿರ್ಮಿಸಲಾಗಿದೆ ಎಂದಿದೆ. ಅತಿಕ್ರಮಣವನ್ನು ತೆರವುಗೊಳಿಸಲು ಮತ್ತು ಮಾಲೀಕತ್ವದ ದಾಖಲೆಗಳನ್ನು ನೀಡುವಂತೆ ಕೋರಿ ಮಸೀದಿಯ ಇಮಾಮ್‌ಗೆ ಏಳು ದಿನಗಳ ನೋಟಿಸ್ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಕಂದಾಯ ಇಲಾಖೆಯ ಸಮೀಕ್ಷೆಯಲ್ಲಿ ಖಾರ್ಖೋಡಾ ಪೊಲೀಸ್ ಠಾಣೆ ಆವರಣದಲ್ಲಿರುವ ಹಾಗೂ ಸ್ಥಳೀಯವಾಗಿ ಠಾಣೆ ವಾಲಿ ಮಸೀದಿ ಎಂದು ಕರೆಯಲ್ಪಡುವ ಜಾಮಾ ಮಸೀದಿ, ಪೊಲೀಸ್ ಠಾಣೆಗೆ ಸೇರಿದ ಭೂಮಿಯ ಮೇಲೆ ನಿರ್ಮಿಸಲಾಗಿದೆ ಎಂದು ಆರೋಪಿಸಲಾಗಿದೆ. ಸಮೀಕ್ಷೆಯ ನಂತರ, ಪೊಲೀಸರು ಮಸೀದಿಯ ಇಮಾಮ್ ಅಬ್ದುಲ್ ಗಫರ್ ಅವರಿಂದ ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೋರಲಾಗಿದೆ. ಆದರೆ, ಇಲ್ಲಿಯವರೆಗೂ ಯಾವುದೇ ಮಾನ್ಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೀರತ್-ಬುಲಂದರ್‌ಶಾಹ ರಸ್ತೆಯಲ್ಲಿರುವ ಖಾರ್ಖೋಡಾ ಪೊಲೀಸ್ ಠಾಣೆ ಸ್ವಾತಂತ್ರ್ಯ ಪೂರ್ವದ್ದಾಗಿದ್ದು, ಕಂದಾಯ ದಾಖಲೆಗಳು ಖಾಸ್ರಾ ಸಂಖ್ಯೆ 1217ರ ಅಡಿಯಲ್ಲಿ 6,450 ಚದರ ಮೀಟರ್ ಭೂಮಿಯನ್ನು ಪೊಲೀಸ್ ಠಾಣೆಯ ಹೆಸರಿನಲ್ಲಿ ಹಲವು ದಶಕಗಳಿಂದ ನೋಂದಾಯಿಸಲಾಗಿದೆ. ನಂತರ ಈ ಭೂಮಿಯ ಒಂದು ಭಾಗವನ್ನು ಅತಿಕ್ರಮಿಸಿ ಮಸೀದಿಯನ್ನು ನಿರ್ಮಿಸಲಾಗಿದ್ದು, ಕಂದಾಯ ಇಲಾಖೆಯ ವರದಿಯು ಭೂಮಿಯನ್ನು ಪೊಲೀಸ್ ಠಾಣೆ ಆವರಣದ ಭಾಗವೆಂದು ಗುರುತಿಸಲಾಗಿದೆ.
-ಪ್ರಮೋದ್ ಕುಮಾರ್ ಸಿಂಗ್, ಕಿಥೋರ್ ವೃತ್ತ ಅಧಿಕಾರಿ

ಆದರೆ ಮಸೀದಿ ಆಡಳಿತ ಮಂಡಳಿಯು ಈ ಆರೋಪಗಳನ್ನು ತಿರಸ್ಕರಿಸಿದೆ. ಭೂಮಿಯನ್ನು ವಕ್ಫ್ ಮಂಡಳಿಯ ಹೆಸರಿನಲ್ಲಿ ದಾಖಲಿಸಲಾಗಿದೆ. ಈ ಹಕ್ಕಿಗೆ ಸಂಬಂಧಿಸಿದ ದಾಖಲೆಗಳನ್ನು ಈಗಾಗಲೇ ಪೊಲೀಸರಿಗೆ ಸಲ್ಲಿಸಲಾಗಿದೆ ಎಂದು ಹೇಳಿದೆ.

ಮೊಹರಂ ಮೆರವಣಿಗೆಗಳಿಗೆ ಅನುಮತಿ: ಮಾಜಿ ಸಿಎಂ ಮೆಹಬೂಬಾ ಮುಫ್ತಿ ಆಗ್ರಹ

ಶ್ರೀನಗರ: ಜಮ್ಮು-ಕಾಶ್ಮೀರದ ಮಾಜಿ ಮುಖ್ಯಮಂತ್ರಿ, ಹಾಗೂ ಮೆಹಬೂಬಾ ಮುಫ್ತಿ ಅವರು ಕಾಶ್ಮೀರ ಕಣಿವೆಯಲ್ಲಿ ಮೊಹರಂ

ಮೆರವಣಿಗೆಗಳಿಗೆ ನಿರ್ಬಂಧರಹಿತ ಅನುಮತಿ ನೀಡುವಂತೆ ಆಡಳಿತವನ್ನು ಒತ್ತಾಯಿಸಿದ್ದಾರೆ.

ಮೊಹರಂ ಶಿಯಾ ಮುಸ್ಲಿಮರ ಪ್ರಮುಖ ಧಾರ್ಮಿಕ ಆಚರಣೆಯಾಗಿದ್ದು, ಇಮಾಮ್ ಹುಸೇನ್ ಅವರ ಶಹಾದತ್ತನ್ನು ಸ್ಮರಿಸುವ ಮೆರವಣಿಗೆಗಳು ಕಾಶ್ಮೀರದಲ್ಲಿ ದೀರ್ಘ ಪರಂಪರೆಯನ್ನು ಹೊಂದಿವೆ. ಆದರೆ, ಭದ್ರತಾ ಕಾರಣಗಳನ್ನು ಉಲ್ಲೇಖಿಸಿ 1989ರ ಬಳಿಕ ಹಲವು ವರ್ಷಗಳ ಕಾಲ ಶ್ರೀನಗರದ ಸಾಂಪ್ರದಾಯಿಕ ಮಾರ್ಗಗಳಲ್ಲಿನ ಪ್ರಮುಖ ಮೊಹರಂ ಮೆರವಣಿಗೆಗಳ ಮೇಲೆ ನಿರ್ಬಂಧ ಹೇರಲಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಕೆಲವು ಮೆರವಣಿಗೆಗಳಿಗೆ ಷರತ್ತುಬದ್ಧ ಅನುಮತಿ ನೀಡಲಾಗಿದ್ದರೂ, ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ಇನ್ನೂ ಖಾತ್ರಿಯಾಗಿಲ್ಲ ಎಂದು ಶಿಯಾ ಸಮುದಾಯದ ನಾಯಕರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮೆಹಬೂಬಾ ಮುಫ್ತಿ ಅವರು, ಮೊಹರಂ ಮೆರವಣಿಗೆಗಳು ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಆಡಳಿತವು ಜನರ ಧಾರ್ಮಿಕ ಹಕ್ಕುಗಳನ್ನು ಗೌರವಿಸಬೇಕು. ಶಾಂತಿಯುತವಾಗಿ ಮೆರವಣಿಗೆಗಳನ್ನು ನಡೆಸಲು ಅವಕಾಶ ನೀಡುವುದರಿಂದ ಜನರಲ್ಲಿ ವಿಶ್ವಾಸ ಹೆಚ್ಚಲಿದೆ ಹಾಗೂ ಸಾಮಾಜಿಕ ಸೌಹಾರ್ದವೂ ಬಲಗೊಳ್ಳಲಿದೆ ಎಂದಿದ್ದಾರೆ.

ನಿಷೇಧದ ನಂತರ ಮೂಡಿದ ಭರವಸೆ

ಚೆನ್ನೈ: 61 ದಿನಗಳ ವಾರ್ಷಿಕ ಮೀನುಗಾರಿಕೆ ನಿಷೇಧ ಕೊನೆಗೊಂಡ ನಂತರ ರಾಮೇಶ್ವರಂನ ಮೀನುಗಾರರು 300 ಕೆಜಿಗೂ ಹೆಚ್ಚು ಸೀಗಡಿ ಮತ್ತು 200 ಕೆಜಿ ಏಡಿಗಳನ್ನು ಹಿಡಿದಿದ್ದಾರೆ. ಇದು ಮೀನುಗಾರ ಸಮುದಾಯಕ್ಕೆ ಮೆರಗು ತಂದಿದೆ ಮತ್ತು ಮುಂಬರುವ ಉತ್ಪಾದಕ ಋತುವಿನ ಭರವಸೆಯನ್ನು ಮೂಡಿಸಿದೆ.

ಅಗ್ಗದ ಡೇಟಾ, 5ಜಿ ಕ್ರಾಂತಿಯಿಂದ ಹೊಸ ದಾಖಲೆ

ತಿಂಗಳಿಗೆ 37 ಜಿಬಿ ಬಳಕೆ/ವಿಶ್ವದಲ್ಲೇ ಅತಿ ಹೆಚ್ಚು ಬಳಕೆ/ಭಾರತಕ್ಕೆ ಅಗ್ರಸ್ಥಾನ

ಬಳಕೆಗೆ ಪ್ರಮುಖ ಕಾರಣಗಳು

- ಅಗ್ಗದ ಡೇಟಾ ದರಗಳು
- ಅಗ್ಗದ ಸ್ಮಾರ್ಟ್‌ಫೋನ್‌ಗಳ ಲಭ್ಯತೆ
- ಒಟಿಟಿ ಮತ್ತು ವಿಡಿಯೊ ಸ್ಟ್ರೀಮಿಂಗ್
- 5ಜಿ ಸೇವೆಗಳ ವೇಗದ ವಿಸ್ತರಣೆ
- ಸೋಶಿಯಲ್ ಮೀಡಿಯಾ ಮತ್ತು ಗೇಮಿಂಗ್



ಭಾರತದಲ್ಲಿ ಡಿಜಿಟಲ್ ಕ್ರಾಂತಿ ಹೊಸ ಎತ್ತರ ತಲುಪಿದ್ದು, ದೇಶದ ಸ್ಮಾರ್ಟ್‌ಫೋನ್ ಬಳಕೆದಾರರು ತಿಂಗಳಿಗೆ ಸರಾಸರಿ 37 ಜಿಬಿ ಮೊಬೈಲ್ ಡೇಟಾ ಬಳಸುತ್ತಿದ್ದಾರೆ. ದೂರಸಂಪರ್ಕ ಕ್ಷೇತ್ರದ ಇತ್ತೀಚಿನ ವರದಿಯ ಪ್ರಕಾರ, ಪ್ರತಿ ಬಳಕೆದಾರನ ಡೇಟಾ ಬಳಕೆಯಲ್ಲಿ ಭಾರತವು ಜಾಗತಿಕ ಮಟ್ಟದಲ್ಲೇ ಅಗ್ರಸ್ಥಾನದಲ್ಲಿದೆ.

ವಿಶೇಷವಾಗಿ 5ಜಿ ಸೇವೆಗಳ ವಿಸ್ತರಣೆಯು ಡೇಟಾ ಬಳಕೆಯಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿದೆ. ಹೆಚ್ಚಿನ ವೇಗದ ಸಂಪರ್ಕದಿಂದ ಬಳಕೆದಾರರು ಹೈ-ಡೆಫಿನಿಷನ್ (ಎಚ್‌ಡಿ) ಮತ್ತು 4ಕೆ ವಿಡಿಯೊ ವೀಕ್ಷಣೆಗೆ ಹೆಚ್ಚಿನ ಪ್ರಮಾಣದಲ್ಲಿದ್ದೆ. ಇದರಿಂದ ಮುಂದಿನ ಕೆಲವು ವರ್ಷಗಳಲ್ಲಿ ಪ್ರತಿ ಬಳಕೆದಾರನ ಡೇಟಾ ಬಳಕೆ 50 ಜಿಬಿ ಗಡಿಯನ್ನು ದಾಟುವ ಸಾಧ್ಯತೆ ಇದೆ.

ಡೇಟಾ ಬಳಕೆ ಯಾವ ಸೇವೆಗೆ ಹೆಚ್ಚು?

- ವಿಡಿಯೋ ಸ್ಟ್ರೀನಿಂಗ್ - 57%
- ಸೋಷಿಯಲ್ ಮೀಡಿಯಾ - 17%
- ಆನ್ಲೈನ್ ಗೇಮಿಂಗ್ - 13%
- ಡೌನ್‌ಲೋಡ್ - 8%
- ಇತರೆ (ಬ್ರೌಸಿಂಗ್, ಇಮೇಲ್, ಆನ್ಲೈನ್ ಸೇವೆಗಳು) - 5%

ಭಾರತದ ಡಿಜಿಟಲ್ ಆರ್ಥಿಕತೆಯ ಬೆಳವಣಿಗೆಗೂ ಈ ಪ್ರವೃತ್ತಿ ಪೂರಕವಾಗಿದೆ. ಡೇಟಾ ಬಳಕೆಯ ಹೆಚ್ಚಳವು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗದೆ, ಶಿಕ್ಷಣ, ಆರೋಗ್ಯ, ಉದ್ಯಮ ಮತ್ತು ಸಾರ್ವಜನಿಕ ಸೇವೆಗಳ ಕ್ಷೇತ್ರಗಳಲ್ಲಿಯೂ ಡಿಜಿಟಲ್ ಪರಿವರ್ತನೆಯನ್ನು ವೇಗಗೊಳಿಸುತ್ತಿದೆ. ಅಗ್ಗದ ಡೇಟಾ ಮತ್ತು ಸುಧಾರಿತ ಸಂಪರ್ಕ ವ್ಯವಸ್ಥೆಗಳ ಬೆಂಬಲದಿಂದ ಭಾರತವು ಜಾಗತಿಕ ಡಿಜಿಟಲ್ ಬಳಕೆಯ ಕೇಂದ್ರವಾಗಿ ರೂಪುಗೊಳ್ಳುತ್ತಿರುವುದು ಈ ಅಂಕಿ-ಅಂಶಗಳಿಂದ ಸ್ಪಷ್ಟವಾಗುತ್ತದೆ.

- **37 ಜಿಬಿ- ಪ್ರತಿ ಬಳಕೆದಾರನ ಮಾಸಿಕ ಸರಾಸರಿ ಬಳಕೆ**
- **ವಿಶ್ವದಲ್ಲೇ ಅತಿ ಹೆಚ್ಚು ಮೊಬೈಲ್ ಡೇಟಾ ಬಳಕೆ**
- **ಒಟಿಟಿ ಮತ್ತು ವಿಡಿಯೊ ಸ್ಟ್ರೀಮಿಂಗ್‌ಗೆ ಹೆಚ್ಚು ಬಳಕೆ**
- **5ಜಿ ವಿಸ್ತರಣೆಯಿಂದ ಬಳಕೆ ಮತ್ತಷ್ಟು ಹೆಚ್ಚಳ**
- **ಗ್ರಾಮೀಣ ಪ್ರದೇಶಗಳಲ್ಲಿಯೂ ಇಂಟರ್‌ನೆಟ್ ಬಳಕೆ ವೇಗವಾಗಿ ಹೆಚ್ಚಿದೆ**

ವಿಶ್ವವಾಣಿ ಬೆಂಗಳೂರು 17-06-2026 ಬುಧವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

naasomeswara@gmail.com

ಐರನ್ ಲಂಗ್ಸ್ ಎಂಬ ಏಳು ಸುತ್ತಿನ ಕೋಟೆ!

ಜಗತ್ತಿನಲ್ಲಿ ಶ್ವಾಸಯಂತ್ರದ ಕೊನೆಯ ಬಳಕೆದಾರರು!

ಪಾಲ್ ಅಲೆಕ್ಸಾಂಡರ್, ಕಬ್ಬಿಣದ ಶ್ವಾಸಯಂತ್ರದಲ್ಲಿ ಜೀವವನ್ನು ಹಿಡಿದಿಟ್ಟುಕೊಂಡಿದ್ದ ಕೊನೆಯ ಪುರುಷ. ತನ್ನ 6ನೇಯ ವಯಸ್ಸಿನಲ್ಲಿ ಪೋಲಿಯೋ ಪೀಡಿತನಾದ ಪಾಲ್, 72 ವರ್ಷಗಳ ಕಾಲ ಶ್ವಾಸಯಂತ್ರದಲ್ಲಿ ತನ್ನ ಬದುಕನ್ನು ಕಳೆದು, ಮಾರ್ಚ್ 11, 2024ರಲ್ಲಿ ಕೊನೆ ಉಸಿರೆಳೆದ. ಶ್ವಾಸಯಂತ್ರದಲ್ಲಿ ಸುದೀರ್ಘಕಾಲ ಬದುಕಿದ ವ್ಯಕ್ತಿ ಎಂಬ ಗಿನೆಸ್ ದಾಖಲೆಯು ಈತನ ಹೆಸರಲ್ಲಿದೆ. ಅಮೆರಿಕದ ಮಾರ್ಥ ಲಿಲ್ಲರ್ಡ್, ಇಂದಿಗೂ ಶ್ವಾಸಯಂತ್ರದಲ್ಲಿ ಜೀವವನ್ನು ಹಿಡಿದಿಟ್ಟುಕೊಂಡಿರುವ ಅತ್ಯಂತ ಹಿರಿಯ ಮಹಿಳೆ. ತನ್ನ ಐದನೇಯ ವರ್ಷದಲ್ಲಿ ಯಂತ್ರದ ಬಳಕೆಯನ್ನಾರಂಭಿಸಿದ ಲಿಲ್ಲರ್ಡ್, ಇಂದಿಗೂ ಅದೇ ಯಂತ್ರದಿಂದ ಜೀವವನ್ನು ಹಿದಿದಿಟ್ಟುಕೊಂಡಿದ್ದಾರೆ.

ಇಪ್ಪತ್ತನೆಯ ಶತಮಾನದ ಮೊದಲ ಭಾಗ. ಬೇಸಿಗೆಯ ತಿಂಗಳುಗಳು ಬಂದರೆ ಸಾಕು – ಮನೆಗಳಲ್ಲಿ, ಶಾಲೆಗಳಲ್ಲಿ, ಈಜುಕೊಳಗಳಲ್ಲಿ, ಆಟದ ಮೈದಾನಗಳಲ್ಲಿ ಒಂದು ವಿಚಿತ್ರ ಭಯ ಹರಡುತ್ತಿತ್ತು. ತಂದೆ-ತಾಯಿಗಳು ತಮ್ಮ ಮಕ್ಕಳನ್ನು ಆತಂಕಭರಿತ ಕಣ್ಣುಗಳಿಂದ ನೋಡುತ್ತಿದ್ದರು. ಅವರಿಗೆ ಜ್ವರ, ತಲೆನೋವು, ಕುತ್ತಿಗೆ ಬಿಗಿಯಾಗುವುದು, ಕಾಲುಗಳು ಸೋಲುವಿಕೆ, ಸ್ವಲ್ಪ ದೌರ್ಬಲ್ಯ ಇವುಗಳಲ್ಲಿ ಯಾವುದಾದರೊಂದು ಒಂದು ಅಥವಾ ಹೆಚ್ಚಿನ ಲಕ್ಷಣಗಳು ಕಂಡುಬರುತ್ತಿದ್ದರೆ, ಅವರು ಕಂಗಾಲಾಗುತ್ತಿದ್ದರು. ಇವೆಲ್ಲ ಮಕ್ಕಳಿಗೆ ಬರುವ ಸಾಮಾನ್ಯ ಅನಾರೋಗ್ಯ ಲಕ್ಷಣಗಳಂತೆ ಕಾಣುತ್ತವೆ. ಇವುಗಳಿಗೇಕೆ ಭೀತರಾಗಬೇಕು ಎನ್ನುವ ಪ್ರಶ್ನೆಯು ಮನಸ್ಸಿನಲ್ಲಿ ಮೂಡಬಹುದು. ಏಕೆಂದರೆ ಈ ಲಕ್ಷಣಗಳು ಕಂಡುಬಂದ, ಕೆಲವು ಹುಡುಗರು, ಜೀವನಪರ್ಯಂತ ಗುಣಪಡಿಸಲಾಗದಂತಹ ನ್ಯೂನತೆಗೆ ಗುರಿಯಾಗುತ್ತಿದ್ದರು. ಸಾಯುವವರಿಗೂ ಪರಾವಲಂಬಿಗಳಾಗಿ ಬದುಕಬೇಕಾದ ಈ ಅನಾರೋಗ್ಯದ ಹೆಸರನ್ನು ಕೇಳಿದರೆ ಸಾಕು, ಬೆಚ್ಚಿ ಬೀಳುತ್ತಿದ್ದರು. ಅದುವೇ ವೈದ್ಯಕೀಯ ಪರಿಭಾಷೆಯಲ್ಲಿ 'ಪೋಲಿಯೊಮೈಲೈಟಿಸ್'! ಜನಸಾಮಾನ್ಯರು ಇದನ್ನು ಪೋಲಿಯೊ ಎಂದು ಕರೆಯುತ್ತಿದ್ದರು. ಕೆಲವರು ಇದನ್ನು 'ಮಕ್ಕಳ ಪಾರ್ಶ್ವವಾಯು' (ಇನ್‌ಫಂಟೈಲ್ ಪೆರಾಲಿಸಿಸ್) ಎಂದೂ ಕರೆಯುತ್ತಿದ್ದರು. ಇದು ಮಕ್ಕಳನ್ನಷ್ಟೇ ಅಲ್ಲ; ವಯಸ್ಕರರನ್ನೂ ಕಾಡುತ್ತಿತ್ತು.

● **ಅಂಗವೈಕಲ್ಯ:** ಪೋಲಿಯೊ ಒಂದು ವೈರಸ್ ಕಾಯಿಲೆ. ಈ ವೈರಸ್ ಕಲುಷಿತ ಆಹಾರ, ಪಾನೀಯಗಳ ಮೂಲಕ ನಮ್ಮ ದೇಹವನ್ನು ಪ್ರವೇಶಿಸುತ್ತದೆ. ಕರುಳಿನಲ್ಲಿ ವೃದ್ಧಿಯಾಗುತ್ತದೆ. ಬಹುತೇಕ ಜನರಲ್ಲಿ ಅದು ಸಣ್ಣ-ಪುಟ್ಟ ಜ್ವರ, ಮೈ-ಕೈನೋವು ಕಾಣಿಸಿಕೊಂಡು ಸದ್ದಿಲ್ಲದಂತೆ ಕಾಣೆಯಾಗುತ್ತದೆ. ಆದರೆ, ಅದು ಕೆಲವರಲ್ಲಿ ಅವರ ನರಮಂಡಲದ ಮೇಲೆ ದಾಳಿಯನ್ನು ಮಾಡುತ್ತಿತ್ತು. ಬೆನ್ನುಹುರಿಯ ಮುಂಭಾಗದ ಕೊಂಬು ಕೋಶಗಳನ್ನು (ಆಂಟೀರಿಯರ್ ಹಾರ್ನ್ ಸೆಲ್ಸ್) ಹಾನಿಗೊಳಿಸಿದಾಗ, ಸ್ನಾಯುಗಳು ದುರ್ಬಲವಾಗುತ್ತಿದ್ದವು ಅಥವಾ ಪಾರ್ಶ್ವವಾಯುವಿಗೆ ಒಳಗಾಗುತ್ತಿದ್ದವು. ಅದು ಇನ್ನೂ ಮೇಲೆ ಹತ್ತಿ ಮಿದುಳಿನ ಕಾಂಡವನ್ನು (ಬ್ರೈನ್ ಸ್ಟೆಮ್) ತಲುಪಿದರೆ, ಉಸಿರಾಟಕ್ಕೆ ನೆರವಾಗುವ ಸ್ನಾಯುಗಳನ್ನೂ ಪಾರ್ಶ್ವವಾಯುವಿಗೆ ಒಳಪಡಿಸುತ್ತಿದ್ದವು. ಕೆಲವು ದಿನಗಳ ಹಿಂದಷ್ಟೇ ಬೀದಿಯಲ್ಲಿ ಓಡಾಡಿಕೊಂಡು, ಕುಣಿದು ಕುಪ್ಪಳಿಸುತ್ತಿದ್ದ ಮಗುವು, ಆಕಸ್ಮಿಕವಾಗಿ ಹಾಸಿಗೆಯ ಮೇಲೆ ನಿಶ್ಚಲವಾಗಿ ನಿದ್ರಿಸಬಹುದು. ಎಚ್ಚರವಾದಾಗ ಕಾಲುಗಳನ್ನು ಚಲಿಸುವುದು ಬಿಡಿ, ಅಲುಗಿಸಲೂ ಸಾಧ್ಯವಾಗುವುದಿಲ್ಲ. ಕೈಗಳನ್ನು ಮೇಲೆತ್ತುವುದಕ್ಕೂ ಆಗುವುದಿಲ್ಲ. ಕೆಲವೊಮ್ಮೆ ನಿಟ್ಟುಸಿರನ್ನು ಬಿಡಲೂ ಆಗುವುದಿಲ್ಲ. ಉಛ್ವಾಸವನ್ನು (ಉಸಿರನ್ನು ಎಳೆದುಕೊಳ್ಳುವುದು) ಮಾಡುವುದು ಒಂದು ಮಹಾ ಪ್ರಯಾಸದ ಕೆಲಸವಾಗುತ್ತದೆ. ಎದೆಯನ್ನು ಸ್ವಲ್ಪ ಉಬ್ಬಿಸುವುದು ಕಷ್ಟದ ಕೆಲಸವಾಗುತ್ತದೆ. ಮಗುವಿನ ಮನಸ್ಸು ಮತ್ತು ಬುದ್ಧಿ ಸದಾ ಎಚ್ಚರದಲ್ಲೇ ಇರುತ್ತದೆ. ಆದರೆ, ಮಗುವಿನ ದೇಹವು ಮಾತ್ರ ಮಿದುಳಿನ ಯಾವ ಆಜ್ಞೆಯನ್ನೂ ಪಾಲಿಸುವುದಿಲ್ಲ. ಕೈ-ಕಾಲುಗಳ ಸ್ನಾಯುಗಳು ನ್ಯೂನಪೋಷಣೆಗೆ ಒಳಗಾಗಿ ಪರಿಪೂರ್ಣವಾಗಿ ನಿಶ್ಚೇತವಾಗುತ್ತವೆ.

ಇಂದಿನ ದಿನಗಳಲ್ಲಾಗಿದ್ದರೆ, ಉಸಿರಾಡಲು ಕಷ್ಟಪಡುತ್ತಿರುವ ಮಗುವನ್ನು ತೀವ್ರ ನಿಗಾ ಘಟಕಕ್ಕೆ (ಐಸಿಯು) ಸೇರಿಸುತ್ತಿದ್ದರು. ಆ ಮಗುವಿಗೆ ವೆಂಟಿಲೇಟರ್ ಎಂಬ ಸಾಧನವನ್ನು ಅಳವಡಿಸುತ್ತಿದ್ದರು. ಆ ಸಾಧನವು ಮಗುವಿಗೆ ಉಸಿರಾಡಲು, ದೇಹಕ್ಕೆ ಅಗತ್ಯವಾದ ಆಕ್ಸಿಜನ್‌ನನ್ನು ಪೂರೈಸಲು ನೆರವಾಗುತ್ತಿತ್ತು. ಆದರೆ, ಅಂದಿನ ದಿನಗಳ ತೀವ್ರ ನಿಗಾ ಘಟಕಗಳಲ್ಲಿ ವೆಂಟಿಲೇಟರ್ ಇರಲಿಲ್ಲ. ಉಸಿರಾಡುವುದು ಎಷ್ಟು ಸುಲುಭದ ಕೆಲಸ! ನಾವು ನಮಗೆ ಅರಿವಿಲ್ಲದಂತೆಯೇ ನಿಮಿಷಕ್ಕೆ 14-16 ಉಸಿರಡುತ್ತಿರುತ್ತೇವೆ. ಉಸಿರನ್ನು ಎಳೆದುಕೊಳ್ಳುತ್ತಿರುವಂತೆಯೇ ನಮ್ಮ ಎದೆಗೂಡು ಏರುತ್ತದೆ, ವಪೆಯು ಕೆಳಗಿಳಿಯುತ್ತದೆ, ಗಾಳಿ ಒಳಗೆ ಹೋಗುತ್ತದೆ. ಜೀವದಾಯಕ ಆಕ್ಸಿಜನ್ ಗಾಳಿಗೂಡುಗಳಲ್ಲಿ ಕಾರ್ಬನ್ ಡೈಆಕ್ಸೈಡ್ ಜತೆ ವಿನಿಮಯವಾಗುತ್ತದೆ. ವಪೆ ಮೇಲಕ್ಕೇರುತ್ತದೆ. ಎದೆಗೂಡು ಕೆಳಗಿಳಿಯುತ್ತದೆ. ಕಾರ್ಬನ್ ಡೈಆಕ್ಸೈಡ್ ಹೊರಬರುತ್ತದೆ. ಜೀವ ಮುಂದುವರಿಯುತ್ತದೆ. ಆದರೆ, ಪೋಲಿಯೊ ಪೀಡಿತರ ಉಸಿರಾಟದ ಸ್ನಾಯುಗಳಿಗೆ ಪೋಲಿಯೋ ಬಡಿದಾಗ ಎದೆ ವಿಸ್ತರಿಸುವುದಿಲ್ಲ. ವಪೆ ಕೆಳಗಿಳಿಯುವುದಿಲ್ಲ. ಹಾಗಾಗಿ ಇಂತಹ ಮಕ್ಕಳಿಗೆ ಮರಣದಂಡನೆ ಘೋಷಣೆಯಾಗುತ್ತದೆ. ರಕ್ತದಲ್ಲಿ ಆಕ್ಸಿಜನ್ ಕಡಿಮೆಯಾಗಿ, ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಹೆಚ್ಚುತ್ತಾ ಹೋಗುತ್ತದೆ. ಅದರ ಫಲವಾಗಿ ಮಗುವಿನ ದೇಹವು ನೀಲಿಗಟ್ಟುತ್ತದೆ. ನೀಲಿಗಟ್ಟುವಿಕೆಯು ತೀವ್ರವಾಗುತ್ತಿರುವಂತೆಯೇ ಮಗುವಿನ ಅಸುವನ್ನು ಯಮಧರ್ಮನು ಯಾವುದೇ ಕರುಣೆಯನ್ನು ತೋರದೆ ಸೆಳೆದುಕೊಂಡು ಹೋಗುತ್ತಾನೆ!

● **ಐರನ್ ಲಂಗ್:** ಯಮನು ಮಕ್ಕಳ ಕುತ್ತಿಗೆಗೆ ಹಾಕಿದ್ದ ಕುಣಿಕೆಯನ್ನು ನಿಧಾನವಾಗಿ ಕಳಚಿ ಉಸಿರುದುಂಬುವುದರ ಜತೆಯಲ್ಲಿ ಜೀವವನ್ನು ತುಂಬುವ ಸಾಧನವನ್ನು ವಿಜ್ಞಾನಿಗಳು ರೂಪಿಸಿದರು. ಅದುವೇ ಐರನ್ ಲಂಗ್ ಅಥವಾ ಕಬ್ಬಿಣದ ಶ್ವಾಸಯಂತ್ರ! ಐರನ್ ಲಂಗ್ ಎಂದರೆ ಕಬ್ಬಿಣದ ಶ್ವಾಸಕೋಶವಲ್ಲ. ಅದು ಒಂದು ಋಣಾತ್ಮಕ ಒತ್ತಡವನ್ನು (ನೆಗಟಿವ್ ಪ್ರೆಶರ್) ಸೃಜಿಸಬಲ್ಲ ಒಂದು ಯಂತ್ರ. ರೋಗಿಯನ್ನು ದೊಡ್ಡ ಲೋಹದ ಸಿಲಿಂಡರ್‌ನೊಳಗೆ ಮಲಗಿಸುತ್ತಿದ್ದರು. ತಲೆ ಮಾತ್ರ ಹೊರಗೆ ಇರುತ್ತಿತ್ತು. ಕುತ್ತಿಗೆಯ ಸುತ್ತ ರಬ್ಬರ್ ವಲಯವಿಟ್ಟು ಗಾಳಿಯು ಒಳಹೊರಗೆ ಹೋಗದಂತೆ ಮುಚ್ಚಿ ಬಿಗಿಪಡಿಸುತ್ತಿದ್ದರು. ಯಂತ್ರವು ಸಿಲಿಂಡರ್ ಒಳಗೆ ಋಣಾತ್ಮಕ ಒತ್ತಡವನ್ನು ಸೃಷ್ಟಿಸಿದಾಗ, ರೋಗಿಯ ಎದೆ ವಿಸ್ತರಿಸಿ ಗಾಳಿ ಶ್ವಾಸಕೋಶಗಳೊಳಗೆ ಪ್ರವೇಶಿಸುತ್ತಿತ್ತು. ಒತ್ತಡ ಸಾಮಾನ್ಯ ಸ್ಥಿತಿಗೆ ಬಂದಾಗ, ಎದೆ ಸಡಿಲವಾಗಿ ಗಾಳಿ ಹೊರಬರುತ್ತಿತ್ತು. ಸರಳವಾಗಿ ಹೇಳುವುದಾದರೆ, ಸಾಮಾನ್ಯ ಉಸಿರಾಟದಲ್ಲಿ ಒಳಗಿನಿಂದ ಎದೆ ವಿಸ್ತರಿಸಿ ಗಾಳಿ ಒಳಗೆಳೆಯುವಂತೆ, ಈ ಯಂತ್ರ ಹೊರಗಿನಿಂದ ಎದೆಯನ್ನು ಜಗ್ಗಿ, ಶ್ವಾಸಕೋಶಗಳನ್ನು ಪರೋಕ್ಷವಾಗಿ ಹಿಗ್ಗಿಸಿ ಉಸಿರಾಡಲು ನೆರವಾಗುತ್ತಿತ್ತು.

ಮೊದಮೊದಲು ಐರನ್ ಲಂಗ್‌ಅನ್ನು 1928ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಫಿಲಿಪ್ ಡ್ರಿಂಕರ್ ಮತ್ತು ಲೂಯಿಸ್ ಅಗಾಸಿಸ್ ಶಾ ಅಭಿವೃದ್ಧಿಪಡಿಸಿದರು. ಬಾಸ್ಟನ್ ಚಿಲ್ಡ್ರನ್ಸ್ ಹಾಸ್ಪಿಟಲ್‌ನಲ್ಲಿ ಮೊದಲ ಬಾರಿಗೆ ಈ ಕಬ್ಬಿಣ ಶ್ವಾಸಯಂತ್ರವನ್ನು ಯಶಸ್ವಿಯಾಗಿ ಬಳಸಿದರು. ಉಸಿರಾಟದ ವೈಫಲ್ಯದಿಂದ ಬಳಲುತ್ತಿದ್ದ ಒಂದು ಬಾಲಕಿಯನ್ನು ಯಂತ್ರದೊಳಗೆ ಇರಿಸಿದರು. ಕೆಲವೇ ನಿಮಿಷಗಳಲ್ಲಿ ಅವಳ ಮುಖದ ನೀಲಬಣ್ಣವು ಕಡಿಮೆಯಾಗಿ ಗುಲಾಬಿ ಬಣ್ಣವನ್ನು ತಳೆಯಲಾರಂಭಿಸಿತು. ನಂತರ ಸ್ವಲ್ಪಹೊತ್ತಿನಲ್ಲಿ ಪರಿಪೂರ್ಣವಾಗಿ ಚೇತರಿಸಿಕೊಂಡರು. ಅವಳ ಪಾರ್ಶ್ವವಾಯು ಪೀಡಿತ ಸ್ನಾಯುಗಳು ಮಾಡಲಾಗದ ಕೆಲಸವನ್ನು ಯಂತ್ರ ಮಾಡಿತ್ತು. ಯಮನಿಗೆ ನಾಳೆಬಾ ಎಂದು ಹೇಳಿತು!

● **ಮಹಾಪಿಡುಗು:** 1930, 40 ಮತ್ತು 50 ದಶಕಗಳು ಪೋಲಿಯೋ ಮಹಾ ಪಿಡುಗನ್ನು ಕಂಡವು. ಎದೆಗೂಡಿನ ಸ್ನಾಯುಗಳು ನಿಶ್ಚೇತವಾದ ಮಕ್ಕಳ ಸಂಖ್ಯೆಯು ದಿನೇದಿನೆ ಏರುತ್ತಿದ್ದವು. ಆ ಕಾಲದ ಪೋಲಿಯೊ ವಾರ್ಡನ್ನು ನೋಡಿದರೆ, ಆಶೆ ಮತ್ತು ಹೃದಯವಿದ್ರಾವಕ ದುಃಖ ಎರಡೂ ಒಮ್ಮೆಲೇ ಉಮ್ಮಳಿಸುತ್ತಿದ್ದವು. ಸಾಲುಸಾಲಾಗಿ ಮಕ್ಕಳು ಲೋಹದ ಕೊಳವೆಗಳೊಳಗೆ ಮಲಗಿರುತ್ತಿದ್ದರು. ಅವರ ತಲೆ ಮಾತ್ರ ಯಂತ್ರದ ಹೊರಗೆ, ದಿಂಬಿನ ಮೇಲೆ ಇರುತ್ತಿತ್ತು. ನರ್ಸ್‌ಗಳು ಅವರಿಗೆ ಆಹಾರವನ್ನು ಕೊಡುತ್ತಿದ್ದರು, ಮಲಮೂತ್ರಾದಿಗಳನ್ನು ಬಾಚಿ, ದೇಹವನ್ನು ಸ್ವಚ್ಛಗೊಳಿಸುತ್ತಿದ್ದರು, ಸಮಾಧಾನಪಡಿಸುತ್ತಿದ್ದರು, ಅವರ ಮುಖಭಾವವನ್ನು ಓದಲು ಪ್ರಯತ್ನಿಸುತ್ತಿದ್ದರು. ಮಕ್ಕಳು ಮಲಗಿದ ಕಡೆಯಿಂದಲೇ ಕಣ್ಣುಗಳ ಮೂಲಕ ವಿವಿಧ ಭಾವಗಳನ್ನು ವ್ಯಕ್ತಪಡಿಸಲು ಪ್ರಯತ್ನಿಸುತ್ತಿದ್ದರು. ಕೆಲವರು ಮುಗುಳ್ನಗೆಯನ್ನು ಬೀರಿ ಸಮಾಧಾನಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಅಪರೂಪಕ್ಕೆ ಕೆಲವು ಮಕ್ಕಳು ಕಪ್ಪೆಯಂತೆ ನಿರಂತರವಾಗಿ ವಟಗುಟ್ಟುತ್ತಿದ್ದರು. ತಮ್ಮಲ್ಲಿ ನಿರಂತರವಾಗಿ ಹೆಚ್ಚಾಗುವ ಮಾನಸಿಕ ಒತ್ತಡವನ್ನು ಮಾತಿನಮೂಲಕ ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ಭಾಸವಾಗುತ್ತಿತ್ತು. ಸಾಕಷ್ಟು ಮಕ್ಕಳು ಮೌನವಾಗಿ ಕಣ್ಣೀರುಗರೆಯುತ್ತಿದ್ದರು. ಯಂತ್ರದೊಳಗೆ ತಮ್ಮ ಜೀವವನ್ನು ಒತ್ತೆಯಿಟ್ಟಿದ್ದ ಆ ಮಕ್ಕಳು, ಮೂಗು ನವೆಯಾದರೆ ಅದನ್ನು ಕೆರೆದುಕೊಳ್ಳಲು ಅಶಕ್ತರಾಗಿದ್ದರು. ಏಕೆಂದರೆ ಕೈಗಳೂ ಸಹ ಯಂತ್ರದ ಸಿಲಿಂಡರಿನ ಒಳಗೆ ಇದ್ದವು. ಅವರ ತಲೆಯ ಮೇಲ್ಭಾಗದಲ್ಲಿ ಕನ್ನಡಿಗಳನ್ನು ವಿವಿಧ ಕೋನಗಳಲ್ಲಿ ಜೋಡಿಸುತ್ತಿದ್ದರು. ಸುತ್ತಮುತ್ತಲಿನ ಜಗತ್ತಿನ ಸೆಳೆಮಿಂಚನ್ನು ಆಗೊಮ್ಮೆ ಈಗೊಮ್ಮೆ ನೋಡಲು ಅವಕಾಶವು ದೊರೆಯುತ್ತಿತ್ತು. ಕೆಲವರು ಈ ಮಕ್ಕಳಿಗೆ ಓದಲು ಅನುಕೂಲವಾಗುವಂತೆ ವಿಶೇಷ ಕೋನದಲ್ಲಿ ಪುಸ್ತಕಗಳನ್ನು ಜೋಡಿಸುತ್ತಿದ್ದರು. ಒಂದು ಪುಟವನ್ನು ಓದಿದ ಮೇಲೆ ಯಾರಾದರೊಬ್ಬರು ಬಂದು ಮುಂದಿನ ಪುಟವನ್ನು ತೆರೆಯಬೇಕಾಗಿತ್ತು. ಆ ಮಕ್ಕಳ ಹೆತ್ತವರು ಮಗುವಿನ ಪಕ್ಕದಲ್ಲಿ ಕೂತು ಮಾತನಾಡುತ್ತಿದ್ದರು, ಹಾಡುತ್ತಿದ್ದರು, ಪ್ರಾರ್ಥಿಸುತ್ತಿದ್ದರು....

● **ಅಸಹಾಯಕತೆ-ಸಾಧನೆ:** 20ನೆಯ ಶತಮಾನದ ವೈದ್ಯಕೀಯವು ವೈರುದ್ಧ್ಯಗಳ ನೆಲೆಯಾಯಿತು. ಒಂದು ಕಡೆ ನೋಡು ಮನುಷ್ಯನು ಎಷ್ಟು ಅಸಹಾಕನಾಗಬಲ್ಲ.... ಎಂದು ಬೆಟ್ಟು ಮಾಡಿ ಪೋಲಿಯೋ ಮಕ್ಕಳತ್ತ ತೋರಿಸುತ್ತಿದ್ದರೆ, ಮತ್ತೊಂದು ಕಡೆ ನೋಡು ಸಾವಿಗೂ ಸವಾಲು ಹಾಕಿ, ಅದನ್ನು ಹೊಸಲು ದಾಟದಂತೆ ಹೊರಗೆ ನಿರ್ಬಂಧಿಸಿಟ್ಟಿದ್ದೇವೆ... ಒಂದೊಂದು ಉಸಿರನ್ನು ಎಳೆದುಕೊಳ್ಳುತ್ತಾ ಜೀವವನ್ನು ಹಿಡಿದಿಡಲು ನಾವು ಯಶಸ್ವಿಯಾಗಿದ್ದೇವೆ ಎಂದು ಬೀಗುತ್ತಿತ್ತು.

ಎದೆಗೂಡಿನ ಸ್ನಾಯುಗಳು ನಿಶ್ಚೇತವಾಗಿದ್ದ ಮಕ್ಕಳಿಗೆ ಜೀವವನ್ನು ಹಿಡಿದಿಡಲು ಅಗತ್ಯವಾದ ಅನುಕೂಲತೆಯನ್ನು ಕಬ್ಬಿಣದ ಶ್ವಾಸಯಂತ್ರಗಳು ನೀಡಿದವು ಎಂಬುದು ಸತ್ಯ. ಅದರೊಡನೆ ಹೊಸ ಹೊಸ ಸಮಸ್ಯೆಗಳು ಉದ್ಭವಿಸಿದವು. ಮೊದಲ ಸಮಸ್ಯೆಯೆಂದರೆ ಯಂತ್ರಗಳ ಸಂಖ್ಯೆಯು ಕಡಿಮೆಯಿದ್ದವು. ಯಂತ್ರಗಳ ಸೇವೆಯ ಅಗತ್ಯವಿದ್ದ ಮಕ್ಕಳ ಸಂಖ್ಯೆಯು ಅಧಿಕವಾಗಿದ್ದವು. ಇಂತಹ ಮಕ್ಕಳ ಆರೈಕೆಯನ್ನು ತುಂಬಾ ತಾಳ್ಮೆಯಿಂದ ನಿರ್ವಹಿಸುವ ನರ್ಸುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗುತ್ತಿದ್ದರು. ಇವರೊಡನೆ ನುರಿತ ತಜ್ಞಕಾಯಚಿಕಿತ್ಸಕರು (ಫಿಸಿಯೋಥೆರಪಿಸ್ಟ್) ಬೇಕಾಗುತ್ತಿದ್ದರು. ಎಂಜಿನಿಯರು 24 ಗಂಟೆಗಳ ಕಾಲ ಆಸ್ಪತ್ರೆಯಲ್ಲೇ ಇದ್ದು, ಯಂತ್ರಗಳ ಸಣ್ಣ-ಪುಟ್ಟ ದೋಷಗಳನ್ನು ಸರಿಪಡಿಸಬೇಕಾಗುತ್ತಿತ್ತು. ಚಲನೆಯೇ ಇಲ್ಲದೆ ಮಲಗಿದ ಕಡೆಯೇ ಎಲ್ಲವೂ ಆಗಬೇಕಾದ ಮಕ್ಕಳನ್ನು ಹಾಸಿಗೆ ಹುಣ್ಣುಗಳು (ಬೆಡ್ ಸೋರ್ಸ್) ಕಾಡುತ್ತಿದ್ದವು. ಇಂತಹ ಮಕ್ಕಳಿಗೆ ಸೋಂಕುರೋಗಗಳು ಬಹಳ ಬೇಗ ಅಂಟಿಕೊಳ್ಳುತ್ತಿದ್ದವು ಹಾಗೂ ಉಗ್ರವಾಗಿ ಕಾಡುತ್ತಿದ್ದವು. ಕುತ್ತಿಗೆಯ ಸುತ್ತಲಿನ ಸೀಲ್ ಸರಿಯಾಗಿ ಇರಬೇಕಾಗಿತ್ತು. ರೋಗಿಗೆ ಪೌಷ್ಟಿಕ ಆಹಾರ, ಚರ್ಮದ ಆರೈಕೆ, ಮಾನಸಿಕ ಬೆಂಬಲ, ಸೂಕ್ಷ್ಮ ನಿಗಾ -ಎಲ್ಲವೂ ಅಗತ್ಯವಾಗಿತ್ತು. ಕೆಲವು ಸಲ ವಿದ್ಯುತ್ ಕಡಿತವುಂಟಾಗ, ಸಕಾಲದಲ್ಲಿ ವಿದ್ಯುತ್ತು ಬರದಿದ್ದರೆ, ಆ ಮಕ್ಕಳು ಯಂತ್ರದೊಳಗೇ ಜೀವವನ್ನು ಬಿಡಬೇಕಾಗುತ್ತಿತ್ತು. ಹಾಗಾಗಿ ಹಲವು ತಜ್ಞರು ಪರಸ್ಪರ ಸಹಕಾರದಿಂದ ಒಟ್ಟಾಗಿ ಕೆಲಸ ಮಾಡಬೇಕಾಗುತ್ತಿತ್ತು. ಇಲ್ಲದಿದ್ದರೆ ಮಕ್ಕಳು ಕಣ್ಣಮುಂದೆಯೆ ಜೀವವನ್ನು ಬಿಡುತ್ತಿದ್ದರು. ಇನ್ನು ವೈದ್ಯಕೀಯ ವೆಚ್ಚಗಳು!?.... ಅದರ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು.

ಕಬ್ಬಿಣದ ಶ್ವಾಸಯಂತ್ರವು ಒಂದು ಆಶಾಕಿರಣವನ್ನು ಹುಟ್ಟುಹಾಕಿತ್ತು. ಮಗುವು ಮತ್ತು ಮಗುವಿನ ಹೆತ್ತವರು ಆತ್ಮವಿಶ್ವಾಸವನ್ನು ಇಟ್ಟುಕೊಂಡು, ಕಾಯಚಿಕಿತ್ಸಕರು ಮುತುವರ್ಜಿಯಿಂದ ಚಿಕಿತ್ಸೆಯನ್ನು ನೀಡಿ, ನರ್ಸ್ ಬಳಗದವರು ಸ್ವಚ್ಛತೆ, ಪೋಷಕಾಂಶಗಳು ಹಾಗೂ ಅಗತ್ಯ ಮನೋಧೈರ್ಯವನ್ನು ನೀಡಿದರೆ, ಕೆಲವರಲ್ಲಿ ಎದೆಗೂಡಿನ ಪಾರ್ಶ್ವಸ್ನಾಯುಗಳು ಚೇತರಿಸಿಕೊಂಡು, ಸ್ವತಂತ್ರವಾಗಿ ಉಸಿರಾಡಲು ಅಗತ್ಯವಾದ ಸಾಮರ್ಥ್ಯವನ್ನು ನಿಧಾನವಾಗಿ ಗಳಿಸುತ್ತಿದ್ದವು. ಆದರೆ, ಈ ಚೇತರಿಕೆಯು ಕಂಡುಬರಲು ತಿಂಗಳು, ವರ್ಷಗಳು ಬೇಕಾಗುತ್ತಿದ್ದವು. ಅಲ್ಲಿಯವರೆಗೆ ಈ ಕಬ್ಬಿಣದ ಶ್ವಾಸಯಂತ್ರಗಳು ಅವರ ಜೀವವನ್ನು ಹಿಡಿದಿಡುತ್ತಿದ್ದವು! ಕೆಲವು ಮಕ್ಕಳು ಮಾತ್ರ, ತಮ್ಮ ಬಾಲ್ಯ, ಹದಿಹರಯ, ಯೌವನ ಪ್ರೌಢ ಹಾಗೂ ವೃದ್ಧಾಪ್ಯಗಳನ್ನು ಈ ಯಂತ್ರದಲ್ಲಿಯೇ ಕಳೆಯಬೇಕಾಗುತ್ತಿತ್ತು. ಹೀಗೆ ಐರನ್ ಲಂಗ್ ನೆರವಿನಿಂದ ದಶಕಗಳವರೆಗೆ ಬದುಕಿದವರ ಕಥೆಗಳು ಮರೆಯಲಾಗದಂತಹವು. ಅವರು ಓದನ್ನು ಕಲಿತರು, ಅನುಭವಗಳನ್ನು ಬರೆದರು, ತಮ್ಮ ಕನಸುಗಳ ಬಗ್ಗೆ ಮಾತನಾಡಿದರು, ಕೆಲಸವನ್ನು ಮಾಡಿದರು. ಇಂತಹ ದುರ್ಬರ ಸ್ಥಿತಿಯಲ್ಲೂ ಪ್ರೀತಿ ಪ್ರೇಮ ಮೊಳೆಯುತ್ತದೆ ಎಂದರೆ ಆಶ್ಚರ್ಯವಾಗುತ್ತದೆ. ಯಂತ್ರಗಳ ಒಳಗೇ ಇದ್ದುಕೊಂಡು ಪ್ರೀತಿಸಿದರು! ಅಂಗವೈಕಲ್ಯ ಎಂದರೆ ಅದು ಮನುಷ್ಯನ ಸೋಲು ಅಲ್ಲ. ದೇಹವನ್ನು ಕಟ್ಟಿಹಾಕಿದ್ದರೂ, ಮನಸ್ಸು ಮುಕ್ತವಾಗಿ ಕಲ್ಪನೆಯ ಗಗನದಲ್ಲಿ ಹಾರಾಡುತ್ತಿತ್ತು! ಲೋಹದ ಸಿಲಿಂಡರ್ ದೈಹಿಕ ಚಲನವಲನವನ್ನು ಕಡಿಮೆ ಮಾಡಬಹುದು; ಆದರೆ ಕಲ್ಪನೆಗೆ ಬಂಧನ ಹಾಕಲಾರದು.

● **ಶ್ವಾಸನಾಳ ಸೀಳುವಿಕೆ:** ಅಂದಿನ ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕ ಎನ್ನುವುದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂದಿದ್ದ ದಿನಗಳಲ್ಲಿ ನಿಜವಾದ ಅರ್ಥದಲ್ಲಿ ಐಸಿಯು ಆರಂಭವಾಗಲಿಕ್ಕೆ ಈ ಕಬ್ಬಿಣದ ಶ್ವಾಸಯಂತ್ರವು ಕಾರಣವಾಯಿತು ಎನ್ನುವುದು ಐತಿಹಾಸಿಕ ಸತ್ಯ. 1952ರ ಕೋಪನ್‌ಹೇಗನ್ ನಗರದಲ್ಲಿ ಪೋಲಿಯೊ ಸಾಂಕ್ರಾಮಿಕವು ಮಹತ್ವದ ತಿರುವು ತಂದಿತು. ಆಸ್ಪತ್ರೆಗಳಲ್ಲಿ ಉಸಿರಾಟ ವೈಫಲ್ಯದಿಂದ ಬಳಲುತ್ತಿದ್ದ ರೋಗಿಗಳು ತುಂಬಿ ತುಳುಕಲಾರಂಭಿಸಿದರು. ಇದ್ದ ಕಬ್ಬಿಣದ ಶ್ವಾಸಯಂತ್ರಗಳ ಸಂಖ್ಯೆಯು ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಾದವು. ಆಗ ಡೆನ್ಮಾರ್ಕ್‌ನ ವೈದ್ಯ ಬ್ಯೂನ್ ಇಬ್ಸನ್ (1915-2007) ಬೇರೆ ವಿಧಾನವನ್ನು ಸೂಚಿಸಿದರು, ಶ್ವಾಸನಾಳವನ್ನು ಸೀಳಿ ಒಂದು ಕಿಂಡಿಯನ್ನು ರಚಿಸಿದರು. ಇದರ ಮೂಲಕ ಒಂದು ಕೊಳವೆಯನ್ನು ತೂರಿಸಿದರು. ಈ ಕೊಳವೆಯ ಮೂಲಕ ಆಕ್ಸಿಜನ್‌ನನ್ನು ನೇರವಾಗಿ ಶ್ವಾಸಕೋಶಗಳಿಗೆ ಗಾಳಿಯನ್ನು ಒತ್ತಿ ಕಳುಹಿಸುವ ಧನ ಒತ್ತಡದ ಉಸಿರಾಟ ಮಂಡಲವನ್ನು ಸಿದ್ಧಪಡಿಸಿದರು. ರೋಗಿಯ ಬಂಧುಗಳು, ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ಸ್ವಯಂಸೇವಕರು ಪಾಳಿಗಳಲ್ಲಿ ತಮ್ಮ ಕೈಯಿಂದ ಮಕ್ಕಳ ಬ್ಯಾಗನ್ನು ಒತ್ತಿ ಒತ್ತಿ ಉಸಿರಾಟಕ್ಕೆ ಅಗತ್ಯವಾದ ಗಾಳಿಯನ್ನು ಪೂರೈಸುತ್ತಿದ್ದರು. ಈ ವಿಧಾನವು ಮರಣ ಪ್ರಮಾಣವನ್ನು ಬಹಳಷ್ಟು ಕಡಿಮೆ ಮಾಡಿತು. ಇದೇ ಮುಂದೆ ತೀವ್ರ ನಿಗಾ ಘಟಕಗಳು ಮತ್ತು ಆಧುನಿಕ ವೆಂಟಿಲೇಟರ್‌ಗಳ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿತು.

● **ಅಂತಿಮ ಜಯ:** 1950ರ ದಶಕದಲ್ಲಿ ಜೋನಸ್ ಸಾಲ್ಕ್ (1914-1995) ಅವರು ಪೋಲಿಯೊ ಲಸಿಕೆಯ ಇಂಜಕ್ಷನ್‌ನನ್ನು ಪರಿಚಯಮಾಡಿದರು. ಅನಂತರ ಅಲ್ಬರ್ಟ್ ಸಾಬಿನ್ (1906-1993) ಅವರ ಬಾಯಿಮೂಲಕ ಕೊಡಬಹುದಾದ ಪೋಲಿಯೊ ಲಸಿಕೆಯ ಹನಿಗಳನ್ನು ರೂಪಿಸಿದರು. ಮಾರ್ಚ್ 27, 2014ರಂದು ಭಾರತವು ಪೋಲಿಯೋ ಮುಕ್ತವಾಯಿತು. ಆಲ್ಬರ್ಟ್ ಸಬಿನ್ ಹಾಗೂ ಕೋಟ್ಯಂತರ ಕಾರ್ಯಕರ್ತರಿಗೆ ನಮೋ ನಮಃ! ನಮ್ಮ ಜಗತ್ತು ಇಷ್ಟರಲ್ಲಿಯೇ ಪೋಲಿಯೋ ಮುಕ್ತವಾಗಲಿದೆ!

ತನ್ವಿ ಪಾಲ್ಸಿಕರ್ ಅವರ ಪೈಥಾನಿ ಕೇಕ್ ಸೀರೆ!

● ಸುರೇಶ ಗುದಗನವರ

ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುವಲ್ಲಿ ನೀರೆಗಳ ಪಾತ್ರ ಹಿರಿದು. ನೀರೆಯರ ಭವ್ಯ ಪಾರಂಪರಿಕ ಉಡುಗೆಯ ಪ್ರತೀಕ ಸೀರೆ. ಇದು ಭಾರತೀಯ ನಾರಿಯ ಅಚ್ಚುಮೆಚ್ಚಿನ ಹಾಗೂ ಆಕರ್ಷಕವಾದ ಉಡುಪು. ಸೀರೆಯೊಂದಿಗೆ ಹೆಣ್ಣು ಮಕ್ಕಳ ಬದುಕು ತಳುಕು ಹಾಕಿಕೊಂಡಿರುತ್ತದೆ. ತವರಿಗೆ ಬರುವ ಹೆಣ್ಣುಮಕ್ಕಳಿಗೆ ಸೀರೆ ಉಡಿಸಿ ಕಳಿಸುವ ಪದ್ಧತಿ ಇದೆ. ಋತುಮತಿಯಾದಾಗ, ನಿಶ್ಚಿತಾರ್ಥ, ಮದುವೆ, ಸೀಮಂತ, ಕೊನೆಗೆ ಅಂತಿಮ ಸಂಸ್ಕಾರದ ಸಮಯದಲ್ಲೂ ತವರಿನ ಸೀರೆ ಜತೆಯಲ್ಲಿ ಬರುವುದು. ಕಾಲ ಎಷ್ಟೇ ಬದಲಾದರೂ ಹೆಣ್ಣು ಮಕ್ಕಳಿಗೆ ಸೀರೆಯ ಮೇಲಿನ ವ್ಯಾಮೋಹ ಕಡಿಮೆಯಾಗದು.

ರೇಷ್ಮೆ ಸೀರೆ ನಮ್ಮ ದೇಶದ ಶ್ರೀಮಂತ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ರಾಜ್ಯದಿಂದ ರಾಜ್ಯಕ್ಕೆ ಸೀರೆಗಳ ವಿನ್ಯಾಸ ಭಿನ್ನವಾಗಿದ್ದರೂ ಪ್ರತಿಯೊಂದು ಆಕರ್ಷಕ, ಅನನ್ಯ, ಕರ್ನಾಟಕದ ಮೈಸೂರು ಸಿಲ್ಕ್ ಸೀರೆ, ತುಳುನಾಡಿನ ಕಾಂಜಿವರಂ, ಮಹಾರಾಷ್ಟ್ರದ ಪೈಥಾನಿ ಸೀರೆ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಪೈಥಾನಿ ಸೀರೆಗಳು ಮಹಾರಾಷ್ಟ್ರದ ಪೈಥಾನಿ ಪಟ್ಟಣದಲ್ಲಿಯ ಅತ್ಯಂತ ಶ್ರೀಮಂತ ಹಾಗೂ ಐತಿಹಾಸಿಕ ರೇಷ್ಮೆ ಸೀರೆಗಳಾಗಿವೆ. ನೈಜ ಪೈಥಾನಿ ಸೀರೆಗಳನ್ನು ಸಂಪೂರ್ಣವಾಗಿ ಕೈಮಗ್ಗದಲ್ಲಿ ನೇಯಲಾಗುತ್ತದೆ. ಇವುಗಳ ಪಲ್ಲು ಮತ್ತು ಅಂಚುಗಳಲ್ಲಿ ಪ್ರಮುಖವಾಗಿ ನವಿಲು, ಬಳ್ಳಿಗಳು ಮತ್ತು ಹೂವಿನ ವಿನ್ಯಾಸಗಳನ್ನು ಕಾಣಬಹುದು. ಪೈಥಾನಿ ಸೀರೆಯನ್ನು ಎಲ್ಲರಿಗೂ ಇಷ್ಟ. ಆದರೆ, ಈ ಪೈಥಾನಿ ಸೀರೆಯನ್ನು ಧರಿಸಲು ಅಲ್ಲ, ವಿಶೇಷವಾಗಿ ತಿನ್ನಲು ತಯಾರಿಸಲಾಗುತ್ತಿದೆ ಎಂದರೆ ನಂಬುವಿರಾ? ಹೌದು, ನಂಬಲೇ ಬೇಕು.

ಪುಣೆಯ ಮಹಿಳೆ ತನ್ವಿ ಪಾಲ್ಸಿಕರ್ ಅವರು ಕೇಕ್‌ನಲ್ಲಿ ಮಹಾರಾಷ್ಟ್ರದ ಪೈಥಾನಿ ಸೀರೆಯನ್ನು ತಯಾರಿಸಿ ಅಚ್ಚರಿ ಮೂಡಿಸಿದ್ದಾರೆ. ಪುಣೆಯ ಜೆಡಬ್ಲ್ಯೂ ಮ್ಯಾರಿಯಟ್ ಹೋಟೆಲ್‌ನ ಬಾಣಸಿಗ ತನ್ವಿ ಕೇಕ್ ಕಲಾವಿದೆಯಾಗಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಅವರು ಇತ್ತೀಚಿಗೆ ಮಹಾರಾಷ್ಟ್ರ ಪೈಥಾನಿ ಸೀರೆ ಮತ್ತು ಸಾಂಪ್ರದಾಯಿಕ ಕೊಲ್ಹಾಪುರದ ಆಭರಣಗಳನ್ನು ಹೊಂದಿರುವ ಪೈಥಾನಿ ಕೇಕ್ ಚಿತ್ರವನ್ನು ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ. 'ಇದು ಕೇವಲ ಕೇಕ್ ಅಲ್ಲ, ಮಹಾರಾಷ್ಟ್ರದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಗೆ ಗೌರವ' ಎಂದು ತನ್ವಿ ಹೇಳುತ್ತಾರೆ. ಇದು ಕ್ಯಾಲೆಬಾಟ್ ಡಾರ್ಕ್ ಚಾಕೊಲೇಟ್ ನಿಂದ ಹೊದಿಸಲಾದ ಮತ್ತು ಕ್ಯಾಲೆಬಾಟ್ ಫಾಂಡೆಂಟ್‌ನಿಂದ ಲೇಪಿತವಾದ ಮೊಟ್ಟೆಗಳಿಲ್ಲದ ಚಾಕಲೇಟ್ ಸ್ಪಾಂಜ್ ಎಂದಿದ್ದಾರೆ.

ತನ್ವಿ ಅವರಿಗೆ 5 ಕೆ.ಜಿ. ತೂಕದ ಕೇಕ್‌ನ್ನು ಪೂರ್ಣಗೊಳಿಸಲು ಎರಡು ದಿನಗಳೇ ಬೇಕಾದವು. ಬೇಕಿಂಗ್ ಬೇಸರದ ಕೆಲಸವಲ್ಲದಿದ್ದರೂ, ವಜ್ರತಿಕ್, ಚಿಂಚ್‌ಪೇಟಿ, ಕುಡಿ, ಬಾಂಗಿ, ನಾಥ್, ಕುಂಕು ಬಾಕ್ಸ್ ಮತ್ತು ಕೆಲವು ಹೂವುಗಳಂತಹ ಸಂಕೀರ್ಣ ಆಭರಣಗಳನ್ನು ಒಳಗೊಂಡಿರುವ ಕೇಕ್‌ನ್ನು ಅಲಂಕಾರದೊಂದಿಗೆ ಪೂರ್ಣಗೊಳಿಸಲು 30 ಗಂಟೆಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡಿತು ಎಂದು ಅವರು ಮಾಹಿತಿ ನೀಡಿದ್ದಾರೆ. ತನ್ವಿ ತಮ್ಮ ಕಲಾತ್ಮಕತೆಯ ಮೂಲಕ ಪೈಥಾನಿ ಸೀರೆಯ ಕೇಕ್ ಅನ್ನು ಜೀವಂತಗೊಳಿಸಿದ್ದಾರೆ. ಮೊದಲ ನೋಟದಲ್ಲಿಯೇ ಕೇಕ್‌ನ್ನು ಸೀರೆಯಂತೆಯೇ ಕಾಣುವುದು ಅವರ ಕರಕುಶಲತೆಗೆ ಸಾಕ್ಷಿಯಾಗಿದೆ. ಅವರ ಇನ್‌ಸ್ಟಾಗ್ರಾಮ್ ಪುಟ ಕೇಕ್ ಕಲೆಗಳಿಂದ ತುಂಬಿದೆ. ಅದು ಯಾವುದೇ ಕೇಕ್ ಮತ್ತು ಕಲಾಪ್ರಿಯರಿಗೆ ಪರಿಪೂರ್ಣ ದೃಶ್ಯ ಕಾವ್ಯವಾಗಿದೆ. ಅವರ ಕಲಾ ನೈಪುಣ್ಯವು ರಾಷ್ಟ್ರೀಯ ಮತ್ತು ಪ್ರಾದೇಶಿಕವಾಗಿ ಮೆಚ್ಚುಗೆಯನ್ನು ಗಳಿಸಿದೆ. ಅವರು ಅಂತಾರಾಷ್ಟ್ರೀಯ ಪ್ರಮುಖ ಮಹಿಳಾ ಬಾಣಸಿಗರಾಗಿ ಗೌರಸಲ್ಪಟ್ಟಿದ್ದಾರೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

3. ಮಂಗಳನಿಗೆ ಮತ್ತೊಂದು ಹೆಸರು (4)
5. ರಜ ತೆಗೆದುಕೊಂಡ ಬೆಳ್ಳಿ (3)
7. ನಾವೆಯನ್ನು ನಡೆಸುವವನು (3)
8. ಸೊಳ್ಳೆ ಎನ್ನಲು ಸ್ವಲ್ಪ ಅಪರಿಚಿತ ಪದ (3)
10. ಮದುವೆಯ ಗಂಡಿನ ಆದಾಯವೇನು (4)
12. ಎರಡೂ ಕೈಗಳಿಂದ ಬಾಣ ಬಿಡಬಲ್ಲವನು (4)
15. ಲಾಂಗೂಲದೊಂದಿಗೆ ಬಂದಿರುವ ಹುಡುಗ (3)
17. ಹೊಗಳಿಕೆ ಅಥವಾ ಸ್ತುತಿ (3)
18. ಅಡವು ಅಥವಾ ಒತ್ತೆ (3)
19. ಮೇಲೆ-ಕೆಳಗೆ ಹೋಗುವ ಆಟ (4)

ಮೇಲಿಂದ ಕೆಳಕ್ಕೆ

1. ಒಂದನ್ನೊಂದು ಅಗಲದೆ ಇರುವಿಕೆ (5)
2. ಸ್ವರ್ಗಕ್ಕೆ ವಿರೋಧ ಪದವಿದು (3)
3. ಆತನ ಒಳಮನಸ್ಸು (4)
4. ತಲೆಕೆಳಗಾದ ಹೊಟ್ಟೆಕಿಚ್ಚು (3)
6. ಸಣ್ಣದಾದ ಸೇತುವೆ (2)
9. ತಲೆಕೆಳಗಾದ ಸತ್ವ ಅಥವಾ ತಿರುಳು (3)
11. ರಸಭರಿತ ಮಾವಿನ ಹಣ್ಣು (3)
13. ಪಟಪಟನೆ ಸಿಡಿಯುವ ಹುರಿಗಾಳು (5)
14. ತಣ್ಣಗೆ ಹರಿಯುವ ನದಿ (4)
15. ಮರ ಕೆತ್ತುವ ಒಂದು ಸಾಧನ (2)
16. ಬಲ ಅಥವಾ ಕೆಚ್ಚು (3)
17. ಪಾವನವಾದ ಎಂದರ್ಥ (3)

ಹರಿಭಕ್ತಿಸಾರ: ಅಹಂಕಾರದ ಭಂಗ ಮತ್ತು ನಿಜವಾದ ಜ್ಞಾನ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಭಾಗ-2

ಬಾಡದ ಆದಿಕೇಶವನ ಅಡಿದಾವರೆಗಳಿಗೆ ಶರಣಾಗಿ 'ಹರಿಭಕ್ತಿಸಾರ'ದ ಮೊದಲ ಪದ್ಯವನ್ನು ಬರೆದ ನಂತರ, ಕನಕದಾಸರು ಒಬ್ಬ ಪರಮ ವೈರಾಗ್ಯಶಾಲಿಯಾಗಿ ದೇಶ ಸಂಚಾರಕ್ಕೆ ಹೊರಟರು. ಲೌಕಿಕ ಸಂಪತ್ತನ್ನು ತೊರೆದಿದ್ದರೂ, ತಾನು ಒಬ್ಬ ದೊಡ್ಡ ದಂಡನಾಯಕನಾಗಿದ್ದೆ ಎಂಬ ಸೂಕ್ಷ್ಮ ಅಹಂಕಾರ ಮತ್ತು ಜಾತಿಯ ಮೇಲಿರುವ ಸಮಾಜದ ಕಣ್ಣು ಅವರನ್ನು ಪೂರ್ತಿಯಾಗಿ ಬಿಟ್ಟಿರಲಿಲ್ಲ.

ಹೀಗಿರುವಾಗ, ಅವರು ಅಂದಿನ ಪರಮ ಜ್ಞಾನಿ ಹಾಗೂ ಆಧ್ಯಾತ್ಮಿಕ ಗುರುಗಳಾದ ಶ್ರೀ ವ್ಯಾಸರಾಜರ ಕೀರ್ತಿಯನ್ನು ಕೇಳಿ ಉಡುಪಿಗೆ ಬಂದರು. ವ್ಯಾಸರಾಜರು ಕನಕರ ಭಕ್ತಿಯ ಆಳವನ್ನು ಅರಿತು ಅವರಿಗೆ ಮಂತ್ರದೀಕ್ಷೆ ನೀಡಿ, ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿದರು. ಆದರೆ, ವ್ಯಾಸರಾಜರ ಇತರ ಶಿಷ್ಯರಿಗೆ ಇದು ಸಹಿಸಲಾಗಲಿಲ್ಲ. ಒಬ್ಬ ಕೆಳಜಾತಿಯವನಿಗೆ ನಮ್ಮ ಗುರುಗಳು ಇಷ್ಟೊಂದು ಪ್ರಾಮುಖ್ಯತೆ ಕೊಡುವುದೇ? ಎಂದು ಅವರು ಕನಕದಾಸರನ್ನು ಸದಾ ಕೀಳಾಗಿ ಕಾಣುತ್ತಿದ್ದರು, ಹೀಯಾಳಿಸುತ್ತಿದ್ದರು.

ಇದನ್ನು ಗಮನಿಸಿದ ವ್ಯಾಸರಾಜರು, ಕನಕದಾಸರ ಯೋಗ್ಯತೆ ಮತ್ತು ಅವರ ಅಂತರಾಳದ ಭಕ್ತಿಯನ್ನು ಎಲ್ಲರಿಗೂ ಸಾಬೀತುಪಡಿಸಲು ಒಂದು ದಿವ್ಯ ನಾಟಕವಾಡಿದರು.

ಒಂದು ದಿನ ಗುರುಗಳು ಎಲ್ಲ ಶಿಷ್ಯರನ್ನು ಕರೆದು, ತಲಾ ಒಂದೊಂದು ಬಾಳೆಹಣ್ಣನ್ನು ನೀಡಿ ಹೀಗೆ ಹೇಳಿದರು, ''ಶಿಷ್ಯರೇ, ಈ ಹಣ್ಣನ್ನು ಯಾರೂ ಇಲ್ಲದ, ಯಾರ ಕಣ್ಣಿಗೂ ಬೀಳದ ಕತ್ತಲೆಯ ಜಾಗದಲ್ಲಿ ಕುಳಿತು ತಿಂದು ಬರಬೇಕು. ಇದನ್ನು ಯಾರೂ ನೋಡಬಾರದು, ನೆನಪಿರಲಿ.''

ಎಲ್ಲ ಶಿಷ್ಯರು ಸಂತೋಷದಿಂದ ಹೊರಟರು. ಒಬ್ಬರು ಕೋಣೆಯ ಮೂಲೆಗೆ ಹೋಗಿ ಕದ ಮುಚ್ಚಿ ತಿಂದರೆ, ಮತ್ತೊಬ್ಬರು ಯಾರು ಇಲ್ಲದ ಕಾಡಿಗೆ ಹೋಗಿ ಮರದ ಮರೆಯಲ್ಲಿ ತಿಂದರು. ಇನ್ನು ಕೆಲವರು ಗುಹೆಯೊಳಗೆ ಹೋಗಿ ತಿಂದು ಮುಗಿಸಿ, ನಮ್ಮನ್ನು ಯಾರೂ ನೋಡಲಿಲ್ಲ ಎಂದು ಬೀಗುತ್ತಾ ಗುರುಗಳ ಬಳಿ ವಾಪಸ್ ಬಂದರು.

ಆದರೆ, ಕನಕದಾಸರು ಮಾತ್ರ ಹಣ್ಣನ್ನು ಕೈಯಲ್ಲೇ ಹಿಡಿದುಕೊಂಡು ಸಂಜೆಯಾದರೂ ಗುರುಗಳ ಆಶ್ರಮಕ್ಕೆ ಮರಳಿ ಬಂದರು. ಹಣ್ಣು ಹಾಗೇ ಇತ್ತು!

ಇದನ್ನು ನೋಡಿ ಉಳಿದ ಶಿಷ್ಯರು, ನೋಡಿ, ಗುರುಗಳ ಆಜ್ಞೆಯನ್ನು ಪಾಲಿಸಲು ಇವನಿಗೆ ಯೋಗ್ಯತೆ ಇಲ್ಲ! ಎಂದು ನಕ್ಕರು. ಆಗ ವ್ಯಾಸರಾಜರು, ಕನಕ, ನೀನೇಕೆ ಹಣ್ಣನ್ನು ತಿನ್ನಲಿಲ್ಲ? ಎಂದು ಕೇಳಿದರು.

ಅದಕ್ಕೆ ಕನಕದಾಸರು ಕಣ್ಣೀರು ಹಾಕುತ್ತಾ ವಿನಯದಿಂದ ಕೈಮುಗಿದು ಹೀಗೆಂದರು, ''ಗುರುದೇವ, ನೀವು ಯಾರೂ ನೋಡದ ಜಾಗದಲ್ಲಿ ತಿನ್ನಲು ಹೇಳಿದಿರಿ. ಎತ್ತ ಹೋದರು ಭಗವಂತನಿದ್ದ, ನನ್ನ ಅಂತರಾತ್ಮದಲ್ಲೂ ಅವನಿದ್ದಾನೆ. ಅವನ ಕಣ್ಣ ತಪ್ಪಿಸಿ ನಾನು ಹಣ್ಣು ತಿನ್ನುವ ಜಾಗ ಈ ಬ್ರಹ್ಮಾಂಡದಲ್ಲಿ ಎಲ್ಲಿದೆ ಪ್ರಭು? ಅದಕ್ಕೇ ತಿನ್ನಲಾಗಲಿಲ್ಲ.''

ಈ ಮಾತನ್ನು ಕೇಳಿ ಉಳಿದ ಶಿಷ್ಯರ ತಲೆ ತಾನಾಗಿಯೇ ತಗ್ಗಿತು. ತಾವಷ್ಟೇ ಶ್ರೇಷ್ಠರು ಎಂಬ ಅವರ ಅಹಂಕಾರ ಕರಗಿ ನೀರಾಯಿತು. ಕನಕದಾಸರಿಗೆ ಭಗವಂತನ ಸರ್ವವ್ಯಾಪಿತ್ವದ ದರ್ಶನವಾಗಿತ್ತು. ಜಗತ್ತಿನ ಕಣ ಕಣದಲ್ಲೂ ಭಗವಂತನೇ ತುಂಬಿದ್ದಾನೆ, ಅವನನ್ನು ಬಿಟ್ಟು ಬೇರೇನೂ ಇಲ್ಲ ಎಂದು ಸಾರುವ ಕನಕದಾಸರ ಅಂತರಾಳದಿಂದ ಮೂಡಿಬಂದ 'ಹರಿಭಕ್ತಿಸಾರ'ದ ಎರಡನೇ ಪದ್ಯ ಇಲ್ಲಿದೆ:

ಅಖಿಲ ಲೋಕದ ನಾಥ ನೀನೇ
ಸಖನು ನೀನೇ ಸರ್ವಕಾಲಕೆ
ನಿಖಿಳ ಯೋನಿಗಳೊಳಗೆ ಮುಳುಗಿಸಿ ತೇಲಿಸುವ ನೀನೇ॥
ಸುಖದ ಭಾಜನ ನೀನೇ ದುಃಖದ
ಶಿಖಿಯು ನೀನೇ ಸಕಲ ಜೀವಕೆ
ಅಖಿಳ ದೇವನೆ ಕಾಯೊ ನಮ್ಮನು ಬಾಡದಾದಿಕೇಶ॥ 2॥

ಪದ್ಯದ ಭಾವಾರ್ಥ:

ಎಲೈ ಬಾಡದ ಆದಿಕೇಶವನೇ, ಈ ಇಡೀ ಸೃಷ್ಟಿಗೆ ಒಡೆಯನು ನೀನೊಬ್ಬನೇ. ಕಷ್ಟ-ಸುಖಗಳ ಯಾವುದೇ ಪರಿಸ್ಥಿತಿಯಿರಲಿ, ಎಲ್ಲ ಕಾಲದಲ್ಲೂ ಕೈಬಿಡದ ನಿಜವಾದ ಗೆಳೆಯ ನೀನೇ ಆಗಿದ್ದೀಯೆ. ಈ ಜಗತ್ತಿನ ಎಂಬತ್ತನಾಲ್ಕು ಲಕ್ಷ ಜೀವರಾಶಿಗಳ ಜನ್ಮ-ಮರಣಗಳ ಚಕ್ರದಲ್ಲಿ ಜೀವಿಗಳನ್ನು ಮುಳುಗಿಸುವವನೂ ನೀನೇ, ಅದರಿಂದ ಪಾರು ಮಾಡಿ ತೇಲಿಸುವವನೂ ನೀನೇ. ನಮ್ಮ ಬದುಕಿನಲ್ಲಿ ಸಿಗುವ ಸುಖದ ಪಾತ್ರೆ ನೀನೇ, ಹಾಗೆಯೇ ನಮ್ಮ ಪಾಪಕರ್ಮಗಳಿಂದ ಬರುವ ದುಃಖದ ಬೆಂಕಿಯೂ ನೀನೇ ಆಗಿದ್ದೀಯೆ. ಅಂದರೆ, ನಮ್ಮ ಬದುಕಿನ ಪ್ರತಿಯೊಂದು ಘಟನೆಯೂ ನಿನ್ನ ಇಚ್ಛೆಯಂತೆಯೇ ನಡೆಯುತ್ತದೆ. ಸರ್ವೋತ್ತಮನಾದ ಎಲೈ ದೇವನೇ, ನನ್ನ ಅಹಂಕಾರವನ್ನು ಸಂಪೂರ್ಣವಾಗಿ ಸುಟ್ಟು, ನಿನ್ನ ಶರಣಾಗತನಾದ ನನ್ನನ್ನು ಮತ್ತು ಈ ಜಗತ್ತನ್ನು ಕಾಯ ಕರುಣಿಸು ಪ್ರಭು!

ಈ ಕಥೆಯ ಸೂಕ್ಷ್ಮ ಅರಿತಾಗ ನಾವು ಕನಸು ಮನಸ್ಸಿನಲ್ಲೂ ಕೆಟ್ಟ ಯೋಚನೆ ಮಾಡುವುದಿಲ್ಲ. ನಾನು ನನ್ನಿಂದ ಎನ್ನುವ ಅಹಂಕಾರವೂ ನಮ್ಮಲ್ಲಿರುವುದಿಲ್ಲ ಅಲ್ಲವೇ?

ಪೆನಾಲ್ಟಿ ಕಾರ್ನರ್

ಶನಿವಾರದ ಪಂದ್ಯಕ್ಕೂ ನೈಮರ್ ಅಲಭ್ಯ?

ಮೆಕ್ಸಿಕೊ: ಗ್ರೂಪ್-ಸಿಯಲ್ಲಿರುವ ಬ್ರೆಜಿಲ್ ತಂಡಕ್ಕೆ ಮುಂದಿನ ಪಂದ್ಯಕ್ಕೂ ಮೊದಲೇ ಆಘಾತವಾಗಿದೆ. ವರದಿಗಳ ಪ್ರಕಾರ, ತಂಡದ ಸೂಪರ್‌ಸ್ಟಾರ್ ನೈಮರ್ ಅವರ ಬಲಗಾಲಿನ ಗಾಯವು ಸಂಪೂರ್ಣವಾಗಿ ಗುಣವಾಗದ ಕಾರಣ ಅವರು, ಹೈಟಿ ವಿರುದ್ಧದ ಮುಂದಿನ ಪಂದ್ಯದಿಂದ ಹೊರಗುಳಿಯಲಿದ್ದಾರೆ ಎನ್ನಲಾಗುತ್ತಿದೆ. ಸೋಮವಾರ ನೈಮರ್ ಅವರ ಗಾಯದ ಬಗ್ಗೆ ನಡೆದಿದ್ದ ವೈದ್ಯಕೀಯ ಪರೀಕ್ಷೆಗಳ ಬಳಿಕ ಈ ಮಾಹಿತಿ ಹೊರಬಿದ್ದಿದೆ. ಬ್ರೆಜಿಲ್ ಮತ್ತು ಹೈಟಿ ನಡುವಿನ ನಿರ್ಣಾಯಕ ಪಂದ್ಯ ಶುಕ್ರವಾರ ಫಿಲಡೆಲ್ಫಿಯಾದಲ್ಲಿ ನಡೆಯಲಿದೆ. ಗಾಯದಿಂದಾಗಿ ಈಗಾಗಲೇ ಮೊರಾಕೊ ವಿರುದ್ಧದ ಆರಂಭಿಕ ಪಂದ್ಯದಿಂದ ನೈಮಾರ್ ಹೊರಗುಳಿದಿದ್ದರು. ಇದೀಗ ತಂಡಕ್ಕೆ ಅವರ ವಾಪಸಾತಿ ಮತ್ತಷ್ಟು ಸಮಯ ತೆಗೆದುಕೊಳ್ಳಲಿದೆ ಎಂಬುದು ಖಚಿತವಾಗಿದೆ. 2023, ಅಕ್ಟೋಬರ್‌ನಲ್ಲಿ ರಾಷ್ಟ್ರೀಯ ತಂಡಕ್ಕಾಗಿ ಆಡುವಾಗ ಅವರು ತೀವ್ರ ಗಾಯಕ್ಕೆ ತುತ್ತಾಗಿದ್ದರು. ಅಂದಿನಿಂದ ದೀರ್ಘಕಾಲದವರೆಗೆ ಅಂತಾ ರಾಷ್ಟ್ರೀಯ ಫುಟ್‌ಬಾಲ್‌ನಿಂದ ದೂರ ಉಳಿದಿದ್ದಾರೆ. ಗಾಯದಿಂದ ಚೇತರಿಸಿಕೊಳ್ಳಲು ಮತ್ತು ಅವರ ಫಿಟ್ನೆಸ್ ಮರಳಿ ಪಡೆಯಲು ಪ್ರಯತ್ನಿಸುತ್ತಿರುವಾಗ ಇದೀಗ ಬಲಗಾಲಿನ ಗಾಯವು ಅವರ ಅಭಿಮಾನಿಗಳ ಆತಂಕ ಹೆಚ್ಚಿಸಿದೆ. ಬ್ರೆಜಿಲ್ ಫುಟ್‌ಬಾಲ್ ಇತಿಹಾಸದಲ್ಲಿ ನೈಮರ್ ಅತ್ಯುತ್ತಮ ಗೋಲು ಗಳಿಸಿದ ಆಟಗಾರ ಎನಿಸಿಕೊಂಡಿದ್ದಾರೆ. ಅವರ ಅನುಪಸ್ಥಿತಿಯಿಂದ ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಫ್ರೀ ಕಿಕ್

ಈಗಲೂ ವಕಾ ವಕಾ ಹಾಡಿಗೆ ಭಾರೀ ಬೇಡಿಕೆ

ಮೆಕ್ಸಿಕೋ: ಈ ಸಲದ ವಿಶ್ವಕಪ್‌ನ ಉದ್ಘಾಟನಾ ದಿನದ 'ದೈ ದೈ..' ಹಾಡು ಬಿಡುಗಡೆಯಾಗಿ ಫುಟ್‌ಬಾಲ್ ಪ್ರೇಮಿಗಳು ಕ್ರೀಡಾಂಗಣದಲ್ಲಿ ಆ ಹಾಡನ್ನು ಗುನುಗುತ್ತಿದ್ದರೂ, ಫುಟ್‌ಬಾಲ್ ಪ್ರೇಮಿಗಳು ಇಂದಿಗೂ 2010ರ 'ವಕಾ ವಕಾ' ಹಾಡನ್ನು ಗುನುಗುತ್ತಿದ್ದಾರೆ. ಆ ಹಾಡಿನ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಮಾನಿಗಳು ತಮ್ಮ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದಾರೆ. 'ದೈ ದೈ' ಹಾಡು ಅದ್ಭುತವಾಗಿದೆ, ಆದರೆ ಅದು ಶಕೀರಾ ಅವರ 'ವಕಾ ವಕಾ' ಆಗಲು ಎಂದಿಗೂ ಸಾಧ್ಯವಿಲ್ಲ. ನಮಗೆ ವಿಶ್ವಕಪ್ ಎಂದರೆ 'ವಕಾ ವಕಾ' ಆಗಿಬಿಟ್ಟಿದೆ ಎಂದು ಸೋಶಿಯಲ್ ಮಿಡಿಯಾದಲ್ಲಿ ಬರೆದಿದ್ದಾರೆ. 'ವಕಾ ವಕಾ' ಅಧಿಕೃತವಾಗಿ ಜಾಗತಿಕ ಫುಟ್‌ಬಾಲ್‌ನ ರಾಷ್ಟ್ರಗೀತೆಯಾಗಿದೆ ಎಂದು ಮತ್ತೊಬ್ಬರು ಹೇಳಿದ್ದಾರೆ. ದೈ ದೈ ಹಾಡು ಸುಂದರವಾಗಿತ್ತು, ಆದರೆ ನನ್ನ ಹೃದಯ ಇನ್ನೂ 2010ರಲ್ಲೇ ಸಿಲುಕಿಕೊಂಡಿದೆ. ಅದು ಇಡೀ ವಿಶ್ವಕಪ್‌ನ ಆತ್ಮವಾಗಿದೆ ಎಂದು ತಮ್ಮ ನೆನಪಿನ ಬುತ್ತಿಯನ್ನು ಮತ್ತೆ ಸ್ಮರಿಸಿದ್ದಾರೆ. 'ದೈ ದೈ' ಪರಿಪೂರ್ಣವಾಗಿದ್ದರೂ 'ವಕಾ ವಕಾ' ಕೇಳಿದಾಗ ಮೈ ರೋಮಾಂಚನಗೊಳ್ಳುವ ಆ ಕಿಕ್ ಇಲ್ಲ ಎಂದು ಕೆಲವರು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

ಮುನ್ನಡೆಗೆ ಯತ್ನಿಸಿದ ಇರಾನ್ ತಂಡಕ್ಕೆ ನ್ಯೂಜಿಲೆಂಡ್ ಆಟಗಾರರ ತೀವ್ರ ಪ್ರತಿರೋಧ.

ಯುದ್ಧ ಕಾರ್ಮೋಡದ ಮಧ್ಯೆ ಅಮೆರಿಕ ನೆಲದಲ್ಲಿ ಇರಾನ್ ಆಟ

ಇರಾನ್-ನ್ಯೂಜಿಲೆಂಡ್ ಪಂದ್ಯ ಡ್ರಾ

ಲಾಸ್ ಏಂಜಲೀಸ್: ಇಲ್ಲಿನ ಸೋಫಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ತನ್ನ ಮೊದಲ ಗ್ರೂಪ್-ಜಿ ಪಂದ್ಯದಲ್ಲಿ ಇರಾನ್ ತಂಡವು ನ್ಯೂಜಿಲೆಂಡ್ ವಿರುದ್ಧ 2-2 ಅಂತರದ ಡ್ರಾ ಸಾಧಿಸಲಷ್ಟೇ ಶಕ್ತವಾಯಿತು.

ಪಂದ್ಯದಲ್ಲಿ ನ್ಯೂಜಿಲೆಂಡ್ ಅದ್ಭುತ ಆರಂಭ ಪಡೆದು ಏಳನೇ ನಿಮಿಷದಲ್ಲೇ ಮುನ್ನಡೆ ಸಾಧಿಸಿತು. ಕ್ರಿಸ್ ವುಡ್ ಗೋಲು ಗಳಿಸಿದರು. ಇರಾನ್ ಕೂಡ ಮುನ್ನುಗ್ಗಿ 32ನೇ ನಿಮಿಷದಲ್ಲಿ ರಾಮಿನ್ ರೆಝೀಯನ್ ಬಾರಿಸಿದ ಗೋಲಿನ ನೆರವಿನಿಂದ ಪಂದ್ಯದಲ್ಲಿ ಸಮಬಲ ಸಾಧಿಸಿತು.

54ನೇ ನಿಮಿಷದಲ್ಲಿ ಎರಡನೇ ಗೋಲು ಗಳಿಸುವ ಮೂಲಕ ಕಿವೀಸ್ ಮತ್ತೆ ಮುನ್ನಡೆ ಕಂಡಿತು. ಕ್ರಿಸ್ ವುಡ್ ಮತ್ತೊಮ್ಮೆ ಗೋಲು ಗಳಿಸುವಲ್ಲಿ ಯಶಸ್ವಿಯಾದರು, ಆದರೆ 10 ನಿಮಿಷಗಳ ನಂತರ ಇರಾನ್ ಎರಡನೇ ಬಾರಿಗೆ ಪ್ರತಿದಾಳಿ ನಡೆಸಿತು. ಮೊಹಮ್ಮದ್ ಮೊಹೆಬ್ಬಿ ಹೆಡರ್ ಮೂಲಕ ಗೋಲು ದೊರೆತು 2-2 ಅಂತರವನ್ನು ಸಮಬಲಗೊಳಿಸಿತು.

ಎರಡೂ ತಂಡಗಳೂ ಪಂದ್ಯದುದ್ದಕ್ಕೂ ಗೆಲುವಿಗಾಗಿ ತೀವ್ರ ಪೈಪೋಟಿ ನಡೆಸಿದವು, ಆದರೆ ಪಂದ್ಯವು ಸಮಬಲದಲ್ಲಿ ಕೊನೆಗೊಂಡ ಕಾರಣ ಯಾವುದೇ ತಂಡಕ್ಕೂ ನಿರ್ಣಾಯಕ ಗೋಲನ್ನು ಗಳಿಸಲಾಗಲಿಲ್ಲ. ಡ್ರಾ ಫಲಿತಾಂಶದ ಕಾರಣಕ್ಕಾಗಿ ಎರಡು ತಂಡಗಳಿಗೆ ತಲಾ ಒಂದು ಅಂಕ ದೊರೆಯಿತು.

ಇರಾನ್ ತಂಡವು ಭಾನುವಾರ ನಡೆಯಲಿರುವ ತನ್ನ ಮುಂದಿನ ಗುಂಪು ಪಂದ್ಯದಲ್ಲಿ ಬೆಲ್ಜಿಯಂ ತಂಡವನ್ನು ಎದುರಿಸಲಿದ್ದು, ಲಾಸ್ ಏಂಜಲೀಸ್‌ನಲ್ಲಿ ಆ ಪಂದ್ಯ ನಡೆಯಲಿದೆ. ನ್ಯೂಜಿಲೆಂಡ್ ತಂಡವು ಈಜಿಪ್ಟ್ ತಂಡವನ್ನು ಎದುರಿಸಲು ವ್ಯಾಂಕೋವರ್‌ಗೆ ಪ್ರಯಾಣ ಬೆಳೆಸಬೇಕಿದೆ.

ಕ್ರೀಡಾಂಗಣದ ಹೊರಗಡೆ ಪ್ರತಿಭಟನೆ

ಅಮೆರಿಕದಲ್ಲಿ ಇರಾನ್ ಸಮುದಾಯದ ಅತೀ ದೊಡ್ಡ ನೆಲೆಯಾಗಿರುವ ಲಾಸ್ ಏಂಜಲೀಸ್‌ನಲ್ಲಿ ಪಂದ್ಯದ ವೇಳೆ ಕ್ರೀಡಾಂಗಣದ ಹೊರಗೆ 300ರಿಂದ 500 ಪ್ರತಿಭಟನಾಕಾರರು ಸರಕಾರಿ ವಿರೋಧಿ ಬ್ಯಾನರ್‌ಗಳು ಮತ್ತು ಇರಾನ್ ಧ್ವಜಗಳನ್ನು ಹಿಡಿದು ಜಮಾಯಿಸಿದ್ದರು. ಅನಧಿಕೃತ ಧ್ವಜಗಳನ್ನು ಕ್ರೀಡಾಂಗಣದ ಒಳಕ್ಕೆ ತಂದರೆ ಅಥವಾ ರಾಜಕೀಯ ಘೋಷಣೆಗಳನ್ನು ಕೂಗಿದರೆ ಪಂದ್ಯಗಳನ್ನು ನಿಲ್ಲಿಸುವುದಾಗಿ ಇರಾನ್ ಆಗ ಸ್ಪಷ್ಟಪಡಿಸಿತು. ಆಟ ಮುಗಿದ ತಕ್ಷಣವೇ ಹೊರಡಲು ಇರಾನ್ ತಂಡಕ್ಕೆ ಅಮೆರಿಕ ಅಧಿಕಾರಿಗಳು ಸೂಚನೆ ನೀಡಿದರು. ಆಟಗಾರರಿಗೆ ಚೇತರಿಸಿಕೊಳ್ಳಲು ಸಮಯ ನೀಡದ ಅನಿರೀಕ್ಷಿತ ಕ್ರಮದ ವಿರುದ್ಧ ಇರಾನ್ ಮುಖ್ಯ ತರಬೇತುದಾರ ಅಮೀರ್ ಗಲೆನೊಯಿ ಅಸಮಾಧಾನ ಹೊರಹಾಕಿದ್ದಾರೆ. ಪಂದ್ಯದ ನಂತರ ಕ್ಯಾಲಿಫೋರ್ನಿಯಾದಲ್ಲಿಯೇ ಉಳಿದು, ಮಂಗಳವಾರ ಇಲ್ಲವೇ ಬುಧವಾರ ಮೆಕ್ಸಿಕೊಗೆ ಹಿಂತಿರುಗುವುದು ಇರಾನ್ ತಂಡದ ಪೂರ್ವನಿಯೋಜಿತ ಯೋಜನೆಯಾಗಿತ್ತು. ಕಠಿಣ ಪಂದ್ಯದ ನಂತರ ಆಟಗಾರರ ದೇಹದ ಸ್ನಾಯುಗಳಿಗೆ ವಿಶ್ರಾಂತಿ ನೀಡುವುದು ಅಗತ್ಯವಾಗಿದ್ದ ಕಾರಣ ತಂಡವು ಅಲ್ಲಿಯೇ ಇರಲು ಬಯಸಿತ್ತು, ಆದರೆ ಪಂದ್ಯ ಮುಗಿದ ಕೆಲವೇ ಗಂಟೆಗಳಲ್ಲಿ, 225 ಕಿ.ಮೀ ದೂರದಲ್ಲಿರುವ ಮೆಕ್ಸಿಕನ್ ಗಡಿ ನಗರವಾದ ಟಿಜುವಾನಾಗೆ ವಿಮಾನ ಏರಬೇಕೆಂದು ಇರಾನ್ ತಂಡದ ಮೇಲೆ ಅಮೆರಿಕ ಒತ್ತಡ ಹಾಕಿತು.

ಈಜಿಪ್ಟ್ ವಿರುದ್ಧ ಸೋಲಿನಿಂದ ಪಾರಾದ ಬಲಿಷ್ಠರು

ಬೆಲ್ಜಿಯಂಗೆ ಸಮಬಲ

ಡಲ್ಲಾಸ್: ಇಲ್ಲಿ ಮಂಗಳವಾರ ನಡೆದ ರೋಚಕ ಹಣಾಹಣಿಯಲ್ಲಿ ಬಲಿಷ್ಠ ಬೆಲ್ಜಿಯಂ ತಂಡವು ಈಜಿಪ್ಟ್ ವಿರುದ್ಧ ಆಘಾತಕಾರಿ ಸೋಲಿನಿಂದ ಕೂದಲೆಳೆಯ ಅಂತರದಲ್ಲಿ ಪಾರಾಗಿದೆ. ದ್ವಿತೀಯಾರ್ಧದಲ್ಲಿ ಮೈದಾನಕ್ಕಿಳಿದ ಸ್ಟ್ರೈಕರ್ ರೊಮೇಲು ಲುಕಾಕು ಅವರ ಅದ್ಭುತ ಆಟದ ನೆರವಿನಿಂದ ಬೆಲ್ಜಿಯಂ 1-1 ಗೋಲುಗಳ ರೋಚಕ ಡ್ರಾ ಸಾಧಿಸಿ ತೃಪ್ತಿ ಪಟ್ಟಿದೆ.

ಈಜಿಪ್ಟ್ ಆರಂಭಿಕ ಮುನ್ನಡೆ: ಪಂದ್ಯದ ಆರಂಭದಿಂದಲೇ ಅತ್ಯುತ್ತಮ ರಕ್ಷಣಾತ್ಮಕ ಹಾಗೂ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಈಜಿಪ್ಟ್ ತಂಡವು ಮೊದಲಾರ್ಧದಲ್ಲೇ ಗೋಲು ಬಾರಿಸಿ ಬೆಲ್ಜಿಯಂ ತಂಡದ ಮೇಲೆ ತೀವ್ರ ಒತ್ತಡ ಹೇರಿತು. ಪಂದ್ಯ ಕೈಜಾರುವುದನ್ನು ಅರಿತ ಬೆಲ್ಜಿಯಂ ತಂಡದ ಕೋಚ್, ದ್ವಿತೀಯಾರ್ಧದಲ್ಲಿ ದೈತ್ಯ ಆಟಗಾರ ರೊಮೇಲು ಲುಕಾಕು ಅವರನ್ನು ಮೈದಾನಕ್ಕಿಳಿಸಿತು. ಲುಕಾಕು ಅವರ ಆಗಮನ ಬೆಲ್ಜಿಯಂ ತಂಡದ ಆಟದ ಲಯವನ್ನೇ ಬದಲಿಸಿತು. ಬಳಿಕ ಸತತ ದಾಳಿ ನಡೆಸಿದ ಬೆಲ್ಜಿಯಂ ತಂಡದ ಲುಕಾಕು ಅವರ ಪ್ರಭಾವಶಾಲಿ ಆಟದ ನೆರವಿನಿಂದ ತಂಡವು ಈಜಿಪ್ಟ್ ರಕ್ಷಣಾ ಕೋಟೆಯನ್ನು ಭೇದಿಸಿ ಸಮಬಲದ ಗೋಲು ದಾಖಲಿಸುವಲ್ಲಿ ಯಶಸ್ವಿಯಾಯಿತು. ಈ ಪಂದ್ಯದ ಮೂಲಕ ಎರಡೂ ತಂಡಗಳು ತಲಾ 1 ಅಂಕವನ್ನು ಹಂಚಿಕೊಂಡಿವೆ.

ಬಲಿಷ್ಠ ಬೆಲ್ಜಿಯಂ ಪಡೆಗೆ ಸವಾಲಾದ ಈಜಿಪ್ಟ್ ಆಟಗಾರರು.

ಒಂದೇ ದಿನ 4 ಪಂದ್ಯಗಳೂ ಡ್ರಾ

ಮೆಕ್ಸಿಕೋ: ಫಿಫಾ ವಿಶ್ವಕಪ್‌ನ ಐದನೇ ದಿನ ಐತಿಹಾಸಿಕ ಹಾಗೂ ಅಪರೂಪದ ದಾಖಲೆ ಸೃಷ್ಟಿಯಾಗಿದೆ, ಆದರೆ ಈ ದಾಖಲೆ ನಿರ್ಮಾಣವಾಗಿರುವುದು ಬರೋಬ್ಬರಿ 68 ವರ್ಷಗಳ ಬಳಿಕ. ಒಂದೇ ದಿನ ಎಲ್ಲಾ ಪಂದ್ಯಗಳು ಡ್ರಾ ಆಗಿದೆ. ಇದಕ್ಕೂ ಮುನ್ನ 1958ರ ಜೂನ್ 15ರಂದು ವಿಶ್ವಕಪ್‌ನಲ್ಲಿ ಒಂದೇ ದಿನ 4 ಪಂದ್ಯಗಳು ಡ್ರಾ ಆಗಿದ್ದವು, ಈ ಬಾರಿ ಜೂನ್‌ರಂದು ನಿಗದಿಯಾಗಿದ್ದ ಎಲ್ಲಾ 4 ಪಂದ್ಯಗಳೂ ಡ್ರಾ ಆಗುವ ಮೂಲಕ ಶೇ. 100ರಷ್ಟು ಪಂದ್ಯಗಳು ಸಮಬಲಗೊಂಡ ವಿಶಿಷ್ಟ ದಾಖಲೆ ಸೃಷ್ಟಿಯಾಗಿದೆ. ವಿಶ್ವಕಪ್‌ಗೆ ಹೊಸದಾಗಿ ಪದಾರ್ಪಣೆ ಮಾಡಿರುವ ಕೇಪ್ ವರ್ಡೆ ತಂಡವು ಬಲಿಷ್ಠ ಸ್ಪೇನ್ ತಂಡಕ್ಕೆ ಒಂದೂ ಗೋಲು ಹೊಡೆಯಲು ಬಿಡದೆ ಪಂದ್ಯವನ್ನು 0-0 ಅಂತರದಿಂದ ಸಮಬಲಗೊಳಿಸಿತು. ಬೆಲ್ಜಿಯಂ-ಈಜಿಪ್ಟ್ ಪಂದ್ಯವೂ ಡ್ರಾ ಆಗಿದೆ. ಸೌದಿ ಅರೇಬಿಯಾ-ಉರುಗ್ವೆ ಪಂದ್ಯ ಸಮಬಲದಲ್ಲಿ ಮುಕ್ತಾಯ ಕಂಡಿದ್ದು, ಇರಾನ್-ನ್ಯೂಜಿಲೆಂಡ್ ಪಂದ್ಯವೂ ಡ್ರಾದಲ್ಲಿ ಮುಕ್ತಾಯವಾಗಿದೆ.

ಜು.20ರಿಂದ ಮಹಾರಾಜ ಟ್ರೋಫಿ ಕ್ರಿಕೆಟ್ | ಪರಿಸರಸ್ನೇಹಿ ಅಭಿಯಾನಕ್ಕೆ ಮಿಸ್ಟಿಕ್ಸ್ ಮುನ್ನುಡಿ

ಗುಲ್ಬರ್ಗಾ ಮಿಸ್ಟಿಕ್ಸ್ ಜರ್ಸಿ ಬಿಡುಗಡೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಆಯೋಜಿಸುವ ಮಹಾರಾಜ ಟ್ರೋಫಿಯ ಐದನೇ ಆವೃತ್ತಿಯಲ್ಲಿ ಪಾಲ್ಗೊಳ್ಳಲು ಗುಲ್ಬರ್ಗಾ ಮಿಸ್ಟಿಕ್ಸ್ ತಂಡ ಸಂಪೂರ್ಣ ಸಜ್ಜಾಗಿದೆ.

ನಗರದ ಖಾಸಗಿ ಹೋಟೆಲ್ ನಲ್ಲಿ ಮಂಗಳವಾರ ಕೆ.ಎಸ್.ಸಿ.ಎ ಹಾಗೂ ಗುಲ್ಬರ್ಗಾ ಮಿಸ್ಟಿಕ್ಸ್ ತಂಡ ಆಯೋಜಿಸಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಂಡದ ನೂತನ ಜರ್ಸಿ ಬಿಡುಗಡೆ ಮಾಡಿ, ಆಟಗಾರರನ್ನು ಪರಿಚಯಿಸಲಾಯಿತು. ಇದೇ ವೇಳೆ ಆಟಗಾರರಿಗೆ ಸಸಿಗಳನ್ನು ಹಸ್ತಾಂತರಿಸುವ ಮೂಲಕ ವಿನೂತನ ಸಸಿ ನೆಡುವ ಯೋಜನೆಗೆ ಅಧಿಕೃತ ಚಾಲನೆ ನೀಡಲಾಯಿತು.

2022ರಲ್ಲಿ ನಡೆದ ಮೊದಲ ಆವೃತ್ತಿಯ ಚಾಂಪಿಯನ್ ಆಗಿದ್ದ ಗುಲ್ಬರ್ಗಾ ಮಿಸ್ಟಿಕ್ಸ್ ತಂಡವು ರಾಯಚೂರು ವಲಯ ಸೇರಿದಂತೆ ಕಲಬುರಗಿ ಹಾಗೂ ಉತ್ತರ ಕರ್ನಾಟಕದ ವಿಶಾಲ ಭಾಗವನ್ನು ಪ್ರತಿನಿಧಿಸುತ್ತಿದೆ. ಈವರೆಗೆ ನಡೆದ ಪ್ರತಿಯೊಂದು ಆವೃತ್ತಿಯಲ್ಲೂ ನಾಕೌಟ್ ಹಂತ ತಲುಪುವ ಮೂಲಕ ತನ್ನ ಸ್ಥಿರ ಸಾಧನೆಯನ್ನು ಕಾಯ್ದುಕೊಂಡಿರುವ ತಂಡವು ಈ ಬಾರಿಯ ಟೂರ್ನಮೆಂಟ್‌ಗಾಗಿ 20 ಆಟಗಾರರ ಬಲಿಷ್ಠ ಪಡೆಯನ್ನು ಸಿದ್ಧಪಡಿಸಿದೆ. ಇದರಲ್ಲಿ ಹರಾಜಿನ ಮೂಲಕ ಆಯ್ಕೆಯಾದ 18 ಆಟಗಾರರು ಹಾಗೂ ಕ್ಯಾಚ್‌ಮೆಂಟ್ ಪ್ರದೇಶದಿಂದ ಆಯ್ಕೆಯಾದ ಇಬ್ಬರು ಆಟಗಾರರು ಸೇರಿದ್ದಾರೆ.

ಭಾರತ ತಂಡದ ಸ್ಟಾರ್ ಆಟಗಾರ ಹಾಗೂ ಎರಡು ಬಾರಿ ಐಪಿಎಲ್ ಚಾಂಪಿಯನ್ ಆಗಿರುವ ಮನೀಷ್ ಪಾಂಡೆ ಅವರನ್ನು 12.75 ಲಕ್ಷ ಮೊತ್ತಕ್ಕೆ ತಂಡದ ಪ್ರಮುಖ ಆಟಗಾರರಾಗಿ ಮರು ಸೇರ್ಪಡೆಗೊಳಿಸಲಾಗಿದೆ. ಆಲ್‌ರೌಂಡರ್ ಮ್ಯಾಕ್‌ನೀಲ್ ನೊರೊನ್ಹಾ ಹಾಗೂ ಬಿ.ಆರ್. ಶರತ್ ತಂಡದಲ್ಲಿದ್ದಾರೆ. ಡಾ .ಸೈಯದ್ ಮಹಮ್ಮದ್ ಅಲಿ ಅಲ್ ಹುಸೇನಿ, ಸಹ ಮಾಲಿಕರಾದ ಸಯ್ಯದ್ ಮುಸ್ತಫ ಅಲ್ ಹುಸೇನಿ, ಡೈರೆಕ್ಟರ್ ಮೀರ್ ರಾಹೂಫುದ್ದಿನ್ ಅಲಿ ಖಾನ್ ಅವರ ಮಾಲೀಕತ್ವ ತಂಡಕ್ಕಿದ್ದು, ಇವರ ಜತೆಗೆ ಹೊಸದಾಗಿ ನಿಲ್ ಮೈಕಲ್ ಜೋಸೆಫ್, ಮಹೇಶ್ ಹರಿಹರನ್ ಮಾಲೀಕತ್ವಕ್ಕೆ ಹೊಸ ಸೇರ್ಪಡೆಯಾಗಿದ್ದಾರೆ.

> ಮಹಾರಾಜ ಟ್ರೋಫಿ ಗ್ರಾಮೀಣ ಭಾಗದ ಯುವಕರಿಗೆ ಉತ್ತಮ ವೇದಿಕೆಯಾಗಿದೆ. ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರ ನೇತೃತ್ವದ ಆಡಳಿತ ಮಂಡಳಿಯು ಯುವ ಪ್ರತಿಭೆಗಳಿಗೆ ಸಹಕಾರ ನೀಡುತ್ತಿದ್ದು, ಆಟಗಾರರು ಈ ಅವಕಾಶ ಬಳಸಿ ಉತ್ತಮ ಪ್ರದರ್ಶನ ನೀಡುವ ಮೂಲಕ ಐಪಿಎಲ್ ಹಾಗೂ ಇಂಡಿಯನ್ ಟೀಮ್‌ಗೆ ಪದಾರ್ಪಣೆ ಮಾಡಬೇಕಿದೆ.
>
> **- ಕುಶಾಲ್ ಪಾಟೀಲ್,** ಸಂಯೋಜಕರು, ರಾಯಚೂರು ವಲಯ

ಗಿಲ್‌ಗೆ ಸರಣಿ ಗೆಲ್ಲುವ ತವಕ



ಲಖನೌ: ಅಫ್ಘಾನಿಸ್ತಾನ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಈಗಾಗಲೇ ಮೊದಲ ಪಂದ್ಯ ಗೆದ್ದು ಮುನ್ನಡೆ ಕಾಯ್ದುಕೊಂಡಿರುವ ಭಾರತ ತಂಡ ಇಂದು ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರಿಕೆಟ್ ಸ್ಟೇಡಿಯಂನಲ್ಲಿ ಎರಡನೇ ಪಂದ್ಯವನ್ನಾಡಲು ಸಜ್ಜಾಗಿದೆ. ಈ ಪಂದ್ಯವನ್ನು ಗೆದ್ದು ಸರಣಿ ವಶಪಡಿಸಿಕೊಳ್ಳುವ ತವಕ ಶುಭಮನ್ ಗಿಲ್ ಪಡೆಯದ್ದಾಗಿದೆ.

ಆದರೆ ಸರಣಿ ಜೀವಂತವಿರಿಸಲು ಅಫ್ಘಾನಿಸ್ತಾನ ತಂಡಕ್ಕೆ ಈ ಪಂದ್ಯವನ್ನು ಗೆಲ್ಲಲೇ ಬೇಕಾದ ಒತ್ತಡವಿದೆ. ಹಾಗಾಗಿ ಪ್ರವಾಸಿ ತಂಡವು ತನ್ನ ತಪ್ಪುಗಳನ್ನು ಸರಿಪಡಿಸಿಕೊಂಡು, ಬ್ಯಾಟಿಂಗ್‌ನಲ್ಲಿ ಬಲಿಷ್ಠವಾಗಿ ಭಾರತೀಯ ತಂಡಕ್ಕೆ ನಿಜವಾದ ಸವಾಲನ್ನು ಒಡ್ಡಲು ಪ್ರಯತ್ನಿಸಲಿದೆ. ಬೌಲಿಂಗ್‌ನಲ್ಲಿ ರಶೀದ್ ಖಾನ್ ಮತ್ತು ಎಎಂ ಗಜನ್ಫರ್ ಉತ್ತಮ ಗುಣಮಟ್ಟದ ಸ್ಪಿನ್ ದಾಳಿಯನ್ನು ನೆಚ್ಚಿಕೊಂಡಿದೆ.

ಸುಲಭ ಜಯದತ್ತ ಹರ್ಮನ್ ಚಿತ್ತ

ಲೀಡ್ಸ್: ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧದ ಆರಂಭಿಕ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿರುವ ಭಾರತ ತಂಡವು ಮತ್ತೊಂದು ಪಂದ್ಯವನ್ನು ಆಡಲು ಸಜ್ಜಾಗಿದ್ದು, ಇಂದು ಇಲ್ಲಿ ನಡೆಯುವ ಪಂದ್ಯದಲ್ಲಿ ನೆದರ್ಲೆಂಡ್ ತಂಡವನ್ನು ಎದುರಿಸಲಿದೆ. ನೆದರ್ಲೆಂಡ್ ತಂಡ ತಾನು ಆಡಿದ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಸೋಲು ಕಂಡಿತ್ತು, ಹೀಗಾಗಿ ಇಂದಿನ ಪಂದ್ಯದಲ್ಲಿ ಡಚ್ಚರಿಗೆ ಗೆಲುವು ಅತ್ಯಗತ್ಯ.

ಮೊದಲು ಪಂದ್ಯ ಗೆದ್ದರೂ ಭಾರತ ತನ್ನ ಬ್ಯಾಟಿಂಗ್ ವಿಭಾಗದಲ್ಲಿ ಹಲವು ಸುಧಾರಣೆ ಕಾಣುವ ಅಗತ್ಯವಿದೆ. ಪಾಕ್ ವಿರುದ್ಧ ಮಂಧಾನಾ ಬ್ಯಾಟಿಂಗ್‌ನಲ್ಲಿ ಏಕಾಂಗಿ ಹೋರಾಟ ನಡೆಸದೇ ಹೋಗಿದ್ದರೆ ಮತ್ತು ದೀಪ್ತಿ ಶರ್ಮಾ ಉತ್ತಮ ಬೌಲಿಂಗ್ ಪ್ರದರ್ಶನ ತೋರಿಸದೇ ಹೋಗಿದ್ದರೆ ತಂಡ ಸೋಲು ಕಾಣುವ ಸಾಧ್ಯತೆಯೂ ಇತ್ತು.

ವಿಟಾಕೀಸ್

ಗ್ರಾಮಾಯಣ ಕುಸುಮಾಳ ಪಿಸುದನಿ

ದೊಡ್ಮನೆ ಮೊಮ್ಮಗ ವಿನಯ್ ರಾಜ್‌ಕುಮಾರ್ ಅಭಿನಯದ ಗ್ರಾಮಾಯಣ ಶೀರ್ಷಿಕೆಯಲ್ಲಿಯೇ ಸದ್ದು ಮಾಡಿತ್ತು. ಹಾಡುಗಳ ಮೂಲಕವೂ ಗಮನ ಸೆಳೆದಿತ್ತು. ಅಪ್ಪಟ ಹಳ್ಳಿ ಸೊಗಡಿನ ಸಾಹಿತ್ಯದ ಗೀತೆಗಳು ಸಂಗೀತ ಪ್ರಿಯರ ಮನಸೂರೆಗೊಂಡಿದ್ದವು. ಈಗ ಗ್ರಾಮಾಯಣದ ಮತ್ತೊಂದು ಗೀತೆ ಬಿಡುಗಡೆಯಾಗಿದೆ. ಕುಸುಮಾಳ ಪಿಸು ದನಿಯ ಗೀತೆಗೆ ಸಿನಿ ಪ್ರಿಯರು ಮಾರು ಹೋಗಿದ್ದಾರೆ. ಏನೆ ಹೇಳು ಕುಸುಮಾ.. ಎಂಬ ಗೀತೆ ಇದಾಗಿದ್ದು, ಮಧುರವಾಗಿ ಮೂಡಿಬಂದಿದೆ. ಗ್ರಾಮೀಣ ಭಾಗದ ಹಿನ್ನೆಲೆಯಲ್ಲಿ ಸಾಗುವ ಈ ಗೀತೆಯಲ್ಲಿ ವಿನಯ್ ಪಂಚೆಯುಟ್ಟು ಅಂಗಿ ತೊಟ್ಟು, ಅಪ್ಪಟ ಹಳ್ಳಿ ಹುಡುಗನಂತೆ ಕಂಗೊಳಿಸಿದರೆ, ಮೇಘಾ ಶೆಟ್ಟಿ ಲಂಗ ಧಾವಣಿ ತೊಟ್ಟು ಮಿಂಚಿದ್ದಾರೆ. ಪ್ರಮೋದ್ ಮರವಂತೆ ಸಾಹಿತ್ಯದ ಈ ಗೀತೆಗೆ ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿದ್ದಾರೆ. ನಿಹಾರ್ ತಾವ್ರೋ ಹಾಗೂ ಸಾಕ್ಷಿ ಕಲ್ಲೂರು ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಗ್ರಾಮಾಯಣ ಶೀರ್ಷಿಕೆಯೇ ಹೇಳುವಂತೆ ಇದು ಹಳ್ಳಿಗಾಡಿನ ಕಥೆಯನ್ನು ಒಳಗೊಂಡಿದೆ. ಕೌಟುಂಬಿಕ ಕಥೆಯ ಜತೆಗೆ ಲವ್, ಸಸ್ಪೆನ್ಸ್, ಆ್ಯಕ್ಷನ್ ಕಥೆಯೂ ಸಿನಿಮಾದಲ್ಲಿದೆ. ದೇವನೂರು ಚಂದ್ರು ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಸಿನಿಮಾದ ಮುದ್ದಾದ ಮತ್ತು ಪ್ರಮುಖವಾದ ಹಾಡಿದು, ಪ್ರಮೋದ್ ಮರವಂತೆ ಮತ್ತು ಪೂರ್ಣಚಂದ್ರ ತೇಜಸ್ವಿ ಅವರ ಕಾಂಬಿನೇಷ್‌ನಲ್ಲಿ ಅದ್ಭುತವಾದ ಹಾಡು ಮೂಡಿಬಂದಿದೆ. ಸಿನಿಮಾದ ಶೂಟಿಂಗ್ ಮುಕ್ತಾಯವಾಗಿದ್ದು. ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದವೆ. ಜುಲೈ 3 ರಂದು ಗ್ರಾಮಾಯಣ ನಿಮ್ಮ ಮುಂದೆ ಬರಲಿದೆ ಎಂದು ನಿರ್ದೇಶಕ ದೇವನೂರು ಚಂದ್ರು ತಿಳಿಸಿದರು. ಕುಸುಮಾ ಅನ್ನುವುದು ನನ್ನ ಅಕ್ಕನ ಹೆಸರು, ಕುಸುಮಾ ಅನ್ನುವ ಸಾಲಿನಿಂದಲೇ ಹಾಡು ಆರಂಭವಾಗಿರುವುದು ಖುಷಿ ಕೊಟ್ಟಿದೆ. ಈ ಹಾಡು ಪ್ರತಿಯೊಬ್ಬರಿಗೂ ಹಿಡಿಸಲಿದೆ. ಹಳ್ಳಿಯ ಸೊಬಗು ಮನಸನ್ನು ಕಾಡಲಿದೆ. ಈ ಹಾಡಿಗೆ ನಿರ್ದೇಶಕರೇ ನೃತ್ಯ ನಿರ್ದೇಶನ ಮಾಡಿರುವುದು ವಿಶೇಷ ಎಂದು ಮೇಘಾ ಶೆಟ್ಟಿ ಸಂತಸದಿಂದ ನುಡಿದರು. ಲೂಸ್ ಮಾದ ಯೋಗಿ, ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಅಪರ್ಣಾ, ಜಹಾಂಗೀರ್ ಸೇರಿದಂತೆ ಹಲವರು ತಾರಾಗಣದಲಿದ್ದಾರೆ.

> ಚಿತ್ರದಲ್ಲಿ ಐದು ಹಾಡುಗಳಿದ್ದು ಎಲ್ಲವೂ ಒಂದಕ್ಕಿಂತ ಒಂದು ಮಧುರವಾಗಿ ಮೂಡಿಬಂದಿವೆ. ಹೇಳೇ.. ಕುಸುಮಾ.. ನನಗೆ ತುಂಬಾ ಇಷ್ಟವಾದ ಹಾಡು. ಸಿನಿಮಾದ ಶೂಟಿಂಗ್‌ಗಾಗಿ ಹಲವು ಹಳ್ಳಿಗಳಿಗೆ ಭೇಟಿ ನಿಡಿದ್ದೆ. ಅಲ್ಲಿ ವಯಸ್ಸಾದವರೇ ಹೆಚ್ಚಾಗಿ ಕಾಣುತ್ತಿದ್ದರು. ಜೀವನ ಕಂಡುಕೊಳ್ಳಲು ಯುವ ಸಮೂಹ ನಗರ ಪ್ರದೇಶಗಳಿಗೆ ಸೇರಿದ್ದರು. ಮುಂದೆ ಯುವಕರು ಹಳ್ಳಿಗೆ ಮರಳಿ ಬರಬೇಕು, ಗ್ರಾಮಗಳಲ್ಲಿಯೇ ಬದುಕು ಕಟ್ಟಿಕೊಳ್ಳಬೇಕು ಎಂಬುದೇ ನಮ್ಮ ಗ್ರಾಮಾಯಣ ಚಿತ್ರದ ಆಶಯ.
>
> **-ವಿನಯ್ ರಾಜ್‌ಕುಮಾರ್, ನಟ**

ಕಲ್ಕಿ ತಂಡ ಸೇರಿದ ಆಲಿಯಾ

ನಾಗ್ ಚೈತನ್ಯ ನಿರ್ದೇಶನದ ಕಲ್ಕಿ 2898 ಎಡಿ ಚಿತ್ರ ಭರ್ಜರಿ ಪ್ರದರ್ಶನ ಕಂಡಿತು, ದಾಖಲೆಯ ಗಳಿಕೆ ಮಾಡಿತು. ಮಹಾಭಾರತದ ಪಾತ್ರಗಳನ್ನು ಸೈನ್ಸ್ ಫಿಕ್ಷನ್ ಜಾನರ್‌ನಲ್ಲಿ ಕಟ್ಟಿಕೊಡಲಾಗಿತ್ತು. ಈಗ ಕಲ್ಕಿ 2 ಚಿತ್ರ ಸೆಟ್ಟೇರಿದ್ದು, ಚಿತ್ರೀಕರಣವೂ ಆರಂಭವಾಗಿದೆ. ಮೊದಲ ಭಾಗದಲ್ಲಿ ನಟಿ ದೀಪಿಕಾ ಪಡುಕೋಣೆ ಸಿನಿಮಾದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು. ಮುಂದಿನ ಭಾಗದಲ್ಲಿಯೂ ಡಿಪ್ಪಿ ನಟಿಸಲಿದ್ದಾರೆ ಎನ್ನುವಾಗಲೇ ಅವರು ಕಲ್ಕಿ 2 ಚಿತ್ರದಿಂದ ಹೊರ ನಡೆದಿದ್ದಾರೆ. ಹಾಗಾಗದರೆ ದೀಪಿಕಾ ಬದಲಿಗೆ ಈ ಚಿತ್ರದಲ್ಲಿ ಯಾರು ನಟಿಸಬಹುದು ಎಂಬ ಕುತೂಹಲವಿತ್ತು. ಅದಕ್ಕೆ ಈಗ ಚಿತ್ರತಂಡ ತೆರೆ ಎಳೆದಿದೆ. ಕಲ್ಕಿ ಮುಂದಿನ ಭಾಗದಲ್ಲಿ ಬಾಲಿವುಡ್ ಬೆಡಗಿ ಆಲಿಯಾ ಭಟ್ ನಟಿಸುವುದು ಬಹುತೇಕ ಖಚಿತವಾಗಿದೆ. ಆಲಿಯಾ ಈಗಾಗಲೇ ಸಿನಿಮಾದ ಕಥೆ ಕೇಳಿ ನಟಿಸಲು ಸಮ್ಮತಿಸಿದ್ದಾರೆ. ಈ ಚಿತ್ರದಲ್ಲಿ ಸಾಯಿ ಪಲ್ಲವಿ ಕೂಡ ನಟಿಸುತ್ತಿದ್ದು, ಅವರೂ ಕೂಡ ಪ್ರಮುಖ ಪಾತ್ರ ನಿರ್ವಹಿಸಿಲಿದ್ದಾರೆ. ಈ ಹಿಂದೆ ತೆರೆಗೆ ಬಂದ ಆರ್‌ಆರ್‌ಆರ್ ಸಿನಿಮಾದಲ್ಲಿ ನಟಿಸಿದ್ದ ಆಲಿಯಾ, ಈಗ ಕಲ್ಕಿ ಸಿನಿಮಾದ ಮೂಲಕ ಮತ್ತೆ ಟಾಲಿವುಡ್ ಅಂಗಳಕ್ಕೆ ಎಂಟ್ರಿಕೊಟ್ಟಿದ್ದಾರೆ. ಹೈದಾರಾಬಾದ್‌ನಲ್ಲಿ ಅದ್ದೂರಿ ಸೆಟ್ ನಿರ್ಮಿಸಿರುವ ಚಿತ್ರತಂಡ ಅಲ್ಲಿಯೇ ಚಿತ್ರೀಕರಣ ನಡೆಸುತ್ತಿದೆ. ಬಿಗ್ ಬಿ ಅಮಿತಾಬ್ ಬಚ್ಚನ್, ಕಮಲ್ ಹಾಸನ್ ಸೇರಿದಂತೆ ಹಲವರು ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ. ಪ್ರಭಾಸ್ ಕೂಡ ಶೀಘ್ರದಲ್ಲಿಯೇ ಚಿತ್ರತಂಡ ಸೇರಲಿದ್ದು ಮುಂದಿನ ಭಾಗದಲ್ಲಿಯೂ ಆ್ಯಕ್ಷನ್‌ನಲ್ಲಿ ಅಬ್ಬರಿಸಲಿದ್ದಾರೆ. ಕಲ್ಕಿ 2898 ಎಡಿ ಅದ್ದೂರಿ ವೆಚ್ಚದ ಸಿನಿಮಾವಾಗಿದ್ದು, ವೈಜಯಂತಿ ಮೂವೀಸ್‌ನಲ್ಲಿ ನಿರ್ಮಾಣವಾಗಿದೆ.

ಬಾಸ್‌ಗೆ ಮತ್ತೆ ಸಂಕಷ್ಟ

ವಿ. ಲವ ನಿರ್ದೇಶನದ ಬಾಸ್ ಈ ವಾರ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬರಬೇಕಿತ್ತು. ಈಗ ಬಿಡುಗಡೆಯ ಹೊಸ್ತಿಲಲ್ಲಿಯೇ ಬಾಸ್ ಚಿತ್ರಕ್ಕೆ ಕಾನೂನು ಸಂಕಷ್ಟ ಎದಿರಾಗಿದೆ. ವಿಜಯಲಕ್ಷ್ಮೀ ದರ್ಶನ್ ಅವರು ಚಿತ್ರದ ಬಿಡುಗಡೆಗೆ ತಡೆ ನೀಡುವಂತೆ ಕೋರಿ ಕರ್ನಾಟಕ ಹೈಕೋರ್ಟ್‌ನಲ್ಲಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ. ನಗರ ಸಿವಿಲ್ ನ್ಯಾಯಾಲಯವು ಈ ಹಿಂದೆ ಚಿತ್ರದ ಬಿಡುಗಡೆಗೆ ವಿಧಿಸಿದ್ದ ಮಧ್ಯಂತರ ತಡೆಯಾಜ್ಞೆಯನ್ನು ತೆರವು ಗೊಳಿಸಿ ಬಿಡುಗಡೆಗೆ ಅವಕಾಶ ನೀಡಿತ್ತು. ಅದರ ಬೆನ್ನಲ್ಲೇ ಚಿತ್ರತಂಡವು ಜೂನ್ 19ರಂದು ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುವುದಾಗಿ ಘೋಷಿಸಿತ್ತು.

ಆದರೆ ಸಿವಿಲ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿರುವ ಅರ್ಜಿದಾರರು, ಚಿತ್ರದ ಬಿಡುಗಡೆಗೆ ತಕ್ಷಣದ ಮಧ್ಯಂತರ ತಡೆಯಾಜ್ಞೆ ನೀಡುವಂತೆ ಮನವಿ ಮಾಡಿದ್ದಾರೆ.

ಚಿತ್ರದ ಕಥಾವಸ್ತು, ಪಾತ್ರಗಳ ನಿರೂಪಣೆ ಹಾಗೂ ಇತರ ವಿವಾದಿತ ಅಂಶಗಳಿಗೆ ಸಂಬಂಧಿಸಿದಂತೆ ಗಂಭೀರ ಆಕ್ಷೇಪಣೆಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿದುಬಂದಿದೆ. ಚಿತ್ರ ಬಿಡುಗಡೆಯ ದಿನಾಂಕ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣವು ಮಹತ್ವ ಪಡೆದುಕೊಂಡಿದ್ದು, ಹೈಕೋರ್ಟ್‌ನ ತೀರ್ಪಿನತ್ತ ಚಿತ್ರರಂಗ ಹಾಗೂ ಅಭಿಮಾನಿಗಳ ಚಿತ್ತ ನೆಟ್ಟಿದೆ. ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡುತ್ತದೆಯೇ ಅಥವಾ ಚಿತ್ರದ ಬಿಡುಗಡೆಗೆ ಹಸಿರು ನಿಶಾನೆ ತೋರಿಸುತ್ತದೆಯೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ. ಬಾಸ್ ಚಿತ್ರಕ್ಕೆ ಸತ್ಯ ಮೇವ ಜಯತೆ ಎಂಬ ಅಡಿಬರಹವಿದ್ದು, ತನುಷ್ ಶಿವಣ್ಣ ನಾಯಕನಾಗಿ ಅಭಿನಯಿಸಿದ್ದಾರೆ.